ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 8
ಸಂಚಿಕೆ 3
ಜುಲೈ-ಸೆಪ್ಟೆಂಬರ್ - 1979

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 8. No. 3, July-September 1979

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಹೆಚ್. ಆರ್. ದಾಸೇಗೌಡ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಪರಿವಿಡಿ

ಮಂಥನ

ಕ್ರಿಯಾಪರ್ವ

ಎಚ್. ಎಸ್. ವೆಂಕಟೇಶಮೂರ್ತಿ

ನೆಲಬಿಡಿಸಿ, ಮೇಲೆ ಎತ್ತರಕ್ಕೆ ತೊಟ್ಟಿಲ ಕಟ್ಟಿ,
ಕನಸ ತೂಗಿದಳೆನ್ನ ತಾಯಿ ಕತ್ತಿ ಗುರಾಣಿ
ಮೆಚ್ಚುಗೆಗೆ ತಲೆ ಕಾಪು ಕವಚ, ಗೆಳೆಯರ ಎದೆಗೆ ಎದೆತಾಗದಂತೆ ಬಿಲ್ಲ
ಹೆದೆಯುಪ್ಪೆ ನನ್ನದಾಗಿಸಿದಂಥ ತಂದೆ, ಗೌ
ರವದಿಂದ ಬಹುವಚನ ಹಚ್ಚಿ, ಎದೆ ಧಗ ಧಗಿಸಿ,
ಸ್ವರ್ಣ ಸಿಂಹಾಸನದ ತುಟ್ಟ ತುದಿಯಲ್ಲಿ ಮೇಲ್ಪಾವಣಿಯ ಮುಟ್ಟಿದವನು

ನಾ ಬೆಳೆದ ಭಾರಿ ಭವನದ ಭವ್ಯ ಭಿತ್ತಿಯಲಿ
ಜೋತು ಬಿದ್ದಿವೆ ತಾತ ಮುತ್ತಾತ ಮತ್ತಾತ
ರಪ್ಪಗಳ ಜಲವರ್ಣದಬ್ಬರದ ಚಿತ್ರಗಳು ಮುಂಚೂಣಿ ಪಡೆಯುಹಾಗೆ,
ಕೆಂಗಣ್ಣು ಹುರಿಮೀಸೆ ರಾಗರಸಮತ್ತ, ಮದಿ
ರಾಸಕ್ತ, ಅನಿಮಿಷದ ಸ್ತಬ್ಧತೆಯ ಜಿದ್ದುಗಳ,
ಬಿರುದು ಬಾವಲಿ, ಈಗ ತಲೆಕೆಳಗು ತೂಗುತ್ತಾ, ರೆಂಬೆಗಳ ಹೆಣದಹಾಗೆ

ದ್ವಾರ ದ್ವಾರಕ್ಕೆ ಬಾಗಿಲುಭಟರು, ಬೆನ್ ಬಾಗಿ
ದವರು, ಕೈಕೋಲ ಬಡಪಾಯಿಗಳು, ನಾಯಿಗಳು
ಕಾವಲಿಗೆ ನಿಂತವರು, ಸೀದು ಕರಕಾದವರು ಕಾದವರು ಕೊನೆಯುಘಳಿಗೆ,
ಮುಟ್ಟಿದರಗೌರವ, ನಗಬಾರದಯ್ಯ ನೀ
ನತ್ತರಪಮಾನ, ಅಳಬಾರದಯ್ಯ ನೀ
ನೆತ್ತಿದನಿ ನುಡಿಯದಿರು, ಹಾರದಿರು, ಓಡದಿರು, ಸಾಮಾನ್ಯನಲ್ಲ ನೀನು

ಈ ವಿಧಿ ನಿಷಿದ್ಧಗಳ ಕತ್ತರಿಯ ಕುತ್ತಿಲಿನ,
ಅರಮನೆಯ ಎತ್ತರದ ಭಿತ್ತಿಗಳ ಸುತ್ತಿನಲಿ,
ಸುತ್ತುತ್ತ ಬೆಳೆದವನು ಸ್ವರ್ಣಸಿಂಹಾಸನದ ಹೊಂಬೆಳಕ ಹಗಲಿನಲಿ
ಶ್ವೇತಛತ್ರಿಯ ಅಡಿಯ ರಾತ್ರಿಯಲಿ, ಕುಣಿವವರ
ತೆರೆದೆದೆಯ ಹಾಲು ಮೊಲೆ ಬೆಳಕಲ್ಲಿ, ಮೈದೊಡವ
ನಕ್ಷತ್ರಗಳ ಥಳುಕ ಸಿಂಪಡಿಯ ಪ್ರಕೃತದಲಿ, ಬೆಳೆದ ಅಪ್ರಕೃತ ನಾನು

ಹರಯಕ್ಕೆ ಹೊಕ್ಕಾಗ, ಹೊನ್ನ ಹುಡಿ ಮರಳಲ್ಲಿ,
ಬೆಳ್ಳಿ ಹೊಳೆಗುಕ್ಕೇರಿ, ಕೆಂಬವಳ ನಸುನಕ್ಕು,
ನೀಲಿ ಕಡಲೆಡೆಗೆ ಜಲಪಾತ ತಡಸಲು ಮೊರೆತ, ಹಿಡಿದವರು ಒಬ್ಬಿಬ್ಬರೆ ?
ಮಾರಗಲ ಜರತಾರಿ ಪತ್ತಲದ ನಾಜೂಕು
ಹೊಳಪಲ್ಲಿ ಮುಳು ಮುಳುಗಿ, ರನ್ನದೊಡವುಗಳಲ್ಲಿ
ಮೈಮರೆತು, ವಿಷವೇರಿ ಹಸುರುಗಟ್ಟಿದ ಪಾಚಿ ಪಚ್ಚೆ ಮೈಗಟ್ಟಿನವರು,

ಕೈಯು ಗೆರೆ ಮಾಸದನ್ಯೋಪ ಜೀವಿಗಳಿವರು
ಕೀಲುಬೊಂಬೆಗಳೆನ್ನ ರಾಣಿಯರು, ಮಕ್ಕಳಿಗೆ
ಬಾಡಿಗೆಯ ಎದೆ ಕೊಡಿಸಿ, ಉನ್ನತಿಯ ಮೊಲೆ ತೊಟ್ಟು,
ತಾಯ್ತನವನೆತ್ತಿದವರು,
ಕುಂಡದಲಿ ಬೆಳೆದಂಥ ಕೆಂಗುಲಾಬಿಗೆ, ನೆಗೆದು
ಬಿದ್ದಾಗ ಮಾತ್ರವೇ ಮಣ್ಣು, ಛೀ ಧಿಕ್ಕಾರ,
ಕೃತ್ರಿಮದ ಕಟ್ಟಿಗೆ, ಬದುಕ ಬಿಕ್ಕಟ್ಟಿಗೆ ಹಡಬಿಟ್ಟಿದೊರೆತ ಈ ದೊರೆತನಕ್ಕೆ

ನೆಲದ ಹೊಟ್ಟೆಗೆ ಕಲ್ಲು ಚಪ್ಪಡಿಯಹಾಸಿ, ಮೇ
ಲ್ಬಾನಿಗಡ್ಡಿಟ್ಟು ಕೈಗಾರೆಗಚ್ಚಿನ ಮಹಡಿ,
ಮಾಲೆ ಮಲೆ ಕೆರೆಕೊಳ್ಳ ಹಳ್ಳಕ್ಕೆ ತಡೆಯಾಗಿ ಗೋಡೆ ಎಬ್ಬಿಸಿ, ಅಡ್ಡಗಟ್ಟೆಕಟ್ಟಿ
ಕಿಟಕಿ ಬಾಗಿಲಿಗಿಟ್ಟು ಹಸುರಿರದ ಹೂವಿರದ
ಚೆನ್ನ ಕೇಸರಿಗಂಧ ತೇಗಗಳ ಭೋಗಗಳ,
ಕನ್ನೆಮಾಡದಲಪ್ಪೆ ಬಾಳೆಬೆಳೆ, ಅಮೃತ ಫಲ, ಕಾಯಕೊಳ, ನಾಭಿಸುಳಿ,
ಕೊರೆಸಿಬಿಟ್ಟು

ತುಡಿಯುತಿದೆ ಬಿಡುಗಡೆಗೆ, ಹಾತೊರೆಯುತಿದೆ ಹಕ್ಕಿ,
ಗಾಳಿ ಮಳೆಗಳ ಕೆಳಗೆ, ನೆಲದ ಗಮ್ಮನೆ ನೆಲೆಗೆ
ಹಸುರ ಸಿಡಿಸುವ ಹರೆಯ ಜೀಕಾಟದಾಟಕ್ಕೆ, ಹಸುರ ಮೈದಾನಕ್ಕೆ
ಮನವ ತೆತ್ತು,
ದಾಟುವೆನು, ದಾಟುವೆನು, ಇಗೊ ಶರಣು, ದೊರೆ ಗಿರಿಯೆ,
ತಡೆಬಾಗಿಲನು ಹಾರು ಹೊಡೆದು, ಕಾವಲು ಪಡೆಯ
ನೂಕಿ, ಮುನ್ನೀರು ಮುಂತಾಗಿ, ಸಾಗುವ ಹೊನಲ ಹಾಗೆ, ಸ್ವಚ್ಛಂದದಲ್ಲಿ

ದಾಟಿ ಕೋಟೆಗಳನ್ನ ಈಜಿ ಅಗಳ್ತಿಗಳನ್ನ,
ಕಗ್ಗಾಡ ನಡುವಲ್ಲಿ ಉಸುರ ಹಿಡಿದು,

ಬದುಕಬೇಕಿದೆ ನನಗೆ, ಸಹಜ ಬಾಳನುಬೆಳೆದು, ಉತ್ತಮಣ್ಣಲಿ ಬಿತ್ತಿ
ಬೆವರ ಬೀಜ,
ಸುತ್ತಮಲೆ, ಎತ್ತಿ ತಲೆ, ಹರಿವ ನೀರಿಗೆ ನೆರಳ
ಚಾಚಿ, ಸ್ಥಾವರವೆಲ್ಲ ನಲಿಯುತಿವೆ, ಏರಿ ಮೇ
ಲೇರಿ, ಮರ ಹರೆಗಳಲಿ ಹಸುರ ಹುಮ್ಮಸತೂಗಿ, ಕೆನ್ನೆಯಲಿ ಕೆಂಪನಕ್ಕು 54

ಆಹ ಬದುಕೇ, ಹಕ್ಕಿಯುಲಿಯಲ್ಲಿ ಬಲೆಯಲ್ಲಿ
ಸಿಕ್ಕ ಚೆಲುವೇ, ನೀರಿನಲೆಯಲ್ಲಿ ಹೊಳೆಯಲ್ಲಿ
ಹೊಳೆದರ್ಥವೇ, ಅಚಲಕ್ಕೆ ಚಲನೆಯ ನೀಡಿ ಮಕ್ಕುಳಿದ ಜೀವ ದ್ರವವೇ
ಅರ್ಥಭಾರಗಳನ್ನು ಮಿಕ್ಕು ಹಾರುವ ಸ್ವರವೆ,
ಕಾಲಬಾಧೆಗಳನ್ನು ಮೀರಿ ನಿಲ್ಲುವ ವರ್ಣ
ಮೇಳವೇ, ಕಲಿಸೆನಗೆ ಬದುಕ ಹೂಡುವ, ಹೂಡಿಸುವ ಗೆಲ್ಲುವ ಬಗೆ 60

2

ಹೀಗಿರಲು, ಒಂದು ದಿನ ಕಂಡೆ, ಕಾಡಲ್ಲೊಂದು
ಕಡೆಗೆ, ಕೊಳ ತಡಿಗೆ, ಕೆಂಪಿನ ಸಂಜೆ, ಹೊಳೆ ಹೊಳೆವ
ಹೆಣ್ಣ, ಕಣ್ಣಲ್ಲಿಟ್ಟು ಕಣ್ಣ ಅವಳಲ್ಲಿಟ್ಟು ನನ್ನ ಮೈಮರೆವ ಬಗೆಗೆ,
ಗ್ರಹಿಸಿ, ಪರಿಗ್ರಹಿಸಿ, ಕರೆದಿತ್ತೆ ಆಕೆಗೆ ನನ್ನ.
ಗಟ್ಟಿ ತೊಡೆ, ಬಟ್ಟ ಮೊಲೆ, ಕಾಮ ಕುದಿಯುವ ಕಣ್ಣ,
ಹೆಣ್ಣ, ಎದೆಯಲಿ ತಾಳಿ, ಬಿಗಿದು, ತೊಡೆ ತೊಡೆ ತೊಡಗಿ, ಹಾಕಿ ನೀಲಿಗೆ
ಬೆನ್ನು ಮಣ್ಣ ಮೀಟಿ 66

ಕನಸ ತೊಟ್ಟಿಲ ಹರಿದು ಇಳಿದೆ, ಇಳಿದೆನು ಇಳೆಗೆ,
ಬೆವರಿ ಧರಿಸಿದೆ ಧೂಳ ಕಣವ ಹೊಳೆಯುವ ಹಣೆಗೆ,
ಮೇಲೆ ನೀಲಿಯ ನಡುವೆ ನಸುನಗುವ ತಾವರೆ,
ಕೆಳಗೆ ಕೆಂಪಗೆ ಹರಿವ ಹೊಸನೀರ ಹೊಳೆಮೊರೆ, 70

ತಿಳಿಯುವುದೆ ಹೊಳೆಗೆ, ಇದು ಹೊಳೆವುದೇ ಬೆಳಕಿಗೆ,
ಇಳಿಯುವುದೆ ನೀರಿಗೆ, ಹಗಲು ಹತ್ತಿದ ಧಗೆ,
ಎಲ್ಲಿ ಮುಟ್ಟಿದರಲ್ಲಿ ಜೀವ ನರಳುವ ಬಗೆ, 73

ಈಗ ವರ್ಷಾಕಾಲ, ಹೆಪ್ಪುಗಟ್ಟಿದೆ ಮೋಡ, ಜೀವನದ ಭಾರ ಹೊತ್ತು,
ಬಸುರಿ ಅಡ್ಡಾದರೆ, ಅಡುಗೆ ನನ್ನದೆ, ಹಗಲು
ಕಡಿದ ಕಟ್ಟಿಗೆ ಚಾಚಿ, ಕೆಂಪು ಚಿಗುರಿಸಿ, ಒಲೆಯ
ಊದಿ, ತುಂಬಲು ಕೆನ್ನೆ, ಕಣ್ಣನಗಿಸುವಳಾಕೆ 77

ನನ್ನ ಅನುಭವದೊಲವ, ಹಿಡಿದ ಹೆಣ್ಣಿನ ಮೊಗವ,
ಕತ್ತಲಿಂದೆನಗೆ ಕರುಣಿಸುವ ಒಲೆಯುರಿಯೆ,
ಯಜ್ಞ ಕುಂಡದ ದಿವ್ಯ ವೈತಾನ ವಹ್ನಿಗಿಂ
ತಧಿಕ, ನಿನ್ನೆದೆ ಅಗ್ನಿ ದಿವ್ಯ, ನನಗೆ.

ನದಿಯ ದಂಡೆಯ ಮೇಲೆ ಮಾವು ಕಿಲ ಕಿಲ ನಕ್ಕು,
ಚಿಗುರು ಕೆಂದುಟಿಯಲ್ಲಿ ಹಾಡ ಹಿಡಿದು,
ಹೂವನಕ್ಕಿತು ಹಸುರು, ಆಡುತ್ತಿತ್ತೇನನೋ
ಮೊಲ್ಲೆ ಮೆಲ್ಲಗೆ ಸದ್ದಿರದೆ ಬಿರಿದು,

ಇತ್ತ ಬೆತ್ತಲೆ ಕೂಸು ಹೊರಳಿ ಅತ್ತಿತು, ಆಹ
ಪ್ರಕೃತಿ ನಾನೆತ್ತಿಕೋ ಕೃತಿ ನಿನ್ನದು
ಎಂದು, ಹೆತ್ತಮ್ಮ ಮೈಗರೆದು, ಕತ್ತೆತ್ತಿದರೆ
ಬರಿದಾದ ಬಾನು, ನಿಸ್ಸೀಮ ನೀಲಿ.

ತಾಯಿ ತೊರೆದಂಥ ಕೂಸೆತ್ತಿ ಎದೆಯೊಳಗಿಟ್ಟು
ಬೆಳೆಸಿದ್ದು ನಾನೆ ಮಗುವ,
ಹರಿವ ತೊರೆಯಲಿ ಹೂವ ತೊಳೆದು, ದಳ ದಳ ಬಿಡಿಸಿ,
ಮರದ ಹರೆಯಲಿ ತೂಗಿ, ಹೂದೊಟ್ಟಿಲು,

ಮುಡಿಗೆ ನಿಶೆ, ಕೆನ್ನೆಗುಷೆ, ಕಿವಿಗೆ ನಕ್ಷತ್ರ
ಮುಡಿಸಿ ಹೂ ಬಿಸಿಲ, ಹಣೆಗಿಟ್ಟು ಬಿದಿಗೆಯ ಚಂದ್ರ,
ಹಸುರುಹಿಡಿಸಿದವ ನಾನೆ ನನ್ನ ಕೃತಿಗೆ

ಎದೆಗೆ ಬಂದಳು ಮಗಳು. ಕಣ್ಣ ಬೆಳಕಿಗೆ ಬಣ್ಣ
ದಂಚು ಕಟ್ಟುವ ಕಾಲ, ಒಪ್ಪಿಸದೆ ಗತಿಯಿಲ್ಲ
ಅವಳ ಬದುಕಿಗೆ ಅವಳ, ಅರಮನೆಯ ಸೆರೆಯೆಂದು
ಹರಿದು ಬಂದವನಾನು, ಕಾಡಗಿಡ ಮರಗಳೇ
ಸ್ತಂಭರಾಜಿಗಳಾಗಿ, ಮನವು ರಾಜಿಗೆ ತೊಡಗಿ,
ಎಲೆಮನೆಯ ಎದೆ ಹಕ್ಕಿಗತ್ಯಾಪ್ತ ಗೂಡಾಗಿ,
ಕಟ್ಟಿ ಕೊಂಡಾವಿಲ್ಲೆ ಕೋಟೆ ಕೊತ್ತಲ ಬುರುಜು

ಚಿಗುರು ಹವಳವೆ ಆಗಿ, ಹಸುರು ಪಚ್ಚೆಯ ಮೀರಿ,
ಉದಯಗಿರಿ ಸ್ವರ್ಣ ಸಿಂಹಾಸನದ ತೆರ ಹೊಳೆದು
ಕಣ್ಣ ಕುಕ್ಕುತ್ತಿಹುದು ಹಕ್ಕಿ ಪಕ್ಕಿಯ ಹಾಡು,
ಇಂಗುತಿದೆ ಮರಳಲ್ಲಿ ಜೀವ ಚಲನವ ಮರೆತು.

ಬಂದದಾರಿಯು ಮರೆದು, ಮುನ್ನಡೆವುದೇ ಹಾದಿ.
ಎಲ್ಲಿದೆಯೊ ಆ ಕಡಲು ಮಿಡಿಯುತ್ತ ತನ್ನೊಡಲು.
ಎಲ್ಲಿದೆಯೊ ಆ ಕಡಲು ತುಡಿಯುತ್ತ ತನ್ನೊಡಲು... 110

ಅಣಿಯಾಗಬೇಕೀಗ ಕೃತಿಯು ಪ್ರಕೃತಿಗೆ ಬಿಟ್ಟು,
ಪ್ರೇಮಕ್ಕೆ ನೋವ ಬೆಲೆ ತೆತ್ತು, ಹೇಳಿ ವಿದಾಯ
ಬಿಟ್ಟು ನಡೆದೆನು ಹಿಂದೆ ಸುಖಪಟ್ಟ ಗಳಿಗೆಗಳ,
ಕೊಟ್ಟು ನಡೆದೆನು ಹಿನ್ನೆಲೆಗೆ ಅಹ ನೆನಪುಗಳು
ದಡದೊಡನೆ ನದಿಯು ಮಿಡಿದು... 115

ಬೀಸುಗಾಳಿಗೆ ನನ್ನ ಪ್ರೀತಿ ಮಾತನು ಕೊಟ್ಟು
ಹೋಗಿ ಬರುವೆನು ಎಂದು ಹಿಂದೆ ಹೆಜ್ಜೆಯ ಬಿಟ್ಟು.
ಜೀವನದಿ ನಾಡಿ ಹಿಡಿದು... 118

ಕತ್ತಲಲಿ ಮುಸುಕಾಗಿ ನಿಂತ ಕೋಟೆಯ ಕಂಡೆ,
ಯಾರ ನಗರಿಯೊ ರಾಜನಾರೋ ಇದಕೆ,
ಹೊರಗಿಂದ ರಕ್ಷಣೆ, ಒಳಗಿಂದ ಸೆರೆಮನೆ.
ಕಲ್ಲುಗೋಡೆಗೆ ತಕ್ಕ ಕಲ್ಲು ಹೃದಯ 122

ಕೋಟೆಗೊತ್ತಿದ ಹಾಗೆ ಹರಿವ ಜುಳುಜುಳುನಾದ.
ಬದಿಗೆ ಬೆಳದಿಂಗಳಲಿ ಬೆಳ್ಳಿ ಮರಳು
ಅತ್ತ ದೂರದಲೊಂದು, ಹತ್ತುಮರಗಳ ತೋಪು,
ದೇಹ ದಿಂಡುರುಳಿಸಲು ಸೂಕ್ತ ತಾವು 126

ಜೊನ್ನ ಬೆಳಕರಿ ತೊಯ್ದು ತಣ್ಣನೆಯ ನೆಳಲಲ್ಲಿ
ಹುಲ್ಲು ಹಾಸಿನ ಮೇಲೆ ಮೈಯ ಚೆಲ್ಲಿ,
ಕಣ್ಣು ಮುಚ್ಚಿರಬೇಕು, ತಟ್ಟನೆಚ್ಚರವಾಗಿ,
ಕಣ್ಣು ಬಿಚ್ಚಿದೆ ಕಂಡೆ ಹುಡಿಮರಳಲಿ 130

ಮಲಗಿ ಬೆತ್ತಲೆ ಹೆಣ್ಣು ಗಂಡು, ಮೈ ಒಂದಾಗಿ,
ನೀಲಿ ಎದೆ ಮೇಲಿತ್ತು ಚಂದ್ರ ಪದಕ,
ಕಪ್ಪು ಹುಡುಗಿಯ ಮೇಲೆ ಬೆಳ್ಳಿ ಹುಡುಗನ ಲೀಲೆ,
ನದಿ ಮರೆತ ಹಾಗಿತ್ತು ಹರಿವ ತವಕ 134

ಮೇಲೆ ಬಾನುಡಿಗೆ ನಕ್ಷತ್ರದಕ್ಷತೆ ಚೆಲ್ಲಿ
ಚಂದ್ರ ನಸು ನಗುತಿದ್ದ, ತುಟಿಯಂಚಲಿ
ಸೀಲಿ, ಎದೆಗೊತ್ತಿ ಹಿಡಿದಿದೆ ನೆಲವ ಮುತ್ತಿಕ್ಕಿ
ಮಿಂಚ ಹರಿಯಿಸಿ ನಿಂತ ನದಿ ಎದೆಯಲಿ

ಮತ್ತೆ ನದಿ ಹರಿಯುತಿದೆ, ಬೆಟ್ಟದಲಿ ಮೈಪಡೆದು,
ಕಾಡ ಹೊಕ್ಕಳಿದು, ಬಯಲಲ್ಲಿ ಹಾದು,
ಕಂದಕದಿ ಮರೆಯಾಗಿ, ಕಣಿವೆಯಲಿ ಗೆರೆಯಾಗಿ,
ಕಡಲ ಸ್ಥಾಯಿಗೆ ಸಂಚಾರಿಯಾಗಿ

ತನ್ನ ಒಳಗನು ಹೀಗೆ ಹೊರಗಿಟ್ಟು ಕಂಡಂತೆ,
ಕಣ್ಣು ಕಂಡುದು ಒಂದು ಕನಸಿನಂತೆ,
ಮತ್ತೆ ತೆರೆ ಮತ್ತೆ ತಿರೆ ಮತ್ತೆ ಕಣ್ತೆರೆದಾಗ
ಮರಳಹಾಸಲ್ಲಿತ್ತು ಎಳೆಯ ಬಿಸಿಲು

ದಿನಗಳುರುಳಿದ ಹಾಗೆ ನದಿಯು ಜಲ ಬತ್ತಿ ಮರ
ಬರೆದ ಪತ್ರಗಳೆಲ್ಲ ಮಣ್ಣು ಸೇರಿ
ನೀರು ಮರಳಲಿ ಮುಳುಗಿ, ಮುಗಿಲು ನೀಲಿಗೆ ಕರಗಿ,
ನೆಲದ ಕೊರಳೊಣಗಿ ಕೆಂಧೂಳಿ ಹೊಟ್ಟೆಯ ಹೊಸೆದು,
ಹಸುರ ಮೂತಿಗೆ ಮುಟ್ಟಿ ಮಣ್ಣು ತೂರಿ,
ಎಲ್ಲಿ ನೋಡಿದರಲ್ಲಿ ಬರಿಯ ಬಟ್ಟಂ ಬಯಲು
ಮೇಲೆ ಸುಡು ಸುಡು ಬಿಸಿಲು
ಬೆಂಕಿ ಮಳೆ ಬೆವರ ಹೊಳೆ
ಜೋತ ಜೀವಕೆ ಮೂಳೆ ಹಂದರದ ಆಧಾರ
ಉಸಿರು ಹಾಕಲು ಭಗ್ಗನೆದ್ದು ಚಿಮ್ಮುವ ಬೆಂಕಿ
ಕಂಡ ನೋಟದ ಸುತ್ತ ಕೆಂಪು ಸುತ್ತುವ ಬೆಂಕಿ
ಸುಳಿಯು ಒಳಗೊಂದು ಸುಳಿ ಸುಳಿಯು ಒಳಗೊಂದು ಸುಳಿ

ದೂರದಲ್ಲೆಲ್ಲೊ ಮಸು ಮಸುಕು ಕಲ್ಲಿನ ಕೋಟೆ
ಒಮ್ಮೆಯಾದರು ತೆರೆಯಲಿಲ್ಲ ಆ ಬಾಗಿಲು
ತೆವಳುತಿದೆ ದೇಹ ಉಮ್ಮಳಿಸುತಿದೆ ದಾಹ... ಹಾ...

ಸೆಳೆಯುತಿದೆ ಹೆಣವಸೀ ನೆಲದ ಬದುಕಿನ ಮೋಹ
ಹಸಿದ ಹೊಟ್ಟೆಯು ಕೂಗು ಭೂಕಂಪವಾಗುತ್ತ
ಬೀಜ ಅರಳಾಗುತಿವೆ ಬಾಣಲಿಗೆ ಸಿಡಿಯುತ್ತ
ಊರಲಾಗದೆ ಕೋಲ ದೇಹ ಗದಗುಟ್ಟುತ್ತ
ಸೊನ್ನೆಗಳು ಸಿಡಿಯುತಿವೆ ಕಣ್ಣಿನಿಂದ 166

ಅಪ ನಿಶ್ಚಲ ಕಲ್ಲು ಕೋಟೆ ಗುಡಿಗೋಪುರ,
ಹೊಗೆಯುಗುಳುತಿದೆ ಕೋಟೆ ಹಚ್ಚಿ ಚುಟ್ಟ 168

ಆಗಲೊಮ್ಮೆಗೆ ಗಾಳಿಗುಸಿರು ತಿರುಗಿತೆ ಮೇಲೆ
ಮೋಡ ಕೂಡಿತೆ ?   ನೀಲಿ ಹುಡುಗಿ ಕಂಚುಕ ಕಳಚಿ
ತುಂಬು ಮೊಲೆ ತೂಗಿದಳೆ ?   ತೊಡೆಯು ಕಂದನ ಮಂಡೆ
ಸವರಿ ಮೆಲ್ಲಗೆ ಗಾಳಿ ಬೆರಳಲ್ಲಿ ಮುದ್ದಾಡಿ
ಹಣೆಗೆ ಹೂಮುತ್ತನಿರಿಸಿ 173

ಬರಿದು ಹುಡಿ ಹುಡಿ ಒಣಗಿ ಬರಡಾದ ಒಣನೆಲದ
ಕಂಠನಾಳದಿ ಜೀವಸ್ರೋತ ಸರಭರ ಹರಿದು,
ತುಂಬಿ ತುಳುಕಾಡಿ ಭೋರ್ಗರೆದು ಜೀವನ್ಮೂಲ
ತೊಯ್ಸಿ ಒಳಜಲದೊಂದು ಕಣ್ಣು ಬಿಡಿಸೆ... 177

ಕಣ್ಣು ತೆರೆದರೆ ಮುಂದೆ ಕೋಟೆ ಕೊತ್ತಲ ಬುರುಜು
ಮೆಲ್ಲ ಮೆಲ್ಲಗೆ ಮೈ ಜಲಿಸಿ ನಸು ಒಲೆಯುತಿವೆ
ಅಪ ಮುಡಿಯೂರದೋ ತೊಡೆಯು ಮೇಲಿದೆ ಮತ್ತೆ
ಕತ್ತನೆತ್ತಲು ಕಂಡೆ ಅಂದು ನದಿ ಎದೆಯಲ್ಲಿ
ಕಂಡ ನೀಲಿಯಂ ತಾಯಿ ಬೆಳ್ಳಿ ತಂದೆ. 182

ಆಲ್ಬರ್ಟ್‌ಕಾಮು ಮತ್ತು ಅಸಂಗತವಾದ

ಟಿ. ವಿ. ಅಶೋಕ

ತುಂಬ ಗಂಭೀರವಾದ ತಾತ್ತ್ವಿಕ ಸಮಸ್ಯೆ ಎಂದರೆ ಆತ್ಮಹತ್ಯೆಯದು ಎಂದು ಆಲ್ಬರ್ಟ್‌ಕಾಮು ಅಭಿಪ್ರಾಯಪಡುತ್ತಾನೆ. ಬದುಕು ಜೀವನಯೋಗ್ಯವೆ, ಅಲ್ಲವೆ ಎಂಬ ನಿರ್ಧಾರವೇ ತತ್ತ್ವಶಾಸ್ತ್ರದ ಮೂಲಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವಾಗುತ್ತದೆ. ಕಾಮು ಈ ಮಾತನ್ನು ಉದಾಹರಣೆಯೊಂದರ ಮೂಲಕ ಸ್ಪಷ್ಟಪಡಿಸಲು ಪ್ರಯತ್ನಿಸುತ್ತಾನೆ. ಗೆಲಿಲಿಯೋ ಬದುಕನ್ನೇ ತೆಗೆದುಕೊಳ್ಳೋಣ. ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ ಎಂದು ಆತ ಕಂಡುಹಿಡಿದ. ಆದರೆ ಸೂರ್ಯ ಭೂಮಿಯ ಸುತ್ತ ಸುತ್ತುತ್ತಾನೆ ಎಂದು ಧರ್ಮಶಾಸ್ತ್ರಗಳು ಹೇಳುತ್ತಿದ್ದುವು. ಹೀಗಾಗಿ ಸಂಪ್ರದಾಯವಾದಿಗಳು ಗೆಲಿಲಿಯೋ ಮೇಲೆ ಸಿಟ್ಟಾಗಿ ಆತನನ್ನು ಸೆರೆಯಲ್ಲಿಟ್ಟರು. ಜೀವ ಉಳಿಸಿಕೊಳ್ಳುವ ಸಲುವಾಗಿ, ತನ್ನ ಜೀವಕ್ಕೆ ಕುತ್ತು ತಂದಿದ್ದ ಸತ್ಯಸಂಶೋಧನೆಯನ್ನು ಗೆಲಿಲಿಯೋ ಕೈಬಿಡಬೇಕಾಗಿ ಬಂದಿತು. ಅಂದರೆ ಜೀವಕ್ಕಾಗಿ, ಬದುಕಿಗಾಗಿ, ಸತ್ಯವನ್ನು ಕಡೆಗಣಿಸಬೇಕಾಯಿತು. ಭೂಮಿ ಸೂರ್ಯನ ಸುತ್ತ ತಿರುಗುತ್ತದೆಯೋ, ಸೂರ್ಯ ಭೂಮಿಯ ಸುತ್ತ ತಿರುಗುತ್ತಾನೋ ಎಂಬ ಪ್ರಶ್ನೆ ಅಷ್ಟೇನೂ ಮುಖ್ಯವಲ್ಲ; ಒಂದು ದೃಷ್ಟಿಯಲ್ಲಿ ಅದೊಂದು ನಿರರ್ಥಕ ಪ್ರಶ್ನೆ. ಯಾವುದೇ ವೈಜ್ಞಾನಿಕ ಸತ್ಯಕ್ಕಿಂತ ಬದುಕು ಮುಖ್ಯವಾಗುವುದರಿಂದ ಕಾಮು ಗೆಲಿಲಿಯೋನನ್ನು ಸಮರ್ಥಿಸುತ್ತಾನೆ. ಏಕೆಂದರೆ ಬದುಕಿನ ಬಗೆ ನಮ್ಮ ಹೊಸ ಹೊಸ ತಿಳುವಳಿಕೆಗಳಿಗಿಂತ, ಬದುಕು ಹೆಚ್ಚು.

ಇನ್ನೊಂದು ರೀತಿಯ ಜನರೂ ಇರುತ್ತಾರೆ. ಬದುಕು ಜೀವನಯೋಗ್ಯವಲ್ಲ ಎಂಬ ನಿರ್ಧಾರಕ್ಕೆ ಬಂದು ಆತ್ಮಹತ್ಯೆ ಮಾಡಿಕೊಂಡುಬಿಡುತ್ತಾರೆ. ಮತ್ತೆ ಕೆಲವರು ತಾವು ಜೀವಿಸಲು ಯಾವ ವಿಚಾರಗಳು, ಭ್ರಮೆಗಳು ಕಾರಣವಾಗಿವೆ ಎಂದು ಕೊಂಡಿರುತ್ತಾರೋ ಅವಕ್ಕಾಗಿ ತಮ್ಮ ಪ್ರಾಣವನ್ನೇ ಬಲಿಕೊಡಲೂ ಸಿದ್ಧರಿರುತ್ತಾರೆ. ಅಂಥವರಿಗೆ ಬದುಕಲಿಕ್ಕೆ ಒಂದು ಕಾರಣವಿರುವಂತೆ ಸಾಯಲಿಕ್ಕೂ ಇರುತ್ತದೆ. ಆದ್ದರಿಂದ ಬದುಕಿನ ಅರ್ಥವನ್ನು ಕುರಿತಾದ ಪ್ರಶ್ನೆಗಳೇ ಎಲ್ಲ ಪ್ರಶ್ನೆಗಳಿಗಿಂತ ಮುಖ್ಯವಾಗುತ್ತವೆ ಎಂದು ಕಾಮು ನಂಬುತ್ತಾನೆ.

ಆತ್ಮಹತ್ಯೆಯನ್ನು ಕೇವಲ ಒಂದು ಸಾಮಾಜಿಕ ಸಮಸ್ಯೆಯಾಗಿ ವಿಶ್ಲೇಷಿಸಲಾಗದು ಎಂದು ಕಾಮು ಹೇಳುತ್ತಾನೆ. ಅವನ ಪ್ರಕಾರ ಆತ್ಮಹತ್ಯೆ ಹೆಚ್ಚಾಗಿ ಒಂದು ತಾತ್ತ್ವಿಕ ಸಮಸ್ಯೆಯಾಗುತ್ತದೆ.

ಆತ್ಮಹತ್ಯೆಗೆ ಅನೇಕ ಕಾರಣಗಳಿರಬಹುದು. ವರ್ತಮಾನ ಪತ್ರಿಕೆಗಳಲ್ಲಿ, 'ವೈಯಕ್ತಿಕ ದುಃಖ', 'ವಾಸಿಯಾಗದ ಖಾಯಿಲೆ' ಮುಂತಾದ ಕಾರಣಗಳನ್ನು ಓದುತ್ತಿರುತ್ತೇವೆ. ಈ ಕಾರಣಗಳು ಸಾಧ್ಯವೂ ಹೌದು. ಆದರೆ ಇಂಥ ಕ್ರಿಯೆಗೆ ಕ್ರಿಯೆಯನಂತರ ನಮಗೆ ಹೊಳೆಯುವಂತಹ ಕಾರಣಗಳನ್ನೇ ನಿರ್ಧರಿಸಿಬಿಡಲು ಸಾಧ್ಯವಿಲ್ಲ ಎಂದು ಕಾಮು ಅಭಿಪ್ರಾಯಪಡುತ್ತಾನೆ. ಅವನ ಪ್ರಕಾರ ಆತ್ಮಹತ್ಯೆ ಒಂದು ರೀತಿಯ ತಪ್ಪೊಪ್ಪಿಗೆ : ಬದುಕು ನಮ್ಮ ಮಿತಿಗೆ ಮೀರಿದ್ದು, ಇಲ್ಲವೇ, ಅದು ನಮಗೆ ಅರ್ಥವಾಗುವುದಿಲ್ಲ ಎಂದು ಒಪ್ಪಿಕೊಂಡಂತೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಬದುಕಿಗಾಗಿ ಅಷ್ಟೊಂದು ತೊಂದರೆಯನ್ನೇಕೆ ತೆಗೆದುಕೊಳ್ಳಬೇಕೆಂಬ ಮನೋಭಾವ.

ಸ್ವಾಭಾವಿಕವಾಗಿಯೇ ಬದುಕು ಸುಲಭವಲ್ಲ. ಅಸ್ತಿತ್ವ ಆಜ್ಞಾಪಿಸುವ ಸನ್ನೆಗಳನ್ನೇ ನಾವು ಮುಂದುವರೆಸಿಕೊಂಡು ಹೋಗುತ್ತಿರುತ್ತೇವೆ. ಸ್ವಇಚ್ಛೆಯಿಂದ ಸಾಯುವುದೆಂದರೆ ಇಂಥ ಅಭ್ಯಾಸದ ಹುಚ್ಚುತನವನ್ನು ಗುರುತಿಸಿದಂತೆ. ಬದುಕಲು ಒಂದು ಮಹತ್ತ್ವಪೂರ್ಣ ಕಾರಣ ಇಲ್ಲ ಎಂಬುದನ್ನು ಕಂಡುಕೊಂಡಂತೆ. ದೈನಂದಿನ ಹೋರಾಟದ ಹುಚ್ಚುತನಗಳು ಮತ್ತು ಸಂಕಟದ ಅರ್ಥಹೀನತೆಗಳನ್ನು ಗುರುತಿಸಿದಂತೆ ಎಂದು ಕಾಮು ಸೂಚಿಸುತ್ತಾನೆ.

ಇಂಥದೊಂದು ತಿಳುವಳಿಕೆಗೆ ಕಾರಣವೇನು ?

ಎಲ್ಲ ಭ್ರಮೆಗಳೂ, ಬೆಳಕುಗಳೂ ತೊಲಗಿಹೋದ ಪ್ರಪಂಚದಲ್ಲಿ ಮನುಷ್ಯ ಒಂಟಿಯಾಗುತ್ತಾನೆ; ಪರಕೀಯನಾಗುತ್ತಾನೆ. ಅವನ ಗಡೀಪಾರಿಗೆ ಉತ್ತರವೇ ಇಲ್ಲ. ಏಕೆಂದರೆ, ಕಳೆದುಹೋದ ಮನೆಯ ಇಲ್ಲವೇ ಆಶ್ವಾಸನಯುಕ್ತ ಭೂಮಿಯ ಭರವಸೆಯೇ ಇಲ್ಲ. ಮಾನವ ಮತ್ತು ಅವನ ಬದುಕು, ನಟ ಹಾಗೂ ನಾಟಕರಂಗ ಇವುಗಳ ನಡುವಿನ ವಿಚ್ಛೇದನವೇ ಅಸಗಂತ. ಇಂಥ ಅನಿಸಿಕೆಗೂ ಸಾಯುವ ಇಚ್ಛೆಗೂ ಸಂಬಂಧವಿದೆ ಎಂದು ಕಾಮು ನಂಬುತ್ತಾನೆ. ಎಲ್ಲ ಆರೋಗ್ಯಶಾಲಿ ಮನುಷ್ಯರೂ ಒಂದಲ್ಲ ಒಂದುಬಾರಿ ತಮ್ಮ ಆತ್ಮಹತ್ಯೆಯ ಬಗ್ಗೆ ಯೋಚಿಸಿರುತ್ತಾರೆ ಎಂದು ಅವನ ನಂಬಿಕೆ.

ಅಸಂಗತೆಯ ತಿಳುವಳಿಕೆ ನಮ್ಮನ್ನು ಸಾವಿಗೆ ದೂಡುತ್ತದೆಯೆ ? ಸಾವು ಎಷ್ಟರಮಟ್ಟಿಗೆ ಅಸಂಗತೆಗೆ ನಾವು ಕೊಡಬಹುದಾದ ಉತ್ತರವಾಗಬಹುದು ? ಇಂಥ ಪ್ರಶ್ನೆಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಕಾಮು ಸೂಚಿಸುತ್ತಾನೆ.

ಮನುಷ್ಯ ತನ್ನ ನಂಬಿಕೆಯನ್ನು ವಂಚಿಸುವುದಿಲ್ಲವಾದ್ದರಿಂದ ಅವನ ನಂಬಿಕೆಯೇ ಅವನ ಕ್ರಿಯೆಯನ್ನು ನಿರ್ಧರಿಸುತ್ತದೆ ಎಂಬುದನ್ನು ನಾವು ಒಪ್ಪಿಕೊಂಡರೆ, ಬದುಕು ಅಸಂಗತ ಎಂಬ ಅವನ ನಂಬಿಕೆಯೇ ಅವನ ಆತ್ಮಹತ್ಯೆಯ ಇಚ್ಛೆಯನ್ನು ಪ್ರಚೋದಿ

ಸುತ್ತದೆ ಎಂದಹಾಗಾಯಿತು. ಆದರೆ ಆತ್ಮಹತ್ಯೆ ಸಾಧುವೇ ? ಎಂಬುದೇ ನಮ್ಮ ಮುಂದಿನ ಪ್ರಶ್ನೆ ಎಂದು ಕಾಮು ತಿಳಿಸುತ್ತಾನೆ.

ಬದುಕಿನೊಡನೆ ನಮ್ಮ ನಿಕಟ ಸಂಬಂಧಗಳು ಎಲ್ಲದಕ್ಕಿಂತ ಹೆಚ್ಚು ಶಕ್ತಿಯುತ ವಾಗಿರುತ್ತವೆ. ದೇಹದ ತೀರ್ಪು ಮನಸ್ಸಿನ ತೀರ್ಪಿನಷ್ಟೇ ಮುಖ್ಯವಾಗುತ್ತದೆ ಮತ್ತು ಸಂಹಾರದಿಂದ ದೇಹ ಕುಗ್ಗುತ್ತದೆ. ಏಕೆಂದರೆ, ನಾವು ಯೋಚಿಸುವ ಸ್ವಭಾವವನ್ನು ಬೆಳೆಸಿಕೊಳ್ಳುವ ಮೊದಲೇ ಬದುಕುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದೇವು. ಬದುಕುತ್ತ ಹೋದಂತೆ ಬದುಕಿಗೆ ಯಾವುದೇ ಅರ್ಥ ಇಲ್ಲದಿರಬಹುದೆಂಬ ಅನುಮಾನ ನಮ್ಮನ್ನು ಕಾಡುತ್ತ ಬಂದಿತು. ಬದುಕಿಗೆ ಅರ್ಥವಿಲ್ಲ ಎಂಬ ನಂಬಿಕೆ ಬದುಕು ಜೀವನಯೋಗ್ಯವಲ್ಲ ಎಂಬ ನಿರ್ಧಾರದತ್ತ ಕೊಂಡೊಯ್ಯಲಾರಂಭಿಸಿತು. ಹೀಗಾಗಿ, ಬದುಕು ಜೀವಿಸಲು ಅರ್ಹವಲ್ಲ ಎಂಬ ತಿಳುವಳಿಕೆಯಿಂದ ಒಬ್ಬ ತನ್ನನ್ನು ತಾನು ಕೊಂದುಕೊಂಡರೆ ಅದು 'ನಿಜ'ವಾದರೂ, 'ಫಲದಾಯಕ'ವಲ್ಲ ಎನ್ನುತ್ತಾನೆ ಕಾಮು. ಏಕೆಂದರೆ, ಅದೊಂದು ಸ್ವಪ್ರೋಕ್ತಿ ಅಷ್ಟೆ.

ಎಲ್ಲ ತಿಳುವಳಿಕೆಗಳಂತೆ ಅಸಂಗತೆಯ ತಿಳುವಳಿಕೆ ಕೂಡ ಇದ್ದಕ್ಕಿದ್ದ ಹಾಗೆ ಎಲ್ಲೆಂದರಲ್ಲಿ ಒಮ್ಮೆಗೇ ಹೊಳೆದುಬಿಡುವಂಥ ತಿಳುವಳಿಕೆ. ಯಾವನಾದರೂ ಏನನ್ನೋ ಯೋಚಿಸುತ್ತ ನಿಂತಿದ್ದಾನೆ ಎಂದುಕೊಳ್ಳಿ. 'ಏನು ಯೋಚನೆ ಮಾಡುತ್ತಿದ್ದೀಯಾ ?' ಎಂದು ಪ್ರಶ್ನಿಸಿದಾಗ, 'ಏನಿಲ್ಲ' ಎಂದು ಅವನು ಉತ್ತರಿಸಿದರೆ ಕೆಲವೊಮ್ಮೆ ಅದು ಬರೀ ನಟನೆ ಎನಿಸಿಬಿಡಬಹುದು. ಆದರೆ ಈ ಉತ್ತರ ಪ್ರಾಮಾಣಿಕವಾಗಿದ್ದರೆ, ಶೂನ್ಯದಲ್ಲಿ ಶಬ್ದ ಸ್ಫುರಿಸುವ, ದೈನಂದಿನ ಸಂಕೇತಗಳು ಮುರಿದುಹೋದ, ಆತ್ಮದ ವಿಚಿತ್ರ ಸ್ಥಿತಿಯನ್ನು ಸಾಂಕೇತಿಕವಾಗಿ ಹೇಳುತ್ತದೆ. ಇದನ್ನು ಅಸಂಗತೆಯ ಪ್ರಥಮ ಲಕ್ಷಣ ಎನ್ನಬಹುದು.

ಅದು ಹೀಗೆ: ಏಳುವುದು ; ಬಸ್ ಹಿಡಿದು ಆಫೀಸಿಗೋ, ಫ್ಯಾಕ್ಟರಿಗೋ ಓಡುವುದು; ಮಧ್ಯಾಹ್ನ ಊಟ ; ಮತ್ತೆ ನಾಲ್ಕು ಗಂಟೆ ಕೆಲಸ; ಬಸ್ ಹಿಡಿದು ಮನೆಗೆ ವಾಪಸ್ಸು ಬರುವುದು ; ಊಟ, ನಿದ್ರೆ. ಸೋಮವಾರ. ಮಂಗಳವಾರ. ಬುಧವಾರ. ಗುರುವಾರ. ಶುಕ್ರವಾರ. ಶನಿವಾರ. ಎಲ್ಲ ತಾಳಬದ್ಧ. ಇದೇ ರೀತಿ ಹಾದಿ ಸಾಗುತ್ತದೆ. ಒಂದು ದಿನ 'ಏಕೆ?' ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಲ್ಲಿಂದ ಆಶ್ಚರ್ಯಭರಿತ ಹತಾಶೆಯ ಪ್ರಾರಂಭ. 'ಪ್ರಾರಂಭ' ಎನ್ನುವುದು ಇಲ್ಲಿ ಮುಖ್ಯ. ಏಕೆಂದರೆ ಯಾಂತ್ರಿಕ ಬದುಕಿನ ಮಾಮೂಲಿ ಕ್ರಿಯೆಗಳ ಅಂತ್ಯದಲ್ಲಿ ಹತಾಶೆಯ ಜನನವಾದರೂ ಏಕಕಾಲಿಕವಾಗಿ ಪ್ರಜ್ಞೆಯೊಂದರ ಬೆಳವಣಿಗೆಯನ್ನು ಅದು ಉಂಟುಮಾಡುತ್ತದೆ.

ಇಂಥ ಎಚ್ಚರದ ಪರಿಣಾಮ: ಆತ್ಮಹತ್ಯೆ ಅಥವಾ ಚೇತರಿಕೆ. ಹತಾಶೆಯಲ್ಲೇ ಒಂದು ರೀತಿಯ ಅನಾರೋಗ್ಯ ಇರುವುದು ನಿಜವಾದರೂ ಅದು ಒಳ್ಳೆ

ಯದು ಎನ್ನುತ್ತಾನೆ ಕಾಮು. ಏಕೆಂದರೆ ಎಲ್ಲದರ ಪ್ರಾರಂಭ ಪ್ರಜ್ಞೆಯಿಂದ ಮತ್ತು ಎಲ್ಲವೂ ಪ್ರಜ್ಞೆಯಿಂದ ಮಾತ್ರ ನಿಜವಾಗಬೇಕು. ಹೈದೆಗರ್ ಹೇಳುವಂತೆ 'ಉದ್ವೇಗ'ವೇ ಎಲ್ಲದರ ಮೂಲ ಎಂದು ಕಾಮು ಅಭಿಪ್ರಾಯಪಡುತ್ತಾನೆ.

ಒಂದು ದಿನ ಒಬ್ಬನಿಗೆ ಮೂವತ್ತು ವರುಷ ತುಂಬಿತು ಎಂದು ಗೊತ್ತಾಯಿತು ಎಂದಿಟ್ಟುಕೊಳ್ಳೋಣ. ಅವನು ಈ ಮೂಲಕ ತನ್ನ ಯೌವನವನ್ನು ಸಾಧಿಸ ಬೆಳಸಿದರೂ, ಅವನು ಕಾಲದೊಂದಿಗೆ ತನ್ನ ಸಂಬಂಧವನ್ನು ಕಂಡುಕೊಳ್ಳುತ್ತಿದ್ದಾನೆಂಬೇ ಇದರ ಅರ್ಥ. ಅವನು ಯಾವುದೋ ತಿರುವಿನಲ್ಲಿದ್ದಾನೆ. ಅದರ ಅಂತ್ಯದ ಬಿಂದುವಿನವರೆಗೆ ಪ್ರಯಾಣ ಮಾಡಬೇಕಾಗಿದೆ. ಅವನು ಕಾಲಕ್ಕೆ ಸೇರಿದವನಾಗಿದ್ದಾನೆ. ತನ್ನನ್ನು ಸೆರೆಹಿಡಿಯುವ ಭಯಾನಕತೆಯಿಂದ ತನ್ನ ಕ್ರೂರ ಶತ್ರುವನ್ನು ಗುರುತಿಸಿದ್ದಾನೆ. ನಾಳೆ, ತಾನು ಹಂಬಲಿಸುತ್ತಿದ್ದ ನಾಳೆ : ಅವನಲ್ಲಿರುವ ಎಲ್ಲವೂ ಅದನ್ನು ತಿರಸ್ಕರಿಸಬೇಕಾಗಿದೆ. ರಕ್ತ ಮಾಂಸಗಳ ಪ್ರತಿಭಟನೆಯೇ ಅಸಂಗತ.

ಅನೇಕ ವರುಷಗಳಿಂದ ಹಲವು ಪ್ರತಿಮೆಗಳಲ್ಲಿ, ವಿನ್ಯಾಸಗಳಲ್ಲಿ ಕಂಡಿದ್ದನ್ನು ತಿರಸ್ಕರಿಸುವುದು, ಆ ಪ್ರತಿಮೆ ವಿನ್ಯಾಸಗಳನ್ನು ಮುಂದೆ ಬಳಸಿಕೊಳ್ಳಲಾಗದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇ. ಹೀಗಾದಾಗ ನಾವು ಎಲ್ಲವನ್ನೂ ಹೊಸದೆಂಬಂತೆ, ಇದಕ್ಕಿಲ್ಲ ನಾವು ಪರಕೀಯರೆಂಬಂತೆ ಪ್ರತಿಕ್ರಿಯಿಸಲು ಪ್ರಾರಂಭಿಸುತ್ತೇವೆ. ಈ ವೈಚಿತ್ರ್ಯವೇ ಅಸಂಗತ. ಗಾಜಿನ ಪರದೆಯ ಹಿಂದೆ ಟೆಲಿಫೋನಿನಲ್ಲಿ ಮಾತನಾಡುವವನ ಸನ್ನೆಗಳಂತೆ ; ಯಾವುದೂ ಸ್ಪಷ್ಟವಾಗುವುದಿಲ್ಲ. ಎಲ್ಲವೂ ವಿಚಿತ್ರ ಎನಿಸುತ್ತದೆ. ಹುಚ್ಚು ಎನಿಸುತ್ತದೆ. ಅರ್ಥಹೀನ ಎನಿಸುತ್ತದೆ. ನಮ್ಮ ಮನೆಯ ಕನ್ನಡಿಯಲ್ಲಿ ಯಾವುದೋ ಅಪರಿಚಿತ ಮುಖ ಕಂಡಂತೆ : ಕ್ರಮೇಣ ನಮ್ಮ ಮುಖವೇ ಕಾಣತೊಡಗುತ್ತದೆ. ಇದೇ ಅಸಂಗತ.

ಅಸಂಗತೆಯನ್ನು ಗುರುತಿಸಿದ ಕ್ಷಣದಿಂದ ಅದೊಂದು ತೀವ್ರತರ ಭಾವನೆಯಾಗಿ ಪರಿಣಮಿಸುತ್ತದೆ. ಆದರೆ, ಒಂದು ವಿಷಯವನ್ನು ನೆನಪಿನಲ್ಲಿಡಬೇಕು. ಅಸಂಗತೆಯು ಮನುಷ್ಯನಲ್ಲಾಗಲೀ, ಬದುಕಿನಲ್ಲಾಗಲೀ ಪ್ರತ್ಯೇಕವಾಗಿಲ್ಲ. ಅದು ಮನುಷ್ಯ ಮತ್ತು ಅವನ ಬದುಕಿನ ಸಂಬಂಧದಲ್ಲಿದೆ. ಬಯಸುವ ಮನಸ್ಸು, ಮತ್ತು ನಿರಾಶೆಗೊಳಿಸುವ ವಿಶ್ವ—ಇವುಗಳ ನಡುವಿನ ವಿಚ್ಛೇದನವೇ ಅಸಂಗತ.

ತಾನು ಮತ್ತು ತನ್ನ ಬದುಕಿನ ಸಂಬಂಧವನ್ನು ಗುರುತಿಸಿಕೊಂಡಾಗ ಮನುಷ್ಯ ಪ್ರಜ್ಞಾಪೂರ್ವಕವಾಗಿಯೇ ಬದುಕಬೇಕಾಗುತ್ತದೆ. ಬದುಕುವುದೆಂದರೆ ಅಸಂಗತೆಯನ್ನು ಜೀವಂತವಾಗಿಟ್ಟಂತೆ. ವಿಧಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಂತೆ. ಪ್ರಜ್ಞೆಯನ್ನು ತಿರಸ್ಕರಿಸಲಾಗದು. ಆದ್ದರಿಂದ ಅಸಂಗತೆಯು ಪ್ರಜ್ಞೆಯಲ್ಲಿಯೋ

ಮನುಷ್ಯ ತನ್ನ ವಿಧಿಯನ್ನು ಬದುಕಬೇಕು. ಬದುಕು ಅಸಂಗತ ಎಂದು ತಿಳಿದೇ ಬದುಕಬೇಕು. ಪ್ರಜ್ಞಾಪೂರ್ವಕ ಪ್ರತಿಭಟನೆಯನ್ನು ತಿರಸ್ಕರಿಸುವುದು ಸಮಸ್ಯೆಯನ್ನು ಬಿಟ್ಟು ಓಡಿಹೋದಂತೆ. ಶಾಶ್ವತ ಕ್ರಾಂತಿಯು ವೈಯಕ್ತಿಕ ಅನುಭವದಲ್ಲಿ ನಿಜವಾಗುವ ಪರಿ ಇದು. ವ್ಯಕ್ತಿ ತನ್ನನ್ನು ತಾನು ಕೊಂದುಕೊಳ್ಳುವುದು ಅಸಂಗತೆಗೆ ಬೆನ್ನು ತೋರಿಸಿದಾಗ, ಬದುಕಿನಿಂದ ಪಲಾಯನ ಮಾಡುವ ನಿರ್ಧಾರಕ್ಕೆ ಬಂದಾಗ. ಹೀಗಾಗಿ ಒಂದು ತಾತ್ತ್ವಿಕ ಹೋರಾಟಕ್ಕೆ ಅವನು ಸಜ್ಜಾಗಬೇಕಾಗುತ್ತದೆ.

ಆತ್ಮಹತ್ಯೆಯು ಹೋರಾಟವನ್ನು ಹಿಂಬಾಲಿಸುತ್ತದೆ ಎಂಬುದು ಒಂದು ತಪ್ಪು ಕಲ್ಪನೆ ಎಂದು ಕಾಮು ಹೇಳುತ್ತಾನೆ. ಏಕೆಂದರೆ ಹೋರಾಟದ ತಾರ್ಕಿಕ ಪರಿಣಾಮ ಆತ್ಮಹತ್ಯೆ ಅಲ್ಲ. ಆತ್ಮಹತ್ಯೆ ಅಂಗೀಕಾರದ ಅತ್ಯುನ್ನತ ಶಿಖರ. ಆತ್ಮಹತ್ಯೆ ಅಸಂಗತೆಗೆ ಪೂರ್ಣವಿರಾಮ ಹಾಕುತ್ತದೆ. ಬದುಕಬೇಕಾದಲ್ಲಿ ಅಸಂಗತೆಯೂ ಜೀವಂತವಾಗಿ ಉಳಿದುಕೊಳ್ಳುತ್ತದೆ. ವ್ಯಕ್ತಿಯ ಸಾವಿನಲ್ಲಿ ಮಾತ್ರ ಅಸಂಗತೆಯ ಸಾವು. ಆದರೆ, ಹೋರಾಟವು ಜೀವನಕ್ಕೆ ಅದರ ಮೌಲ್ಯವನ್ನು ನೀಡುತ್ತದೆ; ಬದುಕಿಗೆ ಭವ್ಯತೆಯನ್ನು ನೀಡುತ್ತದೆ. ಸಾವಿನ ತಿಳುವಳಿಕೆ ಮತ್ತು ತಿರಸ್ಕಾರ ಏಕ ಕಾಲದಲ್ಲಿ ಜಾಗೃತವಾಗುತ್ತವೆ. ಆದರೆ, ಇಂಥ ಹೋರಾಟವು ಸಾಮೂಹಿಕ ಹೋರಾಟವಾಗಲು ಸಾಧ್ಯವಿಲ್ಲ. ಇದು ವ್ಯಕ್ತಿಗತ ; ವೈಯಕ್ತಿಕ. ಇಂಥ ಮನುಷ್ಯ ಬದುಕಿಗೆ ಶರಣಾಗುವುದಿಲ್ಲ ; ಬೆನ್ನು ತೋರಿಸುವುದಿಲ್ಲ. ಪ್ರಜ್ಞೆ ಮತ್ತು ಹೋರಾಟ ಬದುಕಿನ ಬಗ್ಗೆ ನೇತ್ಯಾತ್ಮಕ ಧೋರಣೆಯನ್ನು ಬಿಡಿಸಲು ಸಹಾಯ ಮಾಡುತ್ತವೆ. ಅಲ್ಲದೆ, ಅಸಂಗತೆಯ ತಿಳುವಳಿಕೆ ಮತ್ತು ಅದರ ವಿರುದ್ಧದ ಹೋರಾಟ—ಇವು ಮನುಷ್ಯನ ವೈಯಕ್ತಿಕತೆಯನ್ನು ಸ್ಥಾಪಿಸುತ್ತವೆ. ಈ ನೆಲದ ಮೇಲೆ ಆತನ ಇರುವಿಕೆಯನ್ನು ನಿಜವಾಗಿಸುತ್ತವೆ.

ಇಂಥ ತಿಳುವಳಿಕೆಯಿಂದ ಮನುಷ್ಯ 'ಸ್ವತಂತ್ರ'ನಾಗುತ್ತಾನೆಯೇ ಎಂಬ ಪ್ರಶ್ನೆ ಇನ್ನೊಂದು ಕ್ಲಿಷ್ಟ ಸಮಸ್ಯೆಯನ್ನು ನಮ್ಮ ಮುಂದೆ ತೆರೆದಿಡುತ್ತದೆ. ಮನುಷ್ಯ ಸ್ವತಂತ್ರನೇ ಅಲ್ಲವೇ ಎಂಬ ಪ್ರಶ್ನೆ ತನ್ನಲ್ಲಿ ಆಸಕ್ತಿ ಕೆರಳಿಸುವುದಿಲ್ಲವೆಂದು ಕಾಮು ತಿಳಿಸುತ್ತಾನೆ. ತಾನು ತನ್ನ ಸ್ವಾತಂತ್ರ್ಯವನ್ನು ಮಾತ್ರ ಅನುಭವಿಸಲು ಸಾಧ್ಯ ಎಂದು ಅವನು ತಿಳಿಯುತ್ತಾನೆ. ಅಲ್ಲದೆ, 'ಸ್ವಾತಂತ್ರ್ಯ' ಎಂಬುದೇ ಒಂದು 'ಸ್ವತಂತ್ರ' ಕಲ್ಪನೆಯಾಗಿರಲು ಸಾಧ್ಯವಿಲ್ಲ. ಅದನ್ನು 'ದೇವರು' ಎಂಬ ಮತ್ತೊಂದು ಸಮಸ್ಯೆಯೊಂದಿಗೆ ಸೇರಿಸಿಕೊಂಡೇ ಮಾತನಾಡಬೇಕಾಗುತ್ತದೆ. ಮನುಷ್ಯ ಸ್ವತಂತ್ರನೇ ಅಲ್ಲವೇ ಎಂಬ ಪ್ರಶ್ನೆ ಅವನಿಗೊಬ್ಬ ಒಡೆಯನಿದ್ದಾನೆಯೇ ಇಲ್ಲವೇ ಎಂಬ ಮತ್ತೊಂದು ಪ್ರಶ್ನೆಗೆ ದಾರಿ ಮಾಡಿಕೊಡುತ್ತದೆ. ಹೀಗಾಗಿ ಯಾವ ನಂಬಿಕೆ ಸ್ವಾತಂತ್ರ್ಯದ ಕಲ್ಪನೆಯನ್ನು ಸಾಧ್ಯಗೊಳಿಸುತ್ತದೋ ಅದೇ ನಂಬಿಕೆ ಸ್ವಾತಂತ್ರ್ಯದ ಅರ್ಥವನ್ನು ಕೊಂದೊಯ್ದು ಬಿಡುತ್ತದೆ. ಏಕೆಂದರೆ, ದೇವರ ಎದುರಿನಲ್ಲಿ ಕೆಡುಕು

(Evil) ಸ್ವಾತಂತ್ರ್ಯಕ್ಕಿಂತ ದೊಡ್ಡ ಸಮಸ್ಯೆಯಾಗಿ ಬಿಡುತ್ತದೆ. ಎರಡೇ ಸಾಧ್ಯತೆಗಳು ; ನಾವು ಸ್ವತಂತ್ರರಲ್ಲ ; ದೇವರೇ ಸರ್ವಶಕ್ತ ಮತ್ತು ಎಲ್ಲ ಕೆಡುಕುಗಳಿಗೂ ಜವಾಬುದಾರ. ಅಥವಾ, ನಾವು ಸ್ವತಂತ್ರರು ಮತ್ತು ಎಲ್ಲ ಕೆಡಕುಗಳಿಗೂ ಜವಾಬುದಾರರು ; ಆದರೆ ದೇವರು ಸರ್ವಶಕ್ತನಲ್ಲ. ಇಂಥ ವೈಪರೀತ್ಯವನ್ನು ವೈಯಕ್ತಿಕ ಅನುಭವದ ಮಿತಿಯಲ್ಲಿ ವಿಶ್ಲೇಷಿಸುವುದು ಸಾಧ್ಯವಿಲ್ಲದ್ದರಿಂದ ಇದರಲ್ಲಿ ಮುಳುಗಿ ಹೋಗಲು ಕಾಮು ಇಚ್ಛಿಸುವುದಿಲ್ಲ. ಸೆರೆಯಾಳು ಮತ್ತು ಜೈಲಿನಿಂದ ಹೊರಗಿರುವವನ ಸ್ವಾತಂತ್ರ್ಯದ ಬಗ್ಗೆ ಮಾತ್ರ ತಾನು ಮಾತನಾಡಬಹುದೆಂದು ಅವನು ತಿಳಿಯುತ್ತಾನೆ. ಚಿಂತನೆ ಮತ್ತು ಕ್ರಿಯೆಗಳ ಸ್ವಾತಂತ್ರ್ಯ ಮಾತ್ರ ನನಗೆ ಗೊತ್ತು ; ಆದ್ದರಿಂದ ನನಗಿಂತ ಎತ್ತರದ ಸ್ಥಾನದಲ್ಲಿರುವ ಒಂದು ಶಕ್ತಿ ನನಗೆ ಸ್ವಾತಂತ್ರ್ಯ ನೀಡುವುದನ್ನು ಅರ್ಥಮಾಡಿಕೊಳ್ಳಲಾರೆ ಎನ್ನುತ್ತಾನೆ. ಹೀಗಾಗಿ ಅಸಂಗತೆಯು ನನ್ನ ಶಾಶ್ವತ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ. ಆದರೆ, ಅದೇ ಕಾಲಕ್ಕೆ ನಮ್ಮ ಕ್ರಿಯಾ ಸ್ವಾತಂತ್ರ್ಯವನ್ನೂ ದ್ವಿಗುಣಗೊಳಿಸುತ್ತದೆ. ವೈಯಕ್ತಿಕ ಸಾಧ್ಯತೆಗಳನ್ನು ವಿಪುಲಗೊಳಿಸುತ್ತದೆ.

ಅಸಂಗತ ಸ್ಥಿತಿಯನ್ನು ಇನ್ನೂ ಮುಟ್ಟದಿದ್ದಾಗ ಮನುಷ್ಯ ಜೀವನದಲ್ಲಿ ಕೆಲವು ಗುರಿಗಳನ್ನು ಇಟ್ಟುಕೊಂಡಿರುತ್ತಾನೆ. ಭವಿಷ್ಯದ ಬಗ್ಗೆ ಅಪಾರ ಕಾಳಜಿ ವಹಿಸಿರುತ್ತಾನೆ. ಅವಕಾಶಗಳನ್ನು ತೂಗಿ ನೋಡಿರುತ್ತಾನೆ. ಜೀವನದಲ್ಲಿ ಏನನ್ನಾದರೂ ನಿರ್ಧರಿಸಬಹುದೆಂದು ತಿಳಿದಿರುತ್ತಾನೆ. ತನ್ನ ನಿವೃತ್ತಿ ಅಥವಾ ತನ್ನ ಮಕ್ಕಳ ಕೆಲಸ, ಇತ್ಯಾದಿಗಳನ್ನು ಎಣಿಸುತ್ತಿರುತ್ತಾನೆ. ಅಸಂಗತ ಸ್ಥಿತಿಯನ್ನು ಮುಟ್ಟಿದೊಡನೆ ಎಲ್ಲವೂ ಅಸ್ತವ್ಯಸ್ತಗೊಳ್ಳುತ್ತದೆ. 'ನಾನು' ಎಂಬ ಭಾವನೆ, ಎಲ್ಲಕ್ಕೂ ಅರ್ಥವಿದೆ ಎಂದು ನಾನು ಮಾಡುವ ಕ್ರಿಯೆಗಳು, ಅಸಂಗತೆಯ, ಸಾವಿನ ತಿಳುವಳಿಕೆಯಲ್ಲಿ ಸುಳ್ಳಾಗುತ್ತವೆ. ಭವಿಷ್ಯದ ಬಗ್ಗೆ ಕಾಳಜಿ ; ಗುರಿಗಳನ್ನು ಇಟ್ಟುಕೊಳ್ಳುವುದು ; ಇದಕ್ಕಿಂತ ಅದು ಸರಿ, ಹೆಚ್ಚು, ಒಳ್ಳೆಯದು, ಕೆಟ್ಟದ್ದು ಎಂಬ ಮೌಲ್ಯಮಾಪನ—ಇವೆಲ್ಲ ನಾವು ಸ್ವತಂತ್ರರು ಎಂದು ಘೋಷಿಸಿಕೊಳ್ಳದಿದ್ದಾಗಲೂ, ನಮ್ಮ ಸ್ವಾತಂತ್ರ್ಯದ ಬಗ್ಗೆ ನಮಗಿರುವ ನಂಬಿಕೆಯನ್ನೇ ಸಾಬೀತು ಪಡಿಸುತ್ತದೆ.

ಆದರೆ, ಇಂಥ ಸ್ವಾತಂತ್ರ್ಯವಿರಲು ಸಾಧ್ಯವಿಲ್ಲ ಎಂದು ಕಾಮು ನಂಬುತ್ತಾನೆ : ಸಾವೊಂದೇ ನಿಜ : ಮಿಕ್ಕೆಲ್ಲವೂ ನಿಜದಂತೆ ಕಾಣುವ ಭ್ರಮೆಗಳು. ನನಗೆ ಯಾವ ಸ್ವಾತಂತ್ರ್ಯವೂ ಇಲ್ಲ. ನನ್ನನ್ನು ನಾನು ವೃದ್ಧಿಸಿಕೊಳ್ಳುವ ಸ್ವಾತಂತ್ರ್ಯವಾಗಲೀ, ಬಯಸಿದ್ದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಾಗಲೀ ಇಲ್ಲ. ನಾನೊಬ್ಬ ಗುಲಾಮ : ಶಾಶ್ವತ ಕ್ರಾಂತಿಯ ಭರವಸೆಯಾಗಲೀ, ತಿರಸ್ಕಾರವಾಗಲೀ ಸಾಧ್ಯವಿಲ್ಲದಂಥ ಗುಲಾಮಗಿರಿ. ಕ್ರಾಂತಿ ಇಲ್ಲದೆ, ಉಲ್ಲಂಘನೆ ಇಲ್ಲದೆ ಗುಲಾಮನಾಗಿರಲು ಹೇಗೆ

ಸಾಧ್ಯ ಎಂದು ಕಾಮು ಕೇಳುತ್ತಾನೆ. ಶಾಶ್ವತ ಸ್ಥಿತಿಯ ಭರವಸೆ ಇಲ್ಲದೆ ಪೂರ್ಣ ಅರ್ಥದಲ್ಲಿ ಸ್ವಾತಂತ್ರ್ಯವಿರುವುದು ಸಾಧ್ಯವೆ ಎಂದು ಅವನು ಪ್ರಶ್ನಿಸುತ್ತಾನೆ.

ಇಂಥ ಸಂದರ್ಭದಲ್ಲಿ ಮನುಷ್ಯನಿಗೆ ತಾನು ಹಿಂದೆ ಬರೇ ಭ್ರಾಮಕ ಸ್ವಾತಂತ್ರ್ಯ ದಲ್ಲಿ ಬದುಕುತ್ತಿದ್ದೆನೆಂಬ ಅರಿವು ಮೂಡುತ್ತದೆ. ತನ್ನ ಸ್ವಾತಂತ್ರ್ಯಕ್ಕೇ ತಾನು ಗುಲಾಮನಾಗಿದ್ದೆ ಎಂದು ಅರಿವಾಗುತ್ತದೆ. ಇಂಥ ಸ್ವಾತಂತ್ರ್ಯವನ್ನು ನಂಬಿ ತಾನು ತನ್ನ ಬದುಕನ್ನು ಕೆಲ ಗುರಿಗಳಲ್ಲಿ, ಕೆಲ ಸಾಧನೆಗಳಿಗಾಗಿ ಸಿದ್ಧಪಡಿಸಿಕೊಳ್ಳುತ್ತಿದ್ದೆ ಎಂದು ಅವನು ತಿಳಿಯಲಾರಂಬಿಸುತ್ತಾನೆ. ಅಂದರೆ, ತಾನು ನಿಜವಾಗಿ ಸ್ವತಂತ್ರ ನಾಗಿರಲಿಲ್ಲ ಎಂಬುದನ್ನು ಕಂಡುಕೊಳ್ಳುತ್ತಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಮನುಷ್ಯ ತನ್ನ ಗುರಿಗಳಿಂದ, ಮಹತ್ವಾಕಾಂಕ್ಷೆಗಳಿಂದ ಬದುಕಿಗೆ ಒಂದು ಅರ್ಥ ನೀಡುವ ರಭಸದಲ್ಲಿ ತನ್ನ ಸುತ್ತ ಕೋಟೆಯೊಂದನ್ನೇ ಕಟ್ಟಿಕೊಂಡುಬಿಟ್ಟಿರುತ್ತಾನೆ. ಆದ್ದರಿಂದಲೇ ಸ್ವಾತಂತ್ರ್ಯದ ಪ್ರಶ್ನೆ ಜಟಿಲ.

ಅಸಂಗತೆಯು ಭವಿಷ್ಯ ಇಲ್ಲ ಎನ್ನುತ್ತದೆ. ಆದರೆ, ಇದು ನನ್ನ ಆಂತರಿಕ ಸ್ವಾತಂತ್ರ್ಯಕ್ಕೆ ಕಾರಣವಾಗುತ್ತದೆ ಎಂದು ಕಾಮು ಹೇಳುತ್ತಾನೆ. ಎಲ್ಲವೂ ಸಾವಿನಲ್ಲಿ ಕೊನೆಗೊಳ್ಳುವುದರಿಂದ, ಯಾರೂ ಶಾಶ್ವತರಲ್ಲದ್ದರಿಂದ ಮೇಲಿನ ಶಕ್ತಿಯೊಂದು ನಮ್ಮ ಸ್ವಾತಂತ್ರ್ಯವನ್ನು ನಿರ್ಧರಿಸುತ್ತದೆ ಎಂಬುದನ್ನು ಒಪ್ಪಿಕೊಳ್ಳದಿದ್ದಾಗ ಮನುಷ್ಯ ಸ್ವತಂತ್ರನಾಗುತ್ತಾನೆ. ಅಸಂಗತ ಸ್ಥಿತಿಯನ್ನು ಮುಟ್ಟಿದ ಮನುಷ್ಯನಿಗೆ ಮಾತ್ರ ಇಂಥ ವಿವೇಚನೆ ಸಾಧ್ಯ. ಏಕೆಂದರೆ, ತನ್ನ ಕ್ರಿಯೆಗಳಿಗೆ ಬಾಹ್ಯ ಶಕ್ತಿ ಯೊಂದು ಕಾರಣವಾಗಿದೆ. ತನ್ನ ಕ್ರಿಯೆಗಳಿಗೆ ವ್ಯಕ್ತಿ ತಾನೇ ಜವಾಬುದಾರನಾಗ ಬೇಕಾಗುತ್ತದೆ. ದೈನಂದಿನ ನಿದ್ರೆಯಿಂದ ಎಚ್ಚೆತ್ತು ಪ್ರಜ್ಞಾವಂತನಾಗುತ್ತಿರುವ ಈ ಸ್ಥಿತಿ ಇಂಥ ಸ್ವಾತಂತ್ರ್ಯದ ಪ್ರಥಮ ಹೆಜ್ಜೆಯಾಗುತ್ತದೆ. ಈ ನವಸ್ವಾತಂತ್ರ್ಯವು ಕ್ರಿಯಾಸ್ವಾತಂತ್ರ್ಯದಂತೆ ನಿರ್ದಿಷ್ಟ ಕಾಲಮಿತಿಯನ್ನು ಒಳಗೊಂಡಿರುತ್ತದೆ, ಆದರೆ ಇಂಥ ಸ್ವಾತಂತ್ರ್ಯವನ್ನು ಬದುಕಬಹುದು, ಅನುಭವಿಸಬಹುದು. ಇಂಥ ಪರಿಸ್ಥಿತಿ ಯಲ್ಲಿ ತಪಿಸುವ, ಪಾರದರ್ಶಕ. ಪರಿಮಿತ ವಿಶ್ವವನ್ನು ಅಸಂಗತ ಮನುಷ್ಯ ಕಾಣುತ್ತಾನೆ. ಈ ವಿಶ್ವದಲ್ಲಿ ಏನೂ ಸಾಧ್ಯವಿಲ್ಲ; ಆದರೆ ಎಲ್ಲವನ್ನೂ ಕೊಡಲಾಗಿದೆ. ಅದರಾಚೆ ಏನೂ ಇಲ್ಲ : ಎಲ್ಲ ಶೂನ್ಯ. ಮನುಷ್ಯ ಇಂಥ ವಿಶ್ವವನ್ನು ಒಪ್ಪಿಕೊಂಡು ಅದರಿಂದಲೇ ತನ್ನ ಶಕ್ತಿಯನ್ನು ಪಡೆಯಬೇಕಾಗುತ್ತದೆ. ಪ್ರಶ್ನೆ: ಇಂಥ ವಿಶ್ವದಲ್ಲಿ ಬದುಕಿನ ಅರ್ಥ ವೇನು ? ಈ ಕ್ಷಣದಲ್ಲಿ ಏನೂ ಇಲ್ಲ. ಭವಿಷ್ಯದ ಬಗ್ಗೆ ಅಲಕ್ಷ್ಯ; ಕೊಟ್ಟಿರುವುದನ್ನೆಲ್ಲ ಉಪಯೋಗಿಸಿಕೊಳ್ಳುವುದು. ಬದುಕಿನ ಅರ್ಥದಲ್ಲಿ ನಂಬಿಕೆ ಇಟ್ಟರೆ ಮೌಲ್ಯಗಳ, ಆಯ್ಕೆಯ, ತುಲನೆಗಳ ಅಳತೆಪಟ್ಟಿ ಬೇಕೇಬೇಕು. ಅಸಂಗತೆಯನ್ನು ಒಪ್ಪಿಕೊಂಡಾಗ ಈ ಸಮಸ್ಯೆ ಉದ್ಭವಿಸದು. ಮೊರೆಯಿಲ್ಲದ ಬದುಕು ಸಾಧ್ಯವೇ ಎಂಬುದನ್ನು ಅರಿ ಯಲು ನಾನು ತುಂಬ ಉತ್ಸುಕನಾಗಿರುವೆನೆಂದು ಕಾಮು ತಿಳಿಸುತ್ತಾನೆ: ನನ್ನ ಆಳ

ದಿಂದ ಆಚೆಗೆ ಬರಲು ನನಗಿಷ್ಟವಿಲ್ಲ. ಈ ರೀತಿಯ ಬದುಕನ್ನು ನನಗೆ ಕೊಡಲಾಗಿದೆ. ನನಗೆ ಇದಕ್ಕೆ ಹೊಂದಿಕೊಳ್ಳಲು ಸಾಧ್ಯವೆ?

ಇಂಥ ನಿರ್ದಿಷ್ಟ ಕಳಕಳಿಯನ್ನು ಎದುರಿಸಿದಾಗ ಅಸಂಗತೆಯ ನಂಬಿಕೆ ಅನುಭವಗಳ ಗುಣಾಂಶದ ಸ್ಥಾನದಲ್ಲಿ ಅನುಭವಗಳ ಮೊತ್ತವನ್ನು ಇಡುವಂತೆ ಮಾಡುತ್ತದೆ. ಬದುಕು ಅಸಂಗತವಲ್ಲದೆ ಮತ್ತೇನೂ ಅಲ್ಲ ಎಂಬುದು ನಮಗೆ ಮನವರಿಕೆಯಾದರೆ, ನಮ್ಮ ಪ್ರಜ್ಞಾಪೂರ್ಣ ಹೋರಾಟ ಮತ್ತು ಹೋರಾಟ ನಡೆಯುವ ಅಂಧಕಾರಗಳ ಪರಸ್ಪರ ವಿರೋಧದಲ್ಲಿ ಇಡೀ ಸಮತೋಲನ ನಿಂತಿದೆ ಎಂದು ನಮಗನಿಸಿದರೆ, ತನ್ನ ಪರಿಮಿತ ವಿಧಿಯೊಂದಿಗಿನ ಸಂಬಂಧದಲ್ಲಿಯಲ್ಲದೆ ಸ್ವಾತಂತ್ರ್ಯಕ್ಕೆ ಬೇರೆ ಅರ್ಥವಿಲ್ಲ ಎಂಬುದನ್ನು ನಾವು ಒಪ್ಪಿಕೊಂಡರೆ, ಅತ್ಯುತ್ತಮವಾಗಿ ಬದುಕುವುದಕ್ಕಿಂತ ಹೆಚ್ಚು ಹೆಚ್ಚಾಗಿ ಬದುಕುವುದೇ ಮುಖ್ಯವಾಗುತ್ತದೆ. ಇದು ನಯವಾದದ್ದೇ, ಹೋರಾಟ ಸ್ವರೂಪದ್ದೇ, ಕೆಟ್ಟದ್ದೇ, ಖಂಡಿಸಬೇಕಾದದ್ದೇ ಹೇಳಲು ಬರುವುದಿಲ್ಲ. ಏಕೆಂದರೆ ವಸ್ತುನಿಷ್ಠ ತೀರ್ಪಿನ ಮುಂದೆ ಮೌಲಿಕ ತೀರ್ಪುಗಳನ್ನು ಇಲ್ಲಿ ಗೌಣವಾಗಿ ಕಾಣಲಾಗುತ್ತದೆ. ಅಂದರೆ, ಯಾವುದೇ ಕಾಲ್ಪನಿಕವಾದಗಳನ್ನಲ್ಲದೆ, ನನಗೇನು ಕಾಣುತ್ತದೆ ಎಂಬುದರ ಮೇಲೆಯೇ ಎಲ್ಲವೂ ನಿರ್ಧಾರವಾಗಬೇಕು.

ಸ್ಥೂಲವಾಗಿ ಹೇಳಬೇಕೆಂದರೆ, 'ಹೆಚ್ಚು ಹೆಚ್ಚಾಗಿ' ಬದುಕುವುದು ಎನ್ನುವುದಕ್ಕೆ ಏನೂ ಅರ್ಥವಿಲ್ಲ. ಅದು ಅನುಭವ ವಿಸ್ತೀರ್ಣವನ್ನಷ್ಟೇ ಹೇಳುತ್ತದೆ. ಏಕೆಂದರೆ, ಅಪಾರವಾದ ಮತ್ತು ಭಿನ್ನ ಭಿನ್ನ ರೀತಿಯ ಅನುಭವಗಳಿಂದಲೇ ಎಲ್ಲ ಮೌಲ್ಯಗಳನ್ನೂ, ನೀತಿ ನಿಯಮಗಳನ್ನೂ ರೂಪಿಸತಕ್ಕದ್ದು. ಮತ್ತು ನವಜೀವನದ ಸ್ಥಿತಿಗತಿಗಳು ಎಲ್ಲರಿಗೂ ಒಂದೇ ರೀತಿಯ ಒಂದೇ ಮೊತ್ತದ ಅನುಭವಗಳನ್ನು ನೀಡಿವೆ ಎಂದು ಹೇಳಬಹುದು. ಒಂದು ಮಾತನ್ನು ನೆನಪಿನಲ್ಲಿಡಬೇಕು. ಅನುಭವಗಳ ಮೊತ್ತವು ನಮ್ಮ ಜೀವನದ ಸಂದರ್ಭಗಳನ್ನು ಅವಲಂಬಿಸುವುದಿಲ್ಲ; ನಮ್ಮನ್ನೇ ಅವಲಂಬಿಸಿರುತ್ತದೆ. ಅದರ ಬಗ್ಗೆ ನಾವು ಪ್ರಜ್ಞಾಶೀಲರಾಗಿರಬೇಕಷ್ಟೆ. ಆದ್ದರಿಂದಲೇ ಪ್ರಜ್ಞಾಪೂರ್ವಕವಾಗಿ ಬದುಕುವ ನಲವತ್ತು ವರುಷಗಳು ಸುಮ್ಮನೆ ಹೇಗೋ ಬದುಕುವ ಅರವತ್ತು ವರುಷಗಳಿಗಿಂತ ಹೆಚ್ಚು. ಅಂದರೆ, ಇಬ್ಬರು ವ್ಯಕ್ತಿಗಳು ಸಮಾನ ಕಾಲ ಬದುಕಿದ್ದರೂ, ಅವರಿಗೆ ಸಮಾನ ಅನುಭವಗಳು ದೊರಕಿದ್ದರೂ ಒಬ್ಬ ಹೆಚ್ಚು ಹೆಚ್ಚಾಗಿ ಬದುಕಿರಬಹುದು, ಮತ್ತೊಬ್ಬ ಇಲ್ಲದಿರಬಹುದು. ಏಕೆಂದರೆ ಎಲ್ಲವೂ ವ್ಯಕ್ತಿಯ ಜೀವನ ಪ್ರಜ್ಞೆ, ಹೋರಾಟ, ಸ್ವಾತಂತ್ರ್ಯಗಳನ್ನು ಅವಲಂಬಿಸಿದೆ. ಅಕಾಲಿಕ ಮರಣ ಅಥವಾ ಹುಚ್ಚು ವ್ಯಕ್ತಿಯನ್ನು ಬದುಕಿನಿಂದ ವಿಮುಖಗೊಳಿಸುವುದರಿಂದ ಅಸಂಗತ ಬದುಕು ಮಾನವ ಇಚ್ಛೆಯನ್ನು ಅವಲಂಬಿಸಿರುವುದಿಲ್ಲ, ಸಾವನ್ನು ಅವಲಂಬಿಸಿರುತ್ತದೆ. ಮನುಷ್ಯನಿಗೆ ಆಯ್ಕೆಯ

ಸ್ವಾತಂತ್ರ್ಯವಿಲ್ಲ. ಇದು ಅದೃಷ್ಟದ ಪ್ರಶ್ನೆ ಎಂದರೂ ತಪ್ಪಲ್ಲ. ಇಪ್ಪತ್ತು ವರ್ಷಗಳ ಬದುಕು ಹಾಗೂ ಅನುಭವಗಳಿಗೆ ಬದಲಿ ಏನೂ ಇಲ್ಲ.

ಇಂಥ ಪರಿಸ್ಥಿತಿಯಲ್ಲಿ ತಮ್ಮನ್ನು ತಾವು ಸಮಾಧಾನ ಪಡಿಸಿಕೊಳ್ಳಲೋ ಏನೋ, ಚಿಕ್ಕವಯಸ್ಸಿನಲ್ಲಿ ಸತ್ತವರು ದೇವರ ಸಾಮ್ರಾಜ್ಯ ಸೇರುತ್ತಾರೆ ಎಂದರು ಗ್ರೀಕ್ ಜನಗಳು. ದೇವರ ಸಾಮ್ರಾಜ್ಯ ಸೇರುವುದೆಂದರೆ ಈ ನೆಲದ ಶುದ್ಧ ಸುಖ ಸಂತೋಷಗಳನ್ನು ಯಾವತ್ತೂ ಕಳೆದುಕೊಳ್ಳುವುದೆಂದೇ ಅರ್ಥ. ಅಲ್ಲದೆ ಇಲ್ಲಿನ ಸುಖಗಳು ಇಂದ್ರಿಯಗ್ರಾಹ್ಯ, ಮೇಲಿನ ಕಲ್ಪನಾಲೋಕದ ಸಂತೋಷಗಳು ನಮ್ಮ ಅಮೂರ್ತ ವಿಚಾರಗಳಲ್ಲಿ ಮಾತ್ರ ಮೂರ್ತವಾಗಬಹುದು. ಆದ್ದರಿಂದಲೇ ಬದುಕುವುದು, ಪ್ರಜ್ಞಾಪೂರ್ಣವಾಗಿ ಬದುಕುವುದು ಬಹುಮುಖ್ಯ.

ಪ್ರಜ್ಞೆಯ ಕ್ಷಣಗಳೇ ಬದುಕಿನ ಮಹತ್ತ್ವಪೂರ್ಣ ಕ್ಷಣಗಳಾಗುವುದರಿಂದ ಸಿಸಿಫಸ್‌ನ ಕಥೆ ನಮಗೆ ಮುಖ್ಯವಾಗುತ್ತದೆ. ದೇವತೆಗಳು ಸಿಸಿಫಸ್‌ಗೆ ಒಂದು ಶಿಕ್ಷೆ ವಿಧಿಸಿದ್ದರು; ಬಂಡೆಯೊಂದನ್ನು ಆತ ಪರ್ವತವೊಂದರ ಮೇಲೆ ಒಯ್ಯಬೇಕಿತ್ತು. ಪ್ರತಿಬಾರಿ ಆತ ಬಂಡೆಯನ್ನು ಪರ್ವತದ ಮೇಲಕ್ಕೆ ಸಾಗಿಸಿದಾಗಲೂ ಅದು ತನ್ನಷ್ಟಕ್ಕೆ ಉರುಳಿಕೊಂಡು ಭೂಮಿಗೇ ವಾಪಸು ಬಂದು ಬಿಡುತ್ತಿತ್ತು. ಸಿಸಿಫಸ್ ಅದನ್ನು ಮತ್ತೆ ಮತ್ತೆ ಹೊರಬೇಕಾಗಿತ್ತು. ಯಾವ ಭರವಸೆಯೂ ಇಲ್ಲದ ಇಂಥ ನಿರರ್ಥಕ ಕ್ರಿಯೆಗಿಂತ ಬೇರೆ ಶಿಕ್ಷೆ ಇಲ್ಲ ಎಂದು ದೇವತೆಗಳು ಭಾವಿಸಿದ್ದಿರಬೇಕು.

ಆದರೆ ಹೋಮರನ ಪ್ರಕಾರ ಸಿಸಿಫಸ್ ತುಂಬ ಬುದ್ಧಿವಂತ. ಅಸಂಗತನಾಯಕನೆಂದರೂ ಸರಿಯೇ. ಬಂಡೆಯನ್ನೇನೋ ಯಾವತ್ತೂ ಮತ್ತೆ ಮತ್ತೆ ಹೊತ್ತುಕೊಂಡು ಪರ್ವತದ ಮೇಲೆ ಸಾಗಿಸಬೇಕಿತ್ತು. ಆದರೆ ಮರುಪ್ರಯಾಣದಲ್ಲಿ ಬಂಡೆ ತಾನೇ ಉರುಳಿಕೊಂಡು ಬಂದು ಬಿಡುತ್ತಿದ್ದುದರಿಂದ ಸಿಸಿಫಸ್ ಆಗ ಬಂಡೆಯನ್ನು ಹೊರಬೇಕಾಗಿರಲಿಲ್ಲ; ಆಗ ಅವನು ಸಂತೋಷಿ. ನೋಡಬೇಕು: ಮತ್ತೆ ಗೋಳಿನ, ಸಂಕಟದ ಕಡೆಗೆ ಭಾರವಾದ ತಾಳಬದ್ಧ ಹೆಜ್ಜೆಗಳು: ಅಂತ್ಯವಿರದ, ಭರವಸೆಯಿರದ ಕಡೆಗೆ ಆ ಕ್ಷಣಗಳು ಉಸಿರಾಡುವ ಕ್ಷಣಗಳು. ಸಂಕಟಾನುಭವದ ಪ್ರಜ್ಞೆಯ ಕ್ಷಣಗಳು. ಇಂಥ ಪ್ರಜ್ಞಾವಸ್ಥೆಯಲ್ಲಿ ತನ್ನ ಸ್ಥಿತಿಯ ಅರಿವಿನ ಕ್ಷಣಗಳಲ್ಲಿ ಪರ್ವತದಿಂದ ಭೂಮಿಯ ಕಡೆಗೆ ಅವನಿಡುವ ಪ್ರತಿಹೆಜ್ಜೆಯಲ್ಲೂ ಅವನು ತನ್ನ ವಿಧಿಗಿಂತ ಮೇಲಿನವನು; ತನ್ನ ಬಂಡೆಗಿಂತ ಹೆಚ್ಚು ಬಲಶಾಲಿ. ಸಿಸಿಫಸ್ ತನ್ನ ವಿಧಿಯನ್ನು ಗೆದ್ದಿದ್ದಾನೆ. ಆದ್ದರಿಂದಲೇ ಅವನು ಸಂತೋಷಿ.

ಈ ಕಥೆ ದುರಂತವಾಗಲು ಕಾರಣ, ನಾಯಕ ಪ್ರಜ್ಞಾವಂತ. ಪ್ರತಿನಿತ್ಯ ಹೀಗೆಯೇ ನಿರರ್ಥಕ ದುಡಿಮೆಯಲ್ಲಿ ಪಾಲ್ಗೊಳ್ಳುವ ಮನುಷ್ಯ ಸಿಸಿಫಸ್‌ಗಿಂತ ಕಡಿಮೆ ಅಸಂಗತವಲ್ಲ ಎಂದು ಕಾಮು ಸೂಚಿಸುತ್ತಾನೆ. ಆದರೆ ಇಂಥ ಮನುಷ್ಯನ

ದುರಂತ ಕ್ಷಣಗಳು ಅವನ ಪ್ರಜ್ಞೆಯ ಕ್ಷಣಗಳಲ್ಲಿ ಮಾತ್ರ ಸಾಧ್ಯ ಎನ್ನುವುದನ್ನು ಮರೆಯಬಾರದು. ದೈವ ಶೋಷಿತ, ಅಧಿಕಾರ ರಹಿತ, ಹೋರಾಟಗಾರ ಸಿಸಿಫಸ್‌ಗೆ ತನ್ನ ದರಿದ್ರ ಸ್ಥಿತಿಗೊಳಿಸಿ ಪರ್ವತದಿಂದ ಭೂಮಿಯ ಕಡೆಗೆ ಬರುವಾಗ ಅವನ ಗಮನಕ್ಕೆ ಬರುವುದು ಇದೇ. ಹೀಗಾಗಿ ಅವನಿಗೆ ಶಿಕ್ಷೆ ವಿಧಿಸಿದ ಶಕ್ತಿಯೇ ಅವನ ವಿಜಯ ಪತಾಕೆಯನ್ನೂ ಹಾರಿಸುತ್ತದೆ. ಸಿಸಿಫಸ್ ತನ್ನ ಹೋರಾಟದಲ್ಲಿ ನಿಜವಾಗಿದ್ದಾನೆ. ಆದ್ದರಿಂದ ಅವನು ಸಂತೋಷಿಯೆಂದೇ ತಿಳಿಯಬೇಕೆಂದು ಕಾಮು ತಿಳಿಸುತ್ತಾನೆ.

ಬದುಕು ಅರ್ಥಹೀನವೆಂದಾಗ ಅದು ಜೀವನ ಯೋಗ್ಯವಲ್ಲ ಎಂದು ವ್ಯಾಖ್ಯಾನ ಮಾಡಲಾಗದು ಎಂದು ಕಾಮು ಎಚ್ಚರಿಸುತ್ತಾನೆ. ಬದುಕಿಗೆ ಯಾವುದೇ ಅರ್ಥವಿಲ್ಲದಿರಬಹುದು. ಆದರೂ ನಾವು ತೀವ್ರವಾಗಿ ಬದುಕಬೇಕು. ಏಕೆಂದರೆ ತೀವ್ರವಾಗಿ ಬದುಕುವುದರಿಂದ ಮಾತ್ರ ಅಸಂಗತಿಯ ವಿರುದ್ಧ ಹೋರಾಡಲು ಸಾಧ್ಯ.

ಆಧಾರ: The Myth of Sisyphus

ಜೋಕುಮಾರನ ಕಥೆಯ ಇನ್ನೊಂದು ಪ್ರಭೇದ

ಎಂ. ಚಿದಾನಂದಮೂರ್ತಿ

'ಜೋಕುಮಾರ' ಎಂಬ ಹೆಸರಿನ ಲೇಖನವೊಂದರಲ್ಲಿ ಹಿಂದೆ ನಾನು ಆ ದೇವತೆಯ ಪ್ರಾಚೀನ ಉಲ್ಲೇಖಗಳು, ಕಥಾಪ್ರಭೇದಗಳು, ಜಾನಪದ ಸಾಹಿತ್ಯ ಇವೇ ಮೊದಲಾದುವನ್ನು ಸವಿಸ್ತಾರವಾಗಿ ಪ್ರಸ್ತಾಪಿಸಿದ್ದೇನೆ.[1] ಕರ್ನಾಟಕದ ಗ್ರಾಮೀಣ ದೈವಗಳಲ್ಲಿ ಬಹುಶಃ ಅತ್ಯಂತ ಕುತೂಹಲಕಾರಿಯಾದ ಇವನ ಬಗ್ಗೆ ಆಸಕ್ತಿ ವಹಿಸದಿರಲು ಸಾಧ್ಯವಿಲ್ಲ. ಈಚೆಗೆ (29–1–1979) ಧಾರವಾಡ ನಗರದಲ್ಲಿ ಈ ದೇವತೆಯ ಬಗ್ಗೆ ದೊರಕಿದ ಮಾಹಿತಿ ಈ ಹಿಂದಿನ ಮಾಹಿತಿಗಿಂತ ಸ್ವಲ್ಪ ಭಿನ್ನವಾಗಿದೆ ಮತ್ತು ಹಿಂದೆ ನಾನು ದಾಖಲು ಮಾಡದ ಕೆಲವು ವಿವರಗಳೂ ಇವೆಯಾದ್ದರಿಂದ ಅವೆಲ್ಲವನ್ನೂ ಸಂಗ್ರಹಿಸಿ ಇಲ್ಲಿ ಕೊಡುತ್ತಿದ್ದೇನೆ. (ಸಂಗ್ರಹದ ಸಮಯದಲ್ಲಿ ನನ್ನ ಜೊತೆಗಿದ್ದು ಸಹಕರಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಎಂ.ಎ. ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಇಲ್ಲಿ ಸ್ಮರಿಸುತ್ತೇನೆ).

ವಕ್ತಾರ (informant) ಶ್ರೀ ನಾಗಪ್ಪ ಸುಣಗಾರ್, ಹೆಸರೇ ಹೇಳುವಂತೆ ಸುಣಗಾರ್ ಜಾತಿಯವರು. ಸುಣ್ಣ ಸುಡುವ ವೃತ್ತಿಯವರೇ ಸುಣಗಾರರು. ಇವರನ್ನು ಕಬ್ಬ್ಯಾರರು (=ಕಬ್ಬಿಲರು), ಅಂಬಿಗಾರ್ರು, ಗಂಗಾಮತಸ್ಥರು ಎಂದೂ ಕರೆಯುತ್ತಾರೆ. 'ಗಂಗಾಮತ' ಎಂಬ ಹೆಸರು ಇವರಿಗೆ ಇತರ ಹೆಸರುಗಳಿಗಿಂತ ಹೆಚ್ಚು ಪ್ರಿಯ. ಕಡಹುಗಳಲ್ಲಿ ಹೊಳೆ ದಾಟಿಸುವ ವೃತ್ತಿಯನ್ನೂ ಇವರು ಕೆಲವೆಡೆ ಕೈಗೊಂಡಿರುವುದುಂಟು. ಪ್ರತಿ ವರ್ಷ ಜೂನ್ ಆರನೇ ತಾರೀಕು ಇವರು ಗಂಗಾ ಪೂಜೆಯನ್ನು ಮಾಡುತ್ತಾರೆ (ಮಳೆಗಾಲದ ಮೊದಲ ತಿಂಗಳು ಅದು ಎಂಬುದನ್ನು ನೆನೆಯಬಹುದು. ಮಳೆಗಾಲ ಲೋಕಕ್ಕೆ ಗಂಗೆಯ ಆಗಮನವನ್ನು ಹೇಳುತ್ತದೆ). ಆ ದಿನವನ್ನು 'ಗಂಗಾ ಜಯಂತಿ' ಎಂದೂ ವಿದ್ಯಾವಂತರು ಕರೆಯುತ್ತಾರೆ. ಆ ದಿನ 'ಕೊಡ ಪೂಜೆ' ನಡೆಯುತ್ತದೆ. ಒಂದು ಪೂರ್ಣಕುಂಭದ ಮೇಲೆ ತೆಂಗಿನಕಾಯಿ ಇಟ್ಟು ಅದನ್ನು ವಸ್ತ್ರ ಒಡವೆಗಳಿಂದ ಅಲಂಕರಿಸಿ ಐದು ತರಹ 'ಪಳಾರ' (=ಫಲಾಹಾರ) ವನ್ನು ನೈವೇದ್ಯ ಮಾಡುತ್ತಾರೆ. ಮತ್ತು ಅದೇ ದಿನ ಮೇದಾರರ ಮನೆಯಿಂದ ನಾಲ್ಕು ಮೂಲೆಯ ಚಿಕ್ಕ ಮರದ ದೋಣಿ ತಂದು ಅದರ ಒಳಗೆ

---

1. ಸಂಶೋಧನ ತರಂಗ (ಮೈಸೂರು. ಸರಸ ಸಾಹಿತ್ಯ ಪ್ರಕಾಶನ. 1966) ಪು. 105–22 ; ಇದೇ ಲೇಖನ "ಗ್ರಾಮೀಣ" ಎಂಬ ಪುಸ್ತಕದಲ್ಲೂ ಪುನರ್ಮುದ್ರಣಗೊಂಡಿದೆ.

ಗಂಗೆಗೆ ಮಾಡಿದ ಅಡಿಗೆ ಇಡುತ್ತಾರೆ. ಇಬ್ಬರು ಮುತ್ತೈದೆಯರು ಕೊಡ ಮತ್ತು ದೋಣಿ ಹೊತ್ತುಕೊಂಡು ವಾದ್ಯ ಸಮೇತ ಮೆರವಣಿಗೆಯಲ್ಲಿ ಹೊಳೆ ಅಥವಾ ಬಾವಿಗೆ ಹೋಗುತ್ತಾರೆ (ಧಾರವಾಡದ ಗಂಗಾಮತಸ್ಥರು 'ಜಕಣಿ ಬಾವಿ'ಗೆ ಹೋಗುತ್ತಾರೆ)[2]. ಅಲ್ಲಿ ಕೊಡ ಮತ್ತು ದೋಣಿಗಳಿಗೆ ಪೂಜೆಮಾಡಿ, ಮೊರದಲ್ಲಿ ಐದು 'ಪಣತಿ' (=ಹಣತೆ) ಹಚ್ಚಿ ನೀರಿನಲ್ಲಿ ತೇಲಿಬಿಡುತ್ತಾರೆ (ಕೊಡ ಮತ್ತು ದೋಣಿ ಗಂಗೆಯ ಸ್ಥಾವರ ಮತ್ತು ಜಂಗಮ ರೂಪಗಳ ಸಂಕೇತಗಳು. ಒಂದು—ಬಾವಿ, ಕೆರೆ, ಕುಂಟೆಗಳಿಗೆ, ಇನ್ನೊಂದು ಹಳ್ಳ, ನದಿಗಳಿಗೆ ಸಂಕೇತ. ಒಂದು ಕುಡಿಯುವ ನೀರನ್ನೂ, ಇನ್ನೊಂದು ಬೆಳೆ ಬೆಳೆಯುವ ನೀರನ್ನೂ ಹೇಳಬಹುದು). ಕೆಲವರು (ಮಣ್ಣಿನ) ಕೊಡವನ್ನು ನೀರಲ್ಲೇ ಬಿಟ್ಟು ಮನೆಗೆ ಬರುವುದೂ ಉಂಟು. ಕೊಡ, ದೋಣಿಗಳನ್ನು ಶಂಖ, ಚಿಂಪು (=ಸಿಂಪು, ಕಪ್ಪೆ ಚಿಪ್ಪು) ಗಳಿಂದ ಅಲಂಕರಿಸುವ ಪದ್ಧತಿಯೂ ಇವೆ. ಶಂಖ, ಚಿಂಪುಗಳು ನೀರಿಗೆ ಸಂಬಂಧಪಟ್ಟುವೆಂಬುದನ್ನು ಹೇಳಬೇಕಾಗಿಲ್ಲ. ಒಂದೊಂದು ಊರಲ್ಲಿ ಈ ಹಬ್ಬವನ್ನು ಹತ್ತು ದಿನ ಆಚರಿಸುವ ಸಂಪ್ರದಾಯವೂ ಇದೆ. ಮೇಲಿನ ಆಚರಣೆ ಗಂಗೆಯನ್ನು ಗಂಡನ ಮನೆಗೆ ಕಳುಹಿಸುವುದರ ಸಂಕೇತ ಮತ್ತು ಇದು ನಡೆಯುವುದು, ಎಂದರೆ ಕೊಡ, ದೋಣಿಗಳನ್ನು ನೀರಲ್ಲಿ ವಿಸರ್ಜಿಸುವುದು ಜೂನ್ ಏಳನೇ ತಾರೀಕು. ಗಂಗಾಪೂಜೆ ಮಾಡುವವರು ಗೌರೀಪೂಜೆಯನ್ನು ಮಾಡುವುದಿಲ್ಲ. ಗಂಗಾಮತಸ್ಥರಲ್ಲೇ ಗೌರೀಪೂಜೆ ಮಾಡುವ ವಾಡಿಕೆ ಇರುವವರು ಗಂಗಾಪೂಜೆ ಮಾಡುವುದಿಲ್ಲ. ಗಂಗೆ-ಗೌರಿಯರು ಸವತಿಯರು ಮತ್ತು ಇಬ್ಬರಿಗೂ ಬದ್ಧವೈರ ಎಂಬ ಜಾನಪದ ಕಥೆಯ ಫಲ ಇದು ಎಂಬ ಬಗ್ಗೆ ಅನುಮಾನವಿಲ್ಲ. (ತೀರ ವಿರಳವಾಗಿ ಗಂಗಾಪೂಜೆ, ಗೌರೀಪೂಜೆ ಎರಡನ್ನೂ ಮಾಡುವವರಿದ್ದಾರೆ). ನನ್ನ ವಕ್ತಾರರಾದ ಶ್ರೀ ನಾಗಪ್ಪ ಸುಣಗಾರ್[3] ಗಂಗಾಪೂಜೆ ಪದ್ಧತಿಯವರು; ಗೌರೀಪೂಜೆ ಮಾಡುವುದಿಲ್ಲ.

ಕೆಲವು ಊರುಗಳಲ್ಲಿ 'ಗಂಗಾ ಜಯಂತಿ' ಯನ್ನು 'ಮಿರುಗನ ಮಳಿ' ದಿನದಿಂದ =(ಮೃಗಶಿರ) ಹಿಡಿದು ಹತ್ತು ದಿನ ಆಚರಿಸುತ್ತಾರೆ.

ಧಾರವಾಡದ ಗಂಗಾಮತಸ್ಥರ ನಂಬಿಕೆಯ ಪ್ರಕಾರ ಜೋಕುಮಾರ ನಾರಾಯಣ ಮತ್ತು ಲಕ್ಷ್ಮಿಯರ ಮಗ. ಭಾದ್ರಪದ ಅಷ್ಟಮಿಯ ದಿನ ಲಕ್ಷ್ಮೀಪೂಜೆ.

---

2. ಉಳ್ಳಾಗಡ್ಡಿ ಓಣಿ ಹತ್ತಿರವಿರುವ ಹಳೆಯ ಕಾಲದ ಬಾವಿ. 'ಜಕಣ' ಕಟ್ಟಿಸಿದ್ದು ಎಂಬ ಪ್ರತೀತಿ ಇದ್ದರೂ, 'ಜಕಣಿ' ಎಂಬುದು ಯಕ್ಷಿಣಿಯ ತದ್ಭವವಾಗಿರುವಂತೆ ತೋರುತ್ತದೆ ಮತ್ತು ಆ ಬಾವಿ ಜೈನಮತ ಸಂಬಂಧಿಯಾಗಿದ್ದರೂ ಇರಬಹುದು.

3. ಇವರು ಕಲಾವಿದರು. ಅನೇಕ ಕಂಪನಿ ಮತ್ತು ಹವ್ಯಾಸಿ ನಾಟಕ ಕಂಪನಿಗಳಲ್ಲಿ ಪಾತ್ರ ವಹಿಸಿದ್ದಾರೆ. ಜೋಕುಮಾರನ ಬಗ್ಗೆ ಅವರಿಗೆ ಅಭಿಮಾನವಿದೆ ಮತ್ತು ಬಹಳ ಒಳ್ಳೆಯ ವಕ್ತಾರ ಎಂಬ ಬಗ್ಗೆ ಅನುಮಾನವಿಲ್ಲ.

(ಅಷ್ಟಮಿ ದಿನ ಲಕ್ಷ್ಮಿಗೆ ಗರ್ಭಿಣಿಯ ಬಯಕೆಗಳುಂಟಾಗಿ ಆ ದಿನ ಅಡಿಗೆ ಮಾಡಿ ಅವಳಿಗೆ ಬೇಕುಬೇಕಾದ್ದು ತಿನ್ನಿಸುತ್ತಾರೆ; ಬಳ್ಳೊಳ್ಳಿಯನ್ನು ತಿನ್ನಿಸುತ್ತಾರೆ. ಬಹುಶಃ ಈ ಕಾರಣಕ್ಕಾಗಿ ಅವಳ ಮಗ ಜೋಕುಮಾರ ಅತಿಕಾಮಿಯಾದ!) ಅದರ ಮಾರನೆಯ ದಿನ ಜೋಕುಮಾರ ಹುಟ್ಟಿದ. ಗಣಪತಿ ವಿಗ್ರಹ ಮಾಡುವ ಜಿನಗಾರರೇ (= ಚಿತ್ರಕಾರರು) ಜೋಕುಮಾರನ ವಿಗ್ರಹವನ್ನೂ ಮಾಡುತ್ತಾರೆ. ಗಂಡುರೂಪದಲ್ಲಿ 'ಏನೂ ಕಡಮೆ ಮಾಡೋಲ್ಲ' ; ಎಂದರೆ ಪುರುಷೇಂದ್ರಿಯವನ್ನು ಪ್ರಧಾನವಾಗಿ ತೋರಿಸಿರುತ್ತಾರೆ. ರೂಪದಲ್ಲಿ ಅವನು 'ಅರ್ಜುನ'ನೇ ಸರಿ-ಅಷ್ಟು ಸುಂದರ. ವಿಗ್ರಹಕ್ಕೆ ಹಳದಿ ಬಣ್ಣ ಹಚ್ಚಿ, ಹಣೆಗೆ ಕರಿಯ ಹರಿನಾಮ ಇಡುತ್ತಾರೆ. ಕಿವಿಗಳಲ್ಲಿ ರಂಧ್ರವಿರುತ್ತದೆ ಮತ್ತು ತಲೆಗೆ 'ಪಟಗಾ' (= ಪೇಟ) ಸುತ್ತುತ್ತಾರೆ. ಜೋಕುಮಾರನ ಮಣ್ಣಿನ ವಿಗ್ರಹವನ್ನು ಹಾಸ್ಯಮಾಡಿದವರಿಗೆ ಎಂದಿಗೂ 'ನೆಟ್ಟಗಾಗೋಲ್ಲ' ಎಂದು ಅವನ ಭಕ್ತರ ನಂಬಿಕೆ. ವಿಗ್ರಹವನ್ನು ಬುಟ್ಟಿಯಲ್ಲಿಟ್ಟು ಬೇವಿನ ಸೊಪ್ಪು, ಹೂವು ಪತ್ರೆಗಳಿಂದ ಅಲಂಕಾರ ಮಾಡುತ್ತಾರೆ. ಭಕ್ತರು ತಂದ ಎಣ್ಣೆ ಹಾಕಲಿಕ್ಕೆ ಒಂದು ಮಣ್ಣಿನ ಮಗೆ, ಅವರ ಹಣೆಗೆ ಹಚ್ಚಲು ಕಾಡಿಗೆ ಇಟ್ಟಿರುವ ಒಂದು ಡಬ್ಬಿ ಇಷ್ಟೂ ಆ ಬುಟ್ಟಿಯಲ್ಲಿರುತ್ತವೆ.

ಜೋಕುಮಾರ ಹುಟ್ಟಿದ ದಿನ ಅವನನ್ನು ಕೆಲವು ಮನೆಗಳಿಗೆ ಒಯ್ಯುತ್ತಾರೆ. ಅವನನ್ನು ಒಯ್ಯುವ ಮುತ್ತೈದೆ ಹೆಂಗಸರು ಅಂದು ಸ್ನಾನಮಾಡಿ, ತಲೆ ಬಾಚಿಕೊಂಡವರು ಜೋಕುಮಾರನಿಗ 'ಮಣ್ಣು ಕೊಡುವ' ತನಕ, ಎಂದರೆ ಏಳು ದಿನಗಳ ವರೆಗೆ ಸ್ನಾನಮಾಡುವಂತಿಲ್ಲ, ಬಟ್ಟೆ ಬದಲಿಸುವಂತಿಲ್ಲ, ತಲೆ ಬಾಚುವಂತಿಲ್ಲ. ಅವನು ಹುಟ್ಟಿದ ಮನೆಯಲ್ಲಿ—ಧಾರವಾಡದಲ್ಲಿ ನಾಗಣ್ಣನವರ ಮನೆಯಲ್ಲಿ-ಮೊದಲ ಪೂಜೆ. ಬಳಿಕ ಅನುಕ್ರಮವಾಗಿ ಬಡಿಗ್ಯಾರ ಮನೆಗೆ, ಗೌಡರ ಮನೆಗೆ, ಧಾರವಾಡಕ್ಕೇ ದೊಡ್ಡ 'ಪೇಟೆ' ಎನ್ನಿಸಿಕೊಂಡಿರುವ ಮುಸಲ್ಮಾನ್ ಮತದ ಲಂಗೋಟಿಯವರ ಮನೆಗೆ, ಉಕ್ಕಾಗದ್ದೆಯ್ಯರ ಮನೆಗೆ ಹೀಗೆ ಇನ್ನೂ ಕೆಲವೇ ಕೆಲವು ಮನೆಗಳಿಗೆ ಜೋಕುಮಾರನ ಬುಟ್ಟಿಯನ್ನು ಹೊತ್ತು ಒಯ್ಯುತ್ತಾರೆ. ಗೌಡರ ಮನೆಯಲ್ಲಿ ಆ ಹೊತ್ತಿಗೆ 'ಅಷ್ಟಮೀ ಕೊಡ ಪೂಜೆ' ಆಗಿರುತ್ತದೆ. ಕೊಡ ಇಲ್ಲಿ ಲಕ್ಷ್ಮಿಯ ಸಂಕೇತ. ಬಾಗಿಲಲ್ಲಿ ಜೋಕುಮಾರನನ್ನು ಇಳಿಸಿದಾಗ ಗೌಡರ ಮನೆಯವರು ಪೂಜಾ ಸಾಮಗ್ರಿ ಕೊಡುತ್ತಾರೆ; ಆ ದಿನ ಮಾಡಿದ ಅಡಿಗೆಯನ್ನು ಬಂದವರಿಗೆ ಕೊಡುತ್ತಾರೆ. ಹಿಂದೆ ಹೇಳಿದ ಎಲ್ಲ ಮನೆಯವರೂ ತಮ್ಮ ಮನೆಗೆ ಜೋಕುಮಾರ ಬಂದಾಗ ಆ ದಿನ ತಾವು ತಂದಿದ್ದ ಜರತಾರಿ ಪಟಕವನ್ನೂ ಕಾಣಿಕೆಯನ್ನೂ ನೀಡಿದ ಬಳಿಕ ಹೆಂಗಸರು ಹಾಡುಗಳನ್ನು ಹೇಳುತ್ತಾರೆ. ಎಣ್ಣೆ ಬೆಣ್ಣೆಯನ್ನು ಕೊಟ್ಟರೆ ಎಣ್ಣೆಯನ್ನು ಮಗೆ ಒಳಕ್ಕೆ ಸುರಿದು, ಬೆಣ್ಣೆಯನ್ನು ಜೋಕುಮಾರನ ತುಟಿಗೆ ಮುಟ್ಟಿಸಿ ಬೇರೆ ಪಾತ್ರೆಗೆ ಹಾಕಿಕೊಳ್ಳುತ್ತಾರೆ. ಜೋಕುಮಾರನ ಬುಟ್ಟಿ ಉರುಳಿ

ದರೆ ಆ ಮನೆಗೆ ತೊಂದರೆ ; ಆ ಕಾರಣ ಬುಟ್ಟಿಯನ್ನು ಹುಷಾರಾಗಿ ಇಳಿಸಿ ಎತ್ತಿಕೊಳ್ಳುತ್ತಾರೆ. ಮನೆಯಲ್ಲಿ ತಗಣೆ ಇರುವವರು ತಾವು ಕೊಡುವ ಮೆಣಸಿನಕಾಯಿ, ಹತ್ತಿ ಒಳಗೆ ಅವನ್ನು ಬಿಟ್ಟು ಗೊತ್ತಾಗದ ಹಾಗೆ ಕೊಡುತ್ತಾರೆ. ಜೋಕುಮಾರನಿಗೆ ಹೀಗೆ ತಗಣೆ ಬಿಟ್ಟರೆ ತಮ್ಮ ಮನೆಯ ತಗಣೆ ಸಂತಾನ ನಾಶವಾಗುತ್ತದೆಂದು ಅವರ ನಂಬಿಕೆ. ಜೋಕುಮಾರನನ್ನು ಹೊತ್ತು ತಂದ ಹೆಂಗಸರು ಆಮೇಲೆ ಅವನ್ನು ನಾಶಮಾಡುತ್ತಾರೆ.

ಎರಡನೆಯ ದಿನದಿಂದ ಬೇರೆ ಬೇರೆ ಮನೆಗಳಿಗೆ, ಓಣಿಗಳಿಗೆ ಹೋಗಬೇಕು. ಹಿಂದಿನಿಂದ ನಿರ್ದಿಷ್ಟವಾಗಿ ಬಂದಿರುವ ಓಣಿಗಳಿಗೇ ಹೋಗಬೇಕು, ಮತ್ತು ಹೋದ ಮನೆಗಳ ಮುಂದೆ ಹಾಡು ವಾಪಸ್ ಬರುವಂತಿಲ್ಲ. ಆಯಾಯಾ ಮನೆಯವರು ಕೊಟ್ಟ ಉಪ್ಪು, ಮೆಣಸಿನಕಾಯಿ, ಹತ್ತಿ, ಜೋಳ, ಬತ್ತ ಇತ್ಯಾದಿಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ. ರೈತರು ತಂದ ಕುಂಬಳದ ಎಲೆಗೆ ಇವರು ತಾವು ತಂದ ಸ್ವಲ್ಪ ನುಚ್ಚನ್ನು ಬೇವಿನಸೊಪ್ಪು, ಬೆರಣಿ ಸುಟ್ಟಬೂದಿ ('ಅಂಗಾರ') ಸಮೇತ ಕೊಡುತ್ತಾರೆ. ರೈತರು ಅದನ್ನು ಬಟ್ಟೆಯಲ್ಲಿ ಕಟ್ಟಿಟ್ಟು, ಜೋಕುಮಾರ ಸತ್ತ ಮಾರನೆಯ ದಿನ ಅದನ್ನು ತಮ್ಮ ಹೊಲಗಳಲ್ಲಿ ಚರಗಾ ಚಲ್ಲುತ್ತಾರೆ. ಮಗ ಸತ್ತ ವಿಷಯ ತಿಳಿದು ಲಕ್ಷ್ಮಿ ಬಂದು ಅಡ್ಡಾಡುತ್ತ, ಮಗನ ಪ್ರಸಾದ (ನುಚ್ಚು ಇತ್ಯಾದಿ) ತಿನ್ನಲು ಚರಗಾ ಚಲ್ಲಿದ ಹೊಲಗಳಿಗೆ ಬರುತ್ತಾಳೆ. ಹೀಗೆ ಹೊಲಗಳಲ್ಲಿ ಲಕ್ಷ್ಮಿ ಹಾದು ಹೋಗುವಂತೆ ಮಾಡಿದರೆ ರೈತರಿಗೆ ಲಾಭ ; ಹೊಲಗಳು ಚೆನ್ನಾಗಿ ಬೆಳೆದು ಕೈಗೆ ಹಣ ಬರುತ್ತದೆ.

ಹೀಗೆ ಆರನೆಯ ದಿನದವರೆಗೆ ನಡೆಯುತ್ತದೆ. ಏಳನೆಯ ದಿನ ಕುಂಬಾರರ ಮನೆಗೆ, ಮೇದರ ಮನೆಗೆ ಹೋಗಿ ಬಡಿಗೇರ ಮನೆ ಗೌಡರ ಮನೆಗೆ ಹೋಗುತ್ತಾರೆ. ಅವರೆಲ್ಲ ಧಾನ್ಯ ದರುವ್ಹೊಂದು (ದರುವ್ಹೊಂದು=ಸಮಸ್ತ, ಎಲ್ಲ) ನೀಡುತ್ತಾರೆ. ಸಂಜೆ ವಾಪಸ್ಸಾದರೆ, ಜೋಕುಮಾರನನ್ನು ಒಳಕ್ಕೆ ಬಿಟ್ಟುಕೊಳ್ಳುವುದಿಲ್ಲ. ಅವನಿಗೆ ಆ ದಿನ ಪೂಜೆ ಇಲ್ಲ. ಬಾಗಿಲ ಹೊರಗೇ ಅವನಿಗೆ ಊಟ. ರಾತ್ರಿ ಹನ್ನೆರಡು ಗಂಟೆಯ ಬಳಿಕ ಊರಿನ ಎಲ್ಲ ಜನ ಮಲಗಿದ ಮೇಲೆ ಹೊಲೆಯರ ಕೇರಿಗೆ ಕೊಂಡೊಯ್ಯುತ್ತಾರೆ. ಆ ಕೇರಿಯ ಜನ ಎಚ್ಚತ್ತಿರುತ್ತಾರೆ ಮತ್ತು ಆ ಜನ ನೀಡಿದ ಭಿಕ್ಷವನ್ನು ಸ್ವೀಕರಿಸಬೇಕು. ಹೊಲೆಯರಿಗೂ ಅದು ದೊಡ್ಡ ಹಬ್ಬವೇ. ಮತ್ತು ಅವರಿಗೆ ಅದು ಖುಷಿಯ ಹಬ್ಬವೂ ಹೌದು. ಜೋಕುಮಾರ ಘಟಿಂಗ ಮನುಷ್ಯ ಮತ್ತು ಅನೇಕ ಹೊಲೆಯ ಸೂಳೆಯರ ಜೊತೆ ಸಂಬಂಧ ಮಾಡಿರುತ್ತಾನೆ. ಎಲ್ಲ ಮನೆಗಳಿಗೂ ಹೋದ ಮೇಲೆ, ಗಂಗಾಮತಸ್ಥ ಹೆಂಗಸರು ಅಳುತ್ತ ದೂರ ಹೋಗಿ ಮರೆಯಲ್ಲಿ ನಿಲ್ಲುತ್ತಾರೆ. ಗಂಡಸರನ್ನೂ ದೂರಕ್ಕೆ ಕಳುಹಿಸಿ ಹೊಲೆಯ ವೇಶ್ಯೆಯರು ಒನಕೆಗಳಿಂದ ಜೋಕುಮಾರನನ್ನು ಹೊಡೆಯುತ್ತಾರೆ. ಅವರಿಗೆ ಅವನ ಮೇಲೆ

ರೋಷ, ಏಕೆಂದರೆ ಅವನು ಬಲವಂತಪಡಿಸಿರುತ್ತಾನೆ. ಹೊಡೆದು, ಬಟ್ಟೆ ಮುಚ್ಚಿ ಕರೆದಾಗ ಗಂಗಾಮತಸ್ಥ ಹೆಂಗಸರು ಗಂಡಸರು ಎಲ್ಲ ಬಂದು ಸುಡುಗಾಡ ಕಟ್ಟೆಗೆ ಒಯ್ಯುತ್ತಾರೆ. ಆಗ ಜೋಕುಮಾರನ ಮುಖ ಊರ ಕಡೆ ತಿರುಗಿರಬೇಕು (ಸತ್ತರೂ ಅವನಿಗೆ ಹೆಣ್ಣಿನ ಚಿಂತೆ ತಪ್ಪಲಿಲ್ಲ!), ಬೆನ್ನು ಸುಡುಗಾಡಿನ ಕಡೆಗೆ. ದಾರಿಯಲ್ಲಿ ಯಾರಾದರೂ ಎದುರಾದರೆ ಅಪಾಯ ಕಟ್ಟಿಟ್ಟದ್ದು. ಅಗಸರ ಬಾವಿಗೆ ಬಂದು, ಗಂಗಾಮತದ ಹೆಂಗಸರು ಗಂಡಸರು ಎಲ್ಲರೂ ಸೇರಿಕೊಂಡು ಗಣಪತಿಯ ವಿಗ್ರಹ ಹಾಕುವ ಹಾಗೆ ಕಂಕುಳಿಗೆ ಕೈಹಾಕಿ ನೀರಲ್ಲಿ ಬಿಡುತ್ತಾರೆ. ಅವನ ಹೂವು ಪತ್ರೆಗಳನ್ನು ಕಲ್ಲಿನ ಬುಡಕ್ಕಿಟ್ಟು ಮುಚ್ಚಿ, ಪೇಟಾವನ್ನು ನೀರಲ್ಲಿ ತೊಳೆದು ಬುಟ್ಟಿ ಸಮೇತ ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಗೆ ಮನೆಗೆ ಹಿಂದಿರುಗುತ್ತಾರೆ. ಎಲ್ಲರೂ ಸ್ನಾನಮಾಡುತ್ತಾರೆ.

ಈ ಕಡೆ ಅಗಸರು ಮೂರು ದಿನದ ಬಳಿಕ ಜೋಕುಮಾರನ 'ದಿವಸ' ಮಾಡುತ್ತಾರೆ. ಅವನು ಅವರ ಬಾವಿ ಹತ್ತಿರ ಆ ದಿನ ಸಾಯಲಿಲ್ಲ. ಗಂಗಾಮತಸ್ಥರು ಒಗೆದು ಹೋದ ಮೂರನೆಯ ದಿನ ಸತ್ತ. ಆ ಮೂರು ದಿನವೂ ಅವರು ಬಟ್ಟೆ ಒಗೆಯುವಂತಿಲ್ಲ.

ಜೋಕುಮಾರನ ಘಟಿಂಗತನವನ್ನು ಕುರಿತಂತೆ ಗಂಗಾಮತಸ್ಥರಲ್ಲಿ ಅನೇಕ ಕತೆಗಳು ಹಬ್ಬಿವೆ. ಅವನ ಕಾಮುಕತೆಗೆ ಹೆದರಿ ಹಾರುವ ಹೆಂಗಸರು ಕಚ್ಚೆಹಾಕಲು ಆರಂಭಿಸಿದರಂತೆ. ಮುಸಲ್ಮಾನನೊಬ್ಬ ಮುಂದಕ್ಕೆ ಬಗ್ಗಿ ನಮಾಜು ಮಾಡುವಾಗ ಇವನು ನಡೆಸಿದ ಘಟಿಂಗತನ ನೋಡಲಾರದೆ ಮುಸಲ್ಮಾನನ ಹೆಂಡತಿ ಬುರುಕಿ ಹಾಕಿಕೊಂಡಳಂತೆ. ಅಷ್ಟೇ ಅಲ್ಲ, ಅವನಿಗೆ ಹೆದರಿ ಬಾದಾಮಿಯ ಬನಶಂಕರಿ ದೇವಿ ಏಳು ದಿನವೂ ಬಾಗಿಲು ಹಾಕಿ ಒಳಗೆ ಕುಳಿತುಬಿಟ್ಟಳು. ಈಗಲೂ ಆ ಏಳುದಿನ ಗುಡಿಗೆ ಬೀಗ ಹಾಕಿರುತ್ತದೆ. ಧಾರವಾಡದ ಶಂಕರಮ್ಮನ ಗುಡಿ, ಜೈನರ 'ದಿಗಂಬರನ ಗುಡಿ' ಇವಕ್ಕೂ ಆ ಏಳು ದಿನ ಬೀಗ ಹಾಕಿರುತ್ತದೆ. ಎಲ್ಲ ದೇವತೆಗಳೂ ಅವನ ಕಾಮುಕತನಕ್ಕೆ ಭಯಪಟ್ಟಿದ್ದರು. ಮೇಲಿನ ಕತೆಯ ಪ್ರಕಾರ, ಅವನು ಪೋಲಿಯಾಗಿ ಎಲ್ಲಿ ಬೇಕೆಂದರಲ್ಲಿ ಅಡ್ಡಾಡಿದ. 'ಮರೆ'ಬೇಕೆಂದು ರೈತರ ಹೊಲಗಳಲ್ಲೆಲ್ಲ ಅಡ್ಡಾಡಿದ್ದರಿಂದ ರೈತರಿಗೆ ಒಳ್ಳೆಯದೇ ಆಯಿತು. ಹೊಲಗಳು ಬೆಳೆದುವು. ಅವನು ಬೆಂಡೇ ಗಿಡಗಳ ಮೂಲಕ ಹೋಗುವಾಗ ತನ್ನ ವೀರ್ಯವನ್ನು ಒರಸಿ ಹೋದದ್ದರಿಂದ ಆ ಕಾಯಿಗಳು ಅಂಟು ಅಂಟಾದುವು. ಭಾದ್ರಪದ ಮಾಸದಲ್ಲಿ—ಸೆಪ್ಟೆಂಬರ್ ತಿಂಗಳ ಅಂತ್ಯ—ಹಿತವಾದ ಚಳಿ ಇರುತ್ತದೆ. ಈ ಚಳಿ ಹವಾವನ್ನೇ ಜೋಕುಮಾರನ 'ಅಳಲು' ಎಂದು ಕರೆಯುತ್ತಾರೆ. ಗೊಡ್ಡು ಬಿದ್ದ ನಾಯಿ ನರಿಗಳೂ ಕೂಡ ಗರ್ಭ ಪಡೆಯು

ವುದು ಈ ಕಾಲದಲ್ಲೇ.[4] "ಜೋಕುಮಾರ ಹುಟ್ಟಿ ಲೋಕವೆಲ್ಲ ಬೆಳಗಲಿ, ರೈತರು ಮೊಸರನ್ನು ಕಡೆಯಲಿ" ಎಂಬರ್ಥದ ಜಾನಪದ ಗೀತಗಳನ್ನು ಹೆಂಗಸರು ಹಾಡುತ್ತಾರೆ. ಮೇಲಿನ ನಂಬಿಕೆಗಳು, ಕತೆಗಳು, ಹಾಡುಗಳು ಎಲ್ಲವೂ ಅವನನ್ನು ಒಬ್ಬ 'ಫಲಶಕ್ತಿ ದೇವತೆ' (Fertility god) ಎಂಬುದನ್ನು ಸೂಚಿಸುತ್ತವೆ.

ಹಿಂದೆ ನನ್ನ ಲೇಖನದಲ್ಲಿ ಬಂದ ಸಂಗತಿಗಳಿಗೂ ಇಲ್ಲಿ ಬಂದಿರುವ ಸಂಗತಿಗಳಿಗೂ ಸ್ಪಷ್ಟ ಹೋಲಿಕೆಗಳಿವೆ, ವ್ಯತ್ಯಾಸಗಳೂ ಇವೆ. ಇಲ್ಲಿ ಜೋಕುಮಾರ ಹರಿ ಮತ್ತು ಲಕ್ಷ್ಮಿಯರ ಮಗ ಎಂದಿದೆ. ಜಾನಪದ ಗೀತಗಳಲ್ಲಿ ಅವನು ಜ್ಯೇಷ್ಠಾ ದೇವಿಯ (ವೃಷ್ಟಿದೇವಿ, ದಿಷ್ಣಾದೇವಿ, ದಿರ್ನೇದೇವಿ ಎಂದೂ ಉಂಟು). ಮಗ ಎಂದಿದೆ. ಚನ್ನವೀರ ಕವಿಯು 'ಕಾಶಕೃತ್ಸ್ನ ಶಬ್ದ ಕಲಾಪ ಧಾತು ಪಾಠ'ದಲ್ಲಿ ಜೋಕುಮಾರನು ಜ್ಯೇಷ್ಠಾದೇವಿಯೆಂಬ ಹೆಸರಿನ ಅಲಕ್ಷ್ಮಿ ಅಥವಾ ದರಿದ್ರಲಕ್ಷ್ಮಿಯ ಮಗ ಎಂದಿದೆ. (ಜ್ಯೇಷ್ಠೆಯೇ ಉತ್ತರ ಕರ್ನಾಟಕದ 'ಶಟವಿ' ಎಂಬ ಗ್ರಾಮ ದೇವತೆ) ಅಲಕ್ಷ್ಮಿ ಎಂದಿದ್ದುದು ಅವನ ಭಕ್ತರ ಬಾಯಲ್ಲಿ 'ಲಕ್ಷ್ಮಿ' ಎಂದು ಉದಾತ್ತೀಕರಣವಾಗಿ, ಅವನ ತಂದೆ ವಿಷ್ಣು ಎಂಬುದು ಆಮೇಲೆ ಕಲ್ಪಿತವಾಗಿರುವಂತೆ ತೋರುತ್ತದೆ. ಇನ್ನೊಂದು ಜಾನಪದ ಕಥೆ ಪ್ರಕಾರ ಅವನು 'ಎಳೇ ಗೌರಮ್ಮ'ನ ಮಗ. ಅವನು 'ಹತ್ತಿಯಲ್ಲಿ ಹುಟ್ಟಿ ಎಳೆಯಲ್ಲಿ ಆಡುತ್ತಾನೆ' ಎಂದು ಪ್ರಚಲಿತವಿದೆ. ಹೀಗೆಂದರೇನೋ ತಿಳಿಯದು. 'ಎಳೇ ತರುವ ಪದ್ಧತಿ' ಧಾರವಾಡದ ಭಾಗದಲ್ಲಿ ಹೀಗಿದೆ : ಜೋಕುಮಾರ ಹುಟ್ಟಿದ ದಿನ ಗೌಡರ ಮನೆಯಲ್ಲಿ ಲಕ್ಷ್ಮಿಗೆ ಅಷ್ಟಮೀ ಕೊಡಪೂಜೆ ನಡೆಯುವುದನ್ನು ಗಮನಿಸಿದ್ದೇವೆ. ಕೊಡಪೂಜೆ ಇರುವವರ ಮನೆಗೆ ಹಿಂದಿನ ದಿನ ಯಾರು ಬೇಕಾದರೂ—ಜೋಕುಮಾರನ ಭಕ್ತರೇ ಆಗಬೇಕಾಗಿಲ್ಲ—ಹೋಗಿ ಲಕ್ಷ್ಮಿಗೆ ಬಯಕೆ ಊಟ ಕೊಟ್ಟು, ಆ ಮನೆಗೆ ಹತ್ತಿ ಕೊಟ್ಟು ಬರುತ್ತಾರೆ. ಅದನ್ನು ಕೊಡಪೂಜೆ ಜೊತೆ ಇಟ್ಟು ಪೂಜಿಸುತ್ತಾರೆ. ಮಾರನೇದು ದಿನ, ಜೋಕುಮಾರ ಹುಟ್ಟಿದ ದಿನ—ತಾವೇ ಆ ಮನೆಗೆ ಹೋಗಿ ಹತ್ತಿ ಬೀಜ ತೆಗೆದು ಅಲ್ಲೇ ನೂಲಬೇಕು. ಐದು, ಏಳು, ಒಂಬತ್ತು, ಹನ್ನೊಂದು, ಹದಿಮೂರು ಎಳೆಗಳ ಒಂದೊಂದು 'ಗಟ್ಟಿ' ಯನ್ನು ಮಾಡಿ ಕೊಡಬೇಕು. ಮೊದಲನೆಯದನ್ನು ಲಕ್ಷ್ಮಿಗೆ ಹಾಕಿ, ಇನ್ನೊಂದನ್ನು ಒಬ್ಬ ಮುತ್ತೈದೆಗೆ ಕೊಟ್ಟು, ಉಳಿದ ಎಲ್ಲವನ್ನೂ ಸೇರಿಸಿ ಒಂದು ಗಟ್ಟಿ ಮಾಡಿ ಕುಂಬಳ ಎಲೆಯಲ್ಲಿಡುತ್ತಾರೆ – ಕೊಡಪೂಜೆ ಮನೆಯವರು. ಹೊತ್ತು ಮುಳುಗಿದ ಮೇಲೆ ಮತ್ತೆ ಅವರ ಮನೆಗೆ ಹೋದರೆ, ಅಲ್ಲಿ ಮಧ್ಯಾಹ್ನ ಉಪವಾಸವಿದ್ದು ಕೊಡ

---

4. ಅಳಲು = ದುಃಖ. ಜೋಕುಮಾರ ಹೊಲೆಯರ ಕೇರಿಯಲ್ಲಿ ಬಡಿಸಿಕೊಂಡು ಅಗಸರ ಬಾವಿ ಹತ್ತಿರ ನರಳುತ್ತಿದ್ದುದೇ ಭಾದ್ರಪದ ಮಾಸದ ಚಳಿ ಅಥವಾ 'ಜೋಕುಮಾರನ ಅಳಲು' ಇರಬೇಕು. (?)

ಪೂಜೆ ಮಾಡಿದ ಗಂಡಸು ಎಳೆ ತರಲು ಹೋದವರ ಜೊತೆ ಮಾತನಾಡದೆ ಮೌನವಾಗಿಯೇ ಇದ್ದು ಎಳೆಯ ಉಂಡೆಯನ್ನೂ (ಗಟ್ಟಿ) ಹತ್ತಿಯನ್ನೂ ಕೊಡುತ್ತಾನೆ; ಇವರೂ ಮೌನವಾಗಿ ತೆಗೆದುಕೊಂಡು ದಾರಿಯುದ್ದಕ್ಕೂ ಮಾತನಾಡದೆ ಮನೆಗೆ ತಂದು ಜಗುಲಿ ಮೇಲಿಟ್ಟು ನೈವೇದ್ಯ ತೋರಿಸಿ ಆ ನೂಲು ಹತ್ತಿಯನ್ನು ಒಳಗೆ ಕೊಂಡೊಯ್ಯಬೇಕು. ಆಮೇಲೆ ಮಾತನಾಡಬಹುದು. (ತರುವಾಗ ದಾರಿಯಲ್ಲಿ ಹತ್ತಿ ಬಿದ್ದರೆ ಅಶುಭ; ಅದು ಬಿದ್ದು ಬೇರೆಯವರ ಕೈಗೆ ಸಿಕ್ಕರೆ ಅದು ಅವರಿಗೆ ಶುಭ). ಆ ಮನೆಯಲ್ಲಿ ಎಳೇ ತರುವ ಪದ್ಧತಿ ಹೀಗೆ ಆರಂಭವಾಗುತ್ತದೆ. ಎಳೇಗೌರಮ್ಮ ಜೋಕುಮಾರನ ತಾಯಿ ಎಂಬ ಕಲ್ಪನೆಗೂ 'ಹತ್ತಿಯಲ್ಲಿ ಹುಟ್ಟಿ ಎಳೆಯಲ್ಲಿ ಆಡ್ತಾನೆ' ಎಂಬ ಉಕ್ತಿಗೂ ಮೇಲಿನ ಎಳೆತರುವ ಪದ್ಧತಿ ಕಾರಣವಾಗಿರುವಂತೆ ತೋರುತ್ತದೆ. ಎಳೆತರುವುದು ಜೋಕುಮಾರ ಹುಟ್ಟಿದ ದಿನ ಮತ್ತು ಅವನ ತಾಯಿಯಾದ ಲಕ್ಷ್ಮಿಯ ಸಂಕೇತವಾದ ಪೂರ್ಣಕುಂಭದ ಪಕ್ಕದಲ್ಲಿಟ್ಟ ಹತ್ತಿಯಿಂದ ಎಳೆ ತೆಗೆಯಬೇಕು. ಆಗ, ಲಕ್ಷ್ಮಿ ಎಳೇಗೌರವ್ವನೆನ್ನಿಸಿಕೊಳ್ಳಬಹುದು, ಜೋಕುಮಾರ ಅವಳ, ಎಂದರೆ ಎಳೇಗೌರವ್ವನ ಮಗನೆಂದು ಪರಿಗಣಿತನಾಗಬಹುದು.

ನಾನು ಮೊದಲು ಸಂಗ್ರಹಿಸಿದ ಕತೆ ದಾವಣಗೆರೆ ಸಮೀಪದ ಊರುಗಳಲ್ಲಿ ಪ್ರಚಲಿತವಿದ್ದುದು. ಜೋಕುಮಾರನ ಪಂಥ (Cult) ಪ್ರಚಲಿತವಿರುವ ಪ್ರದೇಶದ ಹೆಚ್ಚು ಕಡಮೆ ಅಂಚು ಅದು. ಧಾರವಾಡದ ಪ್ರದೇಶದಲ್ಲಿ ಆ ಪಂಥ ಹೆಚ್ಚು ಪ್ರಬಲ, ಬಹುಶಃ ಹೆಚ್ಚು ಜೀವಂತ. ಆ ಕಾರಣವಾಗಿಯೇ ನಾನು ಈಗ ಕೊಟ್ಟಿರುವ ಕತೆಯಲ್ಲಿ ಅದಕ್ಕಿಂತ ಹಬ್ಬದ ಆಚರಣೆ ಇತ್ಯಾದಿಗಳಲ್ಲಿ ಹೆಚ್ಚಿನ ವಿವರಗಳಿವೆ.

ಜೋಕುಮಾರ ಕೆಳವರ್ಗದವರ ದೈವ. ಆ ಕೀಳ್ವರ್ಗದವರಲ್ಲೂ ಎಲ್ಲೋ ಒಂದೆರಡು ಜಾತಿಗಳು ಅವನನ್ನು ಗಂಭೀರವಾಗಿ ತೆಗೆದುಕೊಂಡಿವೆ. ಆ ಒಂದೆರಡು ಜಾತಿಯ ಜನರ ಜೀವನದಲ್ಲಿ ಅವನು ಅಂತಹ ಪ್ರಧಾನ ಪಾತ್ರವನ್ನು ವಹಿಸಿದ್ದಾನೆಂದು ಅನ್ನಿಸುವುದಿಲ್ಲ. ಅವನಿಗೆ ದೇವಾಲಯ, ಜಾತ್ರೆ, ಹರಕೆಗಳೇನೂ ಇಲ್ಲ. ವರ್ಷದಲ್ಲಿ ಎಂದೋ ಹುಟ್ಟಿ, ಒಂದು ವಾರ ಬದುಕಿ ಹೋದ ಜೋಕುಮಾರನ ನೆನಪು ಆ ಜನಕ್ಕೆ ಆಗುವುದು ಮತ್ತೆ ಅವನು ಹುಟ್ಟಿದಾಗಲೇ. ಉಳಿದ ಜನ ತಮ್ಮ ಮಾತುಗಳಲ್ಲಿ ಜೋಕುಮಾರನ ಹೆಸರನ್ನು ಸೋಮಾರಿತನಕ್ಕೆ ಸಂಕೇತವಾಗಿ, ನಿಕೃಷ್ಟ ಭಾವನೆಯಿಂದ ಬಳಸುತ್ತಿರುತ್ತಾರೆ. ಅವನ ಭಕ್ತ ಜನರು ತಮಗೆ ಕಾಯಿಲೆಯಾದಾಗ, ಏನಾದರೂ ಶುಭಕಾರ್ಯವನ್ನು ಮಾಡುವಾಗ ಜೋಕುಮಾರನನ್ನು ಸ್ಮರಿಸಿಕೊಳ್ಳುವಂತೆ ಕಾಣುವುದಿಲ್ಲ. ಅವನ ಭಕ್ತರಲ್ಲಿಯೂ ಅವನ ಬಗ್ಗೆ ಶ್ರದ್ಧ ಕಡಿಮೆಯಾಗುತ್ತಿರುವಂತೆ ತೋರುತ್ತದೆ. ಇದು ಒಟ್ಟು ಸಮಾಜದಲ್ಲಿ ದೈವ, ಮತಗಳ ಬಗ್ಗೆ ನಂಬಿಕೆ ಕಡಿಮೆಯಾಗುತ್ತಿರುವುದರ ಭಾಗ ಅಲ್ಲ. ಮೇಲು ದೈವಗಳ ಪ್ರಭಾವ ಹೆಚ್ಚಿ, ಮೇಲು ವರ್ಗದವರ ತಿರಸ್ಕಾರಕ್ಕೆ ಅಥವಾ ಅವಜ್ಞೆಗೆ

ಗುರಿಯಾದ ಕೀಳ್ದೈವದ ಬಗ್ಗೆ ಆ ಕೀಳ್ದೈವದ ಭಕ್ತರಿಗೆ ಅದೇ ಹಿಂದಿನ ಶ್ರದ್ಧೆ ಉಳಿದು ಬರುವುದು ಕಷ್ಟವಾಗುತ್ತದೆ. ಕೀಳ್ದೈವಗಳ ಬಗ್ಗೆ ಎಷ್ಟೋಸಾರಿ ಮೇಲು ವರ್ಗದ ಜನಕ್ಕೆ ಭಕ್ತಿಯಿಲ್ಲವಾದರೂ ಭಯವಾದರೂ ಇರುತ್ತದೆ. ಜೋಕುಮಾರನ ವಿಷಯಕ್ಕಾದರೋ ಮೇಲುವರ್ಗದ ಜನಕ್ಕೆ ತಮಾಷೆ ಧೋರಣೆಯೇ ಪ್ರಧಾನ ವಾಗಿರುವಂತಿದೆ. ಅವನ ಭಕ್ತರೇನೋ ತಮ್ಮ ದೈವವನ್ನು ಇತರರು ತಮಾಷೆ ಮಾಡಿದರೆ ಒಳ್ಳೆಯದಾಗುವುದಿಲ್ಲವೆಂದು ಹೇಳಿದರೂ, ಹಾಗೆ ಹೇಳುವುದೇ ಇತರರು ತಮಾಷೆ ಮಾಡುತ್ತಾರೆಂಬುದು ಧ್ವನಿತವಾಗುತ್ತದೆ. ಜೋಕುಮಾರನ ಆಚರಣೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆಯೆಂದು ಅವನ ಭಕ್ತರ ಮಾತುಗಳಿಂದಲೇ ತಿಳಿದುಬರುವಂತಿತ್ತು.

ಇಷ್ಟಾದರೂ, ಜೋಕುಮಾರನ ಆಚರಣೆ ನಡೆದುಕೊಂಡು ಹೋಗುತ್ತಿರುವು ದಕ್ಕೆ ಹಿಂದಿನಿಂದ ಬಂದಿರುವ ಪದ್ಧತಿಯನ್ನು ಬಿಟ್ಟುಕೊಡಬಾರದು ಎಂಬ ನಂಬಿಕೆಯೇ ಪ್ರಬಲವಾಗಿರುವಂತೆ ತೋರುತ್ತದೆ. ಜೋಕುಮಾರನನ್ನು ಹೊತ್ತು ತಂದಾಗ ಮೇಲುವರ್ಗದ ಜನ ಹಿಂದಿನ ಪರಂಪರೆಗೆ ಗೌರವ ಸೂಚಿಸಲಿಕ್ಕಾಗಿ ಕೆಲವು ಮರ್ಯಾದೆ ಗಳನ್ನು ಅನುಸರಿಸುತ್ತಿದ್ದಾರೆ. ಉದಾಹರಣೆಗೆ, ಜೋಕುಮಾರನನ್ನು ತಂದಾಗ ಪೂಜಾ ಸಾಮಗ್ರಿಗಳನ್ನು ಕೊಡುವುದು ಇತ್ಯಾದಿ. ಇಲ್ಲಿ ನಾವು ಗಮನಿಸಬೇಕಾದ್ದು, ಗಂಗಾಮತಸ್ಥರಂತೆಯೇ ಅವರ ದೈವವನ್ನೂ ಮನೆಯ ಹೊರಗೇ ಕೂರಿಸುತ್ತಾರೆ. ಮತ್ತು ಅವರ ದೈವವನ್ನು ಮೇಲು ವರ್ಗದ ಜನ ತಾವೇ ಪೂಜಿಸದೆ, ಪೂಜಾ ಸಾಮಗ್ರಿಗಳನ್ನು ಒದಗಿಸುವುದರ ಮೂಲಕ ಆ ದೈವದ ಬಗ್ಗೆ ಆ ಭಕ್ತರಿಗೆ ಇರುವ ನಂಬಿಕೆಯನ್ನು ಗೌರವಿಸುತ್ತಾರೆ. ಇಲ್ಲಿ, ಮೇಲು ವರ್ಗದ ಜನ ದೈವದ ಬಗ್ಗೆ ಭಕ್ತಿ ತೋರಿಸುವುದಕ್ಕಿಂತ, ಕೆಳಜಾತಿಯವರ ದೈವಕ್ಕೆ ವಿಶ್ವಾಸವನ್ನು ತೋರುವುದರ ಮೂಲಕ ಆ ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿರುವಂತೆ ಕಾಣು ತ್ತದೆ. ಹಳ್ಳಿಗರು ಸಾಮಾಜಿಕ ಸಂಬಂಧಗಳನ್ನು ವರ್ಧಿಸಲು ದೈವಗಳನ್ನು ಬಳಸಿಕೊಳ್ಳುವ ವಿಧಾನ ಗಮನಾರ್ಹವಾದುದು.

ಜೋಕುಮಾರನ ವ್ಯಕ್ತಿತ್ವಕ್ಕೆ ಎರಡು ಮುಖಗಳಿವೆ: ಒಂದು - ಅವನ ಔದಾರ್ಯ, ಜನಗಳ ಬಗ್ಗೆ ಇರುವ ಕಳಕಳಿ. ಇನ್ನೊಂದು ಅತಿ ಕಾಮುಕತೆ. ಒಂದು ಕತೆಯ ಪ್ರಕಾರ, ಲೋಕದಲ್ಲಿ ಮಳೆ ಇಲ್ಲದೆ ಜನ ಪರಿತಪಿಸುತ್ತಿರುವ ಸಂಗತಿಯನ್ನು ತಿಳಿಸುವವನು ಅವನೇ. ಅವನಿಂದಾಗಿ ಮಳೆ ಬಂದಿತು, ಬೆಳೆ ಬೆಳೆಯಿತು. ಹಾಗೆಯೇ, ಅವನಿಂದಾಗಿ ಅನೇಕ ಹೆಂಗಸರು ಫಲವತಿಯರಾದರು. ಅವನ ಅತಿ ಕಾಮುಕತೆ ಅವನ ಅಲ್ಪಾಯುಸ್ಸಿಗೆ ಕಾರಣವಾಯಿತು ಎಂಬುದು ಅವನ ಕತೆಯಿಂದಲೇ ಸೂಚಿತವಾಗುತ್ತದೆ. ಜನ ಅವನ ತುಂಟಾಟವನ್ನು ಸಹಿಸಲಾರದೆ ತಾವೇ ಅವನನ್ನು ಕೊಂದುಹಾಕಿದರು. ಈ ಔದಾರ್ಯ ಮತ್ತು ಅತಿಲೈಂಗಿಕತೆಗಳು ಭಾರತೀಯ

ಜಾನಪದ ಪರಿಸರದಲ್ಲಿ ವಿರುದ್ಧ ಗುಣಗಳು ಎಂದು ಅನ್ನಿಸಿಕೊಳ್ಳುವುದಿಲ್ಲ. ಜಾನಪದರಲ್ಲಿ ಪ್ರಚಲಿತವಾಗಿರುವ ಅನೇಕ ಐತಿಹ್ಯಗಳಲ್ಲಿ ಇಂತಹ ಸ್ವಭಾವದ ಎಷ್ಟೋ ಜನರ ಕತೆಗಳಿವೆ. ಹಾಗೆ ನೋಡಿದರೆ, ಬೆಳೆ ಮತ್ತು ಸಂತಾನಗಳನ್ನು ಯಥೇಷ್ಟವಾಗಿ ಕೊಡುವ ಅವನ ಮೊದಲ ಕಾರ್ಯವನ್ನು ಮೆಚ್ಚಿ, ಎರಡನೆಯ ಕಾರ್ಯಕ್ಕೆ 'ಅತಿ ಲಂಪಟತೆ' ಎಂದು ಹೆಸರಿಟ್ಟು ದೂಷಿಸುವುದೂ ಸರಿಯಾಗಲಾರದೇನೊ! ಎರಡೂ ಮೂಲತಃ ಒಂದೇ ಕ್ರಿಯೆಯೇ. ಜೋಕುಮಾರ ಮೂಲತಃ ಯಾವುದರ ಸಂಕೇತವಾಗಿ ಕಾಣಿಸಿಕೊಂಡು ಮುಂದೆ ಒಂದು ದೈವ ಎನ್ನಿಸಿಕೊಂಡ ಎಂಬ ಪ್ರಶ್ನೆ ಇದೀಗ ತೀರ ಸ್ವಾರಸ್ಯವಾದುದು.

ಅನುವಾದದ ಸಮಸ್ಯೆಗಳು ; ಸಾಧನೆಗಳು

ಜಿ. ಎಸ್. ಶಿವರುದ್ರಪ್ಪ

ಅನುವಾದ ಎನ್ನುವುದು ಮುಖ್ಯವಾಗಿ ತೌಲನಿಕ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ. ಒಂದು ಸಾಂಸ್ಕೃತಿಕ ಸಂದರ್ಭದ ವಿಚಾರಗಳನ್ನು, ಭಾವನೆಗಳನ್ನು ಆಯಾ ಪರಿಸರದ ಭಾಷೆಯಿಂದ, ಇನ್ನೊಂದು ಸಾಂಸ್ಕೃತಿಕ ಸಂದರ್ಭಕ್ಕೆ, ಅದರ ಭಾಷೆಯಲ್ಲಿ ತರುವ ಒಂದು ಪ್ರಯತ್ನ. ಹಾಗೆ ವರ್ಗಾಯಿಸುವ ಈ ಪ್ರಯತ್ನ ಸುಲಭವಾದುದೇನಲ್ಲ.*

ಒಂದು ಭಾಷೆಯಲ್ಲಿ ಅಭಿವ್ಯಕ್ತವಾಗಿರುವ ಭಾವ ಭಾವನೆ ವಿಚಾರಗಳನ್ನು, ಅನುವಾದಕನೊಬ್ಬನು, ಉದ್ದೇಶಿತ ಭಾಷೆಗೆ ತರುವ ಈ ಪ್ರಯತ್ನದ ಹಿಂದೆ ಇರುವ ಉದ್ದೇಶಗಳನ್ನು ಹೀಗೆ ಗುರುತಿಸಬಹುದು :

(1) ಅನ್ಯಭಾಷಾ ಸಾಹಿತ್ಯದಲ್ಲಿ, ತನ್ನ ಭಾಷಾ ಸಾಹಿತ್ಯದಿಂದ ಬೇರೆಯಾದ ಹಾಗೂ ಉತ್ತಮವಾದ ಅಂಶಗಳಿವೆ ಎಂಬ ಕಾರಣದಿಂದ, ಅವುಗಳನ್ನು ತನ್ನ ಭಾಷೆಗೆ ತರುವುದರ ಮೂಲಕ ತನ್ನ ಭಾಷಾಸಾಹಿತ್ಯದ ಸಂಪತ್ತನ್ನು ಹೆಚ್ಚಿಸಬೇಕು, ಹೆಚ್ಚಿಸಬಹುದು, ಎಂಬುದು.

(2) ತನ್ನ ಭಾಷಾಸಾಹಿತ್ಯದಲ್ಲಿರುವ ಅತ್ಯುತ್ತಮವಾದುದನ್ನು ಅನ್ಯಭಾಷೆಗೆ ಅನುವಾದ ಮಾಡುವುದರ ಮೂಲಕ, ತನ್ನ ಸಾಹಿತ್ಯದ ವಿಶಿಷ್ಟತೆಗಳನ್ನು, ಇತರರಿಗೆ ಪರಿಚಯಿಸುವ ಮತ್ತು ತಮ್ಮ ಸಾಹಿತ್ಯದ ಬಗ್ಗೆ ಅನ್ಯಭಾಷಾಸಾಹಿತ್ಯದವರ ಗಮನ ಹಾಗೂ ಗೌರವಗಳನ್ನು ಗಳಿಸಬಹುದು—ಎಂಬುದು.‡

---

* Trans-latus ಎಂಬ ಲ್ಯಾಟಿನ್ ಪದದಿಂದ Translation ಎಂಬ ಇಂಗ್ಲಿಷ್ ಪದ ಬಂದಿದೆ. Trans-latus ಎಂದರೆ carry across ಅಥವಾ ಸ್ಥಳಾಂತರಿಸು, ಬದಲಾಯಿಸು, ಮತ್ತೊಂದು ಕಡೆಗೆ ಸಾಗಿಸು, ಎನ್ನುವ ಅರ್ಥಚ್ಛಾಯೆಗಳಿರುವಂತೆ ತೋರುತ್ತದೆ. ಇಂಗ್ಲಿಷಿನ Translate ಎಂಬುದಕ್ಕೆ ಘನವಸ್ತುವನ್ನು ಸಾಗಿಸು, ಮನುಷ್ಯನನ್ನು ವರ್ಗಾಯಿಸು, ಸ್ವರ್ಗಕ್ಕಾಗಲಿ ಮತ್ತೊಂದೆಡೆಗಾಗಲಿ ಬದಲಾಯಿಸು, ರೂಪಾಂತರಿಸು, ಮಾರ್ಪಡಿಸು, ವ್ಯಾಖ್ಯಾನಿಸು ಇತ್ಯಾದಿ ಅರ್ಥಗಳಿವೆ.

ಒಟ್ಟಿನಲ್ಲಿ ಇದೊಂದು ಗಡಿ ದಾಟಿಸುವ ಕಲೆಗಾರಿಕೆ ; ಗಡಿ ದಾಟಿಸಿ, ಬೇರೆಡೆಯಲ್ಲಿ ಸಲ್ಲುವಂತೆ ಮಾಡುವ ಕೆಲಸ.

‡ ಕವಿ ರವೀಂದ್ರರ ಬಂಗಾಳಿ ಭಾಷೆಯ 'ಗೀತಾಂಜಲಿ' ಇಂಗ್ಲಿಷಿಗೆ ಅನುವಾದವಾಗದೆ ಹೋಗಿದ್ದರೆ, ನಮ್ಮ ದೇಶಕ್ಕೆ ನೋಬಲ್ ಬಹುಮಾನದಂಥ ಗೌರವ ತಪ್ಪಿಹೋಗುತ್ತಿತ್ತು ಎಂಬುದನ್ನು ಇಲ್ಲಿ ನೆನೆಯಬಹುದು.

(3) ಒಂದು ಭಾಷಾಸಾಹಿತ್ಯ ಕೇವಲ ಒಂದು ಸಂಪ್ರದಾಯವಾದಾಗ, ಎಂದರೆ, ಸಿದ್ಧ ಮಾದರಿಗಳಲ್ಲಿ ಕಾವ್ಯ ರಚನೆ ಕಟ್ಟುಗೊಂಡಾಗ, ಮತ್ತು ಆಲೋಚನಾ ಕ್ರಮವೇ ಸ್ಥಗಿತಗೊಂಡಾಗ, ಚಲನಶೀಲತೆಯನ್ನು ತರಲು ಅನ್ಯಪ್ರೇರಣೆಗಳನ್ನು ಬರಮಾಡಿಕೊಳ್ಳುವ ಸಂದರ್ಭದಲ್ಲಿ, ಅನುವಾದವೆಂಬುದು, ನೂತನ ಪ್ರಯೋಗಗಳಿಗೆ ಕಾರಣವಾಗಬಲ್ಲದು.

(4) ಮತ್ತು ಕೆಲವು ವಿಶಿಷ್ಟ ಸಾಹಿತ್ಯ ಪ್ರಕಾರಗಳ ತೌಲನಿಕ ಅಧ್ಯಯನವನ್ನು ಕೈಕೊಳ್ಳುವಾಗಲಂತೂ, ಅನುವಾದಗಳನ್ನೇ ನಾವು ಅವಲಂಬಿಸಬೇಕಾಗುತ್ತದೆ.

ಹೀಗೆ ಭಾಷಾಂತರವಾಗುವ ಬರೆಹಗಳನ್ನು, ವಿಷಯಾನುಸಾರಿಯಾಗಿ ಮೂರೆಂದು ವಿಂಗಡಿಸಬಹುದು :

1. ವೈಜ್ಞಾನಿಕ
2. ಮಾನವಿಕ
3. ಸಾಹಿತ್ಯಕ

ಮೊದಲನೆಯದಾದ ವೈಜ್ಞಾನಿಕ ಬರೆಹದ ಮುಖ್ಯ ಲಕ್ಷಣ ಅದು ಖಚಿತಾರ್ಥನಿಷ್ಠವಾದ, ಪಾರಿಭಾಷಿಕ ಪದಗಳ ಒಂದು ರಚನೆಯಾಗಿರುತ್ತದೆ—ಎನ್ನುವುದು. ಇಂಥದನ್ನು ಉದ್ದೇಶಿತ ಭಾಷೆಯೊಂದಕ್ಕೆ ಅನುವಾದಮಾಡುವಾಗ, ಆಯಾ ಪಾರಿಭಾಷಿಕ ಪದಗಳಿಗೆ, ಅದೇ ಅರ್ಥವನ್ನು ಕೊಡುವ ಸಂವಾದಿ ಪಾರಿಭಾಷಿಕ ಪದಗಳನ್ನು ಟಂಕಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ, ಒಂದು ಭಾಷೆಯಲ್ಲಿ ಹಾಗೆ ರೂಪಿಸುವ ಪಾರಿಭಾಷಿಕ ಪದಗಳಲ್ಲಿ ಏಕರೂಪತೆ ಇರುವಂತೆ ನೋಡಿಕೊಳ್ಳಬೇಕಾಗುತ್ತದೆ. ಹಾಗಲ್ಲದೆ, ಅನ್ಯಭಾಷೆಯ ಪಾರಿಭಾಷಿಕ ಪದವೊಂದಕ್ಕೆ, ಅನುವಾದಿತ ಭಾಷೆಯ ವಿವಿಧ ಪರಿಸರಗಳಲ್ಲಿ ಬೇರೆ ಬೇರೆಯ ಪಾರಿಭಾಷಿಕ ಪದಗಳನ್ನು ಮಾಡಿಕೊಳ್ಳುವುದು ವಿಚಾರದ ಗೊಂದಲಕ್ಕೆ ಕಾರಣವಾಗುತ್ತದೆ. ಅದರ ಬದಲು, ಮೂಲದ ಪಾರಿಭಾಷಿಕ ಪದವನ್ನು ಯಥಾವತ್ತಾಗಿ ಅಳವಡಿಸಿಕೊಂಡು ಬಳಸುವುದು, ಒಂದು ಪಾರಿಭಾಷಿಕ ಪದಕ್ಕೆ, ಹಲವು ಬಗೆಯ ಅನುವಾದಿತ ಪದಗಳನ್ನಿರಿಸಿಕೊಳ್ಳುವುದಕ್ಕಿಂತ ಹೆಚ್ಚು ಸುರಕ್ಷಿತವಾದ ಮಾರ್ಗವೆಂದು ತೋರುತ್ತದೆ. ಎರಡನೆಯದಾಗಿ, ಅನ್ಯಭಾಷೆಯ ಪಾರಿಭಾಷಿಕ ಪದಕ್ಕೆ, ಸಮರ್ಥವಾದ ಸಂವಾದಿ ಪದಗಳು ನಮ್ಮ ಪರಂಪರೆಯಲ್ಲೇ ಪ್ರಚಲಿತವಾಗಿದ್ದಲ್ಲಿ ಅಂಥದನ್ನು ಬಳಕೆಗೆ ತರುವುದು ಒಳ್ಳೆಯದು—ನಿದರ್ಶನಕ್ಕೆ Aeroplane ಎಂಬುದಕ್ಕೆ 'ವಿಮಾನ' ಎಂಬುದನ್ನೂ, Satellite ಎಂಬುದಕ್ಕೆ 'ಉಪಗ್ರಹ' ಎಂಬುದನ್ನೂ ಬಳಸುವಂತೆ. ಮೂರನೆಯದಾಗಿ, ಅನ್ಯಭಾಷೆಯ ಪಾರಿಭಾಷಿಕ ಪದಗಳನ್ನು, ಅನುವಾದ ಮಾಡದೆ ಯಥಾವತ್ತಾಗಿ ಬಳಸುವುದು ಇನ್ನೊಂದು ದಾರಿ. ಭಾಷಾ ಶಾಸ್ತ್ರದಲ್ಲಿ ಇವುಗಳನ್ನು ಸ್ವೀಕರಣವೆಂದು ಕರೆಯುತ್ತಾರೆ. ನಾಲ್ಕ

ನೇರವಾಗಿ, ಅತಿಯಾದ ಸ್ವಭಾಷಾಭಿಮಾನದಿಂದ, ಅನ್ಯಭಾಷೆಯ ಪದಗಳಿಗೆ, ವಿಲಕ್ಷಣವಾದ ಸಂವಾದಿ ಪದಗಳನ್ನು ಉದ್ದೇಶಿತ ಭಾಷೆಯಲ್ಲಿ ಮಾಡಿಕೊಳ್ಳುವ ಒಂದು ಅಭ್ಯಾಸವೂ ನಮ್ಮಲ್ಲಿ ಬೆಳೆದಿದೆ. ಅಂಥ ಪದಗಳು, ನಮ್ಮ ಪರಿಸರದ ಸರಳ-ಸಾಧಾರಣ ವಾಚಕವರ್ಗಕ್ಕೂ ಕಕ್ಕಾವಿಕ್ಕಿಯನ್ನುಂಟುಮಾಡುತ್ತದೆ. ಒಟ್ಟಿನಲ್ಲಿ ಅನುವಾದಕರು ಗಮನಿಸಬೇಕಾದ ಅಂಶವೆಂದರೆ, ಯಾವ ಯಾವ ಪದಗಳನ್ನು ಅನುವಾದ ಮಾಡಬಹುದು, ಅನುವಾದ ಮಾಡಬಾರದು; ಮಾಡಿದರೂ ಹೇಗೆ ಮಾಡಬೇಕು, ಹೇಗೆ ಮಾಡಬಾರದು—ಎಂಬುದು. ಅನುವಾದದ ಮೂಲ ಸೂತ್ರವೆಂದರೆ, ತಾವು ಮಾಡಿದ ಅನುವಾದ, ತಮ್ಮ ಭಾಷೆಯ ಜನರಿಂದ ಒಪ್ಪಿಗೆಯಾಗುತ್ತದೆಯೆ; ಹಾಗೂ ತಮ್ಮ ಭಾಷೆಯ ಜಾಯಮಾನಕ್ಕೆ ಸಲ್ಲುತ್ತದೆಯೆ—ಎನ್ನುವುದು. ಹಾಗೆ ಒಪ್ಪಿಗೆಯಾಗದೆ ಹೋದರೆ, ಸಲ್ಲದೆ ಹೋದರೆ ಅನುವಾದ ವ್ಯರ್ಥವೆಂದೇ ಹೇಳಬೇಕು.

ಮಾನವಿಕ ಸಾಹಿತ್ಯದ ಅನುವಾದದಲ್ಲಿ ಪಾರಿಭಾಷಿಕ ಪದಗಳ ಸಮಸ್ಯೆ ಎದುರಾದರೂ, ಇಲ್ಲಿನ ಕಷ್ಟ ವೈಜ್ಞಾನಿಕ ಸಾಹಿತ್ಯದ ಪಾರಿಭಾಷಿಕ ಪದಗಳ ಅನುವಾದಕ್ಕಿಂತ ಕಡಮೆಯದೆಂದೆ ಹೇಳಬಹುದು. ಇಲ್ಲಿಯೂ ಒಂದು ಭಾಷೆಯಲ್ಲಿನ ಪದಗಳ ಅರ್ಥದ ಪದರಗಳನ್ನು ಬಿಚ್ಚುವಂಥ, ಉದ್ದೇಶಿತ ಭಾಷೆಯ ಪದಗಳಲ್ಲಿ ಸಮರ್ಪಕವಾಗಿ ಹಿಡಿದಿಡುವುದು ಸುಲಭವಾದದ್ದಲ್ಲ—ನಾವು ಎಷ್ಟೇ ಸಂವಾದಿ ಪದಗಳನ್ನು ನಿರ್ಮಾಣ ಮಾಡಿಕೊಂಡರೂ. ಉದಾಹರಣೆಗೆ, ಬ್ರಹ್ಮ, ಆತ್ಮ, ಶೂನ್ಯ, ರಸ–ಇಂಥ ಪದಗಳು ಬೇರೆ ಯಾವುದೇ ಭಾಷೆಗೆ ಅನುವಾದವಾಗುವುದು ಸಾಧ್ಯವಿಲ್ಲ. ಆದುದರಿಂದ ಅಂಥ ಪದಗಳನ್ನು ಉದ್ದೇಶಿತ ಭಾಷೆಯ ಅನುವಾದಗಳಲ್ಲಿ ಹಾಗೆಯೇ ಬಳಸಬೇಕಾಗುತ್ತದೆ.

ಇನ್ನು ಸಾಹಿತ್ಯಕವಾದದ್ದರ ಅನುವಾದವಂತೂ ಅನುವಾದಕರಿಗೆ ಅನೇಕ ಸಮಸ್ಯೆ ಹಾಗೂ ಸವಾಲುಗಳನ್ನು ಒಡ್ಡುತ್ತದೆ. ಮೊದಲೆರಡು ಪ್ರಕಾರಗಳ ಅನುವಾದಕನಿಗಿಂತ, ಸೃಜನ ಸಾಹಿತ್ಯದ ಅನುವಾದಕನಿಗೆ ವಿಶೇಷವಾದ ಯೋಗ್ಯತೆ ಹಾಗೂ ಸಿದ್ಧತೆಗಳು ಅಗತ್ಯ. ಇಲ್ಲಿನ ಸಾಹಿತ್ಯ ಪ್ರಕಾರ ಗದ್ಯವಾಗಿರಬಹುದು, ಪದ್ಯವಾಗಿರಬಹುದು, ನಾಟಕವಾಗಿರಬಹುದು. ಹಾಗಿದ್ದಾಗ, ಅವುಗಳನ್ನು ಆಯಾ ಸಾಹಿತ್ಯ ಪ್ರಕಾರಗಳಿಗೇ ಅನುವಾದ ಮಾಡಬೇಕಾಗುತ್ತದೆ. ಅಂದರೆ, ಗದ್ಯವನ್ನು ಗದ್ಯಕ್ಕೆ, ಪದ್ಯವನ್ನು ಪದ್ಯಕ್ಕೆ, ನಾಟಕವನ್ನು ನಾಟಕಕ್ಕೆ ಅನುವಾದ ಮಾಡಬೇಕು.

ಆದರೆ ಕೆಲವು ವೇಳೆ ಪದ್ಯವನ್ನು ಗದ್ಯಕ್ಕೆ, ಗದ್ಯವನ್ನು ಪದ್ಯಕ್ಕೆ ಅನುವಾದ ಮಾಡಿರುವುದೂ ಉಂಟು. ಪದ್ಯವನ್ನು ಗದ್ಯರೂಪಕ್ಕೆ ಅನುವಾದಿಸುವುದಕ್ಕಿಂತ, ಪದ್ಯವನ್ನು ಪದ್ಯರೂಪದಲ್ಲೇ ಅನುವಾದ ಮಾಡುವುದು, - ಅದು ಎಷ್ಟೇ ಕಷ್ಟವಾದರೂ -ಸರಿಯಾದದ್ದು. ಗದ್ಯವನ್ನು ಗದ್ಯಕ್ಕೆ ಅನುವಾದಮಾಡುವುದು ತೀರಾ

ಸಹಜವಾದುವಾದರೂ, 'ಗದ್ಯಕಾವ್ಯ'ವನ್ನು 'ಪದ್ಯಕಾವ್ಯ'ವನ್ನಾಗಿ ಮಾಡುವುದು ತಪ್ಪೇನಲ್ಲ. ನಾಗವರ್ಮನ 'ಕರ್ನಾಟಕ ಕಾದಂಬರಿ' ಸಂಸ್ಕೃತ ಗದ್ಯಕಾವ್ಯದ ಪದ್ಯಾನುವಾದವಾಗಿದೆ. ಹಾಗೆ ನೋಡಿದರೆ, ಮೂಲದ, ಬಾಣನ ಕಾದಂಬರೀ ಮಹಾಕಾವ್ಯ, 'ರೂಪ'ದಲ್ಲಿ ಗದ್ಯವಾದರೂ, ಅದು ಸತ್ವದಲ್ಲಿ ಕಾವ್ಯವೇ. ವಾಸ್ತವವಾಗಿ, ಅದರ ಭಾಷೆಯನ್ನು 'ಗದ್ಯ' ವೆಂದು ಕರೆಯುವುದು ಔಪಚಾರಿಕ ಮಾತ್ರ. ಗದ್ಯವನ್ನು, ಗದ್ಯವನ್ನಾಗಿ ಅನುವಾದ ಮಾಡಿದಾಗ ಅದು ಮೂಲಕ್ಕೆ ಹೆಚ್ಚು ಸಮೀಪವೂ, ಮೂಲಾನುಭವವನ್ನು ಸಮರ್ಪಕವಾಗಿ ಹಿಡಿದಿಡಲು ತಕ್ಕದೂ ಆಗುವುದೆಂಬುದರಲ್ಲಿ ಸಂದೇಹವಿಲ್ಲ. ಪದ್ಯವನ್ನು ಗದ್ಯರೂಪದಲ್ಲಿ ಅನುವಾದ ಮಾಡಿದಾಗ, ಮೂಲದ ಸೊಗಸನ್ನು ತಕ್ಕಮಟ್ಟಿಗೆ ಉಳಿಸಿಕೊಳ್ಳುವುದು ಸಾಧ್ಯವಾದರೂ, ಪದ್ಯದಲ್ಲಿನ ಭಾವತೀವ್ರತೆ ಅದರ ಗದ್ಯಾನುವಾದಗಳಲ್ಲಿ ತಕ್ಕಮಟ್ಟಿಗೆ ತೆಳ್ಳಗಾಗುವ ಅಪಾಯ ತಪ್ಪಿದ್ದಲ್ಲ. ಆದಕಾರಣ ಪದ್ಯವನ್ನು ಪದ್ಯವನ್ನಾಗಿಯೆ ಅನುವಾದಿಸಬೇಕಾದದ್ದು ಅಪೇಕ್ಷಣೀಯವಷ್ಟೇ ಅಲ್ಲ, ಅಗತ್ಯವಾದದ್ದು ಕೂಡಾ. ಆದರೆ, ಪದ್ಯದ ಪದ್ಯಾನುವಾದ, ಈಗಾಗಲೇ ಹೇಳಿದಂತೆ, ವಿಶೇಷವಾದ ಸಿದ್ಧತೆ ಹಾಗೂ ಸಾಮರ್ಥ್ಯಗಳನ್ನು ಅಪೇಕ್ಷಿಸುತ್ತದೆ.

ಸೃಜನಸಾಹಿತ್ಯದ ಅನುವಾದದಲ್ಲಿ ಮುಖ್ಯವಾಗಿ ಎರಡು ವಿಧಗಳನ್ನು ಗುರುತಿಸಬಹುದು.

ಮೊದಲನೆಯದು, ಒಂದೇ ಭಾಷಾವರ್ಗಕ್ಕೆ ಸೇರಿದ ಅಥವಾ ಒಂದು ದೇಶದ ವಿವಿಧ ಭಾಷೆಗಳಿಗೆಲ್ಲ ಮೂಲವಿರಬಹುದೆಂಬಂತಹ ಭಾಷೆಯಿಂದ, ಉದ್ದೇಶಿತ ಭಾಷೆಗೆ ಮಾಡುವ ಅನುವಾದ.

ಎರಡನೆಯದು, ಸಾಂಸ್ಕೃತಿಕವಾಗಿಯೂ ಸಂಪೂರ್ಣ ಭಿನ್ನವಾದ ಭಾಷೆ ಅಥವಾ ಭಾಷೆಗಳಿಂದ ಉದ್ದೇಶಿತ ಭಾಷೆಗೆ ಮಾಡುವ ಅನುವಾದ.

ನಿದರ್ಶನಕ್ಕೆ, ಸಂಸ್ಕೃತದಿಂದ ಕನ್ನಡಕ್ಕೆ ಮಾಡುವಾಗ, ಅಥವಾ ಇತರ ದ್ರಾವಿಡ ಭಾಷೆಗಳಿಂದ ಕನ್ನಡಕ್ಕೆ ಮಾಡುವಾಗ, ಬಹುಮಟ್ಟಿಗೆ ಒಂದೇ ಸಾಂಸ್ಕೃತಿಕ ಪರಿಸರದ ಒಳಗೇ ಕೈಕೊಳ್ಳುವ ಅನುವಾದಗಳಲ್ಲಿ ಹೆಚ್ಚು ಸಹಜತೆ ಇರುವಂತೆ, ಅನುವಾದಿಸುವುದು ಸಾಧ್ಯ. ಆದರೆ ಭಾರತೀಯೇತರ ಭಾಷೆಗಳಿಂದ, ಯಾವುದೇ ಭಾರತೀಯ ಭಾಷೆಗೆ ಮಾಡಿಕೊಳ್ಳುವ ಅನುವಾದ, ಅನೇಕ ಬಗೆಯ ತೊಡಕುಗಳನ್ನು ಅನುವಾದಕರಿಗೆ ಒಡ್ಡುತ್ತವೆ.* ಈ ಹಂತದಲ್ಲಿರುವ ತೊಡಕು ಕೇವಲ ಭಾಷೆಗೆ ಸಂಬಂಧಿಸಿದ್ದಲ್ಲ.

*ಕನ್ನಡಕ್ಕೆ ಅನುವಾದವಾಗಿರುವ ಎಷ್ಟೋ ಪಾಶ್ಚಾತ್ಯ ಕೃತಿಗಳು ಇಂಗ್ಲಿಷ್ ಭಾಷೆಯಿಂದ ಅನುವಾದಿಸಿದವುಗಳಾಗಿವೆ. ಇಂಗ್ಲಿಷ್‌ಭಾಷೆಯ ಕೃತಿಗಳನ್ನು ಮಾತ್ರ ಕುರಿತದ್ದಲ್ಲ ಈ ಮಾತು. ಇಂಗ್ಲಿಷೇತರ ಪಾಶ್ಚಾತ್ಯ ಭಾಷೆಯ ಕೃತಿಗಳೂ ಸಹ,

ಆ ಭಾಷೆಯು ರೂಪುತಾಳಿದ ಸಾಂಸ್ಕೃತಿಕ ಪರಿಸರಕ್ಕೆ ಸಂಬಂಧಪಟ್ಟದ್ದು. ಕನ್ನಡಕ್ಕೆ ತಮಿಳಿನಿಂದ, ತೆಲುಗಿನಿಂದ, ಮಲೆಯಾಳದಿಂದ, ಕಡೆಗೆ ಹಿಂದಿ, ಬಂಗಾಳಿಗಳಿಂದ ಅನುವಾದ ಮಾಡುವಾಗ, ಈ ಅನುವಾದವಾಗುವ ಕೃತಿಗಳು ಒಂದೇ ದೇಶದ, ಬಹುಮಟ್ಟಿಗೆ ಅಪರಿಚಿತವಲ್ಲದ ಪರಿಸರದಲ್ಲೇ ಸಂಭವಿಸುವುದರಿಂದ, ಆಯಾ ಕೃತಿಗಳ ಮೂಲಕ ಅಭಿವ್ಯಕ್ತವಾಗುವ ಪ್ರಾದೇಶಿಕ ಸಾಂಸ್ಕೃತಿಕ ವಿವರಗಳಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಮತ್ತು ವೈವಿಧ್ಯತೆಗಳಿದ್ದರೂ, ಅನುವಾದಿತ ಕೃತಿಗಳು, ಅನುವಾದಿತವಾದಭಾಷಾಪರಿಸರದವರಿಗೆ ಅಷ್ಟೇನೂ ಅಸಂಗತವೆಂಬಂತೆ ತೋರುವುದಿಲ್ಲ. ಆದರೆ, ಭಾರತೀಯೇತರ ಭಾಷೆಯ ಕೃತಿಗಳ ಅನುವಾದದಲ್ಲಿ ಮಾತ್ರ, ಅನುವಾದಕನಾದವನು ಬೇರೊಂದು ಸಾಂಸ್ಕೃತಿಕ ಪರಿಸರದ ಅನುಭವಗಳನ್ನು, ತನ್ನ ಸಾಂಸ್ಕೃತಿಕ ಮಾಧ್ಯಮವಾದ ಭಾಷೆಗೆ ತರುವುದು ಅಥವಾ ಹಿಡಿದಿಡುವುದು ಕಷ್ಟದ ಕೆಲಸವೇ. ಯಾಕೆಂದರೆ ಒಂದೊಂದು ಸಾಂಸ್ಕೃತಿಕ ಪರಿಸರದ ಭಾಷೆಯ ನುಡಿಗಟ್ಟು ಮತ್ತು ಆಯಾ ಸಾಂಸ್ಕೃತಿಕ ವಿವರಗಳಿಗೆ ಒಡ್ಡಿಕೊಂಡ ಭಾಷಿಕ ರಚನಾಕ್ರಮವೂ, ಒಟ್ಟಿನಲ್ಲಿ ಭಾಷೆಯ ಜಾಯಮಾನವೇ ಬೇರೆಯ ರೀತಿಯಲ್ಲಿರುತ್ತದೆ. ಅಂಥ ಸಂದರ್ಭದಲ್ಲಿ, ಉದ್ದೇಶಿತ ಭಾಷೆಯ ಪರಿಸರಕ್ಕೆ, ಅದನ್ನು ಭಾಷಾಂತರದ ಮೂಲಕ ತರುವಾಗ, ಅನುವಾದಕ ತೀರಾ ಎಚ್ಚರ ವಹಿಸಬೇಕಾಗುತ್ತದೆ.

* * * * *

ಕಾವ್ಯದ ಅನುವಾದ, ಗದ್ಯದ ಅನುವಾದಕ್ಕಿಂತ ಹೆಚ್ಚು ಸಿದ್ಧತೆ ಹಾಗೂ ಸಾಮರ್ಥ್ಯಗಳನ್ನು ಅಪೇಕ್ಷಿಸುತ್ತದೆ ಎಂದು ಈಗಾಗಲೇ ಹೇಳಿದ್ದೇವೆ. ಯಾಕೆಂದರೆ ಕಾವ್ಯ ಮೂಲತಹ ಭಾವತೀವ್ರತೆಯ ಅಭಿವ್ಯಕ್ತಿ. ಭಾವಗಳನ್ನು ಹರಳುಗೊಳಿಸುವ ಕೆಲಸ ನಿಜವಾದ ಕಾವ್ಯದಲ್ಲಿ ನಡೆದಿರುತ್ತದೆ. ಒಂದು ಭಾಷೆಯ ನಿಶ್ಚಿತವಾದ ಛಂದೋರೂಪದಲ್ಲಿ ಹೀಗೆ ಹರಳುಗೊಂಡ ಭಾವತೀವ್ರತೆಯನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತರಬೇಕಾದರೆ ಅನುವಾದಕನೂ ಸ್ವತಹ ಕವಿಯಾಗಿದ್ದರೆ, ಅಥವಾ ಕವಿ ಹೃದಯವುಳ್ಳವನಾಗಿದ್ದರೆ, ಅಂಥ ಅನುವಾದ ಸಾಕಷ್ಟು ಸಫಲವಾಗುತ್ತದೆ. ಮೂಲದ ಕಾವ್ಯಾನುಭವದ ಒಳಹೊಕ್ಕು, ಆ ತೀವ್ರಾನುಭವವನ್ನು ಪುನರನುಭವಿಸಿ, ತಕ್ಕ ಪದಗಳಲ್ಲಿ ಪುನರ್ಭವಗೊಳಿಸುವ ಸಾಮರ್ಥ್ಯವಿದ್ದವನ ಅನುವಾದ ಒಂದು ನಿರ್ದಿಷ್ಟಮಟ್ಟದ ತೃಪ್ತಿಯನ್ನು ತರುತ್ತದೆ. ಈ

ನೇರವಾಗಿ ಆಯಾ ಭಾಷೆಗಳಿಂದ, ಕನ್ನಡಕ್ಕೆ ಬಂದವಲ್ಲ ; ಅವುಗಳ ಇಂಗ್ಲಿಷ್ ಅನುವಾದವನ್ನವಲಂಬಿಸಿ ಕನ್ನಡಕ್ಕೆ ಮಾಡಿಕೊಂಡವುಗಳು. ವಾಸ್ತವವಾಗಿ, ಇಂಗ್ಲಿಷೇತರ ಭಾಷಾಸಾಹಿತ್ಯ ಕೃತಿಗಳನ್ನು, ಆಯಾ ಭಾಷೆಗಳನ್ನು ಕಲಿತವರೆ ಅಲ್ಲಿಂದಲೇ ನೇರವಾಗಿ ತಮ್ಮತಮ್ಮ ಭಾಷೆಗಳಿಗೆ ಅನುವಾದಮಾಡಿಕೊಳ್ಳುವುದು ಸರಿಯಾದದ್ದು. ಆದರೆ ಆ ಸಾಮರ್ಥ್ಯವನ್ನು ಪಡೆದವರು ನಮ್ಮಲ್ಲಿ ವಿರಳ.

ಬಗೆಯ ಒಂದು ಪ್ರಯತ್ನ ನಡೆದದ್ದು ಕನ್ನಡ ಕಾವ್ಯದ ಸಂದರ್ಭದಲ್ಲಿ ಆಚಾರ್ಯ ಬಿ. ಎಂ. ಶ್ರೀಯವರ 'ಇಂಗ್ಲಿಷ್ ಗೀತೆಗಳು' ಕೃತಿಯಲ್ಲಿ. ಹೊಸಗನ್ನಡ ಕಾವ್ಯಕ್ಕೆ ಹೊಸ ಹಾದಿಯನ್ನು ತೆರೆದ ಶ್ರೀಯವರ ಈ ಪ್ರಯತ್ನಗಳು, ಕಾವ್ಯಾನುವಾದದ ಸಮಸ್ಯೆ ಮತ್ತು ಸಾಧನೆಗಳನ್ನು ಬಹು ಸೊಗಸಾಗಿ ದಾಖಲಿಸುತ್ತವೆ. ಕಾವ್ಯಾನುವಾದದ ಬಗ್ಗೆ ವಿಚಾರ ಮಾಡುವವರು ಖಂಡಿತವಾಗಿಯೂ ಇವುಗಳನ್ನು ಗಮನಿಸಬೇಕು.

ಪದ್ಯಾನುವಾದಕ್ಕೆ ತೊಡಗುವವರು, ಅಥವಾ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸಲು ಹೊರಡುವವರು ತಾವು ಅನುವಾದ ಮಾಡಲಿರುವ ಕೃತಿಯ ಭಾಷೆಯ, ಹಾಗು ಅನುವಾದಿಸಲಿರುವ ಭಾಷೆಯ ಮೇಲೆ ಸಂಪೂರ್ಣ ಪ್ರಭುತ್ವವನ್ನು ಪಡೆದಿರಬೇಕು. ಎರಡನೆಯದಾಗಿ, ಪದ್ಯಾನುವಾದದ ಸಂದರ್ಭದಲ್ಲಿ, ಮೂಲ ಕೃತಿಯ ಛಂದೋರೂಪಕ್ಕೆ ಸದೃಶವಾದ ಹೊಸ ಛಂದೋರೂಪಗಳನ್ನು ಆವಿಷ್ಕಾರ ಮಾಡಿಕೊಳ್ಳಬೇಕು. ಹಾಗೆ ಮಾಡದೆ ಸಿದ್ಧ ಸಂಪ್ರದಾಯದ ಹಳೆಯ ಛಂದೋರೂಪಗಳಲ್ಲಿ, ಹೊಸ ಪ್ರಯೋಗದ ಪರಿಣಾಮಗಳಾದ ಅನ್ಯಭಾಷೆಯ ಪದ್ಯಗಳನ್ನು ಅನುವಾದ ಮಾಡತೊಡಗಿದರೆ, ಅವು ಒಂದು ರೀತಿಯಲ್ಲಿ ವಿಲಕ್ಷಣವಾಗಿ ತೋರುತ್ತವೆ.* ಮೂರನೆಯದಾಗಿ ಯಾವುದೇ ಪದ್ಯಾನುವಾದ ನಮ್ಮ ಸಾಂಸ್ಕೃತಿಕ ಪರಿಸರಕ್ಕೆ ಸಂವಾದಿಯಾಗುವಂತೆ ಹಾಗೂ ಸಂವಾದ ಸಾಧ್ಯವಾಗುವಂತೆ, ಮತ್ತು ಆಸ್ವಾದ್ಯವಾಗುವಂತೆ ಇರಬೇಕು. ಹಾಗಿಲ್ಲದೆ ಹೋದರೆ ಎಂಥ ಒಳ್ಳೆಯ ಅನುವಾದವೂ ತೀರಾ ಪರಕೀಯವಾಗಿ, ತಟಸ್ಥವಾಗಿ ನಿಂತು ಬಿಡುತ್ತದೆ. ಆದುದರಿಂದ ಪದ್ಯಾನುವಾದದಲ್ಲಿ ಆಚಾರ್ಯ ಶ್ರೀಯವರ 'ಇಂಗ್ಲಿಷ್ ಗೀತೆಗಳು' ಕೃತಿಯನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ, ಅನುವಾದಕ ಮೂರು ರೀತಿಗಳನ್ನು ಅನುಸರಿಸಬಹುದೆಂದು ತೋರುತ್ತದೆ. ಮೊದಲನೆಯದಾಗಿ, ಅನುವಾದ ಮಾಡುವ ಭಾಷೆಯ ಪದ್ಯಗಳೊಳಗಿನ ಪರಿಸರ– ಹೆಸರುಗಳು, ಪ್ರದೇಶ, ನಡವಳಿಕೆಗಳು– ಒಂದಷ್ಟು ಅಪರಿಚಿತವೆಂಬಂತೆ ತೋರಿದರೂ, ಸಾಧ್ಯವಾದಷ್ಟು ಸಲ್ಲುವ ಗುಣವುಳ್ಳ ವಸ್ತುಗಳನ್ನೇ ಆರಿಸಿಕೊಳ್ಳುವುದು:

---

* ಹೊಸಗನ್ನಡದ ಆರಂಭ ಕಾಲದ ಎಷ್ಟೋ ಅನುವಾದಗಳು ಈ ಮಾತಿಗೆ ನಿದರ್ಶನವಾಗಿದೆ. ಹಟ್ಟಿಯಂಗಡಿ ನಾರಾಯಣರಾಯರು, ಎಸ್. ಜಿ. ನರಸಿಂಹಾಚಾರ್ಯರು ಮೊದಲಾದವರ ಅನುವಾದಗಳನ್ನು, 'ಶ್ರೀ'ಯವರ ಅನುವಾದಗಳೊಂದಿಗೆ ಹೋಲಿಸಿ ನೋಡಿದರೆ ಈ ಮಾತು ಇನ್ನೂ ಸ್ಪಷ್ಟವಾಗುತ್ತದೆ. ಇನ್ನೂ, ಕಂದ, ವೃತ್ತ, ಷಟ್ಪದಿ, ಸಾಂಗತ್ಯಗಳಲ್ಲೇ ಪಾಶ್ಚಾತ್ಯ ಕವಿಗಳ ಅನುವಾದಗಳನ್ನು ಕೈಗೊಳ್ಳುತ್ತಿದ್ದ ಹಲವರ ಪ್ರಯತ್ನಗಳ ನಡುವೆ, ಶ್ರೀಯವರು ಹಳೆಯ ಛಂದೋ ರೂಪಗಳಿಂದಲೇ ಹೊಸ ರೂಪಗಳನ್ನು ಆವಿಷ್ಕಾರ ಮಾಡಿಕೊಂಡದ್ದು ಮಹತ್ವದ ಸಂಗತಿಯಾಗಿದೆ.

ಉದಾಹರಣೆಗೆ ‘ಸರ್ ಜಾನ್ ಮೂರ್‌ನ್ನು ಹೂಳಿದ್ದು’ (ಪು. 19); ‘ರಾಯಲ್ ಜಾರ್ಜ್ ಮುಳುಗಿಹೋದದ್ದು’ (ಪು. 24); ‘ನನ್ನ ಮೇರಿ’ (ಪು. 84) ಇಂಥ ಪದ್ಯಗಳು. ಎರಡನೆಯದಾಗಿ, ಅನುವಾದ ಮಾಡಿದವರು, ಬಳಸುವ ಪರಿಸರಗಳಲ್ಲಿ ಅಂತಹ ವ್ಯತ್ಯಾಸಗಳೇನೂ ತೋರದಂತಹ ವಸ್ತುವನ್ನುಳ್ಳ ಪದ್ಯಗಳನ್ನು ಆರಿಸಿಕೊಳ್ಳುವುದು: ಉದಾಹರಣೆಗೆ, ‘ಬಾನಾಡಿ’ (ಪು. 11); ‘ರಾವುಕತರ ದಾಳಿ’ (ಪು. 21) ‘ಮುದ್ದಿನ ಕುರಿಮರಿ’ (ಪು. 8); ‘ಪ್ರಾರ್ಥನೆ’ (ಪು. 97); ‘ಕವಿಶಿಷ್ಯ’ (ಪು. 93) ಇಂಥ ಪದ್ಯಗಳು. ಮೂರನೆಯದಾಗಿ, ಅನುವಾದ ಮಾಡುವಾಗ ಮೂಲದ ಸಾಂಸ್ಕೃತಿಕ ಸತ್ವವನ್ನು ಮಾತ್ರ ಗ್ರಹಿಸಿ, ಅದನ್ನು ನಮ್ಮ ಪರಿಸರದ ಸಾಂಸ್ಕೃತಿಕ ಪರಿಸರಕ್ಕೆ ಅಳವಡಿಸು (adopt)ವುದು, ಅಥವಾ ಎರಕ ಹೊಯ್ಯುವುದು. ಹೀಗೆ ಸಿದ್ಧವಾದ ಈ ‘ರೂಪ’, ಮೂಲದ ಆ ‘ರೂಪ’ ದಿಂದಲೇ ಸಂಭವಿಸಿದ್ದು ಎನ್ನುವುದನ್ನು ಖಚಿತಪಡಿಸುತ್ತದೆ. ಉದಾಹರಣೆಗೆ ‘ಮುದಿಯ ರಾಮಗೌಡ’ (ಪು. 52); ‘ಮಾದ ಮಾದಿ’ (ಪು. 37); ‘ಬಿಂಕದ ಸಿಂಗಾರಿ’ (ಪು. 49); ‘ದುಃಖಿಸೇತು’ (ಪು. 61); ‘ಕಾರಿ ಹೆಗ್ಗಡೆಯ ಮಗಳು’ (ಪು. 66); ‘ಚೋಳ ಕನ್ನೆಯರು’ (ಪು. 69) ಈ ಪದ್ಯಗಳನ್ನು ಗಮನಿಸಬಹುದು.

ಶ್ರೀಯವರು, ಪದ್ಯಾನುವಾದದ ಈ ಪ್ರಯತ್ನಗಳನ್ನು ಮಾಡುವ ವೇಳೆಗೆ ಕನ್ನಡ ಕಾವ್ಯ ನಿಂತ ನೀರಾಗಿತ್ತು.[1] ಕನ್ನಡ ಕಾವ್ಯಕ್ಕೆ, ಪಾಶ್ಚಾತ್ಯ ಕಾವ್ಯ-ನಾಟಕಾದಿಗಳ ಅನುವಾದಗಳ ಮೂಲಕ, ಹೊಸ ಪ್ರೇರಣೆಗಳನ್ನು ಬರಮಾಡಿಕೊಳ್ಳುವ ಆಸೆ ಹಾಗೂ ಪ್ರಯತ್ನಗಳು ಕಾಣಿಸಿಕೊಳ್ಳತೊಡಗಿದ್ದವು.[2] ಈ ಸಂದರ್ಭದಲ್ಲಿ ಇಂಗ್ಲಿಷ್ ಹಾಗೂ ಕನ್ನಡವೆರಡರಲ್ಲೂ ಅಸಾಧಾರಣ ಪ್ರಭುತ್ವವನ್ನು ಪಡೆದ ಶ್ರೀಯವರು, ತಮ್ಮ ಇಂಗ್ಲಿಷ್ ಗೀತಗಳು ಕೃತಿಯನ್ನು ಪ್ರಕಟಿಸಿ ಕನ್ನಡಕ್ಕೆ ಹೊಸ ಹಾದಿಯನ್ನು ತೆರೆದರು. ಆದರೆ, ಶ್ರೀಯವರ ಈ ಪ್ರಯತ್ನ ಹಾಗೂ ಪ್ರಯೋಗ

---

1 ‘ಇಂಗ್ಲಿಷ್ ಗೀತೆಗಳು’ ಕೃತಿಯ 1953ನೆ ಇಸವಿಯ ಮುದ್ರಣಕ್ಕೆ ತೀ. ನಂ.ಶ್ರೀಯವರು ಬರೆದಿರುವ ವಿಸ್ತಾರವಾದ ಪ್ರಸ್ತಾವನೆಯನ್ನು, ಆಸಕ್ತಿಯುಳ್ಳವರು ಗಮನಿಸಬಹುದು.

2 ‘ಎಲ್ಲಿರುವುದಭಿಮಾನ ಕನ್ನಡಿಗರೇ ಪೇಳಿ
ಸುಳ್ಳೆ ಬಡಬಡಿಸುವಿರಿ ಸಭೆಗಳಲ್ಲಿ ॥ಪ॥
ಗುರುಪರಿಶ್ರಮದಿನಾಂಗ್ಲೇಯಭಾಷೆಯ ಕಲಿತು
ಧರಿಸಿ ಪದವಿಗಳನುಪಜೀವಿಸುವಿರೇ
ಹೊರತು, ತದ್ಭಾಷೆಯುದ್ಗ್ರಂಥಗಳ ಕನ್ನಡದಿ
ಪರಿವರ್ತನಂಗೊಳಿಸಲಿಲ್ಲವಲ್ಲಾ ?

—ಶಾಂತ ಕವಿಗಳು, ಏಪ್ರಿಲ್ 1918ರ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಪ್ರಕಟಿಸಿದ ಕವನ !

ಗಳನ್ನು, ನಾನು ಕೇವಲ ಅನುವಾದಗಳೆಂದು ಮಾತ್ರ ಪರಿಗಣಿಸುತ್ತ, ಶ್ರೀಯವರೊಬ್ಬರು ಅನುವಾದಕರೆಂದು ಹೇಳಲು ಇಷ್ಟಪಡುವುದಿಲ್ಲ. ಕೆಲವರ ಪಾಲಿಗಂತೂ 'ಇಂಗ್ಲಿಷ್ ಗೀತಗಳು' ಕೇವಲ ಅನುವಾದಗಳು; ಶ್ರೀಯವರು ಅನುವಾದಕರು. ಹೀಗೆ ಭಾವಿಸಿದ್ದರಿಂದಲೇ, ಶ್ರೀಯವರು ಅನುವಾದಕ್ಕೆ ಸರಿಯಾದ ಪದ್ಯಗಳನ್ನು ಆರಿಸಿಕೊಳ್ಳಲಿಲ್ಲವೆಂದೂ, ಅವರ ಅಭಿರುಚಿಯೇ ಈ ಕಾರಣದಿಂದ ಸರಿಯಾದುದಲ್ಲವೆಂದೂ, ಮತ್ತು ಅವರ ಅನುವಾದಗಳೇ ಅಸಮರ್ಪಕವೆಂದೂ—ಕೆಲವರು ಎಚ್ಚರ ತಪ್ಪಿದ ಮಾತುಗಳನ್ನಾಡಿದ್ದಾರೆ. ಆದರೆ ನನ್ನ ದೃಷ್ಟಿಗೆ ಶ್ರೀಯವರು ಮೂಲತಃ ಅನುವಾದಕರಲ್ಲ. ಅವರು ಅನುವಾದಕ್ಕಾಗಿ ಉತ್ತಮ ಕವಿತೆಗಳನ್ನಾರಿಸಿಕೊಂಡು, ತಮ್ಮ ಉತ್ತಮವಾದ ಅಭಿರುಚಿಯನ್ನು, ಉತ್ತಮ ಅನುವಾದಗಳ ಮೂಲಕ ಪ್ರದರ್ಶಿಸಲು ಅಪೇಕ್ಷಿಪಟ್ಟವರಲ್ಲ. ಅವರು ಮೂಲತಃ ಅಗಾಧ ಸೃಜನಶೀಲ ವ್ಯಕ್ತಿತ್ವವುಳ್ಳವರು. ಇದರ ಅಭಿವ್ಯಕ್ತಿಗೆ ಇಂಗ್ಲಿಷ್‌ಗೀತಗಳು, ಒಂದು ನಿಮಿತ್ತ ಮಾತ್ರ. ಅವರಿಗೆ ಪ್ರಧಾನವಾಗಿದ್ದದ್ದು ಇಂಗ್ಲಿಷ್ ಗೀತೆಗಳ ಮೂಲಕ ಒಳ್ಳೆಯ ಅನುವಾದಗಳನ್ನು ಒದಗಿಸಬೇಕೆಂಬುದಲ್ಲ; ಇಂಗ್ಲಿಷ್ ಕಾವ್ಯದಿಂದ ಪಡೆದ ಪ್ರೇರಣೆಯ ಮೂಲಕ, ಕನ್ನಡದಲ್ಲಿ ಹೊಸ ರೂಪಗಳನ್ನು ಆವಿಷ್ಕಾರ ಮಾಡುವ ಪ್ರಯೋಗದ ಹಂಬಲ. ಈ ಪ್ರಯೋಗಕ್ಕೆ ಇಂಗ್ಲಿಷ್ ಕವಿಗಳ ಕಾವ್ಯ ವಸ್ತು, ಕಾವ್ಯ ರೂಪ—ಇವುಗಳು ಪ್ರಮುಖ ಪ್ರೇರಣೆಯಾದದ್ದರಿಂದ, ಇಲ್ಲಿನ ಕವಿತೆಗಳು ಮುಖ್ಯವಾಗಿ ಅನುವಾದ ಮೂಲವಾದ ಪ್ರಯೋಗಗಳು; ಅವುಗಳನ್ನು ಅನುವಾದವೆನ್ನುವುದು ಔಪಚಾರಿಕ. ಅನುವಾದವೆಂದು ಭಾವಿಸಬೇಕೆಂದರೂ ಅವು ಸೃಜನಾತ್ಮಕ ಅನುವಾದಗಳೆನ್ನಬಹುದು. ಈ ಕವಿತೆಗಳು, ಹೊಸಗನ್ನಡ ಕಾವ್ಯಾನುವಾದದ ಸಂದರ್ಭದಲ್ಲಿ ಕಾವ್ಯಾನುವಾದದ ಬಗೆಗೆ ಅನೇಕ ಸಂಗತಿಗಳನ್ನು ಸ್ಪಷ್ಟಪಡಿಸುತ್ತವೆ. ಕಾವ್ಯಾನುವಾದದ ಬಗ್ಗೆ ಅಧ್ಯಯನ ಮಾಡುವವರು, ಇವುಗಳಿಂದ ಕಲಿಯಬೇಕಾದದ್ದು ಬಹಳ ಇದೆ.

ನಿದರ್ಶನಕ್ಕೆ 'ಇಂಗ್ಲಿಷ್ ಗೀತೆಗಳು'ದಿಂದ ಕೆಲವು ಅನುವಾದದ ತುಣುಕುಗಳನ್ನು ಪರಿಶೀಲಿಸಬಹುದು :*

T. Nash ಕವಿಯ Spring ಎಂಬ ಕವಿತೆಯ ಅನುವಾದ 'ವಸಂತ'.

ಇಂಗ್ಲಿಷ್ ಮೂಲ ಹೀಗಿದೆ :

Spring, the sweet Spring, is the
Year's pleasant King ;

---

* ಇಂಗ್ಲಿಷ್ ಗೀತೆಗಳು : ಪ್ರ. ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು ೧೯೨೬.

Then blooms each thing, then maids dance in a ring,
Cold doth not sting, the pretty birds do sing
Cuckoo, Jug-Jug, pu-we, to-witta-woo !

ಇದರ ಅನುವಾದ :

ವಸಂತ ಬಂದ, ಋತುಗಳ ರಾಜ ತಾ ಬಂದ
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ
ಚಳಿಯನು ಕೊಂದ, ಹಕ್ಕಿಗಳುಲಿ ಚಂದ
ಕುವ್ವೂ, ಜಗ್ ಜಗ್ ಪುವ್ವೀ ಟುವಿಟ್ಟವೂ (ಪು. 5)

ಅನುವಾದದ ಹೊಸತನ, ತಟಕ್ಕನೆ ಸೆಳೆಯುವ ಗುಣವಾಗಿದೆ ; ಅಂದಿನ ಕಾಲಕ್ಕೆ ನೆಲೆನಿಂತ ಕಾವ್ಯ ರೂಪಗಳಿಂದ ಇದು ತೀರಾ ಭಿನ್ನವಾಗಿರುವುದೇ ಇದರ ವೈಶಿಷ್ಟ್ಯ.

ಅನುವಾದದಲ್ಲಿ, ವಾಕ್ಯ ವಾಕ್ಯಗಳ ಪದ ಪದಗಳ ಅರ್ಥವನ್ನು ಅನುಸರಿಸದಿದ್ದರೂ ಮುಖ್ಯವಾದ 'ಭಾವ' ವನ್ನು ಶ್ರೀಯುತರು ಹಿಡಿದಿದ್ದಾರೆ. ಅನುವಾದದಲ್ಲಿ 'sweet spring'ನ ಅರ್ಥ ಬಂದಿಲ್ಲ : 'year's pleasant king' ಎಂಬುದಕ್ಕೆ ಋತುಗಳ ರಾಜ ಎಂಬುದಷ್ಟೆ ಸಾಲದು ; maids dance in a ring ಎಂಬುದು ಬರೀ 'ಹೆಣ್ಗಳ ಕುಣಿಸುತ ನಿಂದ'– ಎಂದಾಗಿದೆ; cold doth not sting ಅನ್ನುವುದಂತೂ 'ಚಳಿಯನು ಕೊಂದ' ಎಂದು ಅನುವಾದವಾಗಿ ಮೂಲದಿಂದ ದೂರ ಹೋಗಿದೆ.† ಹಾಗೆ ನೋಡಿದರೆ ಅನುವಾದದಲ್ಲಿ ಮೂಲದ ಎಲ್ಲವನ್ನೂ ತರಲಾಗುವುದಿಲ್ಲ. ಅನುವಾದದಲ್ಲಿ ಮೂಲದಿಂದ ತರುವುದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚೇನೋ ಅನ್ನಿಸುತ್ತದೆ. ಇದು ಅನುವಾದದ ಸಮಸ್ಯೆಯಾಗೂ ಮಿತಿ ಕೂಡಾ. ಆದರೆ, ಮೂಲದ ಪದ್ಯವನ್ನು, ಪದ್ಯರೂಪದಲ್ಲೇ ಅನುವಾದ ಮಾಡುವಾಗ, ಮೂಲದ ಛಂದೋ ರೂಪಕ್ಕೆ ತತ್ ಸದೃಶವಾದ ರೂಪವೊಂದನ್ನು ನಿರ್ಮಾಣ ಮಾಡಿಕೊಳ್ಳಬೇಕು ಮತ್ತು ಮೂಲದ ಭಾವವನ್ನು, ತನ್ನ ಭಾಷೆಗೆ ಇಳಿಸಿಕೊಳ್ಳಬೇಕು. ಶ್ರೀಯುತರ ಈ ಅನುವಾದದಲ್ಲಿ ಈ ಎರಡೂ ಬಹುಮಟ್ಟಿಗೆ ಸಾಧ್ಯವಾಗಿದೆ ಎಂಬುದೇ ಸಮಾಧಾನದ ಸಂಗತಿ.

ಶೆಲ್ಲಿಯ Skylark ಎಂಬ ಕವಿತೆಯ ಅನುವಾದದ ಇನ್ನೊಂದೆರಡು ತುಣುಕುಗಳನ್ನು ನೋಡೋಣ. ಈ ಪದ್ಯವನ್ನು ಶ್ರೀಯುತರಿಗಿಂತ ಮೊದಲೇ ಗೋವಿಂದ

---

† ಮೂಲದ ವಸಂತರಾಜನಿಗೂ ವಸಂತದ ಇತರ ಕ್ರಿಯೆಗಳಾದ ಹೂವುಗಳು ಅರಳುವುದು, ಹೆಣ್ಣುಗಳು ಕುಣಿಯುವುದು ಇತ್ಯಾದಿಗಳಿಗೂ ಸಂಬಂಧವೇ ಇಲ್ಲದಂತೆ ಬೇರೆಬೇರೆಯೇ ನಿರೂಪಿತವಾಗಿವೆ. ಆದರೆ ಶ್ರೀಯುತರು, ಬಂದ ವಸಂತನೇ ಒಬ್ಬ ವ್ಯಕ್ತಿಯಾಗಿ ಉಳಿದೆಲ್ಲ ಕ್ರಿಯೆಗಳಿಗೆ ಕಾರಣವೆಂಬಂತೆ, ಸಾವಯವಗೊಳಿಸಿದ್ದಾರೆ. ಹೀಗಾಗಿ ಮೂಲವೇ ಬೇರೆ ಅನುವಾದವೇ ಬೇರೆ ಎಂಬಂತಿದೆ. ಶ್ರೀಯುತರದ್ದರಲ್ಲಿರುವ ಪ್ರತಿಮಾ ಐಕ್ಯತೆ ಮೂಲದಲ್ಲಿರುವಂತೆ ತೋರುವುದಿಲ್ಲ.

ಪೈಗಳು ಅನುವಾದಿಸಿದ್ದರು. 'ಬಾನಕ್ಕಿಗೆ' ಎಂಬ ಪೈಗಳ ಅನುವಾದ 1906ರಷ್ಟು ಹಿಂದಿನದು; ಶ್ರೀಯುವರ 'ಬಾನಾಡಿ', 1921ರಲ್ಲಿ ಪ್ರಕಟವಾದ 'ಇಂಗ್ಲಿಷ್ ಗೀತೆಗಳು'–ಪುಸ್ತಕದಲ್ಲಿದೆ.

To a Skylark :

Hail to thee blithe spirit
Bird thou never wert,
That from heaven or near it
Pourest thy full heart
In profuse strains of unpremeditated art

ಈ ಪದ್ಯ—

ಪೈಯುವರಲ್ಲಿ	ಶ್ರೀಯುವರಲ್ಲಿ
ಸೊಗಯಿಸ್ಸೈ ಸುಖಜೀವಿ	ಆರು ನೀನೆಲೆ ಪರಮಮೂರುತಿ
ನೆಗೆವಕ್ಕಿ ನೀನಲ್ಲ	ಪಕ್ಕಿಯೆಂಬರೆ ನಿನ್ನನು!
ಗಗನದಿಂದಲೊ ಗಗನದರುಗಿಂದಲೊ	ತೋರಿ ದಿವಿಜರು ಸುಳಿವ ಬಳಿ ಸುಖ-
ಮೊಗೆವೆ ತುಂಬಿದೆದೆಯನುಂ	ವಕ್ಕಿ ಬಹ ನಿನ್ನೆದೆಯನು
ಬಗೆದಿಲ್ಲದಿಹ ಬನ್ನ	ಹಾರಿ ನೆನೆಯುವ ಕಲೆಯ ಕುಶಲದ
ನೆಗೆಯುಂಗುವುದಾರಗಾಯನದ ಝರಿಯಿಂ.	ಭೂರಿ ಗಾನದೊಳೆರೆಯುವೆ.

ಪೈಗಳದು ಕುಸುಮಷಟ್ಪದಿ. ದ್ವಿತೀಯಾಕ್ಷರಪ್ರಾಸದ ನಿರ್ಬಂಧವಿದೆ (ಈ ವೇಳೆಗೆ ಪೈಗಳಿನ್ನೂ 'ಪ್ರಾಸತ್ಯಾಗದ ಧೀರನಿರ್ಧಾರ' ವನ್ನು ಕೈಕೊಂಡಿರಲಿಲ್ಲ) ಶ್ರೀಯುವರದು 3+4 ಮಾತ್ರಾಗಣದ, ಮುಕ್ತಬಂಧದ, ದ್ವಿತೀಯಾಕ್ಷರ ನಿರ್ಬಂಧವಿಲ್ಲದ ರಚನೆ. ಶ್ರೀಯುವರದು, ಪೈಗಳದ್ದಕ್ಕಿಂತ ಲವಲವಿಕೆಯುಳ್ಳ ಅನುವಾದವಾಗಿದೆ. Bird thou never wert ಎಂಬುದು, ಪೈಗಳಲ್ಲಿ 'ನೆಗೆವಕ್ಕಿ ನೀನಲ್ಲ' ಎಂದು ಇತ್ಯಾತ್ಮಕ ಹಾದ ಹೇಳಿಕೆಯಾದರೆ, 'ಪಕ್ಕಿಯೆಂಬರೆ ನಿನ್ನನು!'— ಎಂದು ಆಶ್ಚರ್ಯಾತ್ಮಕವಾದ ಶ್ರೀಯುವರ ಅನುವಾದ ಶೆಲ್ಲಿಗೆ ಹೆಚ್ಚು ಹತ್ತಿರವಾದದ್ದು. That from heaven or near it — ಎಂಬುದು, ಪೈಗಳಲ್ಲಿ 'ಗಗನದಿಂದಲೊ ಗಗನದರುಗಿಂದಲೊ' ಎಂದು ಕೇವಲ ವಾಚ್ಯಾರ್ಥವನ್ನು ಮಾತ್ರ ಗ್ರಹಿಸಿ ಮಾಡಿದ ಅನುವಾದವಾಗಿದೆ. 'Heaven' ಎಂಬುದಕ್ಕೆ 'ಆಕಾಶ' ಎಂಬುದು ಅದರ ನಿಘಂಟಿನ ಅರ್ಥವಷ್ಟೆ. ಆದರೆ ಶ್ರೀಯುವರು 'Heaven' ಎಂಬುದಕ್ಕೆ, 'ಆಕಾಶ' ಎಂದು ಮಾಡದೆ 'ತೋರಿ ದಿವಿಜರು ಸುಳಿವ ಬಳಿ'—ಎಂದು ಮಾಡಿದಾರೆ. ಇಡೀ ಪದ್ಯದ

ಸಂದರ್ಭದಲ್ಲಿ Skylark ಎಂಬುದು ಕೇವಲ ಒಂದು ಪಕ್ಷಿಯಲ್ಲ; ಅದೊಂದು ಚೈತನ್ಯ ಎಂದೇ ನಿರೂಪಿತವಾಗಿದೆ. 'Bird thou never wert' — ಎಂಬ, ಪದ್ಯಾರಂಭದ ಎರಡನೆಯ ಪಂಕ್ತಿಯಲ್ಲೇ ಈ ಭಾವನೆ ಬಿಚಿತಗೊಳಿಸಲ್ಪಟ್ಟಿದೆ. ಅದು ಪಕ್ಷಿ ಮಾತ್ರವಲ್ಲ, ಒಂದು ಚೈತನ್ಯ (Spirit) ಎಂದು ಪರಿಗಣಿತವಾಗಿರುವಾಗ ಅದು ಈ ಲೋಕದ್ದಲ್ಲ; ಅದರ ಸಂಬಂಧವೇನಿದ್ದರೂ, ಊರ್ಧ್ವಲೋಕದೊಂದಿಗೆ ಎಂಬ ಅರ್ಥವೇ ಹೆಚ್ಚು ಸಮಂಜಸ. ಹೀಗಿರುವಾಗ, 'That from Heaven or near it' — ಎಂಬುದು, ಪೈಗಳು ಭಾವಿಸಿದಂತೆ 'ಗಗನದಿಂದಲೊ, ಗಗನದರು ಗಿಂದಲೊ' ಎಂದಾಗುವುದಿಲ್ಲ. 'ತೋರಿ ದಿವಿಜರು ಸುಳಿವ ಬಳಿ' ಎಂಬುದೇ ಇಲ್ಲಿ ಸಮರ್ಪಕ. ಪದ್ಯಾನುವಾದಕ್ಕೆ ಕೇವಲ ನಿಘಂಟನ್ನು ಅವಲಂಬಿಸುವ ಪಾಂಡಿತ್ಯ ಸಹಾಯಕ್ಕೆ ಬಾರದು; ಪದ್ಯದ ಅಂತರಾರ್ಥವನ್ನು ಇಡೀ ಕವಿತೆಯನ್ನು ಒಳ ಹೊಕ್ಕು ಗ್ರಹಿಸುವಂಥ ಒಂದು ಅಂತರ್‌ದೃಷ್ಟಿ ಅಗತ್ಯ.

ಇನ್ನು ಎರಡನೆಯ ಪದ್ಯ ಹೀಗಿದೆ :

Higher still and Higher
From the earth thou Sprirgest
Like a cloud of fire ;
The blue deep thou wingest
And Singing still dost soor and soaring ever Singest

ಇದು ಈ ಇಬ್ಬರು ಅನುವಾದಕರಲ್ಲಿ ಹೀಗಿದೆ :

ಪೈಗಳಲ್ಲಿ	ಶ್ರೀಯವರಲ್ಲಿ
ಉನ್ನತಂ ಮೇಣದರಿ	ನೆಲವನೊಲ್ಲದೆ ಜಿಗಿದು ಜಿಮ್ಮುತ
ನುನ್ನತಂ ಭುವಿಯಿಂದ	ಮೇಲು ಮೇಲಕ್ಕೋಡುವೆ,
ನೀನ್ನೆಗೆವೆ ಕೆಂಡದುರಿವೋಡದಂತೆ	ಒಲಿದು ದಳ್ಳುರಿ ನೆಗೆದು, ಗಗನದ
ಮುನ್ನೆರಕೆ ಬೀಸಿನೀ	ನೀಲಿಯಾಳದೊಳಾಡುವೆ
ಲನ್ನಗನ್ನದೊಳೇರು	ನಲಿದು ಹಾಡುವೆ, ಹಾಡುತೇರುವೆ,
ತಿನ್ನು ಹಾಡುವೆ, ಹಾಡುತಿನ್ನೇರುವೆ.	ಏರುತೇರುತ ಹಾಡುವೆ.

ಇಂಗ್ಲಿಷ್ ಮೂಲದ ಮೊದಲರ್ಧದ ಸೊಗಸು, ಪೈಗಳ ಅನುವಾದದಲ್ಲಿ ಚೆನ್ನಾಗಿ ಬಂದಿದೆ ಎಂದು ಒಪ್ಪಬೇಕು. Higher still and Higher' ಎಂಬ ಪದಗಳ ಅರ್ಥಸ್ವಾರಸ್ಯವೆಲ್ಲವೂ 'ಉನ್ನತಂ ಮೇಣದರಿನುನ್ನತಂ'- ಎಂಬ ಮಾತಿನಲ್ಲಿ ಧಟ್ಟಿ ಯಿಳಿದಿದೆ; ಆದರೆ ಶ್ರೀಯವರ ಅನುವಾದದಲ್ಲಿ ಅದಿಲ್ಲ. 'Like a cloud of fire' ಎಂಬುದಕ್ಕೆ, 'ನೀನ್ನೆಗೆವೆ ಕೆಂಡದುರಿ ಮೋಡದಂತೆ' ಎಂಬುದು ಸಾರ್ಥಕ

ವಾದ ಅನುವಾದ. 'ಉರಿದು ದಳ್ಳುರಿ ನೆಗೆದು'–ಎಂಬ ಶ್ರೀಯವರ ಅನುವಾದ, 'Like a cloud of fire' ಎಂಬುದಕ್ಕೆ ಸಂವಾದಿಯಾಗಿಲ್ಲ. . ಆದರೂ ಇಲ್ಲೊಂದು ಸ್ವಾರಸ್ಯವಿದೆ. - ಅದೆಂದರೆ, ಶ್ರೀಯವರ ಅನುವಾದ ಸೋತುಗೆದ್ದಿದೆ. ಸೋತದ್ದು ವಾಚ್ಯಾರ್ಥಕ್ಕೆ ಸರಿಯಾದ ಅನುವಾದವನ್ನೊದಗಿಸಲಾರದೆ ; ಗೆದ್ದದ್ದು ಇಡೀ ಪದ್ಯದಲ್ಲಿ. ಅಡಕವಾಗಿರುವ ಕವಿಮನೋಧರ್ಮವನ್ನು 'ನೆಲವನೊಲ್ಲದೆ ಚಿಗಿದು ಚಿಮ್ಮುತ' ಎಂಬ ಪಂಕ್ತಿಯ ಮೂಲಕ ಅಭಿವ್ಯಕ್ತಿಸಿರುವುದರಿಂದ. ಷೆಲ್ಲಿಯ ಬದುಕನ್ನು ಬಲ್ಲವರಿಗೆ, ಅವನ ಪದ್ಯಗಳಲ್ಲಿ ಅಭಿವ್ಯಕ್ತಿಗೊಂಡ ಮನೋಧರ್ಮವನ್ನು ಗುರುತಿಸಿದವರಿಗೆ, .ಷೆಲ್ಲಿಯ ವ್ಯಕ್ತಿತ್ವ ಮೂಲತಃ ಈ ಲೋಕದಿಂದಾಚೆಯ ನೆಲೆಗೆ ಸದಾ ಕಾತರಿತಕ್ಕದ್ದು-ಎಂಬುದು ಗೊತ್ತಿದೆ. Skylrk ಕವಿತೆಯಲ್ಲೇ ಈ ನಿಲುವಿಗೆ ಇನ್ನಷ್ಟು ದಾಖಲೆಗಳಿವೆ. ಷೆಲ್ಲಿಯ ವ್ಯಕ್ತಿತ್ವ, Skylark ಪಕ್ಷಿಯಂತೆ 'ನೆಲವನೊಲ್ಲದೆ ಚಿಗಿದು ಚಿಮ್ಮುವ' ಸ್ವಭಾವದ್ದು. ಆದ್ದರಿಂದಲೇ ಶ್ರೀಯವರು 'Higher still and higher From the earth thou Springest' – ಎಂಬುದಕ್ಕೆ 'ನೆಲವನೊಲ್ಲದೆ ಚಿಗಿದು ಚಿಮ್ಮುತ ಮೇಲು ಮೇಲಕೋಡುವೆ'-ಎಂದು ಮಾಡಿದ ಅನುವಾದ, ಈ ಕವಿತೆಯ ಸಂದರ್ಭದಲ್ಲಿ ಸರಿಯಾಗಿಯೇ ಇದೆ.

.ಅತ್ಯುತ್ತಮವಾದ ರೂಪಾಂತರಾನುವಾದಕ್ಕೆ ಅವರ 'ಮುದಿಯ ರಾಮೇಗೌಡ' 'ಕಾರಿ ಹೆಗ್ಗಡೆಯ ಮಗಳು' 'ಮುನಿಸೀತು' ಒಳ್ಳೆಯ ನಿದರ್ಶನಗಳು.

ಕಾರಿ ಹೆಗ್ಗಡೆಯ ಮಗಳು Lord ullin's daugher ಎಂಬ ಪದ್ಯದ ಅನುವಾದ. ಇದರಲ್ಲಿನ ಒಂದು ಪದ್ಯ–

By this Storm grew loud apace
The water-wrarth was Shricking
And in the Scowl of heaven each face
Erew dark as they were Speaking.

ಇದರ ಅನುವಾದ :

ತೂರುಗಾಳಿಗೆ ಕಡಲು ಕುದಿಯಿತು
ನೀರ ದೆವ್ವಗಳರಚಿಕೊಂಡವು
ಹೆಪ್ಪು ಮೋಡದ ಹುಬ್ಬುಗಂಟಿಗೆ
ಕಪ್ಪಗಾದವು ಮುಖಗಳು (ಪು. 67)

ಮಾತಿನ ಹೊಸತನ, ಭಾವದ ಹರಳುಗೊಳಿಸುವಿಕೆಗಳಿಂದ ಇದು ಭಾಷಾಂತರದ ಸಾಧನೆಗೆ ನಿದರ್ಶನ. ಇದಕ್ಕಿಂತ ಚೆನ್ನಾಗಿ ಅನುವಾದಿಸುವುದು ಸಾಧ್ಯವೇ ಇಲ್ಲ ಎಂಬಂತಹ ತೃಪ್ತಿಯ ನೆಲೆಗೆ ನಿಲ್ಲುತ್ತೇವೆ. ಆದರೆ ಕಡೆಯ ಪಂಕ್ತಿಗಳಿಗೆ ಬಂದಾಗ–

The water's wild went over his Child
And he was left lamenting

ಈ ಪಂಕ್ತಿಗಳು

ಕರೆಯ ತೆರೆಯುಪ್ಪಳಿಸಿ ಹೊಯ್ದು
ಹೊರಳಿ ಹೋದವು ಮಗಳ ಮೇಲೆ
ಕೊರಗಿನಲಿ ಅವನುಳಿದನು–

ಎಂಬಲ್ಲಿ ಅನುವಾದ ಯಾಕೋ ಅಷ್ಟು ಸರಿಯಾಗಲಿಲ್ಲವೆಂಬ ಕೊರಗಿನಲ್ಲಿ ನಾವು ಉಳಿಯುತ್ತೇವೆ !

ಇಂಗ್ಲಿಷಿನ, ಹುಡ್‌ಕವಿಯ 'The Bridge of Sighs' ಕನ್ನಡದಲ್ಲಿ 'ದುಃಖ ಸೇತು'ವಾಗಿ ರೂಪಾಂತರಾನುವಾದ ಪಡೆದು ಸುಪ್ರಸಿದ್ಧವಾಗಿದೆ. ಇದೀ ಪದ್ಯ ಸೃಜನಾತ್ಮಕಾನುವಾದದ ಉತ್ತಮ ಉದಾಹರಣೆ. ಶ್ರೀಯವರು

Alas for the rarity
of the christian charity
under the sun

ಎಂಬುದಕ್ಕೆ. 'ಆಹ ಎಲ್ಲಡಗಿತೋ
ಆರ್ಯಧರ್ಮದ ಕರುಣ
ಆರ್ಯ ಜನಗಳ ಮರುಕ
ಉರಿಯುವನೆ ಬಲ್ಲ !

ಎಂದು ಅನುವಾದಿಸಿದ್ದಾರೆ. ಒಂದು ಪರಿಸರದ ಭಾವನೆಯನ್ನು ಇನ್ನೊಂದು ಪರಿಸರದ ಭಾವನೆಗೆ ಘಟ್ಟಿಯಿಳಿಸಿದ್ದು ಇದರ ವಿಶೇಷ. ಹಾಗೆಯೇ ಮೂಲದಲ್ಲಿ ಇಲ್ಲದ–

ನಿರಿಹಿಡಿದು ನಡುವೇರಿ
ತೊದಳು ಮಾತನು ಬೀರಿ
ಕೊರಗ ನಗಿಸಲು ಬಲ್ಲ
ಮಗುವಿಲ್ಲವೇನೋ

ಈ ಪಂಕ್ತಿಗಳನ್ನು ಸೇರಿಸಿ ಈ ಕವಿತೆಯ ಕರುಣರಸಕ್ಕೆ ಕಲಶವಿಟ್ಟಿದ್ದಾರೆ. ಇಲ್ಲಿ ಒಂದು ಅನುವಾದದ ಸಮಸ್ಯೆ ಇದೆ. ಅನುವಾದ ಮಾಡುವವರು, ಮೂಲವನ್ನು ನಿಷ್ಠೆಯಿಂದ ಅನುಸರಿಸಬೇಕಲ್ಲದೆ, ಅಲ್ಲಿ ಇಲ್ಲದ್ದನ್ನು ಅನುವಾದದಲ್ಲಿ ಸೇರಿಸಬಹುದೆ? ಶ್ರೀಯವರು ಸೇರಿಸಿ, ಮೂಲದ ಪದ್ಯಕ್ಕೆ ಇಲ್ಲದ ಶೋಭೆಯನ್ನು ತಂದು ವಿಮರ್ಶಕರ ಪ್ರಶಂಸೆಯನ್ನೂ ಗಳಿಸಿಕೊಂಡುಬಿಟ್ಟರು ! ವಾಸ್ತವವಾಗಿ ಅನುವಾದಕರು, ಮೂಲದಲ್ಲಿ ಇಲ್ಲದ್ದನ್ನು ಅನುವಾದದಲ್ಲಿ ಸೇರಿಸಬಾರದೆಂಬುದು ಸರಿ ; ಆದರೆ ಶ್ರೀಯವರು ಹೀಗೆ ಸೇರಿಸಿದ್ದು ತಪ್ಪು ಎಂದು ಮಾತ್ರ ಹೇಳಲಾರೆವು. ಈಗಾಗಲೇ ಹೇಳಿದಂತೆ ಶ್ರೀಯವರು ಕೇವಲ ಅನುವಾದಕರಲ್ಲ. ಕೇವಲ ಲೆಕ್ಕಾಚಾರದ

ಅನುವಾದಕ್ಕೂ, ಸೃಜನಾತ್ಮಕ ಅನುವಾದಕ್ಕೂ ವ್ಯತ್ಯಾಸವಿದೆ ಎಂಬುದನ್ನು ತಿಳಿಯ ಬೇಕು. ಪ್ರೀಯುವರು ಕಾರ್ಡಿನಲ್ ನ್ಯೂಮನ್ನನ–

Lead kindly Light amidst the encircling gloom
Lead thou me on

ಎಂಬುದನ್ನು–

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು

ಎಂದು ಅನುವಾದ ಮಾಡಿದ್ದಾರೆ. ನಮ್ಮಲ್ಲಿ ಎಷ್ಟೋ ವೇಳೆ ಸಭೆಗಳಲ್ಲಿ ಇದನ್ನು ಪ್ರಾರ್ಥನೆಗೆ ಬಳಸಿದ್ದಾರೆ. ಕೇಳಿದವರಿಗೆ ಇದೊಂದು ಅನುವಾದವೆಂದು ಅನ್ನಿಸಿಯೇ ಇಲ್ಲ. ಇದು ಅನುವಾದವೆಂದು ಗೊತ್ತಿದ್ದವರಿಗೂ ಕೂಡಾ. ಓದುವ ಅಥವಾ ಕೇಳುವ ಹೊತ್ತಿನಲ್ಲಿ ಅದು ಅನುವಾದವೆಂಬುದು ಮರೆತುಹೋಗುವಷ್ಟು ಸೊಗಸಾಗಿ ಅನುಭವಕ್ಕೆ ಬರುತ್ತದೆ. ನಿಜವಾದ ಅನುವಾದದ ಲಕ್ಷಣವೇ ಇದು : ಅದು ಅನುವಾದವೆಂದು ಗೊತ್ತಾಗದಷ್ಟು ಸಹಜವಾಗಿರಬೇಕು.

ಮೂರು ಕವನಗಳು

ಡಿ. ಎಲ್. ಮಂಜುನಾಥ್

೧. ಪ್ರಶ್ನೆ

ದಿಗಂತಕ್ಕೆ ಮುತ್ತಿಗೊಂಡ ಚಿನ್ನಗೆಂಪಲ್ಲಿ
ಒಂದು ಬೆಳ್ಳಕ್ಕಿ ರೆಕ್ಕೆ ಫಟಫಟ ಬಡಿದು ತೇಲುವಾಗ
ಬಲೆ ಬಲೆಗಟ್ಟಿರುವ ಕನಸುಗಳಡಿ
ರಾಕ್ ಎನ್ ರೋಲ್ ಕುಣಿಯುತ್ತ ಹಾಡುವ ಕಾಗೆ
ಬದುಕು ಕುಕ್ಕುವ ಯಮಯಾತನೆ
ನೀನೆಂದಾದರೂ ಅನುಭವಿಸಿದ್ದೀಯಾ ಗೆಳತಿ ?

೨. ಹತಾಶ

ಕತ್ತಲ ತೊಗಲು ಹೊದ್ದ ರಾತ್ರಿ ಮೈ
ಮೇಲೇರಿ ಬಂದ ಮಿರುಗುಟ್ಟುವ ತಂಪುಬೆಳಕಲ್ಲಿ
ಸಿಹಿ ಬದುಕ ಬೊಗಸೆಗಟ್ಟಲೆ ದೋಚಿ
ಬಿಂಬಿಸುವ ಹೊಳಪುಗಣ್ಣಡಿ ನೀನು
ಗುರುತ್ವಾಕರ್ಷಣೆಗೆ ಬಲಿ
ಬಿದ್ದಾಗ ನುಚ್ಚುನೂರಾಗಿಸುವ
ಒರಟು ಕಲ್ಲು ನಾನು.

೩. ಮೇಷ್ಟ್ರು ಮತ್ತು ಮಹಾಯುದ್ಧ

ಮೂವತ್ತೊಂದರಂದು ಮಹಾಯುದ್ಧದ ಪಾಠ
ಹೇಳಿ ಮನೆಗೆ ಬಂದಾಗ ಮೇಷ್ಟ್ರು
ಅವಳು ಕೇಳಿದ್ದು ಒಂದಲ್ಲವೇ ನಾಳೆ
ತುಂಬುವ ಜೇಬಿಗಿರಿತದ ನೋವು ಹರಡಿ
ರಾತ್ರಿಯಿಡೀ ಕನಸಿನಲ್ಲಿ ಹೋರಾಡಿದ ಮಾಸ್ತರು
ಎಚ್ಚರಗೊಂಡಾಗ ಯುದ್ಧ ತೋಳ್ಚಾಚಿ ಕರೆಯುತ್ತಿತ್ತು.

ಮಹಾನುಭಾವ ಪಂಥ

ಜಿ. ಆರ್: ಕುಪ್ಪುಸ್ವಾಮಿ

ಮಹಾನುಭಾವರು ಹಿಂದೂ ಧರ್ಮಕ್ಕೆ ಸೇರಿದವರು. ಅವರು ಮಹಾರಾಷ್ಟ್ರದ ಉತ್ತರ ಹಾಗೂ ದಕ್ಷಿಣ ವಿಭಾಗಗಳಲ್ಲಿ ಕೇಂದ್ರೀಕರಿಸಿದ್ದಾರೆ. ಬಿರಾರ್ ಪ್ರದೇಶದಲ್ಲಿ ಬಹು ಸಂಖ್ಯೆಯಲ್ಲಿದ್ದಾರೆ. ಮಹಾರಾಷ್ಟ್ರ ಸಮಾಜದಲ್ಲಿ ಇಂದು ಅವರ ಸ್ಥಾನವು ಕೆಳಮಟ್ಟದ್ದಾಗಿದೆ. ಇವರಿಗಿಂತಲೂ ಅಧಿಕ ಜನಪ್ರಿಯ ಹಾಗೂ ಮೆಚ್ಚುಗೆಗೆ ಒಳಗಾಗಿರುವ ವಾರಕರಿ ವೈಷ್ಣವ ಪಂಥದವರಿಂದ ಮಹಾನುಭಾವರು ಭಿನ್ನರಾಗಿದ್ದಾರೆ. ಸಾಮಾನ್ಯವಾಗಿ ಅವರು ಭಾರತದ ಹಿಂದುಳಿದ ಪ್ರದೇಶಗಳಲ್ಲಿಯೇ ತಮ್ಮ ಕಾರ್ಯಕ್ಷೇತ್ರವನ್ನು ಆರಿಸಿಕೊಂಡಿದ್ದಾರೆ. ಅವರು ತಮ್ಮ ಸಭೆಗಳನ್ನು ಹೆದ್ದಾರಿಗೆ ಅಥವಾ ರೈಲ್ವೆ ನಿಲ್ದಾಣಕ್ಕೆ ಒಂದು ದಿನದ ಪ್ರವಾಸದಷ್ಟು ದೂರಕ್ಕಿರುವ ನಿರ್ಜನ ಗ್ರಾಮ ಪ್ರದೇಶದಲ್ಲಿರುವ ಮಠಗಳಲ್ಲಿ ಕೂಡಿಸುತ್ತಾರೆ. ಅವರ ಕೇಂದ್ರಗಳು ರಿತ್‌ಪುರ (ಅಮರಾವತಿಗೆ ಉತ್ತರಕ್ಕಿರುವ ಒಂದು ಪಾಳುಬಿದ್ದ ಹಳ್ಳಿ) ಅಥವಾ ಮಾಹೂರ್ಜ (ಬೇರಾರ್ ಹಾಗೂ ಆಂಧ್ರದ ಆದಿಲಾಬಾದ್ ಜಿಲ್ಲೆಯ ಪರ್ವತ ತಪ್ಪಲು ಪ್ರದೇಶದಲ್ಲಿರುವ ಮತ್ತೊಂದು ಹಳ್ಳಿ). ವಾರ್ಕರಿಯವರಂತೆ ಅವರೆಲ್ಲರೂ ಬ್ರಾಹ್ಮಣೇತರರು. ಆದರೂ ಕೂಡ, ತಮ್ಮ ಸ್ಥಾನಮಾನದಲ್ಲಿ ನೈತಿಕ ಹಾಗೂ ಧಾರ್ಮಿಕ ಗೌರವವನ್ನು ದೊರಕಿಸುವ ಸಲುವಾಗಿ ಅವರು ಇತ್ತೀಚಿನವರೆಗೂ ಕೆಲವು ಬ್ರಾಹ್ಮಣರನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿಕೊಂಡಿದ್ದು ವಾರ್ಕರಿಯವರಿಂದ ಭಿನ್ನವಾಗಿದ್ದಾರೆ. ಮರಾಠಿ ಜನಪದ ಸಾಹಿತ್ಯದಲ್ಲಿ ಮಹಾನುಭಾವರನ್ನು ತೀವ್ರಗಾಮಿ ಸ್ವರೂಪದ್ದು. ಅಪಾನಭೂತಿಗಳೆಂದು ಕೂಡ ವಿವರಿಸಲಾಗಿದೆ. ಮಹಾನುಭಾವರ ಜನ ಸಮುದಾಯವು ಬಹಳ ಕಡಿಮೆ. 1901ರಲ್ಲಿ ಅವರ ಸಂಖ್ಯೆಯು ಕೇವಲ 22,000 ಇತ್ತು. ಆದರೆ ಇಂದು ಮಹಾನುಭಾವರ ಗುಂಪಿಗೆ ಸೇರಿಕೊಂಡಿರುವ ಜನರಿಗೂ ಹಿಂದಿನವರಿಗೂ ಇರುವ ಸಂಬಂಧವನ್ನು ಕಲ್ಪಿಸುವುದು ಸುಲಭವಾಗುವುದಿಲ್ಲ.

ಮಹಾರಾಷ್ಟ್ರ ಸಮಾಜದಲ್ಲಿ ಮಹಾನುಭಾವರು ಅತ್ಯಲ್ಪ ಸ್ಥಾನವನ್ನು ಗಳಿಸಿದ್ದರೂ ಕೂಡ ಸಾಹಿತ್ಯ ಪ್ರಪಂಚದಲ್ಲಿ ಮಾತ್ರ ಅವರು, ಅರ್ಧ ಶತಮಾನದಿಂದೀಚೆಗೆ ಮರಾಠಿ ಸಾಹಿತಿಗಳ ಬಹುಮುಖ ಲಕ್ಷ್ಯವನ್ನು ಸೆಳೆದಿರುತ್ತಾರೆ. ಇದಕ್ಕೆ ಕಾರಣವನ್ನು ಅವರು ತಮ್ಮಲ್ಲಿಯೇ ರಚಿಸಿಕೊಂಡಿರುವ ಸಾಹಿತ್ಯದಲ್ಲಿ ಕಾಣುತ್ತೇವೆ. 20ನೇ

ಶತಮಾನದ ಆದಿಭಾಗದವರೆಗೂ ಅವರು ತಮ್ಮ ಧರ್ಮದ ವಿರುದ್ಧ ಬ್ರಾಹ್ಮಣರು ಅನ್ನುತ್ತಿದ್ದ ಅವಹೇಳನ ಮಾತುಗಳನ್ನು ಮೌನವಾಗಿ ಸಹಿಸಿಕೊಂಡು ಬಂದರು. ಎಲಿಚ್‌ಪುರದ ಮುಸ್ಲಿಮ್ ಸಾಹಿತಿಯೊಬ್ಬರು ಅಭಿಪ್ರಾಯಪಟ್ಟಿರುವಂತೆ ಕಳೆದ ಶತಮಾನದಲ್ಲಿ ಬೇರಾರ್ ಪ್ರದೇಶದ ಮಹಾನುಭಾವರು ಹಾಗೂ ಬ್ರಾಹ್ಮಣರ ನಡುವೆ ಗಂಭೀರ ಸ್ವರೂಪದ ಶತ್ರುತ್ವವು ಬೆಳೆದು ಬ್ರಾಹ್ಮಣರು ಅವರನ್ನು ಎಷ್ಟೇ ದಬ್ಬಾಳಿಕೆಯಿಂದ ನಡೆಸಿಕೊಂಡರೂ ಮಹಾನುಭಾವರು ಆರೋಪಣೆ ಮಾಡಲಿಲ್ಲ. ಆದರೆ 20ನೇ ಶತಮಾನದಲ್ಲಿ ಈ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಯಾಗಿದೆ. ಮಹಾಂತರಲ್ಲಿ ಅಂದರೆ ಮಹಾನುಭಾವ ಪ್ರಮುಖರಲ್ಲಿ ಕೆಲವರು ತಮ್ಮ ದೀನ ಸ್ವಭಾವವನ್ನು ತ್ಯಜಿಸಿದರು. 1907ರಲ್ಲಿ ಮೊದಲ ಬಾರಿಗೆ ಬ್ರಾಹ್ಮಣರ ಆಪಾದನೆ ಹಾಗೂ ಅವಹೇಳನಗಳ ವಿರುದ್ಧ ನ್ಯಾಯಸ್ಥಾನದಲ್ಲಿ ದೂರು ಸಲ್ಲಿಸಿದರು. ತಮ್ಮ ಶತ್ರುಗಳನ್ನು ಖಂಡಿಸಿ ತಮ್ಮ ವಾದವನ್ನು ಸಿದ್ಧಮಾಡಿಕೊಡಲು ಇಲ್ಲಿಯವರೆಗೂ ಗುಪ್ತವಾಗಿಟ್ಟಿದ್ದ ತಮ್ಮ ಪವಿತ್ರ ಗ್ರಂಥಗಳನ್ನು ನ್ಯಾಯಸ್ಥಾನದಲ್ಲಿ ಆಗ ಹಾಜರುಪಡಿಸಬೇಕಾಯಿತು. ಮರಾಠಿ ಸಾಹಿತಿಗಳಿಗೆ ಇದರಿಂದ ಒಂದು ಆಶ್ಚರ್ಯವೇ ಕಾದಿತ್ತು. ಮಹಾನುಭಾವ ಸಾಹಿತ್ಯವು ಅತಿ ಪ್ರಾಚೀನವಾಗಿರುವುದಲ್ಲದೆ ಅದರ ಇತಿಹಾಸವು 14ನೇ ಶತಮಾನದವರೆಗೂ ವ್ಯಾಪಿಸಿದ್ದು ಪುರಾತನ ಮರಾಠಿ ಸಾಹಿತ್ಯಕ್ಕೆ ಸಮಕಾಲೀನವಾಗಿದೆ ಎಂಬ ಮಹತ್ವಪೂರ್ಣವಾದ ಅಂಶಗಳು ಹೊರಬಿದ್ದವು. ಅವರ ಸಾಹಿತ್ಯವು ಕಾವ್ಯಗಳಿಗೆ ಮಾತ್ರ ಸೀಮಿತವಾಗಿರದೆ ಅದರಲ್ಲಿ ಗದ್ಯ ಕೃತಿಗಳೂ ಇದ್ದವು. 17ನೇ ಶತಮಾನಕ್ಕಿಂತ ಮೊದಲು ರಚಿಸಲ್ಪಟ್ಟ ಮರಾಠೀ ಗದ್ಯ ಸಾಹಿತ್ಯದಲ್ಲಿ ಅತಿ ಪ್ರಾಚೀನ ಸಾಹಿತ್ಯವು ಮಹಾನುಭಾವರ ಕೊಡುಗೆಯೆಂದು ತಿಳಿದುಬಂದಿದೆ. ಮರಾಠೀ ಸಾಹಿತಿಗಳು ಮಹಾನುಭಾವ ಸಾಹಿತ್ಯವನ್ನು ಸುದೀರ್ಘವಾಗಿ ಅಭ್ಯಾಸಮಾಡಲಾರಂಭಿಸಿದರು. ಮತ್ತು ಅವರ ಸಾಹಿತ್ಯಕ್ಕೆ ಯೋಗ್ಯ ಪ್ರಚಾರ ನೀಡಿ ಸಾರಸ್ವತ ಪ್ರಪಂಚಕ್ಕೆ ಅದರ ತಿಳುವಳಿಕೆಯನ್ನು ಅಧಿಕಗೊಳಿಸಿದ್ದಾರೆ. ಆದರೆ, ಈ ಸಾಹಿತ್ಯವೆಲ್ಲವೂ ಮರಾಠಿ ಭಾಷೆಯಲ್ಲಿಯೇ ಪ್ರಕಟವಾಗಿದೆ. ಆದಕಾರಣ ಮಹಾರಾಷ್ಟ್ರದ ಹೊರತು ಭಾರತದ ಇತರ ಭಾಗಗಳಲ್ಲಿ ಅದರ ಬಗ್ಗೆ ತಿಳುವಳಿಕೆಯಿರುವುದಿಲ್ಲ. ಇತ್ತೀಚೆಗೆ ಅವರ ಸಾಹಿತ್ಯದ ಇತಿಹಾಸ ರೂಪರೇಷೆಯನ್ನು ಗುಜರಾತಿ ಮಾಸಿಕ ಒಂದರಲ್ಲಿ ಪ್ರಬುದ್ಧ ಲೇಖನವಾಗಿ ಪ್ರಕಟಿಸಲಾಗಿದೆ.

ಮಹಾನುಭಾವರು ತಮ್ಮ ಆದಿ ಸಂಸ್ಥಾಪಕರು ಹಾಗೂ ಅವರ ಶಿಷ್ಯರ ಇತಿಹಾಸವನ್ನು ಗುರುಪರಂಪರೆಯಾಗಿ ಕಾಯ್ದಿಟ್ಟಿದ್ದಾರೆ. ಮಹಾಪುರುಷರ ಜೀವನ ಚರಿತ್ರೆ ಹಾಗೂ ಗ್ರಂಥಗಳನ್ನು ಸಂಗ್ರಹಿಸುವ ಕಾರ್ಯವು ಒಂದು ಪುಣ್ಯ ಕೆಲಸವೆಂದು ಭಾವಿಸಿ ಲೀಲಾಚರಿತ, ಸ್ಮೃತಿಸ್ಥಲ, ವೃದ್ಧಾಚಾರ ಹಾಗೂ ಅನ್ವಯಸ್ಥಲ ಎಂಬ ಗ್ರಂಥಗಳನ್ನು ರಚಿಸಿದ್ದಾರೆ. ಆದರೆ ಈ ಗ್ರಂಥಗಳ ಕಾಲಮಾನವನ್ನು ಮಾತ್ರ

ಖಚಿತವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಮಹಾನುಭಾವರ ಪುರಾಣೇತಿಹಾಸಗಳ ಮತ್ತು ಇತಿಹಾಸಕಾರರ ಟೀಕೆಗಳ ಆಧಾರದ ಮೇಲೆ ಇವರ ಪೂರ್ವೇತಿಹಾಸದ ವಿವರಗಳನ್ನು ಸಮರ್ಪಕವಾಗಿ ತಿಳಿದುಕೊಳ್ಳಲು ಸಾಧ್ಯವಿದೆ.

ಸಂಪ್ರದಾಯದ ಪ್ರಕಾರ ಮಹಾನುಭಾವರ ಆದಿಸಂಸ್ಥಾಪಕನಾಗಿದ್ದ ಚಕ್ರಧರನು 1194ರಲ್ಲಿ ಗುಜರಾತಿನ ಬ್ರೋಚ್‌ನಲ್ಲಿ ಮಲ್ಲಿದೇವ ಅರಸನ ಮಂತ್ರಿಯ ಮಗನಾಗಿ ಹುಟ್ಟಿದನೆಂಬ ಪ್ರತೀತಿಯಿದೆ. ಅವನ ಹೆಸರು ಹರಪಾಲದೇವ. 1221ರಲ್ಲಿ ಎಳೆ ವಯಸ್ಸಿನಲ್ಲಿಯೆ ಅವನು ಮರಣಹೊಂದಿದನು. ಆದರೆ ಅವನ ಪಾರ್ಥಿವ ಶರೀರವನ್ನು ದಹನಮಾಡುವುದಕ್ಕೆ ಮುಂಚೆ ಪರಮಾತ್ಮನ ಮೂರನೆಯ ಅವತಾರ ಪುರುಷನಾದ ಚಕ್ರಪಾಣಿಯ ಆತ್ಮದಿಂದ ಅವನು ಪುನರ್ಜನ್ಮ ಪಡೆದನೆಂದು ಮಹಾನುಭಾವರು ನಂಬಿದ್ದಾರೆ. ಅವನು ಕೆಲವು ಕಾಲ ತನ್ನ ಇಹಲೋಕದ ಜೀವನವನ್ನು ಪ್ರಾಪಂಚಿಕ ವಾತಾವರಣದಲ್ಲಿ ನಡೆಸಿದನು. ಕಡೆಗೆ ನಾಗಪುರದ ಹತ್ತಿರ ರಾಮಟೇಕ್ ಪ್ರದೇಶಕ್ಕೆ ತೀರ್ಥಯಾತ್ರೆಯನ್ನು ಕೈಕೊಂಡನು. ತನ್ನ ಶಿಷ್ಯರಿಂದ ಬೇರೆಯಾಗಿ ಋತಪುರವನ್ನು ಸೇರಿ ಅಲ್ಲಿ ಗೋವಿಂದ ಪ್ರಭುವನ್ನು ಆಶ್ರಯಿಸಿ (5 ಅವತಾರಗಳಲ್ಲಿ ನಾಲ್ಕನೆಯ ಅವತಾರ) ಅವನ ಶಿಷ್ಯನಾದನು. 12 ವರ್ಷಗಳ ಕಾಲ ಪರ್ಯಟನ ಕೈಕೊಂಡು ಕೆಲವುಕಾಲ ದಿಗಂಬರಸನ್ಯಾಸಿಯಾಗಿ ಅಲೆದಾಡಿ ನಂತರ ವಾರಂಗಲ್ಲು ಸೇರಿ ಅಲ್ಲಿ ಮತ್ತೊಮ್ಮೆ ಮದುವೆಯಾದನು. ಪೈಠಣವನ್ನು ಕಟ್ಟಕಡೆಗೆ ಸೇರಿ ನಾಗಾಯಿಸ ಎಂಬುವಳನ್ನು ತನ್ನ ಪ್ರಥಮ ಶಿಷ್ಯಳನ್ನಾಗಿ ಸ್ವೀಕರಿಸಿದನು. ಇಲ್ಲಿಗೆ ಚಕ್ರಧರನ ಏಕಾಂತ ಜೀವನವು ಮುಕ್ತಾಯವಾಯಿತು. ಈ ಕಾಲದಲ್ಲಿ ಚಕ್ರಧರನು ಒಂಟಿ ಜೀವನವನ್ನು ನಡೆಯಿಸಿದನು. ನಾಗಾಯಿಸಳೊಡನೆ ಅವನು 1266ರಲ್ಲಿ ಕೂಡಿದ್ದನೆಂದು ನಿರ್ಧರಿಸಬಹುದು. ಈ ಅವಧಿಯಲ್ಲಿ ನಡೆಸಿದ ಜೀವನದ ವಿವರಗಳ ಔಚಿತ್ಯವನ್ನು ಪ್ರಶ್ನಿಸಬಹುದು. ಆದರೆ, ಇದರನಂತರ ನಡೆಸಿದ 8ವರ್ಷ ಜೀವನದ ವಿವರಗಳನ್ನು ಉತ್ತರಾರ್ಧ ಹಾಗೂ ಪೂರ್ವಾರ್ಧ ವಿಭಾಗಗಳಲ್ಲಿ ಬರೆದಿಡಲಾಗಿದೆ. ಚಕ್ರಧರನು ಗೋದಾವರಿ ಸೀಮೆಯಲ್ಲಿ ಪರ್ಯಟನ ಮಾಡುತ್ತಿದ್ದನು. ಅಲ್ಲಿ ಭಕ್ತರಿಗೆ ತನ್ನ ಸಿದ್ಧಾಂತಗಳನ್ನು ಬೋಧಿಸಿದನು. ಮಹಿಳೆಯರು ಹಾಗೂ ನಂಬಿಕಸ್ತ ಪುರುಷರನ್ನು ತನ್ನ ಶಿಷ್ಯರನ್ನಾಗಿ ಸ್ವೀಕರಿಸುತ್ತಿದ್ದನೆಂಬ ವಿವರಗಳು ದೊರತಿವೆ. ಪರ್ಯಟನ ಕಾಲದಲ್ಲಿ ಅವನು ತಂಗುತ್ತಿದ್ದ ಹಳ್ಳಿಗಳು, ಅಲ್ಲಿ ಕಳೆಯುತ್ತಿದ್ದ ವೇಳೆ ಹಾಗೂ ದಿನಚರಿಯ ವಿವರಗಳು ದೊರೆತಿವೆ. ಈ ವಿವರಗಳನ್ನನುಸರಿಸಿ ಚಕ್ರಧರನ ಪರ್ಯಟನದ ನಕ್ಷೆಯೊಂದನ್ನು ಸಿದ್ಧಗೊಳಿಸುವ ಸಾಧ್ಯತೆ ಇದೆ. ಈ 8 ವರ್ಷ ಅವಧಿಯ ಮಧ್ಯಭಾಗದಲ್ಲಿ ನಾಗದೇವನೆಂಬ ಆಚಾರಶೀಲ ಬ್ರಾಹ್ಮಣನೊಬ್ಬನನ್ನು ತನ್ನ ಶಿಷ್ಯನನ್ನಾಗಿಸಿದನು. ಈತನು ಚಕ್ರಧರನ ನಿಧನದನಂತರ ಮಹಾನುಭಾವರ ಗುರುವಾದನು. ಚಕ್ರಧರನ ನಿಧನವು 1274ರಲ್ಲಿ ಸಂಭವಿಸಿತು.

ಇದೊಂದು ಅದ್ಭುತ ಘಟನೆ . ಆದರೆ ಅದಕ್ಕಿಂತ ಅದ್ಭುತವಾದ ವಿಷಯವೆಂದರೆ ಈ ಕಥೆಯನ್ನು ಮಹಾನುಭಾವರು ತಮ್ಮ ಇತಿಹಾಸದಲ್ಲಿ ಮುಚ್ಚುಮರೆಯಿಲ್ಲದೆ ರಸವತ್ತಾಗಿ ಚಿತ್ರಿಸಿದ್ದಾರೆ. ಚಕ್ರಧರನು ಯಾದವರಾಜ ರಾಮದೇವನ ಬ್ರಾಹ್ಮಣ ಮಂತ್ರಿಗಳ ಬದ್ಧದ್ವೇಷವನ್ನು ಸಂಪಾದಿಸಿದ್ದನಾದ ಕಾರಣ ಅವನನ್ನು ಬಂಧಿಸಿ ಪೈಠಣಕ್ಕೆ ಒಯ್ಯಲಾಯಿತು. ಅವನು ತಾನು ಮಾಡಿಕೊಂಡಿದ್ದ ಹೆಣ್ಣು ಶಿಷ್ಯರೊಡನೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದನೆಂಬ ಆರೋಪಣೆಯನ್ನು ಅವನ ಮೇಲೆ ಹೊರಿಸಿ ಅವನ ಕಿವಿ ಮೂಗನ್ನು ಕತ್ತರಿಸಿಹಾಕಲಾಯಿತು. ಇಷ್ಟರಿಂದ ತೃಪ್ತಿಯಾಗದೆ ಮತ್ತೊಮ್ಮೆ ಅವನನ್ನು ಬಂಧಿಸಿ ಅವನ ಶಿರವನ್ನು ಕಡಿದು ಕೊಲ್ಲುವ ಪ್ರಯತ್ನ ನಡೆಯಿತು. ಆದರೆ ಚಕ್ರಧರನು ತನ್ನ ಶಿರವನ್ನು ಪುನಃ ಪಡೆದನು ಮತ್ತು ಉತ್ತರಕ್ಕೆ ಪ್ರಯಾಣ ಬೆಳೆಸಿದನು. ಇಂದಿಗೂ ಸಹ ಅವನು ಉತ್ತರ ಪ್ರದೇಶದಲ್ಲಿ ಸುಖವಾಗಿ ಜೀವಿಸುತ್ತಿದ್ದಾನೆಂದು ಮಹಾನುಭಾವರು ನಂಬಿದ್ದಾರೆ.

ಚಕ್ರಧರನ ನಿಧನವಾದ ಕೂಡಲೆ ಅವನ ಶಿಷ್ಯಸ್ತೋಮವು ನಾಯಕರಿಲ್ಲದೆ ರೀತಪುರಕ್ಕೆ ತೆರಳಿ ಗೋವಿಂದ ಪ್ರಭುವಿನ ನೆರವನ್ನು ಯಾಚಿಸಿ 1287ರ ವರೆಗೆ –ಅವನು ಸಾಯುವವರೆಗೆ–ಪಡೆಯಿತು. ಅವನ ನಂತರ ನಾಗದೇವನು 1312ರವರೆಗೆ ತಾನು ಸಾಯುವತನಕ ಮಹಾನುಭಾವರ ಮಾರ್ಗದರ್ಶಕನಾಗಿದ್ದನು. ಅವನು ಚಕ್ರಧರನ ಅಚ್ಚುಮೆಚ್ಚಿನ ಶಿಷ್ಯನಾಗಿದ್ದ ಕಾರಣ ಮಹಾನುಭಾವರ ಒಗ್ಗಟ್ಟನ್ನು ಕಾದಿರಿಸುವುದರಲ್ಲಿ ಯಶಸ್ವಿಯಾದನು. ಮತ್ತು ತನ್ನ ಮುಖಂಡತ್ವದಲ್ಲಿಯೇ ಹೊಸದಾಗಿ ಸೇರಿದ ಶಿಷ್ಯವೃಂದಕ್ಕೆ ದೀಕ್ಷೆ ಹಾಗೂ ಉಪದೇಶವನ್ನು ಕೊಡಿಸುವ ನಿಯಮವನ್ನು ಪಾಲಿಸಹತ್ತಿದನು. ನಾಗದೇವನ ತರುವಾಯ ಕವೀಶ್ವರಾಚಾರ್ಯ ಬಾಯಿದೇವ ಭಾಸನು (1312–15) ನಾಯಕನಾದನು. ಆದರೆ 1390ರ ನಂತರ ಮಹಾನುಭಾವರನ್ನು ಒಂದಾಗಿಸಲು ಸಾಧ್ಯವಾಗಲಿಲ್ಲ. ಮಹಾನುಭಾವರಲ್ಲಿ ಸ್ವಾಭಾವಿಕವಾಗಿ ಕಂಡುಬರುತ್ತಿದ್ದ ಒಡಕನ್ನು ಅವನ ಶಿಷ್ಯನಾದ ಪರಶುರಾಮ ಭಾಸನಿಂದ ಕೂಡ ತಡೆಯಲು ಸಾಧ್ಯವಾಗಲಿಲ್ಲ. ಚಕ್ರಧರನ ಮೂಲ ಶಿಷ್ಯರು ತಮ್ಮ ತಮ್ಮಲ್ಲಿಯೇ ಶಿಷ್ಯರನ್ನು ಮಾಡಿಕೊಳ್ಳಲು ಪ್ರಾರಂಭಿಸಿದಕೂಡಲೆ ಉಪಪಂಗಡಗಳು ಹಾಗೂ ಅವಿಧೇಯತೆಯು ಬೆಳೆಯಹತ್ತಿದವು. ಪರಶುರಾಮ ಭಾಸರ ಗುರುತನವು ಮುಗಿಯುವವೇಳೆಗೆ ಮಹಾನುಭಾವರಲ್ಲಿ 13 ಉಪ ಪಂಗಡ ಅಥವಾ ಆಮ್ನಾಯಗಳಾದವು. ಆದರೆ 19ನೇ ಶತಮಾನದ ವೇಳೆಗೆ ಕೇವಲ ಎರಡೇ ಎರಡು ಪಂಗಡಗಳು ಉಳಿದುಕೊಂಡವು.

ಕವೀಶ್ವರ ಅಥವಾ ಉಪಾಧ್ಯೆ ಪಂಥಗಳಲ್ಲಿ ಮಿಕ್ಕವು ಲೀನಹೊಂದಿದವು. ಇವೆರಡೂ ಪಂಥಗಳು ಮಹಾನುಭಾವರಲ್ಲಿ ಪ್ರಬಲ-ಶಕ್ತಿಗಳಾಗಿ, ಕವೀಶ್ವರರು ಸಂಪ್ರದಾಯ ವಿಭಾಗವನ್ನೂ ಉಪಾಧ್ಯೆಯು ಭಿನ್ನ ಪಂಥವನ್ನೂ ಪ್ರತಿನಿಧಿಸಿದವು.

ಈ ಎರಡು ಭಿನ್ನ ಪಂಗಡಗಳ ನಡುವೆ ಇಂದಿರುವ ವ್ಯತ್ಯಾಸವು ಅತಿ ಕಡಿಮೆ. ಅನ್ಯ ವಿದ್ವಾಂಸರು ಈ ಶತಮಾನದಲ್ಲಿ ಮಹಾನುಭಾವರ ಬಗ್ಗೆ ತೆಗೆದುಕೊಳ್ಳುತ್ತಿರುವ ಆಸ್ಥೆಯ ಕಾರಣ ಮಹಾನುಭಾವರು ತಮ್ಮ ಬಗ್ಗೆ ಹೆಚ್ಚು ಮುತುವರ್ಜಿಯನ್ನು ತೋರಿಸುತ್ತಿದ್ದಾರೆ. ಮಹಾನುಭಾವರು ಅನೇಕ ಶತಮಾನಗಳವರೆಗೆ ತಮ್ಮ ವ್ಯಕ್ತಿತ್ವವನ್ನು ಕೂಡ ಕಳೆದುಕೊಂಡಿದ್ದರು. ಇತರ ಪಂಥದವರ ಗ್ರಂಥಗಳೊಡನೆ ತಮ್ಮ ಗ್ರಂಥಗಳನ್ನು ಹೋಲಿಸುವ ಉದ್ದೇಶದಿಂದ ವಿಚಾರಗೋಷ್ಠಿಗಳನ್ನು ನಡೆಸುವ ಕಾರ್ಯಕ್ರಮವನ್ನು ಕೂಡ ಕೈಬಿಟ್ಟಿದ್ದರು. ಆದರೆ 1920 ರಿಂದೀಚೆಗೆ ಮಹಾನುಭಾವರು ಅನೇಕ ವಿದ್ವಾಂಸರನ್ನು ದೊರಕಿಸಿಕೊಟ್ಟುದಲ್ಲದೆ ಕೆಲವು ಕಳೆದುಹೋದ ಆಮ್ನಾಯಗಳನ್ನು ಊರ್ಜಿತಗೊಳಿಸುವ ಪ್ರಯತ್ನವನ್ನೂ ನಡೆಸಿದ್ದಾರೆ. ಕವೀಶ್ವರ ವರ್ಗದ ಗೌರವಾನ್ವಿತ ವಿದ್ವಾಂಸರೊಬ್ಬರನ್ನು, ಕೆಲವು ವರ್ಷಗಳ ಹಿಂದೆ ಪುನರುದ್ಧಾರಗೊಳಿಸಿದ ಯಕ್ಷದೇವ ಮಹಾಂತನೆಂದು ಪುರಸ್ಕರಿಸಲಾಯಿತು. ಮಹಾನುಭಾವರ ನವೀಕರಣ ಹಾಗೂ ಪುನರ್ರಚನೆಯ ವೇಗವು ಅತಿ ಪ್ರಭಾವಿ ಕೇಂದ್ರಗಳಲ್ಲಿಯ ವ್ಯಕ್ತಿಗಳ ಸ್ವಭಾವವನ್ನವಲಂಬಿಸಿದೆ. ಎರಡು ಅಂತರ್ಮಹಾಯುದ್ಧ ಕಾಲದ ಅವಧಿಯಲ್ಲಿ ದೇವದೇವೇಶ್ವರ ಮಠ ಹಾಗೂ ರಿತಪುರದ ಗೋವಿಂದರಾಜ ಮಂದಿರದ ಮಹಾಂತರು ಮಹಾನುಭಾವರ ಗ್ರಂಥಗಳ ಅಭ್ಯಾಸ ಹಾಗೂ ಸಂಗ್ರಹ ಕಾರ್ಯವನ್ನು ಕೈಗೊಂಡರು ಹಾಗೂ ಅನ್ಯವಿದ್ವಾಂಸರಿಗೆ ತಿಳುವಳಿಕೆ ಕೊಡುವುದರಲ್ಲಿ ನೆರವಾದರು. ಆದರೆ ಅದೇ ಸಂಪ್ರದಾಯವನ್ನು ಮುಂದೆ ಬಂದ ಗುರುಗಳು ಕ್ರಿಯಾತ್ಮಕವಾಗಿ ನಡೆಸಿಕೊಂಡು ಹೋಗಲಿಲ್ಲ; ಅಥವಾ ಇತರ ಸುಧಾರಿಸಿದ ಕೇಂದ್ರಗಳನ್ನು ಮುಂದುವರಿಸಲಿಲ್ಲ. ಮಹಾನುಭಾವರ ಆಚಾರವಿಚಾರಗಳನ್ನು ಕುರಿತು ಪ್ರಾ. ಕೋಲ್ತೆಯವರು ಅವರಿಗಿಂತಲೂ ಸುದೀರ್ಘವಾಗಿ ಅಭ್ಯಾಸ ಮಾಡಿರುವ ಕಾರಣ ಮಹಾಂತರು ಪ್ರಾ. ಕೋಲ್ತೆಯವರ ಮೂಲಕವೇ ತಮ್ಮ ನಡುವೆ ಉದ್ಭವಿಸುತ್ತಿರುವ ತತ್ವವಿಚಾರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಿದ್ದಾರೆ. ಆದರೆ ಇದೇ ಮಹಾನುಭಾವರ ಮತ್ತೊಂದು ಪಕ್ಷದವರು ಸಂಪ್ರದಾಯಸ್ಥರಾಗಿದ್ದ ಕಾರಣ ತಮ್ಮ ನಂಬಿಕೆಗಳನ್ನು ಇತರರೊಡನೆ ಚರ್ಚೆ ಮಾಡುವುದು ಅಥವಾ ಪ್ರಕಾಶಪಡಿಸುವುದಕ್ಕಾಗಲೀ ಸಿದ್ಧರಾಗಿಲ್ಲ. 16ನೇ ಶತಮಾನದ ವೇಳೆಗೆ ಮಹಾನುಭಾವರು ತಮ್ಮ ಪಂಥವನ್ನು ಪಂಜಾಬವರೆಗೂ ವಿಸ್ತರಿಸಿ ನೂತನ ವಿಕ್ರಮವನ್ನು ಸ್ಥಾಪಿಸಿದರು. ಪಂಜಾಬದಲ್ಲಿಂದು ಜೈಕೃಷ್ಣ ಪಂಥವು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿದೆ. ಪಂಜಾಬ್ ಇಂದು ಮಹಾನುಭಾವರ ಹೊರರಾಜ್ಯವಾಗಿದೆ. ಲಾಹೋರ್ ಹಾಗೂ ಪೇಶಾವರದಲ್ಲಿ ಜೈಕೃಷ್ಣ ಮಠಗಳಿವೆ. ಮತ್ತು ಕಾಬೂಲದಲ್ಲಿಯೂ ಕೂಡ ಮಹಾನುಭಾವ ಮಠವಿರುವುದೆಂಬ ಪ್ರತೀತಿಯಿದೆ. ಭಾರತದ ವಿಭಜನೆಯನಂತರ ಕೂಡ ಮಹಾರಾಷ್ಟ್ರ, ಹಾಗೂ ಭಾರತದ ಇತರ ಹೊರ ರಾಜ್ಯದ ಮಹಾನುಭಾವದವರ ನಡುವೆ ಇದ್ದ ಸಂಪರ್ಕವನ್ನು ಸಕ್ರಿಯವಾಗಿ ಮುಂದುವರಿಸಲಾಯಿತು. ಪ್ರಮುಖ

ಮಹಾನುಭಾವ ಮಠದ ಮಹಾಂತರು ಪಂಜಾಬಿಗಳಾಗಿರಬೇಕೆಂಬ ಸಂಪ್ರದಾಯವು ಇಂದು ಬೆಳೆದುಬಂದಿದೆ. ವಾಸ್ತವವಾಗಿ ಮಹಾನುಭಾವರ ಪ್ರಭಾವಿ ಮುಖಂಡರು ಪಂಜಾಬಿಗಳಾಗಿದ್ದಾರೆ. ಅವರು ಅನೇಕ ಗ್ರಂಥಗಳ ಪ್ರಕಟನೆಯನ್ನು ಕೈಕೊಂಡಿರುವುದಲ್ಲದೆ ಅನ್ಯ ವಿದ್ವಾಂಸರಿಗೆ ಸಹಕಾರ ನೀಡುತ್ತಿದ್ದಾರೆ.

ಚಕ್ರಧರನ ನಿಧನದನಂತರ ಅವನ ಶಿಷ್ಯಸ್ತೋಮವು ಸಿದ್ಧಪಡಿಸಿದ ಗ್ರಂಥಗಳು ಮಹಾನುಭಾವರ ಆಚಾರವಿಚಾರಗಳನ್ನು ತಿಳಿದುಕೊಳ್ಳಲು ಉಪಯುಕ್ತವಾಗಿವೆ. ಚಕ್ರಧರನ ಲೀಲೆ ಅಥವಾ ಚಟುವಟಿಕೆಗಳನ್ನೊಳಗೊಂಡ ಲೀಲಾಚರಿತವೆಂಬ ಗ್ರಂಥದಲ್ಲಿ ಮೂರು ಭಾಗಗಳಿವೆ— ಏಕಾಂಕ, ಪೂರ್ವಾರ್ಧ ಮತ್ತು ಉತ್ತರಾರ್ಧ. ಆದರೆ ಈ ಗ್ರಂಥವನ್ನು ಅಸಮರ್ಪಕವಾಗಿ ಸಂಪಾದಿಸಲಾಗಿದೆ. ಚಕ್ರಧರನ ನಿಧನವಾದ ಕೂಡಲೆ ಈ ಗ್ರಂಥವನ್ನು ಅವನ ಶಿಷ್ಯ ಮ್ಹಾಹೀಂಭಟ್ಟನು ರಚಿಸಿದನೆಂದು ಊಹಿಸಲಾಗಿದೆ. ಚಕ್ರಧರನ ಪ್ರತಿಯೊಂದು ಚಟುವಟಿಕೆ ಹಾಗೂ ಹೇಳಿಕೆಗಳನ್ನು ಮ್ಹಾಹೀಂಭಟ್ಟನು ತನ್ನ ಸ್ಮರಣಶಕ್ತಿ ಹಾಗೂ ಇತರ ಶಿಷ್ಯರೊಡನೆ ನಡೆಸಿದ ಚರ್ಚೆಯ ಆಧಾರದ ಮೇಲೆ ಬರೆದಂತೆ ಕಾಣುತ್ತದೆ. ಕೇಶೋಭಾಸನು ತನ್ನ ಸ್ವಂತ ಪುನರಾವರ್ತನೆ ಹಾಗೂ ಲೀಲಾಚರಿತದ ಆಧಾರದ ಮೇಲೆ ಚಕ್ರಧರನ ಬೋಧನೆಗಳನ್ನು ಸೂತ್ರಪಾಠವಾಗಿ ಸೂತ್ರರೂಪದಲ್ಲಿ ರಚಿಸಿ ಪ್ರಕಟಿಸಿದನು. ಸೂತ್ರಪಾಠವು ಮಹಾನುಭಾವರ 'ಬೈಬಲ್' ಆಗಿದೆ. ಈ ಗ್ರಂಥವು ಹಲವು ವಿಭಾಗಗಳಾಗಿ ವಿಂಗಡಿಸಲಾಗಿದ್ದು ಕಡೆಯ ಮೂರು ಭಾಗಗಳನ್ನು ಬಿಟ್ಟು ಉಳಿದವೆಲ್ಲವೂ ಸಣ್ಣ ಪ್ರಮಾಣದಲ್ಲಿವೆ. ಕೇಶೋಭಾಸನು ದೃಷ್ಟಾಂತಪಾಠವೆಂಬ ಮತ್ತೊಂದು ವಿಭಾಗವನ್ನು ಈ ಗ್ರಂಥಕ್ಕೆ ಸೇರಿಸಿದನು. ಈ ವಿಭಾಗವು ಕೂಡ ಮಹಾನುಭಾವರ ಪವಿತ್ರ ಗ್ರಂಥವಾಗಿದೆ. ತನ್ನ ತತ್ತ್ವಗಳನ್ನು ಉದಹರಿಸಲು ಚಕ್ರಧರನು ಉಪಯೋಗಿಸಿದ ಕಥೆಗಳನ್ನೊಳಗೊಂಡಿದೆ. ನಂತರ ಬೆಳಕಿಗೆ ಬಂದ ಮಹಾನುಭಾವರ ಇತರ ರಚನೆಗಳು ಬಹುಮಟ್ಟಿಗೆ ಹಿಂದಿನ ಸಾಧನೆಗಳ ಪುನರಾವರ್ತನೆ ಅಥವಾ ಟೀಕೆಗಳಾಗಿವೆ.

ಸೂತ್ರಪಾಠದಲ್ಲಿ ಪ್ರತಿಪಾದಿಸಿರುವ ತತ್ತ್ವವನ್ನು ಮೂಲತಃ ದ್ವೈತ ಪದ್ಧತಿಯ ತಳಹದಿಯ ಮೇಲೆ ರೂಪಿಸಲಾಗಿದೆ. ಸ್ವತಃ ಚಕ್ರಧರನು ಪ್ರಕೃತಿ ಹಾಗೂ ಪುರುಷ ಎಂಬ ಎರಡು ಪ್ರಮುಖ ಸಾಂಖ್ಯಯೋಗದ ಸರಳ ತತ್ತ್ವಗಳನ್ನು ಬಿಟ್ಟುಕೊಟ್ಟು, ಜೀವ, ದೇವತಾ, ಪ್ರಪಂಚ ಮತ್ತು ಪರಮೇಶ್ವರ ಎಂಬೀ ನಾಲ್ಕು ಅನಾದಿ ಹಾಗೂ ಸ್ವತಂತ್ರ ಅಂಗಗಳನ್ನು ಪ್ರತಿಪಾದಿಸಿದನು. ದೇವತೆಯು ಜೀವದ ಬಾಹ್ಯ ಸ್ವರೂಪವೆಂದು ಮಹಾನುಭಾವರು ನಂಬಲಿಲ್ಲ. ಆದಕಾರಣ, ದೇವತೆಯನ್ನು ಪ್ರತ್ಯೇಕ ಘಟಕವನ್ನಾಗಿ ವಿಭಾಗಿಸಿ ತೀವ್ರಗಾಮಿ ದೃಷ್ಟಿಯನ್ನು ತೋರ್ಪಡಿಸಿಕೊಂಡರು. ಮೋಕ್ಷಸಾಧನೆ ಅಥವಾ ಕೈವಲ್ಯ ಸ್ಥಾನವನ್ನು ಹೊಂದುವುದೇ ಜೀವದ

ಮುಖ್ಯಗುರಿ— ಅರ್ಥಾತ್ ಈಶ್ವರ ಸ್ವರೂಪ ಪ್ರಾಪ್ತಿ ಅಥವಾ ಬ್ರಹ್ಮಸ್ವರೂಪವನ್ನು ಪಡೆಯುವುದು. ಆದರೆ, ಜೀವನು ನಿರಂತರ ಅವಿದ್ಯೆಯ ಕಾರಣ ಬ್ರಹ್ಮರೂಪಗತಿಯಿಂದ ತಡೆಹಿಡಿಯಲ್ಪಟ್ಟಿದ್ದಾನೆ. ಜೀವನು ಸಾಮಾನ್ಯವಾಗಿ ದೇವತೆಯ ರೂಪಗಳಲ್ಲೊಂದನ್ನು ಪಡೆಯಲು ಪ್ರಯತ್ನಿಸುತ್ತಿದ್ದು, ಕೆಳಮಟ್ಟದ ಗುರಿಯನ್ನು ಸಾಧಿಸುವ ಕಾರಣಕ್ಕಾಗಿಯೂ ಕೂಡ ಆತನ ಮೋಕ್ಷಸಾಧನೆಯು ವಿಳಂಬವಾಗಬಹುದು. ಜೀವನು ಈ ಮಾರ್ಗವನ್ನನುಸರಿಸಿ ಕೆಳಮಟ್ಟದ ದೇವತೆಗಳ ಅಧೀನದಲ್ಲಿರುವ ಕರ್ಮದ ಲೇಪ ಮಾತ್ರವನ್ನು ಪಡೆಯುವುದರಲ್ಲಿ ಯಶಸ್ಸನ್ನು ಹೊಂದಿದರೂ ಕೂಡ, ಕರ್ಮದ ಸಂಪೂರ್ಣ ಫಲವನ್ನು ಪಡೆಯುವ ಆಸೆಯನ್ನು ಹತ್ತಿಕ್ಕಬೇಕಾಗುವುದು. ಕರ್ಮಫಲವು ತಾತ್ಕಾಲಿಕ ರೂಪದಲ್ಲಿರುವುದು. ಜೀವನು ಪುನಃ ಕರ್ಮಪರಿ ಅಥವಾ ಕರ್ಮಪಥದಲ್ಲಿ ಬೀಳುವುದು ಅನಿವಾರ್ಯವಾಗುವುದು.

ಜೀವದ ಮೋಕ್ಷಯಾತ್ರೆಯಲ್ಲಿ ದೇವತೆಗಳ ಗಣವು ಹೆಚ್ಚು ಕಡಿಮೆ ಒಂದು ಪ್ರಬಲ ವಿರೋಧಿ ಶಕ್ತಿಯಾಗಿದೆ. ಮಹಾನುಭಾವರು ಇಡೀ ಒಂದೂ ದೇವತಾ ಸಮೂಹವನ್ನು ದೇವತೆಗಳ ಗಣದಲ್ಲಿ ಕೂಡಿಸಿದ್ದಾರೆ. 9 ಹಂತಗಳಲ್ಲಿ ಸಂಘಟಿಸಲಾಗಿರುವ ದೇವತಾಚಕ್ರದ ಕೆಳಭಾಗದಲ್ಲಿ ಕರ್ಮ ಭೂಮಿಯ ದೇವತೆಯರು ಅಂದರೆ ಯಕ್ಷರು, ಯಕ್ಷಿಣಿಯರು, ಪಶುದೇವತೆಗಳು (ಭಾವಿ ಅಥವಾ ಪಾಳುಬಿದ್ದ ಕಟ್ಟಡಗಳಲ್ಲಿ ವಾಸಮಾಡುವಂತಹ ಉಪದೇವತೆಗಳು) ಇಂತಹ 13 ಕೋಟಿ ದೇವತೆಗಳಿವೆ. ಮತ್ತು ಅವುಗಳ ಕರ್ಮಭೂಮಿ 500 ಯೋಜನೆ ವಿಸ್ತೀರ್ಣಕ್ಕೆ ಸೀಮಿತವಾಗಿದೆ. ಅರ್ಥಾತ್ ಭಾರತ ವರ್ಷದ ಅತಿ ವಿಸ್ತೀರ್ಣ ಸ್ಥಾನ.

ದೇವತಾ ಚಕ್ರದ ಶ್ರೇಣಿ ಭಾಗದಲ್ಲಿ ಮಾಯಾ ಅಥವಾ ಸೃಷ್ಟಿಯ ಸ್ತ್ರೀತ್ವವು ಅಡಗಿದೆ. ಅನಂತ ಅಥವಾ ಬ್ರಹ್ಮಾಂಡಕ್ಕೆ ಸರಿಸಮಾನವಾಗಿದೆ. ಮಾಯೆಯು ಈಶ್ವರನ ಪ್ರೇರಣೆಯಮೇರೆಗೆ ತನ್ನಲ್ಲಿ ಲೀನಗೊಂಡಿರುವ ಜೀವನನ್ನು ಹೊರಗೆಡಹುವುದು. ದೇವತಾ ಚಕ್ರದ ಮಧ್ಯಭಾಗದಲ್ಲಿ ಅಷ್ಟ ಭೈರವರು ಪಂಚಮಹಾಭೂತ ಹಾಗೂ ತಾವು ಮೈಗೂಡಿಸಿಕೊಂಡಿರುವ ಮೂರು ಗುಣಗಳ ಆಧಾರದಮೇಲೆ ಪ್ರಪಂಚದ ಸೃಷ್ಟಿ ಕಾರ್ಯದಲ್ಲಿ ತೊಡಗಿದ್ದಾರೆ. ಬ್ರಹ್ಮ, ಶಿವ ಹಾಗೂ ವಿಷ್ಣುವಿನ ಮಾರ್ಗದರ್ಶನದಲ್ಲಿ ಸತ್ಯ ಕೈಲಾಸ ವೈಕುಂಠ ದೇವತೆಗಳ ಮೂರು ವರ್ಗಗಳಿವೆ. ಅಷ್ಟ ಭೈರವರಲ್ಲಿ ಅಂದರೆ, ಪ್ರಪಂಚದ ಸೃಷ್ಟಿಸ್ಥಿತಿಲಯಗಳಲ್ಲಿ ತೊಡಗಿರುವ ದೇವತೆಗಳಲ್ಲಿ ಉಮಾಪತಿ, ಸದಾಶಿವ, ಪಶುಪತಿ, ಬ್ರಹ್ಮ, ವಿಷ್ಣು ಮತ್ತು ಮಹದೇವರು ಕೂಡಿರುವರು. ಆದರೆ ಇವು ಯಾವುದೂ ಶೈವ ಪದ್ಧತಿಯ ಭೈರವರನ್ನು ಹೋಲುವುದಿಲ್ಲ. ಕರಾಳಿ ಮತ್ತು ವಿಕ್ರಾಳಿ ಇನ್ನೆರಡು ದೇವತೆಗಳು ದ್ವಾದಶ ಸನ್ಯಾಸಿಗಳ ಕರಾಳ ಹಾಗೂ ವಿಕ್ರಾಳರನ್ನು ಹೋಲುತ್ತವೆ. ದೇವತಾಚಕ್ರವು ಆಕಸ್ಮಿಕವಾಗಿದ್ದು ಚಕ್ರಧರನು ಕೂಡ ಇದರ ಬಗ್ಗೆ ಉತ್ಸುಕನಾಗಿರಲಿಲ್ಲ. ಮತಾಂತರಗೊಳಿಸುವ ಕಾರ್ಯದಲ್ಲಿ

ಒಂದು ಅನುಕೂಲಸಿಂಧುವಾಗಿದೆ. ಯಾವುದೇ ದೇವತೆಯನ್ನು ಈ ದೇವತಾ ಚಕ್ರದಲ್ಲಿ ತೊಡಗಿಸಲಾಗಿದ್ದು ಯಾರೂ ಈ ಚಕ್ರವ್ಯೂಹವನ್ನು ಗಂಭೀರವಾಗಿ ತೆಗೆದು ಕೊಳ್ಳುವ ಪ್ರಮೇಯವಿಲ್ಲ. ಚಕ್ರಧರನ ವಿಚಾರಧಾರೆಯು ದೇವತೆಗಳ ಅಸ್ತಿತ್ವವನ್ನು ಅಲ್ಲಗಳೆಯುವ ದೃಷ್ಟಿಯಿಂದ ಮಾತ್ರ ಮಧ್ವಾಚಾರ್ಯರ ಪದ್ಧತಿಯನ್ನು ಹೋಲುತ್ತದೆ. ಚಕ್ರಧರನು ಜೀವ ಹಾಗೂ ಪರಮೇಶ್ವರ ಇವೆರಡು ಅಂಗಗಳ ನಡುವಿನ ಸಂಬಂಧವನ್ನು ಮಾತ್ರ ಮಾನ್ಯಮಾಡಿದನು. ಅವನು ಏಕಬ್ರಹ್ಮ ತತ್ವವನ್ನು ಉಪದೇಶ ಮಾಡಿದನು. ಪರಮೇಶ್ವರ, ಶ್ರೀಪ್ರಭು ಅಥವಾ ಪರಚಕ್ರಧರನು ಉತ್ಕೃಷ್ಟದೇವತೆ. ಪರಮಾತ್ಮ ಅಥವಾ ಪರಬ್ರಹ್ಮನು ವಿಶ್ವದಲ್ಲಿ ಅವತಾರವೆತ್ತಿ ಜೀವಗಳಿಗೆ ಮೋಕ್ಷ ದೊರಕಿಸುವ ಹೊಣೆಗಾರಿಕೆಯ ಕರ್ತವ್ಯದಲ್ಲಿ ನೆರವಾಗಿದ್ದಾನೆ. ಕೃಷ್ಣನ ಅವತಾರವು ಅತಿ ಶ್ರೇಷ್ಠ ಅವತಾರವಾದರೂ ಕೂಡಾ ವಿಷ್ಣುವಿನ ಪ್ರತಿರೂಪವಾಗಿರುವುದಿಲ್ಲ. ಕೃಷ್ಣನು ಸ್ವತಂತ್ರ ವ್ಯಕ್ತಿ. ಗೀತೋಪದೇಶವನ್ನು ಮಾಡಿದ ಕೃಷ್ಣ.

ಪರಮೇಶ್ವರನು ಜೀವನಿಗೆ ಜ್ಞಾನ ಹಾಗೂ ಪ್ರೇಮ ಮಾರ್ಗದ ಮೂಲಕ ಮೋಕ್ಷವನ್ನು ಅನುಗ್ರಹಿಸುತ್ತಾನೆ. ಈ ದ್ವಂದ್ವಸುಳಿಯಲ್ಲಿ ಪ್ರೇಮಾರಾಧಕರ, ಅರ್ಥಾತ್ ಭಕ್ತನು ಬ್ರಹ್ಮನಿಗೆ ಹೆಚ್ಚು ಪ್ರಿಯ. ಬ್ರಹ್ಮನು ಭಕ್ತನಲ್ಲಿ ಪ್ರೇಮವನ್ನು ಹುಟ್ಟಿಸಿ ಅವನು ತನ್ನ ಕಣ್ಣ ಮುಂದೆ ಸುಳಿಯುವಂತಾಗಿಸುತ್ತಾನೆ. ಆಗ ಜ್ಞಾನಿಯು ಹಿಂದೆ ಸರಿಯುತ್ತಾನೆ. ಮಹಾನುಭಾವರ ವಿಚಾರ ದೃಷ್ಟಿಕೋನವು ವ್ಯವಹಾರಿಕ ರೂಪದಲ್ಲಿದೆ ಮತ್ತು ವೇದಾಂತಿಗಳ ನಂಬಿಕೆಗಿಂತ ಭಿನ್ನ ಹಾಗೂ ಪ್ರತ್ಯೇಕವಾಗಿದೆ. "ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ" ಎಂಬ ವೇದಾಂತಿಗಳ ವಾದವು ಮಹಾನುಭಾವರ ವಿಚಾರಕ್ಕೆ ವಿರುದ್ಧವಾಗಿದೆ. ಅರ್ಥಾತ್ ಒಲುಮೆ ಅಥವಾ ಭಕ್ತಿಯು ಒಂದೇ ಮಾದರಿಯ ಫಲಿತಾಂಶವನ್ನು ಕೊಡುವುದೆಂಬ ವೈದಿಕವಾದಕ್ಕೆ ಮಹಾನುಭಾವರ ತತ್ತ್ವವು ವಿರುದ್ಧವಾಗಿದೆ. ಸೂಕ್ತಪಾಠದ ವಿಚಾರ ಹಾಗೂ ವಿಚಾರಮಾಲಿಕೆಯಲ್ಲಿ ಅಳವಡಿಸಲಾಗಿರುವ ವಿಚಾರಗಳನ್ನು ಪೂರ್ವಭಾವಿ ಪದ್ಧತಿಯು ಸರ್ವಧರ್ಮ ಸಮನ್ವಯ ತತ್ತ್ವದ ತಳಹದಿಯಮೇಲೆ ನಿರ್ಮಿಸಲಾಗಿದೆ. ಜೀವನು ಕೆಳಮಟ್ಟದ ಜ್ಞಾನ ಹಾಗೂ ಶಕ್ತಿ ಸಂಪಾದನೆಯಲ್ಲಿ ತೊಡಗಿರುವನೆಂಬ ವಿಚಾರ ಧಾರೆಯು ಸೂತ್ರ, ವೇದಾಂತ, ಯೋಗ ಹಾಗೂ ತಾಂತ್ರಿಕ ಪದ್ಧತಿಗಳ ಪ್ರಭಾವ ಕ್ಕೊಳಗಾಗಿದೆ. ಚಕ್ರಧರನು ಮಧ್ವಾಚಾರ್ಯರ ಸಮಕಾಲೀನನು. ಅವನು ಪ್ರತಿ ಪಾದಿಸಿರುವ ತತ್ವಗಳಲ್ಲಿ ಪೂರ್ಣಾದ್ವೈತದ ಪ್ರಭಾವವನ್ನು ಕಾಣುತ್ತೇವೆ. ಸೂತ್ರ ಪಾಠದ ಭಾಷಾಂತರ ಹಾಗೂ ಸಂಪಾದನೆಯು ಹೆಚ್ಚು ಸಮರ್ಪಕವಾಗಿದ್ದರೆ ಮಹಾನು ಭಾವ ತತ್ವಗಳಮೇಲೆ ಪರಸ್ಪರ ಪ್ರಭಾವ, ವಿಷಯಸಂಗ್ರಹಣೆ ಮತ್ತು ವಾದಸರಣಿ ಇವುಗಳನ್ನು ಕುರಿತು ಹೆಚ್ಚು ಬೆಳಕನ್ನು ಚೆಲ್ಲಲು ಸಾಧ್ಯವಾಗುತ್ತಿತ್ತು. ಸೂತ್ರ

ಪಾಠ ಹಾಗೂ ಲೀಲಾಚರಿತ್ರದ ನಡುವಣ ಸಂಬಂಧ ಹಾಗೂ ಪರಸ್ಪರ ಹೊಂದಾಣಿಕೆಯನ್ನು ಇನ್ನು ಸಕ್ರಿಯವಾಗಿ ಅಭ್ಯಾಸ ಮಾಡಿಲ್ಲ. ಮಹಾನುಭಾವ ವಿಚಾರವನ್ನು ಪರಿಪೂರ್ಣವಾಗಿ ವಿವೇಚಿಸಿ ಪ್ರಚುರಪಡಿಸುವ ಕಾರ್ಯದಲ್ಲಿ ಪ್ರಾ. ಕೋಲ್ತೆಯವರು ಬಹು ಪ್ರಯಾಸಪಟ್ಟಿದ್ದಾರೆ. ಆದರೆ ಅವರು ತಮ್ಮ ಸಂಶೋಧನೆಯನ್ನು ವಿಚಿತ್ರ ಸನ್ನಿವೇಶದಲ್ಲಿ ನಡೆಯಿಸಿದರು. ಮಹಾನುಭಾವರ ಹೇಳಿಕೆಯ ಆಧಾರವಮೇಲೆಯೇ ಅವರು ತಮ್ಮ ಸಂಶೋಧನೆಯನ್ನು ಅವಲಂಬಿಸಿದ್ದರೂ ಮಹಾನುಭಾವರು ಅಪರಿಚಿತನೊಬ್ಬನಿಗೆ ತಮ್ಮ ತತ್ತ್ವಗಳ ಗೂಡಾರ್ಥದ ಪೊರೆಯನ್ನು ಸರಿಸದಿದ್ದ ಕಾರಣ ಕೋಲ್ತೆಯವರು ಪ್ರಾಯಶಃ ಪ್ರಮಾಣಯುಕ್ತ ಅಂಶಗಳನ್ನು ಇತರ ಅಂಶಗಳಿಂದ ಬೇರ್ಪಡಿಸಲು ಸಾಧ್ಯವಾಗಲಿಲ್ಲ. ಲೀಲಾಚರಿತ್ರೆಯಲ್ಲಿ ಉಲ್ಲೇಖಿಸಿರುವ ಚಕ್ರಧರನ ಹೇಳಿಕೆಗಳು ಮತ್ತು ಸೂತ್ರಪಾಠ ಹಾಗೂ ಟೀಕಾಕಾರರಲ್ಲಿ ಕಂಡುಬರುವ ಅಭಿಪ್ರಾಯಗಳ ನಡುವೆ ಇರುವ ಅಧಿಕೃತ ವ್ಯತ್ಯಾಸಗಳನ್ನು ಪರೀಕ್ಷಿಸಿ ನೋಡುವ ಅವಕಾಶ ಒದಗಲಿಲ್ಲ.

ಸೂತ್ರಪಾಠದ ಆಚಾರ ಹಾಗೂ ಆಚಾರಮಾಲಿಕೆಯ ವಿಭಾಗಗಳು ಮುಖ್ಯವಾಗಿ ಚಕ್ರಧರ ಅಥವಾ ಪರಮೇಶ್ವರನ ಶಿಷ್ಯರು ಅನುಸರಿಸತಕ್ಕ ಮಾರ್ಗವನ್ನು ವಿವರಿಸಿವೆ. ಮಹಾನುಭಾವರು ಪ್ರಾಪಂಚಿಕ ಸಂಸಾರವನ್ನು ತೊರೆದು ನಡೆಸಬೇಕಾದ ಪರ್ಯಟನದ ಸನ್ಯಾಸಿಯ ಜೀವನವನ್ನು ಚಿತ್ರಿಸಿವೆ. ಮಹಾನುಭಾವರು ನಿತ್ಯಾಟನ ಅಥವಾ ಸತತವಾಗಿ ಪರ್ಯಟನ ಮಾಡುತ್ತಿರಬೇಕೆಂದು ಚಕ್ರಧರನು ವಿಶೇಷವಾಗಿ ಬೋಧಿಸಿದನು. ''ನಿಮ್ಮನ್ನು ಯಾರೂ ಅರಿಯಬಾರದು ; ನೀವು ಯಾರನ್ನೂ ಅರಿಯಬಾರದು."[3] ಅಂಥಹ ಸ್ಥಳದಲ್ಲಿ ಮಹಾನುಭಾವರು ಇರಬೇಕೆಂದು ಚಕ್ರಧರನು ತನ್ನ ಶಿಷ್ಯರಿಗೆ ಸಲಹೆ ನೀಡಿದನು. ವಿಜನ ಅಂದರೆ "ನಿನ್ನ ಇಡೀ ಜೀವನವನ್ನು ಹಳ್ಳಿಯ ಕಟ್ಟಕಡೆಯ ಗಿಡ ಅಥವಾ ಮರದ ಕೆಳಗೆ ಸವೆಸು."[4] ನಾಮಸ್ಮರಣೆ ಪರಮೇಶ್ವರನ ನಾಮ ಹಾಗೂ ಕ್ರಿಯಾ ಸಂಕೀರ್ತನ ಅಥವಾ ಸ್ಮರಣೆ ಈ ರೀತಿಯ ಸನ್ಯಾಸಿ ಜೀವನದಲ್ಲಿ ವ್ಯವಹಾರಿಕ ವಿಷ್ಣುಭಕ್ತಿಯು ಸಾಕು. ಗೀತೋಪದೇಶಕ ಕೃಷ್ಣನು ಮಾತ್ರ ಸ್ಮರಣೆಗೆ ಅರ್ಹನು. ಈ ಚೌಕಟ್ಟಿನಲ್ಲಿ ಪಂಢರಪುರದ ವಿಠೋಬನಂತಹ ದೇವತಾಮೂರ್ತಿಯ ಪ್ರತಿಷ್ಠಾಪನೆ ಅಥವಾ ಪೂಜೆಗೆ ಅವಕಾಶವಿಲ್ಲ. ತೀರ್ಥ, ದೇವತಾ, ಪುರುಷ ಇವು ಮೂರನ್ನು ಯಾವುದೇ ಕಾರಣದಿಂದ ದೂರವಿಡಬೇಕೆಂದು ಚಕ್ರಧರನು ತನ್ನ ಶಿಷ್ಯರಿಗೆ ಬೋಧಿಸಿದ್ದಾನೆ.[5] ಸ್ಮರಣ ಅನುಸ್ಮರಣ ಹಾಗೂ ಸಕೃತ್ ಸ್ಮರಣ ಇವು ಮೂರರ ಅವಶ್ಯಕತೆಯನ್ನು ಮಾತ್ರ ಚಕ್ರಧರನು ಮನಮುಟ್ಟುವಂತೆ ಕೆಳಗಿನ ವಾಕ್ಯದಲ್ಲಿ ಹೇಳಿದ್ದಾನೆ. "ನಿನ್ನ ಶಯನ, ಭೋಜನ, ಆಸನದಲ್ಲಿ ಪರಮಾತ್ಮನೇ ನಿನ್ನ ಸಹವಾಸಿಯಾಗಬೇಕು."[6] ಯಾರೊಬ್ಬರೂ ತನ್ನ ಗುರುವಿಗೆ ವಿಶೇಷ ಮನ್ನಣೆ ಕೊಡುವ ಕಾರಣವಿಲ್ಲ. ಯಾಕೆಂದರೆ ಅದೊಂದು

ಉಳಿಗತನವಾಗುವುದು. ಗುರುವು ಕೂಡ ಮಾನವ ಜೀವಿ. ಗುರುವಿನಿಂದ ನಿಜವಾದ ಶಿಕ್ಷಣವನ್ನು ಪಡೆಯುವ ಮಟ್ಟಿಗೆ ಅವನನ್ನು ಆಶ್ರಯಿಸಿ ನಂತರ ಪ್ರತ್ಯೇಕ ಒಂಟಿ ಜೀವನವನ್ನು ಆರಂಭಿಸಲು ಹೊರಡಬೇಕು. ಪರ್ಯಟನಕಾಲದಲ್ಲಿ ಅದೇ ಪಂಥದ ಶಿಷ್ಯನಾಗಲಿ ಸಹಚರನಾಗಲಿ ಸಿಕ್ಕಿದರೆ ಅವನೊಡನೆ 5 ದಿನಗಳು ಮಾತ್ರವಿದ್ದು, ಈ ಅವಧಿಯಲ್ಲಿ ಪರಸ್ಪರ ನಂಬಿಕೆಯನ್ನು ಮಾತ್ರ ಸ್ಥಿರಪಡಿಸಲು ಅವಶ್ಯಕವಾದ ವಾದವನ್ನು ಉಪಯೋಗಿಸತಕ್ಕದ್ದು. ಅಧೀನರು, ಅಶಕ್ತರು ಅಥವಾ ವಯಸ್ಕರು ಮಾತ್ರ ತಮ್ಮ ಗುರುಗಳ ಸಾನ್ನಿಧ್ಯದಲ್ಲಿದ್ದು ಇತರರು ಸ್ವೀಕರಿಸಿದ ಭಿಕ್ಷೆಯ ಮೇಲೆ ಜೀವಿಸಬಹುದು.

ತ್ಯಾಗಜೀವನವನ್ನಲ್ಲದೆ ಮಹಾನುಭಾವರು ಅಹಿಂಸಾಮಾರ್ಗಕ್ಕೆ ಕೂಡ ಪುರಸ್ಕಾರ ನೀಡಿದರು. "ನಿನ್ನ ಕಾರಣಕ್ಕಾಗಿ ಒಂದು ಇರುವೆಗೂ ಕೂಡ ವೈದ್ಯವು ಪ್ರಾಪ್ತವಾಗಬಾರದು" ಎಂಬ ನಿರ್ಬಂಧವನ್ನು ಚಕ್ರಧರನು ವಿಧಿಸಿದ್ದನು.[7] ತಾವು ಕುಡಿಯುವ ನೀರನ್ನು ಕೂಡ ಮೂರು ಪದರ ಬಟ್ಟೆಯಲ್ಲಿ ಶೋಧಿಸಿ ಕುಡಿಯುವ ಪದ್ಧತಿಯನ್ನು ಮಹಾನುಭಾವರು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ಚಕ್ರಧರನು ಬೋಧಿಸಿದ ತತ್ವಗಳ ತಿರುಳು ಹೀಗಿದೆ : ನಿರಂತರವೂ ಪರಮೇಶ್ವರನ ಧ್ಯಾನ; ನಿರ್ಜನ ಪ್ರದೇಶದಲ್ಲಿ ಜೀವನ ಸಾಗಿಸುವುದು ; ಅವಸಾನ ಕಾಲದಲ್ಲಿ ಅಥವಾ ಸಂಕಟಪರಿಸ್ಥಿತಿಯಲ್ಲಿ ಮಾತ್ರ ಮಾನವನೊಡನೆ ಸಂಪರ್ಕ ಬೆಳಸುವುದು ; ಹೊಗಳಿಕೆಗಾಗಲಿ ತೆಗಳಿಕೆಗಾಗಲಿ ಸಮಾನ ಮನ್ನಣೆ ಕೊಡುವುದು.[8] ಚಕ್ರಧರನು ಸನ್ಯಾಸಿ ಜೀವನಕ್ಕೆ ಮಾತ್ರ ಅನ್ವಯಿಸುವ ಶಿಸ್ತಿನ ಸಾಧನೆಯನ್ನು ರೂಪಿಸಿದನೇ ಹೊರತು ಉಪಾಸಕರಿಗೆ ಯಾವುದೇ ವಿಧವಾದ ಕ್ರಮವನ್ನಾಗಲಿ ಅಥವಾ ಸಂಘಟನೆಯ ಸೂತ್ರವನ್ನಾಗಲಿ ವಿಧಿಸಲಿಲ್ಲ. ಸ್ವತಃ ತಾನು ಪರಮೇಶ್ವರನ ಪ್ರತಿರೂಪವೆಂದೂ ಶಿಷ್ಯರು ತನ್ನ ಜೀವನ ಹಾಗೂ ಕಾರ್ಯಗಳ ಸ್ಮರಣೆಯಲ್ಲಿಯೇ ನಿರತರಾಗಿರತಕ್ಕದ್ದು. ಗೀತೋಪದೇಶಕನೆಂದು ಮಾತ್ರ ಕೃಷ್ಣನಲ್ಲಿ ನಂಬಿಕೆಯಿಡುವುದು. ಸೂತ್ರಪಾಠವು ಭಾಗವತ ಕಥೆಯನ್ನು ಉಲ್ಲೇಖಿಸಿದೆಯಾದರೂ ಚಕ್ರಧರನು ಅವುಗಳಿಗೆ ಹೆಚ್ಚು ಮಹತ್ವಕೊಡಲಿಲ್ಲ. ಗೀತೆಯು ಮಾತ್ರ ಕೃಷ್ಣನ ಸಂದೇಶ ; ಮಿಕ್ಕವೆಲ್ಲವೂ ವ್ಯಾಸ ರಚಿತ. ಚಕ್ರಧರನು ಕೃಷ್ಣನ ಬಾಲಲೀಲೆ ಅಥವಾ ಅವನು ಯೋಧನಾಗಿ ಗಳಿಸಿದ ಕೀರ್ತಿಗೆ ಮಹತ್ವ ಕೊಡಲಿಲ್ಲ. ಚಕ್ರಧರನ ಉಪದೇಶಗಳು ಆಚಾರ ವಿಚಾರಕ್ಕೆ ಮಾತ್ರ ಸೀಮಿತವಾಗಿದೆ. ಅವನು ಕೊಟ್ಟಿರುವ ಉದಾಹರಣೆಗಳು ಕೂಡ ಸಮಕಾಲೀನ ಜೀವನ ಅಥವಾ ಪ್ರಪಂಚಕ್ಕೆ ಸಂಬಂಧಿಸಿದೆ. ಚಕ್ರಧರನು ತ್ಯಾಗಜೀವನ ಅಥವಾ ಸನ್ಯಾಸ ಎಂಬೆರಡು ಅಂಶಗಳನ್ನು ಮಾತ್ರ ಮನಮುಟ್ಟುವಂತೆ ಹೇಳಿರುವುದರಿಂದ ಸಾಮಾಜಿಕ ಸ್ಥಾನಮಾನ ಅಥವಾ ಲಿಂಗ ಭೇದವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಯೋಗ್ಯ ಶಿಕ್ಷಣ ಪಡೆದ ಮಹಿಳೆಯರು, ಶೂದ್ರರು ಅಥವಾ

ಉತ್ತಮ ವರ್ಗದವರು ಕೂಡ ಮೋಕ್ಷಸಾಧನೆಗೆ ಅಥವಾ ಜ್ಞಾನಾರ್ಜನೆಗೆ ಅರ್ಹರು. ನಾಲ್ಕುವರ್ಗದವರಿಂದಲೂ ಭಿಕ್ಷೆಯನ್ನು ಸ್ವೀಕರಿಸುವುದೆಂದು ತನ್ನ ಶಿಷ್ಯರಿಗೆ ಚಕ್ರಧರನು ನೀಡಿದ ಸಲಹೆಯು ಮಹಾನುಭಾವರಲ್ಲಿ ಒಂದು ಹೆಮ್ಮೆಯ ವಿಷಯವಾಗಿ ಉಳಿಯಿತು. ಸ್ವತಃ ಚಕ್ರಧರನು ಅವನ ಶಿಷ್ಯರಲ್ಲಿ ಕೆಲವರು ಬ್ರಾಹ್ಮಣ ಧರ್ಮಕ್ಕೆ ಸೇರಿದವರಾಗಿದ್ದರೂ ಕೂಡ, ಬ್ರಾಹ್ಮಣರು ಅವನನ್ನು ಚಿತ್ರಹಿಂಸೆ ಮಾಡಿದರು. ಅವನ ತತ್ತ್ವಗಳನ್ನು ತಿರಸ್ಕಾರದಿಂದ ಕಂಡರು. ಆದಕಾರಣ ಅವನು ಬ್ರಾಹ್ಮಣರನ್ನು ಕುರಿತು ಹೆಚ್ಚು ವಿಚಾರಮಾಡಲಿಲ್ಲ. ಬ್ರಾಹ್ಮಣರು ಪಾಲಿಸುತ್ತಿದ್ದ ನಿತ್ಯಾನುಷ್ಠಾನ ಪರಿಶುದ್ಧತೆಯ ಕರ್ಮಗಳ ಬಗ್ಗೆ ಅವನಿಗೇನೂ ಅನ್ನಿಸಲಿಲ್ಲ.

ಚಕ್ರಧರನ ನಿಧನದ ತರುವಾಯ ಅವನ ಬೋಧನೆಗಳು ನೀರಸ ಹಾಗೂ ನಿಸ್ಸಾರ ರೂಪಗೊಂಡು ಅವನೊಡನೆಯೇ ಲಯ ಹೊಂದಿರಬಹುದು. ವಾಸ್ತವವಾಗಿ ಮಹಾನುಭಾವರು ಮುಂದೆ ಅಭಿವೃದ್ಧಿ ಮಾರ್ಗದಲ್ಲಿ ಸಾಗಿದ್ದಲ್ಲದೆ ಜನಾನುರಾಗಕ್ಕೆ ಪಾತ್ರರಾದರು. ಚಕ್ರಧರನ ನಿಧನದ ನಂತರವೇ ಮನ್ನಣೆಯನ್ನು ದೊರಕಿಸಿದ ದತ್ತಾತ್ರೇಯ ಪೂಜೆಯನ್ನು ಒಂದು ಪ್ರಮುಖ ಘಟನೆಯೆಂದು ಭಾವಿಸಲಾಗಿದೆ. ದತ್ತಾತ್ರೇಯನ ಬಗ್ಗೆ ಚಕ್ರಧರನಲ್ಲಿ ದ್ವೇಷವಿರಲಿಲ್ಲವಾದರೂ ಕೆಲವು ಕಾರಣಗಳಿಂದ ಮಾಹೂರು ಅಥವಾ ಕೊಲ್ಲಾಪುರಕ್ಕೆ ಮಹಾನುಭಾವರು ಹೋಗುವುದನ್ನು ನಿಷೇಧಿಸಿದ್ದನು. ತನ್ನ ಜೀವಮಾನ ಕಾಲದಲ್ಲಿ ಸ್ವತಃ ತಾನು ಮಾಹೂರಿಗೆ ಹೋಗಲಿಲ್ಲ. ಮಾಹೂರು ಕ್ಷೇತ್ರವು ರೇಣುಕಾ ಹಾಗೂ ದತ್ತಾತ್ರೇಯರ ನಡುವೆ ಹಂಚಿಹೋಗಿದ್ದು ಕೊಲ್ಲಾಪುರದಂತೆ ದೇವಿ ಆರಾಧನೆಯ ಕೇಂದ್ರವಾಗಿತ್ತು. ದೇವೀ ಶಕ್ತಿಯು ಮೋಕ್ಷ ಸಾಧನೆಗೆ ಒಂದು ವಿಘ್ನವೆಂದು ಚಕ್ರಧರನ ನಂಬಿಕೆಯಿದ್ದ ಕಾರಣ ದೇವೀ ಕ್ಷೇತ್ರಗಳನ್ನು ಸಂದರ್ಶಿಸುವುದನ್ನು ನಿಷೇಧಿಸಿದ್ದನು. ದತ್ತಾತ್ರೇಯ ಅವತಾರದಲ್ಲಿ ಚಕ್ರಧರನಿಗೆ ನಂಬಿಕೆಯಿತ್ತು. ಗೋವಿಂದ ಪ್ರಭುವಿನ ಗುರು ಚಂಗದೇವನು ದತ್ತಾತ್ರೇಯನ ಆರಾಧಕನಾಗಿದ್ದನು. ಚಕ್ರಧರನ ಪ್ರೇರಣೆಗೆ ವಿರುದ್ಧವಾಗಿ ನಾಗದೇವನು ಗೋವಿಂದ ಪ್ರಭುವಿನ ಕೂಡ ರೀತಪುರದಲ್ಲಿದ್ದ ಕಾಲದಲ್ಲಿ ಮಾಹೂರು ಬೆಟ್ಟವನ್ನು ಸಂದರ್ಶಿಸಿ ಬರುತ್ತಿದ್ದನು. ಈ ಪರಿಸ್ಥಿತಿಗೆ ಗೋವಿಂದ ಪ್ರಭುವೇ ಕಾರಣನೆಂದು ಅವನ ಚರಿತ್ರೆಯಿಂದ ವ್ಯಕ್ತವಾಗುತ್ತದೆ. ಗೋವಿಂದ ಪ್ರಭುವು ಮೃತ್ಯುಶಯ್ಯೆಯಲ್ಲಿದ್ದಾಗ ನಾಗದೇವನ ಪ್ರಶ್ನೆಗೆ ಮಾಹೂರು ಹೋಗುವುದೆಂದು ಉತ್ತರಕೊಟ್ಟನಂತೆ.[9] ಇದೊಂದು ಕವೀಶ್ವರನೇ ಹೂಡಿದ ತಂತ್ರವೆಂದು ನಂಬಲಾಗಿದೆ. ಕವೀಶ್ವರನು ಮಾಹೂರಿಗೆ ಹೋಗಿ ಬರುತ್ತಿದ್ದುದಲ್ಲದೆ, ದತ್ತಾತ್ರೇಯ ಬೆಟ್ಟದ ಕೆಳಗಿರುವ ದೇವ ದೇವೇಶ್ವರ ಮಠದ ಯಾಜಮಾನ್ಯವನ್ನು ಇಂದು ಕವೀಶ್ವರ ಆಮ್ನಾಯರು ನಡೆಸುತ್ತಿದ್ದಾರೆ. ಇದರ ಸಮರ್ಥನೆಗಾಗಿಯೇ ಈ ಕಟ್ಟುಕತೆಯನ್ನು ಹುಟ್ಟಿಸಲಾಗಿದೆ. ಆದರೆ ಕವೀಶ್ವರ ವಿರೋಧಿಗಳಾಗಿದ್ದ ಉಪಾಧ್ಯೆ ಆಮ್ನಾಯರು ಮಾಹೂರಿಗೆ ಹೋಗುವುದನ್ನು ಬಹಿಷ್ಕರಿಸಿದ್ದರು.

ಚಕ್ರಧರನ ನಂತರ ಮಹಾನುಭಾವರು ಬ್ರಾಹ್ಮಣೇತರರನ್ನು ತಮ್ಮ ಧರ್ಮಕ್ಕೆ ಸೇರಿಸುವ ಕಾರ್ಯದಲ್ಲಿ ತೊಡಗಿದರು. ಅವರಿಗಾಗಿ ಹೊಸ ತತ್ತ್ವಗಳ ಅವಶ್ಯಕತೆಯು ಉದ್ಭವಿಸಿದ ಕಾರಣ ಬೈದೇವ ಭಾಸನು ಜನಸ್ತೋಮಕ್ಕೆ ಅದರಲ್ಲಿಯೂ ದಲಿತ ವರ್ಗದವರಿಗೆ ತಿಳಿಯುವ ಹಾಗೆ ಪೂಜಾವಸರ ಮತ್ತು ಪ್ರಸಾದಸೇವಾ ಎಂಬ ಎರಡು ಗ್ರಂಥಗಳನ್ನು ರಚಿಸಿದನು. ಮಹಾನುಭಾವರಲ್ಲಿ ಬೆಳೆದು ಬಂದಿರುವ ಮತ್ತೊಂದು ಸಂಪ್ರದಾಯವನ್ನು ಇಲ್ಲಿ ಸ್ಮರಿಸಬಹುದು. "ಓಟಿ" ಅಥವಾ ತಾನು ಕೂಡುತ್ತಿದ್ದ ಪೀಠವನ್ನು ಮಹಾನುಭಾವರು ನಮಸ್ಕರಿಸಲು ಮರೆಯಬಾರದೆಂದು ಚಕ್ರಧರನು ವಿಧಿಸಿದ್ದನು. ಇಂದು ಮಹಾನುಭಾವರು ವಾಸಿಸುವ ಪ್ರತಿಯೊಂದು ಹಳ್ಳಿಯಲ್ಲಿಯೂ 'ಓಟಿ' ಯನ್ನು ಸಂಸ್ಥಾಪಿಸುವ ಪರಿಪಾಠವಿರುವುದು. ಇದೊಂದು ದೇವತಾ ಪೂಜೆಯೆಂದು ತಿಳಿಯುವುದು. 'ಓಟಿ' ಪೂಜೆಯಲ್ಲಿ ಕೇವಲ ಚಕ್ರಧರನ ಸಂಬಂಧವನ್ನು ಮಾತ್ರ ಇಟ್ಟುಕೊಳ್ಳಲಿಲ್ಲ. ಮಾಹೂರಲ್ಲಿ ಇಂದು ಮಹಾನುಭಾವರಿಂದ ಪೂಜಿಸಲಾಗುತ್ತಿರುವ ಲಿಂಗವು ಮಹದೇವನಿಗೆ ಸಂಬಂಧಿಸಿರುವುದಿಲ್ಲ. ಆದರೆ ಅದು ಮಹಾನುಭಾವರಲ್ಲಿ 'ಸಂಬಂಧಿ' ಸ್ಥಾನವನ್ನು ಗಳಿಸಿರುವುದರಿಂದ ಮಾತ್ರ ಪೂಜಾರ್ಹತೆಯನ್ನು ಪಡೆದಿದೆ. ಮಹಾನುಭಾವರು ನಂಬಿರುವ ಪಂಚಕೃಷ್ಣ ಅವತಾರ[10] ಗಳಿಗೂ ಓಟಿಗೂ ಸಂಬಂಧವನ್ನು ಕಲ್ಪಿಸಿದ್ದಾರೆ. ಪಂಚಕೃಷ್ಣರಲ್ಲಿ ಯಾರಾದರೊಬ್ಬರು ವಸ್ತು ಅಥವಾ ಪೀಠವನ್ನು ಮುಟ್ಟಿದರೆ ಅದು ಸಂಬಂಧಿ ಸ್ಥಾನವನ್ನು ಗಳಿಸುತ್ತದೆ.

ಮಹಾನುಭಾವರಲ್ಲಿಂದು ಪರಸ್ಪರ ವಿರೋಧಾಭಾಸವನ್ನು ಕಾಣುತ್ತೇವೆ. ಮಹಾನುಭಾವರು ಒಂದು ದೃಷ್ಟಿಯಿಂದ ಪರಮೇಶ್ವರನನ್ನು ಆರಾಧಿಸುವ ಬುದ್ಧಿಪೂರ್ವಕ ಪಂಥವಾಗಿದ್ದರೆ ಮತ್ತೊಂದು ಕಡೆ ನೂರಾರು ಮೂರ್ತಿಪೂಜೆಯ ಭಕ್ತರಾಗಿದ್ದಾರೆ. ತಮ್ಮ ಸೂತ್ರಪಾಠದಲ್ಲಿ "1650 ತೀರ್ಥಕ್ಷೇತ್ರಗಳಿಗೆ ನನ್ನ ನಮಸ್ಕಾರ"[11]ವೆಂದು ಹೇಳಿಕೊಂಡಿರುವುದು ಮಹತ್ವಪೂರ್ಣವಾಗಿದೆ. ಸಂಬಂಧಿ ತತ್ತ್ವವನ್ನು ಬಳಸಿಕೊಂಡು ಅವರು ಇಂದು ಅನೇಕ ದೇವಸ್ಥಾನಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಿದ್ದಾರೆ. ಮಹಾನುಭಾವರ ಧರ್ಮವು ಇಂದು ಒಂದು ಜನಪ್ರಿಯ ಧರ್ಮವಾಗಿದೆ. ಅವರು ಇತರ ಧರ್ಮಗಳನ್ನು ಎಷ್ಟರಮಟ್ಟಿಗೆ ತಮ್ಮಲ್ಲಿ ಅಳವಡಿಸಿಕೊಂಡಿರುವರೆಂದು ಅವರು ಇಂದು ಪುರಸ್ಕರಿಸುತ್ತಿರುವ ದೇವಸ್ಥಾನಗಳ ಹೆಸರುಗಳನ್ನು ಅರಿಯುವುದರಿಂದ ವ್ಯಕ್ತವಾಗುತ್ತದೆ. ಮಾಹೂರದ ದೇವದೇವೇಶ್ವರಲಿಂಗ, ರೀತಪುರದ ಕೊಲ್ಹಾಪುರ್ ಆಯಿ ಹಾಗೂ ಗಣಪತಿ, ಬೇಲೂರದ ಭೀಮೇಶ್ವರ ಲಿಂಗ. ಪೂಜಾಡೆಯ ಗೋಪಾಲಕೃಷ್ಣ, ಅಪೆಗಾಂವದ ವಿಜ್ಞಾನೇಶ್ವರ ಲಿಂಗ, ಇದಲ್ಲದೆ ತಮ್ಮ ಗುರುಗಳಿಗೆ ಸಂಬಂಧಿಸಿದ ಗುರುಗಳ ಸಂಕೇತ ಅಥವಾ ಅವಶೇಷಗಳನ್ನು ಕೂಡ ಕಾದಿಟ್ಟಿದ್ದಾರೆ. ಪ್ರತಿಯೊಂದು ಮಹಾನುಭಾವರ

ಪ್ರಮುಖ ಮಠದಲ್ಲಿಂದು ಗೋವಿಂದ ಪ್ರಭುವಿಗೆ ಸಂಬಂಧಿಸಿದ ದಂತ ಅಥವಾ ಉಗುರು ಹಾಗೂ ಚಕ್ರಧರನ ವಸ್ತ್ರಗಳ ಅವಶೇಷಗಳನ್ನು ಗೌರವದಿಂದ ಕಾಪಾಡಿ ಪೂಜಿಸಲಾಗುತ್ತಿದೆ. ಇವುಗಳ ಪೂಜೆಗಾಗಿ ಪ್ರಸಾದಾಭಿಷೇಕವೆಂಬ ಕ್ರಮವತ್ತಾದ ಪೂಜೆಯನ್ನು ನಡೆಸಲಾಗುತ್ತಿದೆ. ಚಕ್ರಧರನು ತನ್ನ ಅರಿವೆಯ ತುಂಡೊಂದನ್ನು ಪರಮೇಶ್ವರನ ಪೂಜೆಗಾಗಿ ಬಿಟ್ಟು ಹೋಗಿದ್ದಾನೆ.

ಮಹಾನುಭಾವರು ತಮ್ಮ ಮನೆ ದೇವತೆಗಳನ್ನು ಅತ್ಯಂತ ಗೌರವ ರೀತಿಯಿಂದ ಬೀಳ್ಕೊಡಬೇಕೆಂಬ ನಿಯಮವನ್ನು ವಿಧಿಸಿದ್ದಾರೆ. ಅವುಗಳನ್ನು ಸಮೀಪದಲ್ಲಿರುವ ಯೋಗ್ಯವಾದ ದೇವಸ್ಥಾನವೊಂದರಲ್ಲಿ ಸ್ಥಾಪಿಸಬೇಕು. ಹಾಗೂ ಅವುಗಳ ಸ್ಥಾನದಲ್ಲಿ ಒಂದು ಸಂಬಂಧಿ ಶಿಲೆ ಅಥವಾ ಅದರಿಂದ ನಿರ್ಮಿಸಿದ ವಿಗ್ರಹವನ್ನು ಇಡತಕ್ಕದ್ದು. ಮಹಾನುಭಾವರು ಇಂದು ತಮ್ಮ ಸುತ್ತಮುತ್ತಲೂ ಹೆಣೆದುಕೊಂಡಿರುವ ಹಿಂದೂ ಧರ್ಮಸಾಗರದಲ್ಲಿ ಮುಳುಗಿಹೋಗಿದ್ದಾರೆ. ಇಂದು ಮಹಾನುಭಾವರು ಉಳಿಸಿಕೊಂಡಿರುವ ಕೆಲವೇ ಕೆಲವು ವಿಧಿಗಳಾದ ಅಹಿಂಸಾಪಾಲನೆ, ನಿಧನಹೊಂದಿದವರ ಅಂತ್ಯಕ್ರಿಯೆ, ಇವುಗಳನ್ನು ಎಷ್ಟರಮಟ್ಟಿಗೆ ಆಚರಣೆಯಲ್ಲಿ ತಂದಿದ್ದಾರೆ ಎಂಬುದನ್ನು ಹೇಳುವುದು ಕಠಿಣ. ತಮ್ಮ ನಿತ್ಯ ಜೀವನದಲ್ಲಿ ಮಹಾನುಭಾವರು ಅನುಸರಿಸುತ್ತಿರುವ ವಿವಿಧ ವಿಧಾನಗಳ ಪರಿಣಾಮವೆಷ್ಟಾಗಿದೆ ಎಂಬುದನ್ನು ಹೇಳುವುದು ಸುಲಭವಲ್ಲ. ಪಾಹೂರದ ದೇವ ದೇವೇಶ್ವರ ಮಠದಲ್ಲಿಂದು ನಡೆಯುತ್ತಿರುವ ಜಾತ್ರೆಯು ಬೇರೆ ಕಡೆಯ ಜಾತ್ರೆಯಿಂದ ಭಿನ್ನವಾಗಿಲ್ಲ. ಆದರೂ ಕೂಡ ಮಹಾನುಭಾವರು ಇನ್ನೂ ಪ್ರತ್ಯೇಕ ಪಂಥವಾಗಿಯೇ ಉಳಿದಿದ್ದಾರೆ. ಹಿಂದೂ ಸಹೋದರರು ಅವರನ್ನು ಪ್ರತ್ಯೇಕರೆಂದು ಭಾವಿಸಿರುವುದಲ್ಲದೆ ಅವರನ್ನು ದ್ವೇಷಿಸುತ್ತಾರೆ. ಈ ಪರಿಸ್ಥಿತಿಗೆ ಅವರು ತಮ್ಮ ಪ್ರಮುಖ ಕೇಂದ್ರಗಳಲ್ಲಿ ನಡೆಸುತ್ತಿರುವ ಸಾಮೂಹಿಕ ಸನ್ಯಾಸಿ ಜೀವನ ಒಂದು ಕಾರಣ. ಮಠಗಳಲ್ಲಿ ಸ್ತ್ರೀಪುರುಷರು ಪ್ರತ್ಯೇಕವಾಗಿರುತ್ತಾರೆ. ಭಿಕ್ಷೆ ಬೇಡಿ ತಮ್ಮ ಆಹಾರವನ್ನು ಪಡೆಯುತ್ತಾರೆ. ಅವರ ವೇಷಭೂಷಣಗಳು ಪ್ರತ್ಯೇಕವಾಗಿವೆ. ಮಹಾಂತರ ಅಧೀನಕ್ಕೆ ಒಳಗಾಗಿದ್ದಾರೆ. ಎರಡನೆಯದಾಗಿ ಇಂದಿನವರೆಗೂ ಗುಪ್ತವಾಗಿ ಕಾದಿರಿಸಿದ್ದ ಅವರ ಪವಿತ್ರ ಗ್ರಂಥಗಳೂ ಹಾಗೂ ತತ್ತ್ವಗಳು ಇಂದು ಬಹಿರಂಗವಾಗಿವೆ. ಹಾಗೂ ಕ್ರಮೇಣ ಕರಗಿಹೋಗುತ್ತಿರುವ ಇಡಿ ಗಂಟಾಗಿದೆ. ಮೊದಲಿಗೆ ಗುಪ್ತವಾಗಿದ್ದ ತತ್ವಗಳ ಆಧಾರದಮೇಲೆ ನೆಲಸಿದ್ದ ಕೀರ್ತಿಯು ಇಂದು ಅವರಿಗೆ ಇಲ್ಲವಾಗಿದೆ. ಈ ತತ್ತ್ವಗಳ ಪ್ರತ್ಯೇಕತೆಯ ವೈಶಿಷ್ಟ್ಯಗಳು ಕೂಡ ಕಡಿಮೆಯಾಗುತ್ತಿದೆ.

ಲೀಲಾಚರಿತ್ರೆ ಹಾಗೂ ಅದರ ಆಧಾರದಮೇಲೆ ರಚಿಸಲಾಗಿರುವ ಸೂತ್ರಪಾಠವು ಮಹಾನುಭಾವ ತತ್ತ್ವಗಳನ್ನೊಳಗೊಂಡ ಎರಡು ಮೂಲ ಗ್ರಂಥಗಳಾಗಿವೆ. ಗೋವಿಂದ ಪ್ರಭು ಚರಿತ್ರೆ, ಸ್ಮೃತಿ ಸ್ಥಳ ಹಾಗೂ ಅನ್ವಯ ಸ್ಥಳ, ಇವು ಕೂಡ

ಮಹಾನುಭಾವರ ಗದ್ಯಗ್ರಂಥಗಳಾಗಿವೆ. ಇವು ಇತಿಹಾಸ ಹಾಗೂ ಭಾಷಾತಜ್ಞರಿಗೆ ವಿಶೇಷ ಆಸ್ತಿಯನ್ನು ನೀಡಿದ್ದರೂ ಇವುಗಳ ಸಾಹಿತ್ಯ ಮೌಲ್ಯವನ್ನು ನಿಷ್ಪಕ್ಷಪಾತವಾಗಿ ಅಳೆಯಲು ಸಾಧ್ಯವಿಲ್ಲ. 19ನೇ ಶತಮಾನಕ್ಕಿಂತ ಮೊದಲು ಆಧುನಿಕ ಭಾರತೀಯ ಭಾಷೆಯಲ್ಲಿ ರಚಿಸಲಾಗಿರುವ ಗದ್ಯಗ್ರಂಥಗಳು ವಿರಳವಾಗಿದ್ದು ಅವುಗಳ ಪೈಕಿ ಮಹಾನುಭಾವರ ಗ್ರಂಥಗಳನ್ನು ಅತಿಪ್ರಾಚೀನ ಗದ್ಯ ಗ್ರಂಥಗಳೆಂದು ಅಭಿಪ್ರಾಯಪಡಲಾಗಿದೆ. ಆದರೂ ಕೂಡ ಈ ಗ್ರಂಥಗಳಲ್ಲಿ ಯಾವುದೇ ವಿಧವಾದ ನಿರ್ದಿಷ್ಟ ಶೈಲಿಯಿರುವುದಿಲ್ಲ. ಮಹಾರಾಷ್ಟ್ರದ ಹಳ್ಳಿಗಳಲ್ಲಿ ಇಂದು ಕೇಳಿ ಬರುವ ಮರಾಠಿ ಭಾಷೆಯ ರೀತಿಯಲ್ಲಿ 14ನೇ ಶತಮಾನದಲ್ಲಿ ಕೂಡ ಸಂಭಾಷಣೆ ಮರಾಠಿ ಭಾಷೆಯಲ್ಲಿಯೇ ಗ್ರಂಥಗಳನ್ನು ಬರೆಯಲಾಗಿದ್ದು ಕೆಲವು ಕಡೆ ಸರಳವಾಗಿಯೂ ಇನ್ನೂ ಕೆಲವೆಡೆಗಳಲ್ಲಿ ಕ್ಲಿಷ್ಟವಾಗಿಯೂ ಕೇವಲ ಸೂಚ್ಯ ರೂಪದಲ್ಲಿ ಇವೆ. ಈ ಗ್ರಂಥಗಳಲ್ಲಿ ಬರೆದಿಟ್ಟಿರುವ ಪ್ರತಿಯೊಂದು ಲೀಲೆಯೂ ಭಾಷಾಶಾಸ್ತ್ರದ ಅತಿ ಪುರಾತನ ರೂಪವನ್ನು ಹೋಲುತ್ತದೆ. ಮತ್ತು ಅವುಗಳನ್ನನುಸರಿಸಿ ಅನೇಕ ಭಾಷ್ಯಗಳು, ಸ್ಥಳಗಳು, ಬಂಧ ಹಾಗೂ ಚಾಯಗಳು ಬೆಳೆದುಬಂದಿವೆ. ಪದ್ಯಗಳ ರೂಪದಲ್ಲಿ ಕೂಡ ರಿದ್ಧಿಪುರ ವರ್ಣನೆ. ಸಹ್ಯಾದ್ರಿ ವರ್ಣನೆ, ಮೂರ್ತಿಪ್ರಕಾಶ, ಜ್ಞಾನ ಪ್ರಭೋದ ಓವಿ ಮೊದಲಾದ ಗ್ರಂಥಗಳು ರಚಿಸಲಾಗಿವೆ. ಅವು ವರ್ಣನೆ, ಹಾಗೂ ತತ್ತ್ವ ವಿಚಾರಕ್ಕೆ ಸೀಮಿತವಾಗಿವೆ. ಅವುಗಳನ್ನು ನಿಜವಾದ ಸಾಹಿತ್ಯ ವರ್ಗಕ್ಕೆ ಸೇರಿಸಲಾಗದಿದ್ದರೂ ಪಾಂಡಿತ್ಯ ಗ್ರಂಥಗಳೆಂದು ಅನ್ನಲು ಅಡ್ಡಿಯಿಲ್ಲ. ರಿದ್ಧಿಪುರ ವರ್ಣನೆಯು ರೀತಪುರ ವರ್ಣನೆಯಲ್ಲದೆ ಕೆಲವು ತಾತ್ತ್ವಿಕ ವಿಷಯಗಳನ್ನೊಳಗೊಂಡಿದೆ. ಆದೇ ರೀತಿ ಸಹ್ಯಾದ್ರಿ ವರ್ಣನೆಯಲ್ಲಿ ಮಾಹೂರು ಮತ್ತು ದತ್ತಾತ್ರೇಯ ಮೂರ್ತಿಪ್ರಕಾಶವು ಚಕ್ರಧರನ ಅಂತ್ಯ ಹಾಗೂ ತತ್ತ್ವ ವಿಚಾರವನ್ನು ಸೇರಿಸಿವೆ. ಚಕ್ರಧರನ ಭಾವರೂಪವನ್ನು ಮನನಾಟುವಂತೆ ವಿವರಿಸಿದೆ. ಜ್ಞಾನ ಪ್ರಭೋದವು ಸಂಪೂರ್ಣವಾಗಿ ವೇದಾಂತಕ್ಕೆ ಸಂಬಂಧಿಸಿದೆ. ಕೃಷ್ಣನಿಗೆ ಸಂಬಂಧಪಟ್ಟ ಕೆಲವು ಕಾವ್ಯ ಗ್ರಂಥಗಳಿವೆ. ಮಹಾದಾಯಿಸಾ ಅವರ ಧವಳೆ, ಶಿಶುಪಾಲ ವಧೆ, ಕವೀಶ್ವರ ಅಥವಾ ಭಾಸ್ಕರನ ಉದ್ಧವಗೀತೆ, ನರೇಂದ್ರನ ರುಕ್ಮಿಣೀ ಸ್ವಯಂವರ, ದಾಮೋದರ ಪಂಡಿತನ ವಚಾಹರಣ ಇವುಗಳು ಪ್ರಮುಖ ಕಾವ್ಯ ಗ್ರಂಥಗಳಾಗಿವೆ. ಭಾಗವತ ಪುರಾಣದ 10 ಹಾಗೂ 11ನೇ ಸ್ಕಂದಗಳಿಂದ ವಿಷಯವನ್ನು ಸಂಗ್ರಹಿಸಿದ್ದರೂ ಅದನ್ನು ನಿರೂಪಿಸಿರುವ ರೀತಿಯಲ್ಲಿ ನಾವೀನ್ಯತೆಯಿದೆ. ಭಾಗವತ ಕೃಷ್ಣನು ಚಕ್ರಧರನಿಗೆ ಅಷ್ಟೇನೂ ಪ್ರಿಯವಾಗಿರಲಿಲ್ಲದಿದ್ದರೂ ಕ್ರಮೇಣವಾಗಿ ಈ ದೃಷ್ಟಿಕೋನದಲ್ಲಿ ಮಾರ್ಪಾಡುಗಳಾಗಿವೆ. ಆದರೆ ಕೃಷ್ಣನ ಕಾಮಲೀಲೆಯನ್ನು ಸಾಂಕೇತಿಕವಾಗಿ ಮಾತ್ರ ಈ ಗ್ರಂಥಗಳಲ್ಲಿ ವಿವರಿಸಲಾಗಿದೆ. ಮಹಾನುಭಾವ ಕವಿ ಯಾರೇ ಆಗಿರಲಿ ರಾಸಕ್ರೀಡೆಯನ್ನು ರಸವತ್ತಾಗಿ ವರ್ಣಿಸುವ ಹವ್ಯಾಸಕ್ಕೆ ಹೋಗಲಿಲ್ಲ. ರಾಕ್ಷಸ ಸಂಹಾರದ ವರ್ಣನೆಗೆ ಕೃಷ್ಣನ ಬಾಲಲೀಲೆಯಲ್ಲಿ ಅಧಿಕ ಸ್ಥಾನವನ್ನು

ಕೊಡಲಾಗಿದೆ. ಇವೆಲ್ಲಕ್ಕಿಂತಲೂ ರುಕ್ಮಿಣೀಸ್ವಯಂವರವು ಮಹಾನುಭಾವ ಕವಿಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿತು. ಗದ್ಯರಾಜ್ಯವು ಕೂಡ 14ನೇ ಶತಮಾನದ ಮರಾಠಿ ಭಾಷೆಯಲ್ಲಿ ಶ್ಲೋಕ ರೂಪದಲ್ಲಿ ಬರೆದಿರುವ ಮೊಟ್ಟಮೊದಲನೆಯ ಗ್ರಂಥವಾಗಿದ್ದು ಪಂಚಕೃಷ್ಣನ ಇತಿಹಾಸವನ್ನೊಳಗೊಂಡಿದೆ. ಈ ಗ್ರಂಥವು 279 ಶ್ಲೋಕಗಳಲ್ಲಿದ್ದು ಅದರ ಮೂರನೆಯ ಒಂದು ಭಾಗವು ರುಕ್ಮಿಣಿಯ ಸೆರೆ ಹಾಗೂ ಅವಳ ವಿವಾಹಕ್ಕೆ ವಿನಿಯೋಗಿಸಲಾಗಿದೆ. ಜ್ಞಾನದೇವನಂತೆ ಮಹಾನುಭಾವ ಕವಿಗಳು ಸಂಭಾಷಣೆಗೆ ಮರಾಠಿಯನ್ನು ತಮ್ಮ ಸಾಹಿತ್ಯ ರಚನೆಯಲ್ಲಿ ಉಪಯೋಗಿಸುತ್ತಿದ್ದರು.

ಮಹಾನುಭಾವರು ಸಂಸ್ಕೃತ ಭಾಷೆಯಲ್ಲಿ ಗ್ರಂಥಗಳನ್ನು ಬರೆಯುವ ಹವ್ಯಾಸವನ್ನು ಅಷ್ಟಾಗಿ ಪ್ರೋತ್ಸಾಹಿಸಲಿಲ್ಲ. ಮರಾಠಿ ಭಾಷೆಯ ಬಳಕೆಗೆ ಅವರು ಹೆಚ್ಚು ಒಲಿದಿದ್ದರು. ಚಕ್ರಧರನು ಮರಾಠಿಯಲ್ಲಿಯೇ ತನ್ನ ಬೋಧನೆಗಳನ್ನು ಮಾಡುತ್ತಿದ್ದನು. ಕೇಸೋಭಾಸನು ರತ್ನಮಾಲಾ ಸ್ತೋತ್ರವನ್ನು ಬರೆದುದಲ್ಲದೆ ಅದೇ ಗ್ರಂಥವನ್ನು ಅನುಕರಿಸಿ ಮತ್ತೊಂದು ಸಂಸ್ಕೃತ ಗ್ರಂಥವನ್ನು ಬರೆಯುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರೂ ಅದಕ್ಕೆ ಪ್ರೋತ್ಸಾಹ ದೊರಕಲಿಲ್ಲ. ಸಾರಸ್ವತ ಪ್ರಪಂಚದಲ್ಲಿ ಮಹಾನುಭಾವರ ಗ್ರಂಥಗಳ ಪರಿಚಯವು ಅತಿಕಡಿಮೆಯಾಗಿದ್ದರೂ ಅವರು ತಮ್ಮ ಗ್ರಂಥಗಳನ್ನು ಬಹುಕಾಲದವರೆಗೆ ಗುಪ್ತವಾಗಿ ಇಟ್ಟಿದ್ದರು. ಅದಕ್ಕೆ ಎರಡು ಪ್ರಬಲಕಾರಣಗಳನ್ನು ಹೆಸರಿಸಬಹುದು. ಅವರ ಸ್ವಭಾವ ಹಾಗೂ ಬ್ರಾಹ್ಮಣರ ವಿರೋಧ. ಮಹಾನುಭಾವರು ಕಟ್ಟಾವೈದೀಕರಾಗಿದ್ದು ಸ್ವಭಾವತಃ ಅವರು ಪ್ರತ್ಯೇಕತೆ ಹಾಗೂ ಗುಪ್ತತೆಯ ಕಡೆಗೆ ಒಲವನ್ನು ತೋರಿದರು. ಚಕ್ರಧರನ ಮೂಲ ಶಿಷ್ಯರು ಅದ್ವೈತ ವೈಷ್ಣವ ಗುಂಪಿಗೆ ಸೇರಿದ್ದ ಬ್ರಾಹ್ಮಣರಾಗಿದ್ದರು. ಒಂದು ದೃಷ್ಟಿಯಿಂದ ಜ್ಞಾನದೇವನ ಜ್ಞಾನೇಶ್ವರಿಯು ಕೂಡ ಮಹಾನುಭಾವರು ಬ್ರಾಹ್ಮಣರಲ್ಲಿ ನಡೆಸಿದ ಮತಾಂತರಕ್ಕೆ ಉತ್ತರವಾಗಿತ್ತು. ಜ್ಞಾನೇಶ್ವರಿಯು ಕೂಡ ಚಕ್ರಧರನ ನಿಧನದನಂತರವೇ ಮಹಾನುಭಾವರು ತಮ್ಮ ಪಂಥವನ್ನು ದೃಢೀಕರಿಸಿಕೊಳ್ಳುತ್ತಿರುವ ಕಾಲದಲ್ಲಿ ನಿವಾಸ ಪ್ರದೇಶದಲ್ಲಿ ರಚಿಸಲಾಗಿತ್ತು. ಆಗ ಇನ್ನೂ ಮಹಾನುಭಾವರು ಉತ್ತಮ ವರ್ಗದ ಬ್ರಾಹ್ಮಣರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಿದ್ದರು. ಆದರೆ ಈ ಪರಿಸ್ಥಿತಿಯು ಬಹುಕಾಲ ಉಳಿಯಲಿಲ್ಲ. ಕ್ರಮೇಣ ಮಹಾನುಭಾವರು ಬ್ರಾಹ್ಮಣೇತರ ಸ್ವರೂಪವನ್ನು ತಳೆಯಲಾರಂಭಿಸಿದ್ದು. ಬ್ರಾಹ್ಮಣರ ಮೇಲ್ಮಟ್ಟ ಸ್ಥಾನವನ್ನು ಮನ್ನಿಸದೆ ಇದ್ದ ಕಾರಣ ಅವರು ಸ್ವಾಭಾವಿಕವಾಗಿ ತೀರ್ಥಕ್ಷೇತ್ರ ಯಾತ್ರಾದಿ ಬ್ರಾಹ್ಮಣರ ವಿರೋಧ ಹಾಗೂ ಪ್ರತಿಕ್ರಿಯೆಯನ್ನು ಕಟ್ಟಿಕೊಳ್ಳಬೇಕಾಯಿತು. ಯಾವುದೇ ಕಾರಣಕ್ಕಾಗಿ ಮಹಾನುಭಾವರು ಭೂಗತರಾದರು ಮತ್ತು ತಮ್ಮ ತತ್ವಗಳನ್ನೊಳಗೊಂಡ ಗ್ರಂಥಗಳೆಲ್ಲವನ್ನೂ ಗುಪ್ತವಾಗಿರಿಸಿದರು. ಸಂಕೇತ ಭಾಷೆಯನ್ನು ಬಳಸಿಕೊಂಡು ಮಹಾನುಭಾವರು ತಮ್ಮ ಪುರಾತನ ಗ್ರಂಥಗಳನ್ನು ಕಾಯ್ದಿಟ್ಟರು.

ಬಾಹ್ಯ ಪ್ರಪಂಚದಲ್ಲಿ "ಮಹಾನುಭಾವ"ವೆಂಬ ನಾಮವು ಮಹಾನುಭಾವರ ಇಂದಿನ ಸ್ಥಾನಮಾನವನ್ನು ಸೂಚಿಸುತ್ತದೆ. ಆಗಿನ ಶಿಷ್ಯರು ಇದೊಂದು ಮಾರ್ಗ ವೆಂದು ಅರಿತಿದ್ದರು. 'ಮಹಾನುಭಾವ' ಎಂಬ ಪದವು ಮರಾಠಿ ಸಾಹಿತ್ಯದಲ್ಲಿ ಉಪಯೋಗದಲ್ಲಿದ್ದು ಸಾಧುಪುರುಷ ಅಥವಾ ಮಹಾ ಅನುಭಾವಿ ಎಂದು ಅರ್ಥ ವಾಗುತ್ತದೆ. 16 ನೇ ಶತಮಾನದಿಂದ ಮಹಾನುಭಾವರನ್ನು ಮಾನುಭಾವರೆಂದು ಕರೆಯುವ ವಾಡಿಕೆಯಿತ್ತು. ಆದರೆ ಅದರ ಸ್ವರೂಪ ಅಥವಾ ಉಚ್ಚಾರಣೆಯು ತೀವ್ರ ಬದಲಾವಣೆಗೆ ಒಳಗಾಗಿದ್ದು ಮಹಾನುಭಾವ ಪದವು ಮಾನುಭಾವ ಪದದ ರೂಪಾಂತರವೆಂದು ಹೇಳುವುದು ಕಠಿಣ. 20 ನೇ ಶತಮಾನದವರೆಗೂ "ಮಹಾನು ಭಾವ" ನಾಮವು ಬಳಕೆಯಲ್ಲಿ ಬಂದಂತೆ ಕಾಣುವುದಿಲ್ಲ. ಮಹಾನುಭಾವರ ಧರ್ಮ ಗ್ರಂಥಗಳು ಬೆಳಕಿಗೆ ಬಂದು ಅವರ ಪಂಥವು ಪುನರ್ಜನ್ಮ ಪಡೆದ ದ್ಯೋತಕವಾಗಿ ಈ ನಾಮವನ್ನು ಬಳಸಲು ಪ್ರಾರಂಭಿಸಲಾಗಿದೆ. ಇಂದು ಹಿಂದೂ ಸಂಸ್ಕೃತಿಯ ಅಂಗ ವಾಗಿರುವ ಪಂಥವೊಂದನ್ನು ಹಳೆಯ ನಾಮ ರೂಪದಿಂದ ಕರೆದರೆ ಅವರಿಗೆ ಅಗೌರವ ವನ್ನು ಸೂಚಿಸಿದಂತಾಗುವುದಲ್ಲದೆ ಆ ಪಂಥವನ್ನು ತೆಗಳಿದಂತಾಗುವುದು. ಆದ್ದರಿಂದ 'ಮಹಾನುಭಾವ' ನಾಮ ರೂಢಿಯಲ್ಲಿದೆ.

ಮಹಾರಾಷ್ಟ್ರ ಸಂಸ್ಕೃತಿಯಲ್ಲಿ ಇಂದು ಮಹಾನುಭಾವರು ಅಲ್ಪಸ್ಥಾನವನ್ನು ಗಳಿಸಿದ್ದರೂ ಒಂದು ದಶಕದಿಂದ ಈಚೆಗೆ ಸಮಾಜದ ಗೌರವಕ್ಕೆ ಅಧಿಕ ರೀತಿಯಲ್ಲಿ ಪಾತ್ರರಾಗಿದ್ದಾರೆ. ಕೆಲವು ಕಲಿತ ಹಾಗೂ ಗೌರವಾನ್ವಿತ ವ್ಯಕ್ತಿಗಳು ಪುರಾತನ ಮಠದಿಂದ ಪ್ರತ್ಯೇಕಗೊಂಡು ನೂತನ ಮಠವನ್ನು ಸ್ಥಾಪಿಸಿದ್ದಲ್ಲದೆ ದೇವಾಲಯ ಗಳನ್ನು ನಿರ್ಮಿಸಿ ಪ್ರಚಾರರೂಪದ ಸಾಹಿತ್ಯ ಪ್ರಕಟನೆಯ ಕಾರ್ಯದಲ್ಲಿ ನಿರತರಾಗಿ ದ್ದಾರೆ. ಅನೇಕ ಮನೆ ಮಾರುಗಳನ್ನು ಕಟ್ಟಿಸಿದ್ದಾರೆ.[12] ಈ ಮಾರ್ಗದಲ್ಲಿ ಉದಾರ ದೇಣಿಗೆಗಳನ್ನು ದೊರಕಿಸಿ ಪಂಜಾಬದ ಜೈಕಿಶನ್ ಪಂಥದವರೊಡನೆ ಸಂಪರ್ಕವನ್ನು ಬೆಳೆಸಿದ್ದಾರೆ. 1953 ರಲ್ಲಿ ಅಖಿಲ ಭಾರತೀಯ ಮಹಾನುಭಾವ ಪರಿಷತ್ತು ಸ್ಥಾಪಿಸಲ್ಪಟ್ಟಿತು. ವಾರ್ಷಿಕ ಸ್ನೇಹ ಸಮ್ಮೇಳನವನ್ನು ಪ್ರತಿ ವರ್ಷವೂ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಗಳ ಉದ್ದಿಶ್ಯಕ್ಕಾಗಿ ಕರೆಯಲಾಗುತ್ತಿದೆ. ಮಹಾನು ಭಾವರೆಲ್ಲರನ್ನೂ ಒಟ್ಟುಗೂಡಿಸಲಾಗುತ್ತಿದೆ ಮತ್ತು ಮಾಸಿಕವನ್ನು ಪ್ರಕಟಪಡಿಸಲು ಉತ್ತೇಜನ ನೀಡಲಾಗುತ್ತಿದೆ. ಸಾಹಿತ್ಯದ ಬೆಳವಣಿಗೆಯನ್ನು ಕಾಣುತ್ತೇವೆ. ಮಹಾನುಭಾವರಲ್ಲಿ ಇಂದು ಪುನರುತ್ಥಾನವನ್ನು ಕಾಣುತ್ತಿದ್ದೇವೆ. ಸಾಹಿತ್ಯ ಕ್ಷೇತ್ರದಲ್ಲಿ 70 ವರ್ಷಗಳ ಹಿಂದೆ ಮರಾಠಿ ಸಾಹಿತಿಗಳು ನಡೆಸಿದ ಸಂಶೋಧನೆಯ ಸತ್ಪರಿಣಾಮವನ್ನು ಇಂದು ಕಾಣುತ್ತಿದ್ದೇವೆ. ಮಹಾನುಭಾವರ ಪುನರ್ಜನ್ಮಕ್ಕೆ ಇನ್ನೂ ಕೆಲವು ಪ್ರಬಲ ಕಾರಣಗಳಿವೆ. ಮಹಾರಾಷ್ಟ್ರದಲ್ಲಿಂದು ಕಂಡುಬರುವ ಬ್ರಾಹ್ಮಣರ ಪ್ರಭಾವದಲ್ಲಿ ಇಳಿಮುಖ ; 1960 ರಿಂದೀಚೆಗೆ ಹಸಿರು ಕ್ರಾಂತಿಗೆ

ಉಂಟಾಗಿರುವ ಯಶಸ್ಸು. ಇದರ ಪರಿಣಾಮವಾಗಿ ಬೇರಾರದ ಕುಣಬಿ ರೈತರು ಶ್ರೀಮಂತರಾಗಿದ್ದಾರೆ. ಕಾರಣ ಅವರನ್ನು ಅವಲಂಬಿಸಿರುವ ಮಹಾನುಭಾವ ಪಂಥದವರಿಗೆ ಇಂದು ಹೆಚ್ಚು ಆರ್ಥಿಕ ನೆರವು ದೊರೆಯುವ ಅವಕಾಶ ಒದಗಿದೆ.

ಆಧಾರ

I.M.P. Raeside : "The Mahanubhavas" —Bulletin of School of Oriental and African Studies, London, Vol XXXIX, Part 3, 1976

ಟಿಪ್ಪಣಿಗಳು

1. ಸೂತ್ರಪಾಠದಲ್ಲಿ ಹೀಗಿದೆ : "ಏಕಾಮ್ ಪ್ರೇಮ ಸಂಚರೀತಿ : ಪ್ರೇಮ ಬೋಲಿಜೆ ಭಕ್ತ ಬೋಲಿಜೆ...ಭಕ್ತಾಸಿ ಅಪಣ್ ಅಪಣ್ ಸಮರ್ಥು ದೇತಿ...ಜ್ಞಾನಿಯಾಸಿ ಪಾಟನಿಗಾಲಿತಿ...".
2. ಪೆನ್ಸಿಲ್‌ವಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮಿಸ್ ಆನಿ ಫೆಲ್ಡ್‌ಹಾಸಳು ಈ ದಿಶೆಯಲ್ಲಿ ಸಂಶೋಧನೆಯನ್ನು ನಡೆಸುತ್ತಿದ್ದಾಳೆ.
3. ಆಚಾರಸೂತ್ರಪಾಠದಲ್ಲಿರುವಂತೆ "ಅಪಣೆಯಾತೆಂ ಕಷ್ಟಂಗೇಽನೇಽಗೇಽ ಅಪಣ ಕಷ್ಟಣಾತೆಂ ನೇಣಜೆ ಐಸಾಂ ಸ್ಥಾನಿಂ ಅಸಾವೆಂ".
4. ಅದೇ ಗ್ರಂಥ "ದೇಸಾಚಾಂ ಸೇವಾತಿಂ ಝಾಡಾತಳಿಂ ಜನ್ಮ ಕ್ಷೇಽಪಾವೇಂ".
5. ಅದೇ ಗ್ರಂಥ "ತೀರ್ಥ ದೇವತಾ ಪುರುಷ್ನಿಜೆ ತಿನಿ ಅಪಲವಿತಿ".
6. ಅದೇ ಗ್ರಂಥ "ತುಮ್ಹ ರಾಜುನಾಸನಿ ಭೋಜನಿ ಪರಮೇಶ್ವರಾಚಿ ಹೋಅವಕಿಗ".
7. ಅದೇ ಗ್ರಂಥ "ತುಮಚೀನಿ ಮುಂಗಿ ರಾಂಡನ ಹವಿ".
8. ಅದೇ ಗ್ರಂಥ "ತುಮ್ಹಾಮ್ ಮೂರಿತಾಂ ಪೂಜಿತಾಂ ಸಮಾನಾಚಿ ಹೋವಾಕಿಗಾ".
9. ಗೋವಿಂದ ಪ್ರಭು ಚರಿತ್ರೆಯಲ್ಲಿ ಉಲ್ಲೇಖಿಸಿರುವಂತೆ, ನಾಗದೇವನು ಕೇಳಿದ ಪ್ರಶ್ನೆಯ ಭಾಷಾಂತರ ಈ ರೀತಿಯಲ್ಲಿದೆ : "ಚಕ್ರಧರನು ಸಾಯುವಾಗ ನನ್ನನ್ನು ನಿನ್ನಲ್ಲಿಗೆ ಕಳುಹಿಸಿದನು ; ನೀನು ಸಾಯುತ್ತಿದ್ದೀಯೆ. ನೀನು ನಮ್ಮನ್ನು ಎಲ್ಲಿಗೆ ಕಳುಹಿಸುತ್ತೀಯೆ". ಅದಕ್ಕೆ ಉತ್ತರ ರೂಪವಾಗಿ "ಆವೊ ಮೇಲಾ ಮಾತಾ ಫುರಸಿ ಜೇ ಮ್ಹಣೆ".
10. ಪರಮೇಶ್ವರನ 5 ಅವತಾರಗಳನ್ನು ಸೂತ್ರಪಾಠದ ಪಂಚಕೃಷ್ಣ ಅಥವಾ ಪಂಚನಾಮದಲ್ಲಿ ವಿವರಿಸಲಾಗಿದೆ. ಈ 5 ಅವತಾರಗಳು ಕ್ರಮವಾಗಿ ದ್ವಾಪರಯುಗದಲ್ಲಿ ಶ್ರೀಕೃಷ್ಣ ಚಕ್ರವರ್ತಿ, ಸೈಹಾದ್ರಿ(ಮಾಹೂರ)ಯ ದತ್ತಾತ್ರೇಯ ಪ್ರಭು ; ದ್ವಾರಾವತಿಯಲ್ಲಿ ಚಾಂಗದೇವರಾವುಳ (ಚಕ್ರಪಾಣಿ) ; ಋದ್ಧಿಪುರದಲ್ಲಿ ಶ್ರೀ ಗುಂಡಮರಾವುಳ (ಗೋವಿಂದ ಪ್ರಭು) ; ಪ್ರತಿಷ್ಠಾನದಲ್ಲಿ (ಪೈಠಣ) ಶ್ರೀ ಚಾಂಗದೇವ ರಾವುಳ ಸರ್ವಜ್ಞ (ಚಕ್ರಧರ). ಮಾಹೂರು ಬೆಟ್ಟದ ತುದಿಯಲ್ಲಿ ವತ್ತಾತ್ರೇಯ ದೇವಸ್ಥಾನವಿದೆ. ಇದು ಅತಿ ಪುರಾತನ ಕ್ಷೇತ್ರ ; ಮಾಹೂರು ಮಹಾನುಭಾವರ ಒಲುಮೆಯ ಸ್ಥಳಕ್ಕೆ ಅತಿ ಹತ್ತಿರವಿದೆ. ಮಹಾನುಭಾವರು ದತ್ತಾತ್ರೇಯನ ಬಗ್ಗೆ ತಾತ್ಸಾರ ಭಾವವನ್ನು ತಳೆಯಲಿಲ್ಲವೆಂಬುದಕ್ಕೆ ಸಕಾರಣವಿಲ್ಲ. ಚಕ್ರಧರನು ದತ್ತಾತ್ರೇಯ ಭಕ್ತಿಗೆ ಕೆಲವು ಕಡೆ ಸಮ್ಮತಿಸಿದರೂ ಅವನ ನಿಧನದ ನಂತರವೇ ದತ್ತಾತ್ರೇಯನಲ್ಲಿ ಸದೃಢ ನಂಬಿಕೆಯು ನೆಲೆಗೊಂಡಂತೆ ಕಾಣುತ್ತದೆ. ಅದೇ ರೀತಿ ಚಕ್ರಧರನು

ಕೆಲವೆಡೆಗಳಲ್ಲಿ ಕೃಷ್ಣನನ್ನು ಕೂಡ ಉಲ್ಲೇಖಿಸಿದ್ದಾನೆ. ಗೀತಾ ಕರ್ತೃವಾದ ಕೃಷ್ಣನನ್ನು ಮಾತ್ರ ಗೌರವದಿಂದ ಕಂಡು ಉಳಿದ ದೇವತೆಗಳನ್ನು ತ್ಯಜಿಸಿರಬೇಕು. ತನ್ನ ಅಭಿಪ್ರಾಯ ಗಳನ್ನು ಗೋದಾವರಿ ಸೀಮೆಯಲ್ಲಿ ಸಂಚರಿಸುತ್ತಿದ್ದಾಗ ಹೊರಗೆಡಹಿದನು. ಅಂಶತಃ ಚಕ್ರ ಧರನ ಮೂಲ ಬೋಧನೆಯು ತನಗೆ ಸಂಬಂಧಪಟ್ಟಿದೆಯೆಂದು ತಿಳಿಸಿ ಹೇಳಿದ್ದಾನೆ. ಚಕ್ರಧರನು ಪರಮೇಶ್ವರನ ಅವತಾರ ಅಥವಾ ತನ್ನ ಮೂಲದ ಬಗ್ಗೆ ಯಾವುದೇ ಹಕ್ಕನ್ನು ಸ್ಥಾಪಿಸದಿದ್ದರೂ ತನ್ನ ಉತ್ತರಾರ್ಧ ಭಾಗದಲ್ಲಿ ವೈಷ್ಣವಾದ್ವೈತ ತತ್ತ್ವವನ್ನು ಬೋಧಿಸಿ ದಂತೆ ಕಾಣುತ್ತದೆ. ಅವನ ತರುವಾಯ ಅವನ ಶಿಷ್ಯರು ಉತ್ತರದ ಕಡೆ ವಲಸೆ ಹೋಗಿ ಗೋವಿಂದ ಪ್ರಭುವಿನ ನಾಯಕತ್ವದಲ್ಲಿ ಬೇರಾರ್ ಪ್ರದೇಶದಲ್ಲಿ ಕೇಂದ್ರೀಕರಿಸಿಕೊಂಡರು. ಹಾಗೂ ಅವರ ಆಚಾರ ವಿಚಾರಗಳಲ್ಲಿ ಮಹತ್ವದ ಮಾರ್ಪಾಡುಗಳು ಕಂಡುಬಂದವು. ಮೊದಲ ಬಾರಿಗೆ ಉಪಾಸಕರನ್ನು ಶಿಷ್ಯರನ್ನಾಗಿ ಸ್ವೀಕರಿಸಲಾರಂಭಿಸಿದರು. ದತ್ತಾತ್ರೇಯ ನನ್ನು ತಮ್ಮ ದೇವತೆಯಾಗಿ ಮಾಡಿಕೊಂಡರು.

11. ಸೂತ್ರಪಾಠ–"ಸಾಡೆ ಸೋಳಾಸೆ ತೀರ್ಥಾಸೆ ಮರೆಖು ದಂಡವತ್"
12. ಹೈದರಾಬಾದ್ ಗೀತಾಶ್ರಮ.

ಅಧಿಕಗೊಳ್ಳುತ್ತಿರುವ ಸರ್ಕಾರದ ಅಧಿಕಾರಗಳು

ಟಿ. ಯನ್. ವಿಜಯಪ್ಪ

ವಿಶ್ವದ ಎಲ್ಲ ದೇಶಗಳ ಸರಕಾರಗಳ ಅಧಿಕಾರಗಳು ಗಮನಾರ್ಹವಾಗಿ ಬೆಳೆಯುತ್ತಿರುವುದು ಈ ಶತಮಾನದ ಮುಖ್ಯ ಪ್ರವೃತ್ತಿಗಳಲ್ಲೊಂದಾಗಿದೆ ಎಂದು ಹೇಳಬಹುದು. ಈ ಪ್ರವೃತ್ತಿಯು ಎಲ್ಲ ರಾಷ್ಟ್ರಗಳಲ್ಲೂ ವ್ಯಕ್ತಿಯ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ನಾನಾ ರೀತಿಯ ಪರಿಣಾಮಗಳನ್ನುಂಟುಮಾಡುತ್ತಾ ಬಂದಿದೆ. ಈ ಪರಿಣಾಮಗಳ ಬಗ್ಗೆ ಅನೇಕ ವಾದವಿವಾದಗಳು ನಡೆಯುತ್ತಲೇ ಇವೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ ಎಂಬ ಎರಡು ಮುಖ್ಯ ವಿಷಯಗಳ ಸುತ್ತಲೂ ಇಂತಹ ವಾಗ್ವಾದಗಳನ್ನು ಹೆಣೆಯಲಾಗಿದೆ. ನಮ್ಮ ಆಧುನಿಕ ಕಾಲದಲ್ಲಿ ಈ ವಿಷಯಗಳು ಹೆಚ್ಚು ಪ್ರಾಮುಖ್ಯವಾಗಿರುವುದರಿಂದ ಅವುಗಳಿಗೆ ಸಂಬಂಧಿಸಿದ ಕೆಲವು ಅಂಶಗಳನ್ನು ಸ್ಥೂಲವಾಗಿ ವಿವೇಚಿಸುವ ಪ್ರಯತ್ನವನ್ನು ಪ್ರಸ್ತುತ ಲೇಖನದಲ್ಲಿ ಮಾಡಲಾಗಿದೆ.

ವ್ಯಕ್ತಿ ಮತ್ತು ಸರಕಾರ

ಆದಿ ಮಾನವನು ಆಹಾರ, ಉಡುಪು ಮತ್ತು ವಸತಿಗಳೆಂಬ ತನ್ನ ಮುಖ್ಯ ಅವಶ್ಯಕತೆಗಳ ಪೂರೈಕೆಗಾಗಿ ಪ್ರಕೃತಿಯನ್ನು ಹೆಚ್ಚಾಗಿ ಅವಲಂಬಿಸಿದ್ದನು. ಆಗಿನ ಕಾಲದ ಅವನ ಅಲೆಮಾರಿ ಜೀವನವು ಪ್ರಕೃತಿಯ ನಿಯಮ ಮತ್ತು ವಿಕೋಪಗಳಿಂದ ಮಾತ್ರ ನಿಯಂತ್ರಿಸಲ್ಪಟ್ಟಿದ್ದಿತು. ಇಂತಹ ಸ್ವಾಭಾವಿಕ ಅಡ್ಡಿ ಆತಂಕಗಳನ್ನು ಬಿಟ್ಟರೆ ಆಗಿನ ಮಾನವನು ತನ್ನ ಇತರ ಎಲ್ಲ ಕೆಲಸ ಕಾರ್ಯಗಳಲ್ಲಿ ಹೆಚ್ಚು ಸ್ವತಂತ್ರನಾಗಿದ್ದನು. ಆದರೆ ಆಗ ಅವನ ಜೀವನದ ಬಯಕೆಗಳು ಅಲ್ಪವಾಗಿದ್ದವು ಮತ್ತು ಅವನ ಬುದ್ಧಿಮತ್ತೆಯು ವಿಶಾಲವಾಗಿ ಇನ್ನೂ ವಿಕಾಸಗೊಂಡಿರಲಿಲ್ಲ. ಒಟ್ಟಿನಲ್ಲಿ ಆದಿಮಾನವನ ಜೀವನವು ತುಂಬಾ ಸರಳವಾಗಿದ್ದುದರಿಂದ ಅದು ಹೆಚ್ಚು ಅನಿರ್ಬಂಧಿತವಾಗಿತ್ತು ಎಂದು ಹೇಳಬಹುದು.

ಕಾಲಕ್ರಮೇಣ ಮಾನವನು ತನ್ನ ಅಲೆಮಾರಿತನವನ್ನು ಬಿಟ್ಟು ಸಂಘಜೀವಿಯಾಗಿ ಬಾಳತೊಡಗಿದನು. ಇದರಿಂದ ಅವನು ಸಂಸಾರಿಯಾಗಿ ಕುಟುಂಬಗಳಲ್ಲಿ ವಾಸಿಸಲಾರಂಭಿಸಿದನು. ವ್ಯಕ್ತಿ ವ್ಯಕ್ತಿಗಳ ಮಧ್ಯೆ ಅನೇಕ ರೀತಿಯ ವ್ಯವಹಾರ

ಸಂಬಂಧಗಳು ಮೊದಲಾದವು. ಇವೆಲ್ಲವೂ ಸುವ್ಯವಸ್ಥಿತ ಸಮಾಜಗಳು ಅಸ್ತಿತ್ವಕ್ಕೆ ಬರಲು ನಾಂದಿಯಾದವು. ಇದರೊಂದಿಗೆ ಮಾನವನ ಜೀವನವು ಹೆಚ್ಚು ಹೆಚ್ಚು ಸುರಕ್ಷಿತವಾಗತೊಡಗಿತು, ಅವನ ಬುದ್ಧಿವಂತಿಕೆಯೂ ವಿಕಾಸಗೊಂಡಿತು. ಪ್ರಕೃತಿಯ ನಿಗೂಢ ನಿಯಮಗಳನ್ನು ಅರಿತುಕೊಳ್ಳುವುದು ಇದರಿಂದ ಸಾಧ್ಯವಾಯಿತು. ಆದರೆ ಇವುಗಳ ಪರಿಣಾಮವಾಗಿ ಮಾನವನ ಆಹಾರ, ಉಡುಪು, ವಸತಿ, ಪ್ರಯಾಣ ಮೊದಲಾದ ಆವಶ್ಯಕತೆಗಳ ಪೂರೈಕೆ ತುಂಬ ಜಟಿಲವಾಗತೊಡಗಿತು. ಅವನ ಬಯಕೆಗಳೂ ಸಹ ಅಗಾಧವಾಗಿ ಬೆಳೆಯಲಾರಂಭಿಸಿದವು. ಅಲ್ಲದೆ ಸುವ್ಯವಸ್ಥಿತ ಸಮಾಜಗಳಲ್ಲಿನ ಜೀವನ, ಮಾನವನೇ ನಿರ್ಮಿಸಿಕೊಂಡ ಅನೇಕ ಕಟ್ಟುಪಾಡುಗಳಿಗೆ ಒಳಗಾಗಿರುವುದು ಅನಿವಾರ್ಯವಾಯಿತು. ಇದರಿಂದ ಅವನು ತನ್ನ ಹಿಂದಿನ ಕಾಲದ ಸ್ವಚ್ಛಂದ ಜೀವನವನ್ನು ಸ್ವಲ್ಪಮಟ್ಟಿಗಾದರೂ ಬಿಡಬೇಕಾಯಿತು. ಹೀಗೆ ಸುವ್ಯವಸ್ಥಿತ ಸಮಾಜಗಳು ಅಸ್ತಿತ್ವಕ್ಕೆ ಬಂದ ಮೇಲೆ ಮಾನವನು ತಾನೇ ರಚಿಸಿಕೊಂಡ ಅಡೆತಡೆಗಳೆಂಬ ಸಂಕೋಲೆಗಳ ಕೋಟೆಯಲ್ಲಿ ತನಗರಿವಿಲ್ಲದಂತೆಯೇ ಬಂದಿಯಾದನು.

ಸುವ್ಯವಸ್ಥಿತ ಸಮಾಜದ ವಿಕಾಸದ ಮುಂದಿನ ಹಂತದಲ್ಲಿ ಗಮನಾರ್ಹವಾದ ಅನೇಕ ಬದಲಾವಣೆಗಳುಂಟಾದವು. ವ್ಯಕ್ತಿ ಮತ್ತು ಸಮಾಜಗಳ ನಡುವೆ ಅಧಿಕಾರಗಳ ನಿರ್ದಿಷ್ಟವಾದ ಹಂಚಿಕೊಳ್ಳುವಿಕೆಯು ಈ ಮಹತ್ತರ ಬದಲಾವಣೆಗಳಲ್ಲೊಂದಾಗಿತ್ತು ಎಂದು ಹೇಳಬಹುದು. ಆದರೆ ಈ ಕಾರ್ಯ ವಿಧಾನವು ನಿಧಾನವಾಗಿ ಸಾವಿರಾರು ವರ್ಷಗಳ ಕಾಲಾವಧಿಯಲ್ಲಿ ಜರುಗಿದೆಯೆಂಬ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ. ಏಕೆಂದರೆ, ವ್ಯಕ್ತಿ ಮತ್ತು ಕುಟುಂಬಗಳ ಮೇಲೆ ಸಮಾಜ ಮತ್ತು ಸರಕಾರಗಳ ನಿಯಂತ್ರಣ ಅಥವಾ ನಿಬಂಧನೆಗಳು ನಾನಾ ರೀತಿಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೆಳೆದುಕೊಂಡು ಬಂದಿವೆ. ಹೀಗೆಯೇ ಇವುಗಳ ಬಗ್ಗೆ ಉಂಟಾದ ವಾದ ವಿವಾದಗಳೂ ಕೂಡ ಇದರೊಂದಿಗೇ ನಡೆದು ಬಂದಿವೆ.

ಸಮಾಜದ ವಿಕಸನದ ಈ ಹಂತದಲ್ಲಿ ಮೊದಮೊದಲು ಕುಟುಂಬವೇ ಪ್ರಧಾನವಾದ ಸಂಸ್ಥೆಯಾಗಿತ್ತು. ಅನೇಕ ಕುಟುಂಬಗಳನ್ನು ಒಳಗೊಂಡ ಇಂತಹ ಜನಸಮುದಾಯಗಳಲ್ಲಿ, ಎಲ್ಲ ರೀತಿಯ ಅಧಿಕಾರಗಳು ಸಾಮಾನ್ಯವಾಗಿ ಕುಟುಂಬಗಳ ಯಜಮಾನರ ಕೈಯಲ್ಲಿ ಕೇಂದ್ರೀಕೃತವಾಗಿದ್ದವು. ಈ ಯಜಮಾನರುಗಳು ಒಮ್ಮತದಿಂದ ರಚಿಸಿಕೊಂಡ ಹಲವಾರು ಕಟ್ಟುಪಾಡುಗಳು ಜನರ ಸಾಮಾನ್ಯ ವ್ಯವಹಾರಗಳನ್ನು ನಿಯಂತ್ರಿಸುವುದಕ್ಕೆ ಸಹಾಯಕವಾಗಿದ್ದವು. ಇವುಗಳೇ ಮುಂದೆ ಸಂಪ್ರದಾಯಗಳಾಗಿ ರೂಢಿಯಲ್ಲಿ ಬಂದವು. ಜನರ ಕರ್ತವ್ಯಗಳು ಮತ್ತು ಹಕ್ಕುಗಳನ್ನು ಇವು ಸ್ಥೂಲವಾಗಿ ನಿರೂಪಿಸಿದ್ದವು. ಉದಾಹರಣೆಗೆ, ಕಾಡುಗಳನ್ನು ಉಪಯೋಗಿಸಿಕೊಳ್ಳುವುದು, ಬೇಸಾಯ ಮಾಡುವುದು, ವಿವಿಧ ವಸ್ತುಗಳ ತಯಾರಿಕೆ ಮತ್ತು

ಅವುಗಳ ವಿನಿಮಯ. ಶಕ್ತರ ಕೆಲಸಗಳು ಮತ್ತು ಅಶಕ್ತರ ಸಂರಕ್ಷಣೆ, ಶತ್ರುಗಳೊಡನೆ ಹೋರಾಟ, ಇತರ ಸಾಮಾಜಿಕ ಹಾಗು ಧಾರ್ಮಿಕ ಕೆಲಸ ಕಾರ್ಯಗಳು. ಮೊದಲಾದವುಗಳಿಗೆ ಅಗತ್ಯವಾಗುವಂತೆ ಈ ಕರ್ತವ್ಯಗಳು ಮತ್ತು ವೈಯಕ್ತಿಕ ಹಕ್ಕುಗಳನ್ನು ರೂಪಿಸಲಾಗಿತ್ತು. ಹೀಗೆ ಮೊಟ್ಟಮೊದಲು ವ್ಯಕ್ತಿಯು ಸಮಾಜದ ಏಳಿಗೆಗಾಗಿ ತನ್ನ ಸ್ವಾತಂತ್ರ್ಯವನ್ನು ಮೊಟಕು ಗೊಳಿಸುವುದನ್ನು ಕಲಿತುಕೊಂಡನು. ಇದನ್ನೇ ಸುವ್ಯವಸ್ಥಿತ ಸಮಾಜದ ಸ್ಥಾಪನೆಯೆಂಬ ಇನ್ನೊಂದು ಹೆಸರಿನಿಂದ ಕರೆಯಲಾಯಿತು. ಅಲ್ಲದೆ ಇಂತಹ ಜನಸಮುದಾಯ ರೀತಿಯ ಸಮಾಜಗಳಲ್ಲಿ ವ್ಯಕ್ತಿಯ ಕರ್ತವ್ಯಗಳು ಮತ್ತು ಹಕ್ಕುಗಳನ್ನು, ಪ್ರಜಾಪ್ರಭುತ್ವ ಪದ್ಧತಿಯ ಬಹುಮತದ ಅಂಗೀಕಾರವೆಂಬ ತತ್ವದ ಆಧಾರದ ಮೇಲೆ ರೂಪಿಸಲ್ಪಟ್ಟಿದ್ದವು ಎಂಬುದನ್ನು ಸ್ವಲ್ಪಮಟ್ಟಿಗಾದರೂ ನಂಬಬಹುದು. ಅಂದರೆ ಪ್ರಜಾಪ್ರಭುತ್ವ ರೀತಿಯ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಯು ತುಂಬ ಹಳೆಯ ಪದ್ಧತಿಗಳಲ್ಲೊಂದಾಗಿತ್ತು ಎಂಬ ಅಂಶ ಇದರಿಂದ ತಿಳಿಯುತ್ತದೆ.

ಕಾಲಕ್ರಮೇಣ ಜನಸಮುದಾಯ ರೀತಿಯ ಸಮಾಜಗಳಲ್ಲಿ ಹಲವಾರು ವ್ಯಕ್ತಿಗಳು ಒಮ್ಮತದಿಂದ ಚಲಾಯಿಸುತ್ತಿದ್ದ ಅಧಿಕಾರಗಳು, ಕೇವಲ ಒಬ್ಬ ವ್ಯಕ್ತಿಯ ಕೈಯಲ್ಲಿ ಕೇಂದ್ರೀಕೃತವಾಗುತ್ತಾ ಬಂದವು. ಈ ಪ್ರವೃತ್ತಿಯು ಸಾಮಂತರು, ಪಾಳೆಯಗಾರರು, ರಾಜರು. ಚಕ್ರವರ್ತಿಗಳು ಮೊದಲಾದವರು ಹುಟ್ಟಿಕೊಳ್ಳುವುದಕ್ಕೆ ದಾರಿಮಾಡಿಕೊಟ್ಟಿತು. ವಿವಿಧ ಮತಧರ್ಮಗಳ ಸ್ಥಾಪನೆ, ಜಾತಿ ಪಂಥಗಳ ಉದಯ, ಜನಸಂಖ್ಯೆಯ ಬೆಳವಣಿಗೆ, ವೈಯಕ್ತಿಕ ಆಸ್ತಿಪಾಸ್ತಿಗಳನ್ನು ರೂಢಿಸುವ ಮನೋಭಾವನೆ, ವರ್ಣಭೇದಗಳ ಮೇಲೆ ಆಧಾರಿತವಾದ ಮೇಲು ಕೀಳುಗಳೆಂಬ ಕಲ್ಪನೆ, ವೈಯಕ್ತಿಕ ಶಾರೀರಿಕ ಶಕ್ತಿಯ ಆರಾಧನೆ, ದೇಶವಿದೇಶಗಳ ಸಂಪ್ರದಾಯಗಳಲ್ಲಿನ ಭಿನ್ನತೆಗಳು, ಮೊದಲಾದವು ಇಂತಹ ಪ್ರವೃತ್ತಿಯ ಬೆಳವಣಿಗೆಗೆ ತುಂಬ ಸಹಾಯಕಾರಿಯಾದವು. ಇದರಿಂದ ಪ್ರಜಾಪ್ರಭುತ್ವದ ತತ್ವಕ್ಕೆ ಅಗಾಧವಾದ ಪೆಟ್ಟಾಯಿತು. ನಿರಂಕುಶಾಧಿಕಾರಿ ಹಾಗೂ ಸರ್ವಾಧಿಕಾರಿಗಳಾದ ರಾಜಮಹಾರಾಜರ ಅಧಿಕಾರಗಳು ವಿಸ್ತರಿಸಲ್ಪಟ್ಟವು. ಇವರುಗಳು ತಮ್ಮ ಅಗತ್ಯಗಳಿಗೆ ತಕ್ಕಂತಹ ಸಮಾಜ ಮತ್ತು ಸರಕಾರಗಳನ್ನು ರೂಪಿಸಿ ಆಚರಣೆಗೆ ತರುವ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದ್ದರು. ಇದರೊಂದಿಗೆ ರಾಜ್ಯ ಮತ್ತು ರಾಷ್ಟ್ರಗಳೆಂಬ ಭಾವನೆಗಳೂ ಬೆಳೆದುಕೊಂಡು ಬಂದವು.

ಒಂದು ರಾಜ್ಯದಲ್ಲಿ ಒಬ್ಬ ರಾಜನು ಅಥವಾ ಆತನಿಂದ ನೇಮಿಸಲ್ಪಟ್ಟ ಆಡಳಿತ ಮಂಡಳಿಯು, ಸರಕಾರದ ಎಲ್ಲ ಅಧಿಕಾರಗಳನ್ನು ಚಲಾಯಿಸುತ್ತಿದ್ದವು. ಸಾಮಾನ್ಯವಾಗಿ ಇಂತಹ ಸಮಾಜಗಳಲ್ಲಿ ವ್ಯಕ್ತಿಗಳ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳೆಲ್ಲವೂ, ರಾಜನಿಂದ ಅಂಗೀಕೃತವಾಗಿ ಜಾರಿಗೆ ಬರುತ್ತಿದ್ದ

ವಿಧೇಯಕಗಳಿಂದ ನಿಯಂತ್ರಿಸಲ್ಪಡುತ್ತಿದ್ದವು. ಸರಕಾರದ ಎಲ್ಲ ಅಧಿಕಾರಗಳು ಒಬ್ಬ ರಾಜ ಅಥವಾ ಒಂದು ಆಡಳಿತ ಮಂಡಳಿಯ ಕೈಯಲ್ಲಿ ಕೇಂದ್ರೀಕೃತವಾಗಿದ್ದಾಗ, ಪ್ರಜೆಗಳ ಮೇಲೆ ಅವುಗಳನ್ನು ಚಲಾಯಿಸುವುದು ಸುಲಭವಾಯಿತು. ಹೀಗೆ ಪ್ರಜೆಗಳ ಮೇಲೆ ಸರಕಾರದ ಕಾನೂನುಗಳ ಬಿಗಿಹಿಡಿತ ಬಲಗೊಳ್ಳತೊಡಗಿತು. ಈ ಕಾಲದಲ್ಲಿ ಪ್ರಜೆಗಳು ತಮ್ಮ ವೈಯಕ್ತಿಕ ಹಕ್ಕುಬಾಧ್ಯತೆಗಳನ್ನು ಸಂರಕ್ಷಿಸಿಕೊಂಡು ಬರುವುದು, ರಾಜಮಹಾರಾಜರ ವೈಯಕ್ತಿಕ ವೈಪರೀತ್ಯಗಳನ್ನು ಅವಲಂಬಿಸಿತ್ತು. ಇಂತಹ ಪರಿಸ್ಥಿತಿಯಲ್ಲಿ ಎಷ್ಟೋ ಸಂದರ್ಭಗಳಲ್ಲಿ ವ್ಯಕ್ತಿಗಳಿಗೆ ನ್ಯಾಯ ದೊರಕದೆಯಿರುವ ದೃಷ್ಟಾಂತಗಳು ಅನೇಕವು ಇವೆ. ಒಟ್ಟಿನಲ್ಲಿ ಇಂತಹ ಸಮಾಜಗಳಲ್ಲಿ ಸರಕಾರದ ಅಧಿಕಾರಿಗಳು ಸ್ವಲ್ಪಮಟ್ಟಿಗಾದರೂ ನಿರಂಕುಶಾಧಿಕಾರ ಮತ್ತು ಸರ್ವಾಧಿಕಾರದ ಲಕ್ಷಣಗಳಿಂದ ತುಂಬಿ ತುಳುಕಾಡುತ್ತಿದ್ದವು ಎಂದು ಹೇಳಬಹುದು.

ಮೇಲೆ ತಿಳಿಸಿದಂತಹ ಸಮಾಜ ಹಾಗು ಸರಕಾರಗಳ ಸ್ವರೂಪಗಳು, ಕ್ರಿಸ್ತಶಕ ಹದಿನೈದು ಮತ್ತು ಹದಿನಾರನೇ ಶತಮಾನಗಳವರೆಗೂ, ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ದೇಶಗಳಲ್ಲಿಯೂ ಅಸ್ತಿತ್ವದಲ್ಲಿದ್ದವು ಎಂದು ಹೇಳಬಹುದು. ಆದರೆ ಹದಿನೆಂಟನೇ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ಜರುಗಿದ ರಾಜಕೀಯ ಕ್ರಾಂತಿ ಮತ್ತು ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಮಾನಗಳಲ್ಲಿ ಯೂರೋಪ್ ಖಂಡದಲ್ಲಿ ಜರುಗಿದ ಕೈಗಾರಿಕಾ ಕ್ರಾಂತಿ ಇವು ವ್ಯಕ್ತಿ ಮತ್ತು ಸರಕಾರಗಳ ನಡುವಿನ ರಾಜಕೀಯ ಮತ್ತು ಆರ್ಥಿಕ ಸಂಬಂಧಗಳಲ್ಲಿ ಮಹತ್ತರವಾದ ಮಾರ್ಪಾಟುಗಳನ್ನುಂಟು ಮಾಡಿದವು. ಈ ಘಟನೆಗಳಿಂದ ಜನ್ಮತಾಳಿದ ಅನೇಕ ಹೊಸ ಹೊಸ ಭಾವನೆಗಳು ತ್ವರಿತವಾಗಿ ಇತರ ದೇಶಗಳಿಗೂ ಹರಡಿ ಅಲ್ಲಿನ ಜನಜೀವನಗಳ ಮೇಲೆ ಗುರುತರವಾದ ಪರಿಣಾಮಗಳನ್ನುಂಟುಮಾಡಿದವು.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಎಂಬುವು ಫ್ರಾನ್ಸ್‌ನ ಮಹಾಕ್ರಾಂತಿಯಿಂದ ಉದಯಿಸಿದ ಮುಖ್ಯ ಭಾವನೆಗಳಾಗಿದ್ದವು. ಇವು ಸರ್ವಾಧಿಕಾರದ ದಬ್ಬಾಳಿಕೆಯನ್ನು ಬಹಳವಾಗಿ ಖಂಡಿಸಿ ವ್ಯಕ್ತಿಸ್ವಾತಂತ್ರ್ಯದ ಮಹತ್ವವನ್ನು ಎತ್ತಿಹಿಡಿದವು. ಅಲ್ಲದೆ ಪ್ರಜಾಪ್ರಭುತ್ವದ ತತ್ವಗಳಿಗೆ ಈ ಭಾವನೆಗಳು ಪುನಃ ಇಂಬುಕೊಟ್ಟವು. ಇದರ ಪರಿಣಾಮವಾಗಿ ಸಮಾಜ ಮತ್ತು ಸರಕಾರಗಳ ರಚನೆಗಳಲ್ಲಿ ಅಲ್ಲಿನವರೆಗೂ ಕಂಡುಬರುತ್ತಿದ್ದ ನಿರಂಕುಶಾಧಿಕಾರ ಹಾಗೂ ಸರ್ವಾಧಿಕಾರಗಳ ಅನೇಕ ಅಂಶಗಳಿಗೆ ತಡೆಯುಂಟಾಯಿತು. ವ್ಯಕ್ತಿಯ ಸ್ವಾತಂತ್ರ್ಯ, ಹಕ್ಕು ಮತ್ತು ನ್ಯಾಯಗಳೆಂಬ ರಾಜಕೀಯ ಅಂಶಗಳ ದೃಷ್ಟಿಯಿಂದ ಇವು ತುಂಬ ಮಹತ್ತರವಾದ ಬದಲಾವಣೆಗಳೆಂದು ಹೇಳಬಹುದು.

ಇದೇ ರೀತಿ ಕೈಗಾರಿಕಾ ಕ್ರಾಂತಿಯು ಆರ್ಥಿಕ ಕ್ಷೇತ್ರದಲ್ಲಿ ಮಹತ್ವಪೂರ್ಣವಾದ ಬದಲಾವಣೆಗಳಿಗೆ ಎಡೆಮಾಡಿಕೊಟ್ಟಿತು. ಕೈಗಾರಿಕಾ ಕ್ರಾಂತಿಯು ಯೂರೋಪಿನಲ್ಲಿ ಪ್ರಾರಂಭವಾಗುವವರೆಗೂ ಅಲ್ಲಿನ ಎಲ್ಲ ದೇಶಗಳಲ್ಲಿಯೂ ಊಳಿಗಮಾನ್ಯ ಪದ್ಧತಿಯು ಅಸ್ತಿತ್ವದಲ್ಲಿತ್ತು. ಕೈಗಾರಿಕಾ ಉತ್ಪನ್ನವು ಸಣ್ಣ ಸಣ್ಣ ಉತ್ಪಾದನಾ ಕೇಂದ್ರಗಳಲ್ಲಿ ಅಲ್ಪ ಪ್ರಮಾಣದ ಆಧಾರದ ಮೇಲೆ ನಡೆಯುತ್ತಿತ್ತು. ಈ ರೀತಿಯ ಆರ್ಥಿಕ ರಚನೆಯನ್ನು ಕೈಗಾರಿಕಾ ಕ್ರಾಂತಿಯು ಬುಡಮೇಲು ಮಾಡಿತು. ಮೊದಲು ಊಳಿಗಮಾನ್ಯ ಪದ್ಧತಿಯು ನಶಿಸಿಹೋಗಿ, ಅದರ ಸ್ಥಾನದಲ್ಲಿ ಬಂಡವಾಳಶಾಹಿ ಪ್ರಭುತ್ವ ಅಸ್ತಿತ್ವಕ್ಕೆ ಬಂತು. ಕೈಗಾರಿಕಾ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ತಯಾರಿಕಾ ಕಾರ್ಖಾನೆಗಳು ಹುಟ್ಟಿಕೊಂಡವು. ಮಾರುಕಟ್ಟೆಗಳು ವಿಶಾಲವಾಗತೊಡಗಿದವು. ಸಂಚಾರ ಮತ್ತು ಸಂಪರ್ಕ ಸಾಧನಗಳು ಆಧುನಿಕಗೊಂಡವು. ಇವಲ್ಲದೆ, ರಾಜಕೀಯ ಕ್ಷೇತ್ರದಲ್ಲಿ ವ್ಯಕ್ತಿಗಿರುವ ಸ್ವಾತಂತ್ರ್ಯದೊಂದಿಗೆ, ಆರ್ಥಿಕ ಕಾರ್ಯಚಟುವಟಿಕೆಗಳಲ್ಲಿಯೂ ಅವನು ಹೆಚ್ಚು ಸ್ವತಂತ್ರನಾಗಿರಬೇಕೆಂಬ ಭಾವನೆಗೆ ತುಂಬ ಮನ್ನಣೆ ದೊರೆಯಿತು. ಒಟ್ಟಿನಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಇತರ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಅವನ ಹಕ್ಕುಗಳನ್ನು ಸಂರಕ್ಷಿಸಿಕೊಂಡು ಬರುವುದು ಸಮಾಜ ಮತ್ತು ಸರಕಾರಗಳ ಕರ್ತವ್ಯವಾಯಿತು. ಇವೆಲ್ಲವುಗಳ ಪರಿಣಾಮವಾಗಿ ಪ್ರಜಾಪ್ರಭುತ್ವದ ತತ್ವಗಳ ಪ್ರಾಮುಖ್ಯ ಹೆಚ್ಚಾಗಿ, ವ್ಯಕ್ತಿ ಸ್ವಾತಂತ್ರ್ಯಕ್ಕೆ ತುಂಬ ಮನ್ನಣೆ ದೊರೆತು, ವ್ಯಕ್ತಿಯ ಮೇಲಿನ ಸರಕಾರದ ಅಧಿಕಾರಗಳ ಸಂಕೋಲೆಗಳ ಬಿಗಿಹಿಡಿತ ಬಹಳ ಕಡಿಮೆಯಾಯಿತು.

ಹೀಗೆ, ವ್ಯಕ್ತಿಯ ರಾಜಕೀಯ ಹಾಗು ಆರ್ಥಿಕ ಸ್ವಾತಂತ್ರ್ಯಕ್ಕೆ ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ತುಂಬ ಹೆಚ್ಚಿನ ಮನ್ನಣೆ ದೊರಕಿತ್ತು. ಇದರೊಂದಿಗೆ ಸರಕಾರಗಳ ಅಧಿಕಾರಗಳು ಅತ್ಯಲ್ಪವಾಗಿದ್ದವು ಎಂದು ತಿಳಿಯಬಹುದು. ಆದರೆ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ವೇಳೆಗೆ ಈ ಪರಿಸ್ಥಿತಿಯಲ್ಲಿ ಮತ್ತೆ ಮಹತ್ವದ ವ್ಯತ್ಯಾಸಗಳುಂಟಾಗತೊಡಗಿದವು. ಈ ವೇಳೆಗಾಗಲೇ ಯೂರೋಪಿನಲ್ಲಿ ಸಮತಾ ಸಮಾಜವಾದ (Socialism) ಮತ್ತು ಪ್ರಜಾಸ್ವಾಮ್ಯವಾದ (Communism) ತತ್ವಗಳು ಪ್ರಚಾರದಲ್ಲಿದ್ದವು. ಇವುಗಳಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಜಲ್ಸ್‌ರವರು ಪ್ರತಿಪಾದಿಸಿದ ಶಾಸ್ತ್ರೀಯ ಪ್ರಜಾಸ್ವಾಮ್ಯವಾದದ ತತ್ವಗಳು, ಹತ್ತೊಂಬತ್ತನೆಯ ಶತಮಾನದ ಕೊನೆಯ ವೇಳೆಗೆ ಹೆಚ್ಚು ಜನಪ್ರಿಯವಾದವು. ಇವುಗಳ ಆಧಾರದಮೇಲೆ ಇಪ್ಪತ್ತನೆಯ ಶತಮಾನದಲ್ಲಿ, ಮೊದಲು ರಷ್ಯಾದೇಶದಲ್ಲಿ ಅನಂತರ ಚೀಣಾ ಹಾಗು ಇತರ ಕೆಲವು ದೇಶಗಳಲ್ಲಿ ರಕ್ತಕ್ರಾಂತಿಗಳ ಮೂಲಕ ಕಮ್ಯುನಿಸ್ಟ್ ಸರಕಾರಗಳು ಅಸ್ತಿತ್ವಕ್ಕೆ ಬಂದವು.

ಕಮ್ಯೂನಿಸ್ಟ್ ತತ್ವಗಳನ್ನು ಆಚರಣೆಗೆ ತಂದ ಈ ದೇಶಗಳಲ್ಲಿ ಸಮಾಜ ಹಾಗು ಸರಕಾರಗಳ ರಚನೆ, ಮೂಲ ಸಿದ್ಧಾಂತಗಳಿಗೆ ತುಂಬ ಭಿನ್ನವಾಗತೊಡಗಿದವು. ಏಕಪಕ್ಷದ ಸ್ಥಾಪನೆ, ಪಕ್ಷದ ಕೆಲವು ಮುಖಂಡರ ಕೈಯಲ್ಲಿ ಅಧಿಕಾರಗಳ ಸಮಗ್ರವಾದ ಕೇಂದ್ರೀಕರಣ, ವಿರೋಧಿಗಳನ್ನು ನಾಶಗೊಳಿಸುವುದು, ಅಧಿಕಾರದ ದಾಹದಿಂದಾಗಿ ಒಳಸಂಚು ಮತ್ತು ಪಿತೂರಿಗಳನ್ನು ನಡೆಸುವುದು, ಅಧಿಕಾರ ಶಾಹಿ (bureaucracy)ಯ ಬೃಹತ್ ಬೆಳವಣಿಗೆ, ಸಾಮಾಜಿಕ ಕಲ್ಯಾಣದ ಹೆಸರಿನಲ್ಲಿ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಗಮನಾರ್ಹವಾಗಿ ಮೊಟಕುಗೊಳಿಸುವುದು, ವ್ಯಕ್ತಿಯ ಜೀವನದ ಎಲ್ಲ ಕಾರ್ಯಚಟುವಟಿಕೆಗಳನ್ನು ತುಂಬ ಕಟುವಾದ ಶಿಸ್ತಿನ ನಿಯಮಗಳಿಗೆ ಒಳಪಡಿಸುವುದು, ಆಸ್ತಿಪಾಸ್ತಿಗಳ ಮೇಲಿನ ಹಕ್ಕುಗಳನ್ನು ತೊಡೆದುಹಾಕುವುದು, ಆರ್ಥಿಕ ಉತ್ಪಾದನೆ ಮತ್ತು ವಿತರಣೆಗಳ ಮೇಲೆ ಸರಕಾರದ ಸರ್ವಸ್ವಾಮ್ಯವನ್ನು ಸ್ಥಾಪಿಸುವುದು ಮೊದಲಾದವು ಅಂತಿಮವಾಗಿ ಈ ದೇಶಗಳಲ್ಲಿ ಜಾರಿಗೆ ಬಂದವು. ಇವೆಲ್ಲವುಗಳ ಪರಿಣಾಮವಾಗಿ ಈ ದೇಶಗಳಲ್ಲಿ ಪ್ರಜಾಪ್ರಭುತ್ವದ ತತ್ವಗಳು ಮತ್ತು ವ್ಯಕ್ತಿ ಸ್ವಾತಂತ್ರ್ಯ ಸಂಪೂರ್ಣವಾಗಿ ನಿರ್ಮೂಲಗೊಂಡಿವೆ ಎಂಬುದು ಬಂಡವಾಳಶಾಹಿ ರಾಷ್ಟ್ರಗಳ ಕಟು ಟೀಕೆಯಾಗಿದೆ.

ಕಮ್ಯೂನಿಸ್ಟ್ ದೇಶಗಳ ಸಮಾಜ ಹಾಗು ಸರಕಾರಗಳ ಗಡುಸಾದ ರಚನೆಗಳಲ್ಲಿಯೂ ಸಹ, ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅನೇಕ ಬಿರುಕುಗಳುಂಟಾಗತೊಡಗಿದವು. ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಕೆಲವು ಮೂಲಭೂತ ಹಕ್ಕುಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳನ್ನು ಈ ದೇಶಗಳಲ್ಲಿ ಇತ್ತೀಚಿನ ದಶಕಗಳಲ್ಲಿ ಮಾಡಲಾಗುತ್ತಿದೆ. ಈ ಪ್ರವೃತ್ತಿಯು ಮೊದಲು ರಷ್ಯ ದೇಶದಲ್ಲಿ ಪ್ರಾರಂಭವಾಗಿ ಅನಂತರ ಇತರ ಕಮ್ಯೂನಿಸ್ಟ್ ದೇಶಗಳಿಗೂ ಸಾವಕಾಶವಾಗಿ ಹರಡುತ್ತಿದೆ. ಆದರೆ ಇಂತಹ ಸಡಿಲಗೊಳಿಸುವ ಪ್ರವೃತ್ತಿಗೆ ಚೀಣಾ ಮುಂತಾದ ಕೆಲವು ಕಮ್ಯೂನಿಸ್ಟ್ ರಾಷ್ಟ್ರಗಳಿಂದ ಬಲವಾದ ವಿರೋಧವೂ ಇದೆ.

ಹೀಗೆ ವ್ಯಕ್ತಿ ಮತ್ತು ಸರಕಾರಗಳ ನಡುವಿನ ಸಂಬಂಧಗಳು ಆದಿಕಾಲದಿಂದ ಈ ಆಧುನಿಕ ಕಾಲದವರೆಗೂ, ನಾನಾ ರೀತಿಯ ವ್ಯತ್ಯಾಸಗಳನ್ನು ಹೊಂದುತ್ತಾ ನಡೆದು ಬಂದಿವೆ. ಈ ಸಂಬಂಧಗಳಲ್ಲಿ ವ್ಯಕ್ತಿಯ ದೃಷ್ಟಿಯಿಂದ ಸ್ವಾತಂತ್ರ್ಯ ಹಾಗು ಹಕ್ಕುಗಳು, ಸರಕಾರಗಳ ದೃಷ್ಟಿಯಿಂದ ಅಧಿಕಾರಗಳು ಮುಖ್ಯವಾದ ಅಂಶಗಳಾಗಿರುವುದನ್ನು ಕಾಣಬಹುದು. ಆದರೆ ಇವುಗಳು ಪರಸ್ಪರ ವಿಭಿನ್ನವಾದ ಅಂಶಗಳೆಂದು ಹೇಳಬಹುದು. ಏಕೆಂದರೆ, ಇವುಗಳಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಹಕ್ಕುಗಳು ವಿಕಾಸಗೊಂಡಿದ್ದ ಕಾಲದಲ್ಲಿ ಸರಕಾರಗಳ ಅಧಿಕಾರಗಳು ಮುದುಡಿಕೊಂಡಿರುವುದನ್ನು, ಸರಕಾರಗಳ ಅಧಿಕಾರಗಳು ಹೆಚ್ಚು ಪಸರಿಸಿಕೊಂಡಿದ್ದ ಕಾಲದಲ್ಲಿ

ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಹಕ್ಕುಗಳು ಮೂಲೆಗುಂಪಾಗಿದ್ದ ವಿಪರ್ಯಸ್ತ ಅಂಶವನ್ನು ಮೇಲಿನ ಸ್ಥೂಲ ವಿವರಣೆಯಿಂದ ತಿಳಿಯಬಹುದು. ಇದರ ಹಿನ್ನಲೆಯಲ್ಲಿ ಸರಕಾರದ ಬೆಳೆಯುತ್ತಿರುವ ಅಧಿಕಾರಗಳ ಸಂಕೋಲೆಗಳ ಆಗುಹೋಗುಗಳನ್ನು ಪರಿಶೀಲಿಸೋಣ.

ಅಧಿಕಾರಶಾಹಿ ಆಡಳಿತದ ಬೆಳವಣಿಗೆ

ಅಧಿಕಾರಶಾಹಿ (bureaucratic) ಆಡಳಿತದ ಬೆಳವಣಿಗೆಯು, ಇಪ್ಪತ್ತನೆಯ ಶತಮಾನದ ಸರಕಾರಗಳ ಆಡಳಿತ ವೈಶಿಷ್ಟ್ಯಗಳಲ್ಲೊಂದಾಗಿದೆ ಎಂದು ಖಚಿತವಾಗಿ ಹೇಳಬಹುದು. ಪ್ರಜಾಪ್ರಭುತ್ವ, ಸಮತಾ ಸಮಾಜವಾದ, ಪ್ರಜಾಸ್ವಾಮ್ಯವಾದ ವಂಶಪಾರಂಪರ್ಯವಾದ ನಿರಂಕುಶಾಧಿಕಾರ, ಮಿಲಿಟರಿ ಸರ್ವಾಧಿಕಾರ ಮುಂತಾದ ಎಂತಹದೇ ಸರಕಾರದ ಸ್ವರೂಪ ಯಾವುದೇ ದೇಶದಲ್ಲಿ ಅಸ್ತಿತ್ವದಲ್ಲಿದ್ದರೂ, ಅಲ್ಲಿ ಅಧಿಕಾರಿಶಾಹಿ ಆಡಳಿತದ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು. ಈ ಪ್ರಭಾವವು ನಾನಾ ರೀತಿಗಳಲ್ಲಿ, ವಿವಿಧ ಹಂತಗಳಲ್ಲಿ, ಬೇರೆ ಬೇರೆ ಕ್ಷೇತ್ರಗಳಲ್ಲಿ. ಭಿನ್ನ ಭಿನ್ನ ಅಂಶಗಳಮೇಲೆ ಇರುವುದನ್ನು ಎಲ್ಲ ದೇಶಗಳಲ್ಲಿಯೂ ನೋಡಬಹುದು.

ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಅನೇಕ ಜವಾಬ್ದಾರಿಗಳನ್ನು ಆಧುನಿಕ ಸರಕಾರಗಳು ನಿರ್ವಹಿಸಬೇಕಾಗಿ ಬಂತು. ಇದರಿಂದ ಸರಕಾರಗಳ ಅಧಿಕಾರಗಳು ವೃದ್ಧಿಗೊಳ್ಳುವುದು ಮತ್ತು ವಿಕಾಸಗೊಳ್ಳುವುದು ಅನಿವಾರ್ಯವಾಯಿತು. ಇದಕ್ಕೆ ಮೊದಲು, ಸರಕಾರದ ಕಾರ್ಯ ಚಟುವಟಿಕೆಗಳು ಆಂತರಿಕ ಕಾನೂನು ಮತ್ತು ಶಿಸ್ತು ಪಾಲನೆ, ಆಕ್ರಮಣಕಾರರಿಂದ ದೇಶವನ್ನು ಸಂರಕ್ಷಿಸುವುದು, ಮತ್ತು ವಿದೇಶಿ ವ್ಯವಹಾರಗಳನ್ನು ನೋಡಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿದ್ದವು. ಆದರೆ ಮೇಲೆ ತಿಳಿಸಿದ ಜವಾಬ್ದಾರಿಗಳ ಕಾರಣದಿಂದ, ಸರಕಾರದ ಅನೇಕ ಕಾರ್ಯ ಚಟುವಟಿಕೆಗಳು ಈಗ ವಿಸ್ತಾರವಾದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೂ ಪಸರಿಸಿವೆ. ಈ ಎಲ್ಲ ಕಾರ್ಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು. ಉನ್ನತ ಸ್ಥಾನಗಳಲ್ಲಿರುವ ಕೇವಲ ರಾಜಕಾರಣಿಗಳಿಂದ ಅಸಾಧ್ಯ. ಆದ್ದರಿಂದ ಇದಕ್ಕಾಗಿ ಆಡಳಿತ ತಜ್ಞರ ಸಹಾಯವನ್ನು ಅವರು ಪಡೆಯುವುದು ಅನಿವಾರ್ಯವಾಗಿದೆ. ಅಧಿಕಾರಿ ಶಾಹಿ ಪಂಗಡದ ಉದಯಕ್ಕೆ ಇದೊಂದು ಮುಖ್ಯ ಕಾರಣವೆಂದು ಹೇಳಬಹುದು. ಅಧಿಕಾರಶಾಹಿ ಆಡಳಿತದ ಬೆಳವಣಿಗೆಯೊಂದಿಗೆ, ಸರಕಾರದ ಅಧಿಕಾರಗಳು ಹೆಚ್ಚು ಹೆಚ್ಚು ಕ್ರೋಢೀಕರಿಸಲ್ಪಟ್ಟು ಕೇಂದ್ರೀಕೃತವಾದವು. ಹೀಗೆ ಆಧುನಿಕ ಸರಕಾರಗಳ ಅಧಿಕಾರಗಳು ಬೃಹದಾಕಾರದ ಹೆಮ್ಮರದ ಶಾಖೋಪಶಾಖೆಗಳಾಗಿ ಎಲ್ಲ ಕ್ಷೇತ್ರಗಳಿಗೂ ಪಸರಿಸಿಕೊಂಡಿವೆ. ಅಧಿಕಾರಶಾಹಿ ಗುಂಪು ಇದರ ಮೇಲ್ವಿಚಾರಕನಂತೆ ವರ್ತಿಸುತ್ತಿದೆ. ಸಾಮಾನ್ಯ ಪ್ರಜೆಯು ಸರಕಾರಗಳ ಈ ಅಧಿಕಾರಗಳ

ವ್ಯಾಪ್ತಿಗೊಳಪಟ್ಟಂತೆ ಮಾತ್ರ ತನ್ನ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಇದರಿಂದ ಅವನ ಸ್ವಾತಂತ್ರ್ಯ ಮತ್ತು ಹಕ್ಕುಗಳು ಅನೇಕ ಸಂದರ್ಭಗಳಲ್ಲಿ ಮಿತಗೊಂಡಿವೆ. ಇದರ ಪರಿಣಾಮವನ್ನು ನಮ್ಮ ದೇಶದ ನಿದರ್ಶನದೊಂದಿಗೆ ಸ್ವಲ್ಪ ಮಟ್ಟಿಗೆ ವಿವರಿಸಬಹುದು.

ಭಾರತದಲ್ಲಿ ಅಧಿಕಾರಿಶಾಹಿ ಆಡಳಿತದ ಬೆಳವಣಿಗೆಯು, ಬ್ರಿಟಿಷ್ ಸರಕಾರದ ಆಡಳಿತ ರೀತಿಯ ಕೊಡುಗೆಗಳಲ್ಲೊಂದಾಗಿದೆ ಎಂದು ಹೇಳಬಹುದು. ಸುಮಾರು ಒಂದು ಶತಮಾನದಷ್ಟು ಹಿಂದೆಯೆ 'ಇಂಡಿಯನ್ ಸಿವಿಲ್ ಸರ್ವಿಸ್' ಎಂಬ ಅಧಿಕಾರಶಾಹಿ ಪಂಗಡವನ್ನು ಬ್ರಿಟಿಷ್ ಸರಕಾರವು ನಿರ್ಮಿಸಿ, ಭಾರತದ ಆಡಳಿತದ ಎಲ್ಲ ಅಂಶಗಳನ್ನು ನೋಡಿಕೊಳ್ಳುವಂತೆ ಅದಕ್ಕೆ ವಹಿಸಿತು. ಭಾರತವು ಸ್ವತಂತ್ರವಾಗುವವರೆಗೂ ಈ ಅಧಿಕಾರಶಾಹಿ ಪಂಗಡದ ಸಂಖ್ಯೆ ಮಿತವಾಗಿತ್ತು. ಈ ಅಧಿಕಾರಿಗಳು ಆಗಿನ ಭಾರತ ಸರಕಾರದ ಅಗತ್ಯಗಳಿಗೆ ತಕ್ಕಂತೆ ತಮ್ಮ ತಮ್ಮ ಇಲಾಖೆಗಳ ಕೆಲಸಕಾರ್ಯಗಳನ್ನು ಸ್ಥೂಲವಾಗಿ ನಿರ್ದೇಶಿಸುತ್ತಿದ್ದರು. ಇವರು ಸಾಮಾನ್ಯವಾಗಿ ಸಾರ್ವಜನಿಕ ಆಡಳಿತದ ಎಲ್ಲ ಅಂಶಗಳಲ್ಲೂ ತರಬೇತು ಹೊಂದಿ ಪ್ರವೀಣರೆಂದು ಪರಿಗಣಿಸಲ್ಪಟ್ಟಿದ್ದರು. ಈ ಐ.ಸಿ.ಎಸ್. ಅಧಿಕಾರಿಗಳು ಸರಕಾರದ ನಾನಾ ಇಲಾಖೆಗಳು ಹಾಗು ಶಾಖೆಗಳಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸಬೇಕಾಗಿ ಬರುತ್ತಿತ್ತು. ಇಂತಹ ಸಂದರ್ಭಗಳು ಮತ್ತು ಅನುಭವಗಳಿಂದಾಗಿ, ಇವರು "ಸರ್ವಪ್ರವೀಣ" (Generalist)ರೆಂಬ ಭಾವನೆ ಜನರಲ್ಲಿ ಮೂಡಿಬಂದಿತು. ಅಲ್ಲದೆ ಈ ಅಧಿಕಾರಿಗಳು ಸಾಮಾನ್ಯವಾಗಿ ತಮ್ಮ ಆಡಳಿತದಕ್ಷತೆ ಮತ್ತು ಪ್ರಾಮಾಣಿಕತೆಗಳಿಗೆ ತುಂಬ ಹೆಸರುವಾಸಿಯಾಗಿದ್ದರು. ಇವರಲ್ಲಿ ಹೆಚ್ಚು ಜನರು ಭಾರತೀಯರೇ ಆಗಿದ್ದರು.

ಭಾರತವು ಸ್ವತಂತ್ರವಾದಮೇಲೆ, ಈ ಅಧಿಕಾರಶಾಹಿ ಪಂಗಡದಲ್ಲಿ ಅನೇಕ ಬದಲಾವಣೆಗಳುಂಟಾದವು. ಮೊದಲು ಈ ಪಂಗಡದ ರಚನೆಯಲ್ಲಿ ವಿಭಜನೆಯುಂಟಾಯಿತು; ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್, ಇಂಡಿಯನ್ ಪೋಲಿಸ್ ಸರ್ವಿಸ್, ಇಂಡಿಯನ್ ಫಾರೆಸ್ಟ್ ಸರ್ವಿಸ್ ಮುಂತಾದ ವಿಶೇಷ ಸೇವಾ ಪಂಗಡಗಳು ನೂತನ ಅಗತ್ಯಗಳಿಗೆ ಮತ್ತು ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ಅಸ್ತಿತ್ವಕ್ಕೆ ಬಂದವು. ಇವುಗಳಲ್ಲಿ ಐ. ಎ. ಎಸ್. ಪಂಗಡವು 'ಸರ್ವಪ್ರವೀಣ'ರೆಂಬ ಗುಂಪಿಗೆ ಸೇರಿದೆಯೆಂಬ ಭಾವನೆ ಈಗಲೂ ಇದೆ. ಈ ಅಧಿಕಾರಿಗಳನ್ನು ಭಾರತದ ಎಲ್ಲ ರಾಜ್ಯಗಳಲ್ಲಿಯೂ ಈಗ ಹೆಚ್ಚು ಹೆಚ್ಚಾಗಿ ಕಾಣಬಹುದು. ಜಿಲ್ಲೆಗಳು ಮತ್ತು ಅವುಗಳ ಉಪಕೇಂದ್ರಗಳಲ್ಲಿ, ರಾಜ್ಯ ಮತ್ತು ಕೇಂದ್ರ ಸರಕಾರಗಳ ಮುಖ್ಯ ಆಡಳಿತ ಕೇಂದ್ರಗಳಲ್ಲಿ, ವಿವಿಧ ಇಲಾಖೆಗಳು, ಶಾಖೆಗಳು, ಸಾರ್ವಜನಿಕ ಉದ್ಯಮ ಸಂಸ್ಥೆಗಳು, ಪೌರಸಂಸ್ಥೆಗಳು ಮೊದಲಾದವುಗಳಲ್ಲಿ ಐ ಎ ಎಸ್. ಅಧಿಕಾರಿಗಳು ನಾನಾ ರೀತಿಯ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿರುವುದನ್ನು ನೋಡಬಹುದು.

ರಾಜಕೀಯ ವ್ಯವಸ್ಥೆಗಳ ಮೇಲಿನ ಪರಿಣಾಮಗಳು ;

ಸರಕಾರಗಳ ಅಧಿಕಾರಗಳು ಬೆಳೆದುಬಂದ ರೀತಿ ಮತ್ತು ಆಧುನಿಕ ಕಾಲದ ಅಧಿಕಾರ ಶಾಹಿ ಆಡಳಿತದ ಬೆಳವಣಿಗೆಯ ಸ್ಥೂಲರೂಪಗಳನ್ನು ಇದುವರೆಗೂ ವಿವೇಚಿಸಲಾಯಿತು. ರಾಜಕೀಯ ಮತ್ತು ಕ್ಷೇತ್ರಗಳು, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಮೇಲೆ ಇವು ನಾನಾ ರೀತಿಯ ಪರಿಣಾಮಗಳನ್ನುಂಟು ಮಾಡಿವೆ. ಇವುಗಳನ್ನು ಸ್ವಲ್ಪ ವಿವರವಾಗಿ ಅರಿತುಕೊಳ್ಳುವುದು ಅತ್ಯವಶ್ಯಕ.

ರಾಜಕೀಯ ಪರಿಣಾಮಗಳನ್ನು ಮೊದಲು ತಿಳಿಯೋಣ, ಸರಕಾರಗಳ ಅಧಿಕಾರಗಳು ವಿಕಾಸವಾದಂತೆಲ್ಲಾ ಅವು ಜಟಿಲವಾಗುವುದು ಮಾತ್ರವಲ್ಲದೆ ಹೆಚ್ಚು ಹೆಚ್ಚು ಕೇಂದ್ರೀಕೃತವಾಗತೊಡಗಿವೆ. ಅಧಿಕಾರಶಾಹಿ ಆಡಳಿತದ ಬೆಳವಣಿಗೆಯು ಇದಕ್ಕೆ ಪೂರಕವಾಗಿದೆ. ಇದರಿಂದ ಸಮತಾ ಸಮಾಜವಾದ, ಪ್ರಜಾಸ್ವಾಮ್ಯವಾದ, ನಿರಂಕುಶಾಧಿಕಾರ, ಮಿಲಿಟರಿ ಸರ್ವಾಧಿಕಾರ ಮೊದಲಾದ ಸರಕಾರಗಳಿರುವ ದೇಶಗಳಲ್ಲಿ ಅಧಿಕಾರಶಾಹಿ ಪಂಗಡದ ಬಿಗಿಹಿಡಿತ ಹೆಚ್ಚಾಗಿ, ಅದು ಎಲ್ಲ ಆಡಳಿತಾಧಿಕಾರಗಳನ್ನೂ ಬಹುಮಟ್ಟಿಗೆ ಪರೋಕ್ಷವಾಗಿ ಮತ್ತು ತುಂಬ ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದೆ ಎಂಬ ವಾದವೂ ಇದೆ. ಉದಾಹರಣೆಗೆ, ರಷ್ಯ, ಚೀನಾ, ಯುಗೋಸ್ಲಾವಿಯ, ಜೆಕೊಸ್ಲೋವೇಕಿಯ, ಪೋಲೆಂಡ್, ಹಂಗೇರಿ, ಟರ್ಕಿ, ಇರಾಕ್, ಸೌದಿ ಅರೇಬಿಯ, ಪಾಕಿಸ್ತಾನ, ಬಾಂಗ್ಲಾದೇಶ ಮುಂತಾದವುಗಳಲ್ಲಿ ಸರಕಾರಗಳನ್ನು ನಡೆಸುತ್ತಿರುವ ರಾಜಕೀಯ ಪಕ್ಷಗಳು ಹಾಗು ಉನ್ನತ ಸ್ಥಾನಗಳಲ್ಲಿರುವ ರಾಜಕಾರಣಿಗಳು, ಅಧಿಕಾರ ಶಾಹಿ ಪಂಗಡದ ಸೂತ್ರದ ಬೊಂಬೆಗಳಾಗಿದ್ದಾರೆ ಎಂಬ ಟೀಕೆಯೂ ಇದೆ. ಇಂತಹ ಸರಕಾರಗಳ ಸ್ವರೂಪಗಳು ಅಧಿಕಾರಶಾಹಿ ಆಡಳಿತದ ಬೆಳವಣಿಗೆಗೆ ಉತ್ತಮವಾದ ಪರಿಸ್ಥಿತಿಗಳನ್ನು ಒದಗಿಸಿವೆ ಎಂದೂ ಹೇಳಲಾಗಿದೆ.

ಇನ್ನು ಪ್ರಜಾಪ್ರಭುತ್ವ ರೀತಿಯ ಸರಕಾರಗಳು ಅಸ್ತಿತ್ವದಲ್ಲಿರುವ ದೇಶಗಳಲ್ಲಿಯೂ ಸಹ ಇದೇ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಉದಾಹರಣೆಗೆ ಬ್ರಿಟನ್, ಫ್ರಾನ್ಸ್, ಅಮೇರಿಕ, ಕೆನಡ, ಆಸ್ಟ್ರೇಲಿಯಾ, ಜಪಾನ್, ಭಾರತ ಮೊದಲಾದ ರಾಷ್ಟ್ರಗಳಲ್ಲಿಯೂ ಸರಕಾರಗಳ ಆಡಳಿತ ಬಹುಮಟ್ಟಿಗೆ ಅಧಿಕಾರಶಾಹಿ ಪಂಗಡದ ದಕ್ಷತೆಯನ್ನೇ ಅವಲಂಬಿಸಿದೆ. ಈ ದೇಶಗಳಲ್ಲಿ ಸಾಮಾಜಿಕ ಕಲ್ಯಾಣವನ್ನು ಹೆಚ್ಚುಹೆಚ್ಚಾಗಿ ಸಾಧಿಸುವ ಉದ್ದೇಶದಿಂದ ಅನೇಕ ನೂತನ ಕಾರ್ಯಕ್ರಮಗಳನ್ನು ಸರಕಾರಗಳು ಇತ್ತೀಚಿನ ದಶಕಗಳಲ್ಲಿ ಕಾರ್ಯಗತ ಮಾಡುತ್ತಿವೆ. ಇದರ ಫಲವಾಗಿ ನಾನಾ ರೀತಿಯ ಸಾಮಾಜಿಕ ಮತ್ತು ಆರ್ಥಿಕ ವಿಧೇಯಕಗಳು ಹಾಗೂ ನಿಯಂತ್ರಣಗಳು ಅಸ್ತಿತ್ವಕ್ಕೆ ಬಂದಿವೆ. ಸರಕಾರಗಳ ಅಧಿಕಾರಗಳ ಸಂಕೋಲೆಗಳನ್ನು ವ್ಯಾಪಕವಾಗಿ ವಿಸ್ತರಿಸಿ, ಜಟಿಲಗೊಳಿಸಿ, ಅವು ತುಂಬ ಬಿಗಿಯಾಗಿರುವಂತೆ ಮಾಡುವಲ್ಲಿ ಈ ಕಾನೂನುಗಳು ಮತ್ತು ಹಕೋಟಿಗಳು ಹೆಚ್ಚು ಪರಿಣಾಮಕಾರಿಯಾಗಿವೆ

ಎಂದು ಹೇಳಬಹುದು. ಇವೆಲ್ಲವುಗಳ ಪರಿಣಾಮವಾಗಿ, ಒಂದು ಕಡೆ ಸರಕಾರಗಳ ಅಧಿಕಾರಗಳು ತೀವ್ರವಾಗಿ ಬೆಳೆದು ಕೇಂದ್ರೀಕೃತವಾಗುತ್ತಿವೆ. ಇನ್ನೊಂದು ಕಡೆ ಅಧಿಕಾರಶಾಹಿ ಪಂಗಡದ ಶಕ್ತಿ ಅಸುರೀ ರೀತಿಯಲ್ಲಿ ಬೆಳೆಯುತ್ತಿದೆ. ಇದರಿಂದ ಸಾಮಾನ್ಯ ಪ್ರಜೆ ಮತ್ತು ಅವನ ಸರಕಾರದ ಮಧ್ಯೆಯಿರುವ ಅಂತರ ದಿನೇದಿನೇ ಹೆಚ್ಚಾಗುತ್ತಾ ಹೋಗುತ್ತಿದೆ. ಅವನ ಪರಿಸ್ಥಿತಿ ಮಾತ್ರ ಕತ್ತರಿಗಳ ಮಧ್ಯೆ ಸಿಕ್ಕಿರುವ ಅಡಿಕೆಯಂತಾಗಿದೆ. ಆದರೆ, ಅವನ ಉದ್ಧಾರವನ್ನು ಮಾಡುವ ನೆಪದಲ್ಲಿ ಸರಕಾರ ಹಾಗು ಅಧಿಕಾರಶಾಹಿ ಪಂಗಡಗಳೆರಡೂ ತಮ್ಮ ತಮ್ಮ ಶಕ್ತಿ ಮತ್ತು ಪ್ರತಿಷ್ಠೆಗಳನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿವೆ.

ಇಂತಹ ಪ್ರವೃತ್ತಿಯು ಬೇರೆ ಬೇರೆ ದೇಶಗಳಲ್ಲಿ ನಾನಾ ವಿಧವಾದ ರಾಜಕೀಯ ಪರಿಣಾಮಗಳಿಗೆ ಎಡೆಮಾಡಿಕೊಟ್ಟಿದೆ. ಇದನ್ನು ಕೆಲವು ನಿದರ್ಶನಗಳೊಂದಿಗೆ ಚೆನ್ನಾಗಿ ಅರಿಯಬಹುದು. ಪ್ರಜಾಸ್ವಾಮ್ಯವಾದ ಅಥವಾ ಸಮತಾ ಸಮಾಜವಾದ ರೀತಿಯ ಸರಕಾರಗಳಿರುವ ರಷ್ಯಾ, ಚೀಣಾ, ಯುಗೋಸ್ಲಾವಿಯಾ, ಜೆಕೊಸ್ಲೋವೇಕಿಯಾ, ಪೋಲೆಂಡ್, ಹಂಗೇರಿ ಮುಂತಾದ ದೇಶಗಳಲ್ಲಿ ಒಂದೇ ಒಂದು ರಾಜಕೀಯ ಪಕ್ಷವು ಪ್ರಬಲವಾಗಿದ್ದು, ಸರಕಾರಗಳ ಎಲ್ಲ ಅಧಿಕಾರಗಳನ್ನು ಅದು ತನ್ನ ಕೈಯಲ್ಲಿ ಇಟ್ಟುಕೊಂಡಿರುವುದನ್ನು ಕಾಣಬಹುದು. ಈ ರಾಜಕೀಯ ಪಕ್ಷದ ಧೋರಣೆ, ತತ್ವಗಳು ಮತ್ತು ಅಭಿಪ್ರಾಯಗಳಿಗೆ ಭಿನ್ನವಾದವುಗಳಿಗೆ ಇಂತಹ ರಾಷ್ಟ್ರಗಳಲ್ಲಿ ಪುರಸ್ಕಾರವಿಲ್ಲ. ಆಡಳಿತದ ದೃಷ್ಟಿಯಿಂದ ರಾಜಕೀಯ ಪಕ್ಷ ಮತ್ತು ಸರಕಾರದ ಮಧ್ಯೆ ಹೆಚ್ಚಿನ ಅಂತರವಿರುವುದಿಲ್ಲ. ಅವುಗಳ ಕಾರ್ಯಕ್ರಮಗಳ ಕಟು ಟೀಕೆಗಳಂತೂ ಸಾಧ್ಯವೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಸಾಮಾನ್ಯವಾದ ಅಧಿಕಾರಶಾಹಿ ಪಂಗಡದ ಬೆಳವಣಿಗೆಯಾದದ್ದು ಆಶ್ಚರ್ಯದ ಸಂಗತಿಯೇನಲ್ಲ. ಹೀಗೆ ಒಂದು ರಾಜಕೀಯ ಪಕ್ಷ, ಸರಕಾರ ಮತ್ತು ಅಧಿಕಾರಶಾಹಿ ಪಂಗಡವೆಂಬ ತ್ರಿಕೋನದೊಳಗೆ ಈ ದೇಶದ ಪ್ರಜೆಗಳು ತಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ವಿಧಿಯಿಲ್ಲದೆ ಮಿತಗೊಳಿಸಬೇಕಾಗಿದೆ. ಇಂತಹ ಬಿಗಿಯಾದ ರಾಜಕೀಯ ವ್ಯವಸ್ಥೆ, ಪ್ರತಿಯೊಬ್ಬ ಪ್ರಜೆಯ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗಾಗಿ ಅವಶ್ಯಕ ಎಂಬುದು ಅವರ ದೃಢ ನಂಬಿಕೆಯಾಗಿದೆ. ಆದರೆ ಇಲ್ಲಿ ವಿಧಿಯ ಅಣಕವೊಂದನ್ನು ಕಾಣಬಹುದು. ಅದೇನೆಂದರೆ, ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಜಲ್ಸ್‌ರವರು ಪ್ರತಿಪಾದಿಸಿರುವ ಶಾಸ್ತ್ರೀಯ ಪ್ರಜಾಸ್ವಾಮ್ಯವಾದ ಕೊನೆಯ ಹಂತದಲ್ಲಿ, ರಾಜ್ಯ ಅಥವಾ ಸರಕಾರ ಕ್ಷೀಣಗೊಳ್ಳಬೇಕು. ಆಗ ಮಾತ್ರ ವರ್ಗರಹಿತ ವರ್ಣರಹಿತ ಮತ್ತು ಜಾತಿರಹಿತ ಸಮಾಜ ಸ್ಥಾಪನೆಯಾಗುತ್ತದೆ ಎಂದು ಅವರು ಭವಿಷ್ಯ ಹೇಳಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷ, ಸರಕಾರ ಹಾಗು ಅಧಿಕಾರಶಾಹಿ ಪಂಗಡಗಳೆಂಬ ವರ್ಗಗಳು ದಿನೇ ದಿನೇ ಕ್ಷೀಣವಾಗುವುದರ

ಬದಲು ಹೆಚ್ಚು ಹೆಚ್ಚು ಪ್ರಬಲವಾಗುತ್ತಿವೆ. ಇದರಿಂದ ಇಂತಹ ಸಮಾಜಗಳಲ್ಲಿ ರಾಜಕೀಯ ಪಕ್ಷ, ಸರಕಾರ ಮತ್ತು ಅಧಿಕಾರಿಶಾಹಿ ಪಂಗಡಗಳಲ್ಲಿ ಉನ್ನತ ಸ್ಥಾನಗಳಲ್ಲಿರುವ ಕೇವಲ ಕೆಲವೇ ಜನರು, ಎಲ್ಲ ಅಧಿಕಾರಗಳು, ಅವಕಾಶಗಳು ಹಾಗು ಭೋಗವಿಲಾಸಗಳನ್ನು ಅನುಭವಿಸುತ್ತಾ ಇತರರ ಶೋಷಣೆಯನ್ನು ಮಾಡುತ್ತಿದ್ದಾರೆ. ಬಂಡವಾಳ ಪ್ರಭುತ್ವ ಪದ್ಧತಿಯಲ್ಲಿನ ಬಂಡವಾಳಗಾರರ ಶೋಷಣೆಗಿಂತ, ಇವರು ಸಮಾಜ ಕಲ್ಯಾಣದ ಹೆಸರಿನಲ್ಲಿ ನಡೆಸುತ್ತಿರುವ ಈ ಶೋಷಣೆಯು ಕಠೋರವಾದುದು ಮತ್ತು ವಿಶ್ವಾಸಘಾತಕವಾದುದು ಎಂಬ ಟೀಕೆಯೂ ಇದೆ. ಆದ್ದರಿಂದ ಸಾಮಾಜಿಕ ಕಲ್ಯಾಣ ಮತ್ತು ನ್ಯಾಯಗಳಿಗಾಗಿ ವ್ಯಕ್ತಿಯ ಅಪಾರವಾದ ಸ್ವಾತಂತ್ರ್ಯವು ತಕ್ಕಮಟ್ಟಿಗೆ ಮಿತಗೊಳ್ಳಬೇಕೆಂಬುದನ್ನು ಒಪ್ಪಬಹುದಾದರೂ, ಅವುಗಳ ಹೆಸರಿನಲ್ಲಿ ರಾಜಕೀಯ ಪಕ್ಷ, ಸರಕಾರ ಅಥವಾ–ಅಧಿಕಾರಶಾಹಿ ಪಂಗಡಗಳಲ್ಲಿನ ಸಾಂಘಿಕ ಉಚ್ಚವರ್ಗದ ಜನರು ಇತರರ ಮೇಲೆ ಅಮಾನುಷವಾದ ಶೋಷಣೆಯನ್ನು ಖಂಡಿಸಬೇಕಾದುದು ಅಷ್ಟೇ ಅತ್ಯಗತ್ಯ.

ನಿರಂಕುಶಾಧಿಕಾರ ರೀತಿಯ ಸರಕಾರಗಳು, ಸೌದಿ ಅರೇಬಿಯಾ, ಟರ್ಕಿ, ಇರಾಕ್, ಕುವೈತ್ ಮುಂತಾದ ಅರಬ್ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿವೆ. ಈ ದೇಶಗಳಲ್ಲಿನ ರಾಜರ ಮತ್ತು ಅವರ ಸರಕಾರಗಳ ಅಧಿಕಾರಗಳು ಜಾತಿ, ಮತ, ಧರ್ಮ, ವ್ಯಕ್ತಿಪೂಜೆ, ಶಾರೀರಕ ಶಕ್ತಿಯ ಆರಾಧನೆ, ರಾಜನೇ ದೇವರು ಮುಂತಾದ ಧಾರ್ಮಿಕ ಅಥವಾ ಮೂಢ ನಂಬಿಕೆಗಳ ಆಧಾರದಮೇಲೆ ಚಲಾಯಿಸಲ್ಪಡುತ್ತಿವೆ. ಇಂತಹ ಸಮಾಜಗಳಲ್ಲಿ ಸರಕಾರಗಳ ಎಲ್ಲ ಅಧಿಕಾರಗಳೂ ರಾಜರ ಕೈಯಲ್ಲಿ ಕೇಂದ್ರೀಕೃತವಾಗಿದ್ದು, ಅವುಗಳನ್ನು ಚಲಾಯಿಸುವ ಅವರ ರಾಜಕೀಯ ನಿರಂಕುಶಾಧಿಕಾರ ನಿಜವಾಗಿಯೂ ಅಪರಿಮಿತವಾದುದು. ಇದರಿಂದ ಸಾಮಾಜಿಕ ನ್ಯಾಯ ಮತ್ತು ವ್ಯಕ್ತಿ ಸ್ವಾತಂತ್ರ್ಯ ಎಂಬುವು ಈ ದೇಶಗಳಲ್ಲಿ ಕೇವಲ ಮರೀಚಿಕೆಗಳಾಗಿವೆ. ಇದಕ್ಕೆ ಸಾಮಾನ್ಯ ಜನರ ಬಡತನ, ಅವಿದ್ಯೆ ಹಾಗು ಅಸಹಾಯಕತೆಗಳೇ ಮುಖ್ಯ ಕಾರಣಗಳಾಗಿವೆ ಎಂದು ಹೇಳಬಹುದು. ಆದರೂ ಇತ್ತೀಚಿನ ಕೆಲವು ವರ್ಷಗಳಲ್ಲಿ ಸಾಮಾಜಿಕ ನ್ಯಾಯ ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಈ ರಾಷ್ಟ್ರಗಳ ಕೆಲವೆಡೆಗಳಲ್ಲಿ ಗಲಭೆ ಹಾಗು ರಕ್ತಪಾತಗಳಾಗುತ್ತಿರುವುದನ್ನು ಕಾಣಬಹುದು. ಸ್ವಲ್ಪ ಹೆಚ್ಚು ಕಡಿಮೆ ಇಂತಹದೇ ಪರಿಸ್ಥಿತಿ ಮಿಲಿಟರಿ ಸರ್ವಾಧಿಕಾರವಿರುವ ಪಾಕಿಸ್ತಾನ, ಬಾಂಗ್ಲಾದೇಶ ಮುಂತಾದ ದೇಶಗಳಲ್ಲಿಯೂ ಇದೆ. ಇದರಿಂದ ಇಲ್ಲಿನ ಜನರು ಸೈನಿಕ ಶಾಸನದ ಕರಾಳ ಛಾಯೆಯಲ್ಲಿಯೇ ತಮ್ಮ ಜೀವನವನ್ನು ನಡೆಸಬೇಕಾಗಿದೆ. ಅಲ್ಲದೆ ರಾಜರ ನಿರಂಕುಶಾಧಿಕಾರ ಅಥವಾ ಮಿಲಿಟರಿ ಸರ್ವಾಧಿಕಾರಕ್ಕಾಗಿ ಒಳಸಂಚು ಮತ್ತು ಪಿತೂರಿಗಳ ದಂಗೆ ಒಂದೇ ಸಮನಾಗಿ ಈ ದೇಶಗಳಲ್ಲಿ ಮುಂದುವರಿಯುತ್ತಿರುವುದನ್ನೂ ಕಾಣಬಹುದು.

ಪ್ರಜಾಪ್ರಭುತ್ವ ಮಾದರಿ ಸರಕಾರಗಳು ಅಸ್ತಿತ್ವದಲ್ಲಿರುವ ಬ್ರಿಟನ್, ಅಮೆರಿಕ, ಭಾರತ ಮುಂತಾದ ರಾಷ್ಟ್ರಗಳಲ್ಲಿಯೂ ಕೂಡ ಸರಕಾರ ಮತ್ತು ಅಧಿಕಾರಶಾಹಿ ಪಂಗಡಗಳ ಶಕ್ತಿ ಹಾಗು ಹಿರಿಮೆ ಏರಿ, ನಾನಾ ರೀತಿಯ ವಿಕೃತ ರಾಜಕೀಯ ರೂಪಗಳಿಗೆ ಎಡೆಮಾಡಿಕೊಟ್ಟಿರುವುದನ್ನು ಕಾಣಬಹುದು. ಇವುಗಳಲ್ಲಿ ''ಪಾರ್ಲಿಮೆಂಟುಗಳ ತಾಯಿ'' ಎಂಬುದಾಗಿ ಬ್ರಿಟನ್ನಿನ ಪಾರ್ಲಿಮೆಂಟನ್ನು ಕರೆಯುವುದು ವಾಡಿಕೆಯಾಗಿದೆ. ಸರಕಾರವನ್ನು ಎಷ್ಟುಬೇಕಾದರೂ ಕಟುವಾಗಿ ಟೀಕಿಸುವ ಹಕ್ಕು ಆ ದೇಶದ ಪ್ರಜೆಗಳಿಗೆ ಉಂಟು. ಇದೇ ರೀತಿ ರಾಜಕೀಯ ದೃಷ್ಟಿಯಿಂದ ಅತಿ ಹೆಚ್ಚಿನ ವ್ಯಕ್ತಿ ಸ್ವಾತಂತ್ರ್ಯವನ್ನು ಅಮೆರಿಕದಲ್ಲಿ ಕಾಣಬಹುದು. ಅಲ್ಪಸ್ವಲ್ಪ ಮಟ್ಟಿಗಾದರೂ ಇಂತಹ ಸ್ವಾತಂತ್ರ್ಯ ಹಾಗು ಹಕ್ಕುಗಳು ಭಾರತದಲ್ಲಿಯೂ ಇವೆಯೆಂದು ಹೇಳಬಹುದು. ಇಷ್ಟಾದರೂ ಈ ಎಲ್ಲ ದೇಶಗಳ ಸರಕಾರಗಳ ಅಧಿಕಾರಗಳು ಸಾವಿರಾರು ವಿಧೇಯಕಗಳ ಮೂಲಕ ಅಗಾಧವಾಗಿ ಬೆಳೆಯುತ್ತಿವೆ. ಇವುಗಳನ್ನೆಲ್ಲಾ ಕಾರ್ಯಗತ ಮಾಡುವ ಹೊಣೆಯನ್ನು ಹೊತ್ತಿರುವ ಅಧಿಕಾರಶಾಹಿ ಪಂಗಡಗಳ ಶಕ್ತಿಯೂ ಸಹ ಈ ದೇಶಗಳಲ್ಲಿ ಅಪರಿಮಿತವಾಗಿ ವೃದ್ಧಿಯಾಗುತ್ತಿದೆ. ಹೀಗೆ ಸರಕಾರಗಳು ಮತ್ತು ಅಧಿಕಾರಶಾಹಿ ಪಂಗಡಗಳ ಕೈಯಲ್ಲಿ ಕೇಂದ್ರೀಕೃತವಾಗಿರುವ ಅಪಾರವಾದ ಶಕ್ತಿ ಸಾಮರ್ಥ್ಯಗಳನ್ನು, ಒಂದು ರಾಜಕೀಯ ಪಕ್ಷ ಅಥವಾ ಒಬ್ಬ ರಾಜಕಾರಣಿ ತನ್ನ ಸ್ವಾರ್ಥಕ್ಕಾಗಿ ಯಾವ ರೀತಿ ದುರುಪಯೋಗಪಡಿಸಿಕೊಳ್ಳಬಹುದು ಎಂಬುದನ್ನು ಇತ್ತೀಚಿನ ವರ್ಷಗಳಲ್ಲಿ ಅಮೆರಿಕ ಮತ್ತು ಭಾರತಗಳಲ್ಲಿ ನಡೆದ ಕೆಲವು ಘಟನೆಗಳಿಂದ ಚೆನ್ನಾಗಿ ಅರಿಯಬಹುದು. ಅಂದರೆ, ಸರಕಾರದ ಬೆಳೆಯುತ್ತಿರುವ ಅಧಿಕಾರಗಳ ಸಂಕೋಲೆಗಳಿಂದಾಗಬಹುದಾದ ದುಷ್ಟ ರಾಜಕೀಯ ಪರಿಣಾಮಗಳಿಂದ, ಪ್ರಜಾಪ್ರಭುತ್ವ ರೀತಿಯ ಸಮಾಜಗಳೂ ಕೂಡ ರಾಕ್ಷಸೀ ಪ್ರವೃತ್ತಿಯನ್ನು ಹೊಂದಬಹುದು ಎಂಬುದನ್ನು ಈ ನಿದರ್ಶನಗಳು ತೋರಿಸುತ್ತವೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಈ ರಾಷ್ಟ್ರಗಳಲ್ಲಿಯೂ ಸಹ ಸರಕಾರಗಳ ಅಧಿಕಾರಗಳು ತೀವ್ರಗತಿಯಿಂದ ಹೆಚ್ಚಾಗುತ್ತಿವೆ. ಇದಕ್ಕೆ ಪೂರಕವಾಗಿ ಅಸಂಖ್ಯವಾದ ವಿಧೇಯಕಗಳು ಬಳಕೆಗೆ ಬರುತ್ತಿವೆ. ಇದರ ಫಲವಾಗಿ ಅಧಿಕಾರಶಾಹಿ ಆಡಳಿತ ಪಂಗಡದ ಬಿಗಿಹಿಡಿತವೂ ಬಲವಾಗುತ್ತಿದೆ. ಇವುಗಳೊಂದಿಗೆ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಭ್ರಷ್ಟಾಚಾರ ಬೆಳೆಯುತ್ತಿದೆ. ವೈಯಕ್ತಿಕ ಸ್ವಾರ್ಥಸಾಧನೆ ಮುಂದಾಗಿ ಸಮಾಜದ ಹಿತಸಾಧನೆ ಹಿಂದಾಗುತ್ತಿದೆ. ಆದ್ದರಿಂದ ಸರಕಾರ ಮತ್ತು ಪ್ರಜೆಗಳ ನಡುವಿನ ಅಂತರ ಅಧಿಕವಾಗುತ್ತಿದೆ. ಸರಕಾರಗಳ ಅಧಿಕಾರಗಳು ಮತ್ತು ಅವುಗಳ ಸದುಪಯೋಗದ ಬಗ್ಗೆ, ಈ ಕಾರಣಗಳಿಂದಾಗಿ ಸಾಮಾನ್ಯ ಪ್ರಜೆಗಳಲ್ಲಿ ತಾತ್ಸಾರವಿರುವುದನ್ನು ಕಾಣಬಹುದು.

ಆರ್ಥಿಕ ಕ್ಷೇತ್ರಗಳ ಮೇಲಿನ ಪರಿಣಾಮಗಳು

ಆರ್ಥಿಕ ಕ್ಷೇತ್ರಗಳ ಮೇಲಿನ ಪರಿಣಾಮಗಳನ್ನು ಇನ್ನು ಪರಿಶೀಲಿಸೋಣ. ಸರಕಾರಗಳ ಬೆಳೆಯುತ್ತಿರುವ ಅಧಿಕಾರಗಳು ಮತ್ತು ಅಧಿಕಾರಿಶಾಹಿ ಆಡಳಿತದ ಬೆಳವಣಿಗೆಗಳು, ಆರ್ಥಿಕ ಕ್ಷೇತ್ರದ ಮೇಲೆ ಉಂಟುಮಾಡಿರುವ ಪರಿಣಾಮಗಳಷ್ಟನ್ನು ಬಹುಶಃ ಇನ್ನಾವ ಕ್ಷೇತ್ರದ ಮೇಲೂ ಉಂಟುಮಾಡಿಲ್ಲವೆಂದು ಹೇಳಬಹುದು. ಅಲ್ಲದೆ, ಆರ್ಥಿಕ ಕ್ಷೇತ್ರದ ಮೇಲಿನ ಇಂತಹ ನಿಯಂತ್ರಣಗಳನ್ನು ಈಗ ಎಲ್ಲ ರೀತಿಯ ಸರಕಾರಗಳಲ್ಲೂ ಕಾಣಬಹುದು. ಅವುಗಳ ಪರಿಣಾಮದಲ್ಲಿ ಮಾತ್ರ, ಒಂದು ದೇಶದಿಂದ ಇನ್ನೊಂದಕ್ಕೆ ವ್ಯತ್ಯಾಸವಿದೆ ಅಷ್ಟೆ. ಉದಾಹರಣೆಗೆ, ಪ್ರಜಾಸ್ವಾಮ್ಯವಾದ ರೀತಿಯ ಸಮಾಜಗಳಲ್ಲಿ ಅರ್ಥವ್ಯವಸ್ಥೆಯ ಎಲ್ಲ ಕಾರ್ಯಕ್ಷೇತ್ರಗಳ ಮೇಲೆ ಅಲ್ಲಿನ ಕಮ್ಯೂನಿಸ್ಟ್ ಸರಕಾರ ಅಥವಾ ಪಕ್ಷ, ಅಧಿಕಾರಗಳನ್ನು ತುಂಬಾ ವ್ಯಾಪಕವಾಗಿ ಚಲಾಯಿಸುತ್ತಿದೆ. ಕೃಷಿ, ಕೈಗಾರಿಕೆ, ಸಾಗಣೆ ಮುಂತಾದ ಆರ್ಥಿಕ ಕಾರ್ಯಚಟುವಟಿಕೆಗಳಲ್ಲಿನ ಒಟ್ಟು ಉತ್ಪಾದನೆ ಮತ್ತು ವಿತರಣೆಗಳನ್ನು ಕೇಂದ್ರೀಕೃತ ಯೋಜನೆಗಳ ಮೇರೆಗೆ ನಿಯಂತ್ರಿಸಲಾಗುತ್ತಿದೆ. ಇವುಗಳ ಮೂಲಕ ಸಮಾಜದ ಒಟ್ಟು ಅನುಭೋಗದ ಪ್ರಮಾಣವನ್ನೂ ಹತೋಟಿಗೆ ಒಳಪಡಿಸಲಾಗಿದೆ. ಆರ್ಥಿಕ ಕ್ಷೇತ್ರದಲ್ಲಿ ಸರಕಾರಿ ವಲಯವು ಹೆಚ್ಚು ವಿಸ್ತಾರವಾಗಿರುವುದರಿಂದ, ಖಾಸಗಿ ವಲಯದ ಕಾರ್ಯಚಟುವಟಿಕೆಗಳು ಕಣ್ಣಿಗೆ ಕಾಣಿಸದಷ್ಟು ಅಲ್ಪವೂ ಮತ್ತು ಅಪ್ರಾಮುಖ್ಯವೂ ಆಗಿರುತ್ತವೆ. ಆದ್ದರಿಂದ ಇಂತಹ ದೇಶಗಳಲ್ಲಿ ವ್ಯಕ್ತಿಯ ಆರ್ಥಿಕ ಸ್ವಾತಂತ್ರ್ಯ ತುಂಬ ಮಿತವಾಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲಿ ಸರಕಾರಗಳ ಅಧಿಕಾರಗಳು ಮತ್ತು ಅಧಿಕಾರಶಾಹಿ ಆಡಳಿತದ ಶಕ್ತಿಗಳು ಬೆಳೆದು ಪರಮಾವಧಿಯ ಮಟ್ಟವನ್ನು ಮುಟ್ಟಿವೆಯೆಂದು ಹೇಳಬಹುದು.

ನಿರಂಕುಶಾಧಿಕಾರ ಅಥವಾ ಮಿಲಿಟರಿ ಸರ್ವಾಧಿಕಾರವಿರುವ ದೇಶಗಳಲ್ಲಿನ ಅರ್ಥವ್ಯವಸ್ಥೆಗಳ ಮೇಲೂ ಅಲ್ಲಿನ ಸರಕಾರಗಳ ಹತೋಟಿ ವ್ಯಾಪಕವಾಗಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಇಂತಹ ದೇಶಗಳಲ್ಲಿ ಆರ್ಥಿಕಾಭಿವೃದ್ಧಿಯ ಎಲ್ಲ ಜವಾಬ್ದಾರಿಗಳನ್ನೂ ಸರಕಾರಗಳೇ ವಹಿಸಿಕೊಂಡಿರುವುದರಿಂದ, ಅವುಗಳ ಅಧಿಕಾರಗಳು ಇದಕ್ಕೆ ತಕ್ಕಂತೆ ಅಧಿಕವಾಗಿಯೇ ಇವೆ. ಈ ದೇಶಗಳಲ್ಲಿನ ಖಾಸಗಿ ವಲಯದಲ್ಲಿ ಹಲಕೆಲವು ಆರ್ಥಿಕ ಕಾರ್ಯಚಟುವಟಿಕೆಗಳನ್ನು ಕಾಣಬಹುದಾದರೂ, ಅವುಗಳ ಪ್ರಮಾಣ ಅಲ್ಪವಾಗಿರುವುದು ಮಾತ್ರವಲ್ಲದೆ ಸರಕಾರಗಳ ಸ್ಥೂಲ ನಿರ್ದೇಶನಗಳಿಗೆ ಅವು ಒಳಗಾಗಿವೆ ಎನ್ನಬಹುದು. ಇದರಿಂದಾಗಿ ಸರಕಾರಿ ವಲಯದಲ್ಲಿನ ಆರ್ಥಿಕ ಚಟುವಟಿಕೆಗಳು ತೀವ್ರವಾಗಿ ಬೆಳೆಯುತ್ತಿವೆ.

ಬಂಡವಾಳಶಾಹಿ ರೀತಿಯ ಅರ್ಥವ್ಯವಸ್ಥೆಯನ್ನು ಹೊಂದಿರುವ ಅಮೆರಿಕದಲ್ಲಿ ಮಾತ್ರ ಹೆಚ್ಚು ವಿಸ್ತಾರವಾದ ಮತ್ತು ಪ್ರಭಾವಶಾಲಿಯಾದ ಖಾಸಗಿವಲಯವನ್ನು

ಕಾಣಬಹುದು. ಕೃಷಿ, ಕೈಗಾರಿಕೆ, ಸಾಗಣೆ, ಸಂಪರ್ಕ ಮುಂತಾದ ಎಲ್ಲ ಮುಖ್ಯ ಆರ್ಥಿಕ ಕಾರ್ಯಚಟುವಟಿಕೆಗಳನ್ನೂ ಅಲ್ಲಿನ ಖಾಸಗಿ ಉದ್ಯಮಿಗಳು ತುಂಬ ದಕ್ಷತೆಯಿಂದ ನಿರ್ವಹಿಸುತ್ತಿದ್ದಾರೆ. ಅಲ್ಲಿನ ಪ್ರಜೆಗಳಿಗೆ ವ್ಯಕ್ತಿ ಸ್ವಾತಂತ್ರ್ಯ ಎಷ್ಟು ಪ್ರಾಮುಖ್ಯವೋ ಅಷ್ಟೇ ಮಹತ್ವವನ್ನು ಆರ್ಥಿಕ ಸ್ವಾತಂತ್ರ್ಯವೂ ಹೊಂದಿದೆ. ಸರಕಾರದ ಅನಿರ್ಬಂಧಿತ ಅಧಿಕಾರಗಳನ್ನು ಮತ್ತು ಅಧಿಕಾರಶಾಹಿ ಆಡಳಿತ ಶಕ್ತಿಯ ಬಿಗಿ ಹಿಡಿತಗಳನ್ನು ಅವರು ತೀವ್ರವಾಗಿ ವಿರೋಧಿಸುತ್ತಾರೆ. ಇದರ ಫಲವಾಗಿ ಅಮೆರಿಕದ ಕೆಲವು ಖಾಸಗಿ ಉದ್ಯಮ ಸಂಸ್ಥೆಗಳು ತಮ್ಮವೇ ಆದ ದೊಡ್ಡ ದೊಡ್ಡ "ಕೈಗಾರಿಕಾ ಚಕ್ರಾಧಿಪತ್ಯ"ಗಳನ್ನು ನಿರ್ಮಿಸಿವೆ. ಇವುಗಳ ವ್ಯಾಪಾರ ವಹಿವಾಟುಗಳು ಇಡೀ ಪ್ರಪಂಚದಲ್ಲೆಲ್ಲಾ ಪಸರಿಸಿವೆ. ಅಲ್ಲಿನ ಸರಕಾರಿ ವಲಯದ ಕಾರ್ಯವ್ಯಾಪ್ತಿಯು ತುಂಬ ಸೀಮಿತವಾದುದು ಮಾತ್ರವಲ್ಲದೆ, ಅದರ ಬೆಳವಣಿಗೆಯೂ ಅಷ್ಟು ತೀವ್ರವಾಗಿಲ್ಲ. ಇಷ್ಟಾದರೂ ಅಮೆರಿಕದ ಅರ್ಥವ್ಯವಸ್ಥೆಯಮೇಲೆ ಅಲ್ಲಿನ ಸರಕಾರಗಳ ಅಧಿಕಾರಗಳು ಅಥವಾ ವಿವಿಧ ರೀತಿಯ ಪರೋಕ್ಷವಾದ ನಿಯಂತ್ರಣಗಳು ಪರಿಣಾಮಕಾರಿಯಾಗಿಲ್ಲವೆಂದು ಭಾವಿಸಬಾರದು. ಏಕೆಂದರೆ, ಕೃಷಿ, ಕೈಗಾರಿಕೆ, ವಿದೇಶಿ ವಾಣಿಜ್ಯ ಮುಂತಾದ ಕ್ಷೇತ್ರಗಳಲ್ಲಿನ ಕಾರ್ಯಚಟುವಟಿಕೆಗಳನ್ನು ಅಲ್ಲಿನ ಸರಕಾರಗಳು ತಮ್ಮ ವಿವಿಧ ನೀತಿಗಳ ಮೂಲಕ ಸ್ಥೂಲವಾಗಿ ನಿರ್ದೇಶಿಸುತ್ತಿವೆ. ಕೃಷಿ ವಸ್ತುಗಳ ಬೆಲೆಗಳು ಒಂದು ಕನಿಷ್ಠ ಮಟ್ಟಕ್ಕಿಂತ ಕೆಳಗೆ ಮುಟ್ಟದಂತೆ ಅವುಗಳನ್ನು ನಿಯಂತ್ರಿಸುವುದು. ಕೈಗಾರಿಕೆಗಳಿಗೆ ಧನ ಮತ್ತಿತರ ಸಹಾಯಗಳನ್ನು ಕೊಡುವುದು, ಸಾಗಣೆ ಮತ್ತು ಸಂಪರ್ಕ ಸೇವಾಸೌಕರ್ಯಗಳ ದರಗಳನ್ನು ಸ್ಥೂಲವಾಗಿ ನಿಗದಿ ಮಾಡುವುದು, ರಫ್ತುಗಳಿಗೆ ಉತ್ತೇಜನ ಕೊಡುವುದು, ಬ್ಯಾಂಕಿಂಗ್ ವ್ಯವಸ್ಥೆಯ ಭದ್ರತೆಯನ್ನು ಕಾಪಾಡಿಕೊಂಡು ಬರುವುದು ಮುಂತಾದವುಗಳಿಗೆ ಸಂಬಂಧಪಟ್ಟಂತೆ ಈ ನೀತಿಗಳನ್ನು ಸರಕಾರಗಳು ರೂಪಿಸುತ್ತಿವೆ. ಅಂದರೆ, ಅಮೆರಿಕೆಯಂತಹ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲೂ ಸರಕಾರಗಳ ಅಧಿಕಾರಗಳು ಪರೋಕ್ಷವಾಗಿಯಾದರೂ ಬೆಳೆಯುತ್ತಿವೆ ಎಂದಂತಾಯಿತು. ಈ ಅಧಿಕಾರಗಳಿಗೆ ಸಮನಾದ ಕಾನೂನುಗಳು ಮತ್ತು ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಅಗತ್ಯವಾದ ಅಧಿಕಾರಶಾಹಿ ಆಡಳಿತ ವ್ಯವಸ್ಥೆಗಳು ಅಲ್ಲಿಯೂ ಇವೆಯೆಂಬುದನ್ನು ಒಪ್ಪಿಕೊಳ್ಳಬೇಕು.

ಇತರ ಕೆಲವು ರಾಷ್ಟ್ರಗಳಾದ ಬ್ರಿಟನ್, ಜಪಾನ್, ಭಾರತ ಮೊದಲಾದವು "ಮಿಶ್ರ ಆರ್ಥಿಕ ನೀತಿ"ಯನ್ನು ಅನುಸರಿಸುತ್ತಿವೆ. ಈ ದೇಶಗಳ ಅರ್ಥವ್ಯವಸ್ಥೆಗಳ ಕೆಲವು ಕ್ಷೇತ್ರಗಳಲ್ಲಿ ಸರಕಾರಿ ವಲಯವು ತುಂಬ ಪ್ರಭಾವಶಾಲಿಯಾಗಿರುವುದನ್ನು ಕಾಣಬಹುದು. ಮಿಕ್ಕ ಹಲವು ಕ್ಷೇತ್ರಗಳಲ್ಲಿ ಖಾಸಗಿ ವಲಯವು ಅಷ್ಟೇ ಶಕ್ತಿಯುತವಾಗಿ ಮತ್ತು ಹೆಚ್ಚು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿರುವುದನ್ನೂ ನೋಡ

ಬಹುದು. ಈ ದೇಶಗಳಲ್ಲಿ ಸರಕಾರಗಳ ಅಧಿಕಾರಗಳು ಇತ್ತೀಚಿನ ದಶಕಗಳಲ್ಲಿ ಅಗಾಧವಾಗಿ ಬೆಳೆದು, ಅವು ಅರ್ಥವ್ಯವಸ್ಥೆಗಳ ಎಲ್ಲ ಕ್ಷೇತ್ರಗಳನ್ನೂ ಪರಿಣಾಮಕಾರಿಯಾಗಿ ನಿಯಂತ್ರಿಸುವ ಶಕ್ತಿಯನ್ನು ಪಡೆದಿವೆ. ಇದರೊಂದಿಗೆ ಅಧಿಕಾರಶಾಹಿ ಆಡಳಿತವ್ಯವಸ್ಥೆಯ ಪ್ರಾಮುಖ್ಯತೆಯು ಹೆಚ್ಚಾಗಿ, ಅದು ಸರಕಾರಗಳ ಒಂದು ಅನಿವಾರ್ಯ ಅವಿಭಾಜ್ಯವಾಗಿಬಿಟ್ಟಿದೆ. ಇವೆಲ್ಲವುಗಳ ಪರಿಣಾಮವಾಗಿ, ಎಷ್ಟೋ ಸಂದರ್ಭಗಳಲ್ಲಿ ಪ್ರಜೆಗಳಿಗೆ ಪ್ರಯೋಜನವಾಗುವುದರ ಬದಲು ಹೆಚ್ಚು ತೊಂದರೆಗಳೇ ಆಗುತ್ತಿವೆ. ಭಾರತದ ನಿದರ್ಶನದೊಂದಿಗೆ ಇವುಗಳ ಬಗ್ಗೆ ಇನ್ನೂ ಹೆಚ್ಚಿನ ಅಂಶಗಳನ್ನು ತಿಳಿಯಬಹುದು.

ಕಳೆದ ಕಾಲು ಶತಮಾನದಲ್ಲಿ ಭಾರತದಲ್ಲಿ ಸರಕಾರಗಳ ಅಧಿಕಾರಗಳ ಬೆಳವಣಿಗೆ ತೀವ್ರವಾಗಿದ್ದು, ಅವು ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳನ್ನು ನಿಯಂತ್ರಿಸುವಲ್ಲಿ ತುಂಬ ಯಶಸ್ವಿಯಾಗಿವೆಯೆಂದು ಹೇಳಬಹುದು. ಇದಕ್ಕೆ ಪೂರಕವಾಗಿ ಅಧಿಕಾರ ಶಾಹಿ ಆಡಳಿತ ವ್ಯವಸ್ಥೆಯು ಬೃಹದಾಕಾರವಾಗಿ ಬೆಳೆದು, ಪಟ್ಟಭದ್ರ ಹಿತಾಸಕ್ತಿಯ ಗುಂಪೊಂದರ ಉದಯಕ್ಕೆ ದಾರಿ ಮಾಡಿಕೊಟ್ಟಿದೆ. ಇವುಗಳು ನಡೆದು ಬಂದ ದಾರಿ ಹೀಗಿದೆ : ಮೊದಮೊದಲು ಒಂದು ಪಂಚವಾರ್ಷಿಕ ಯೋಜನೆಯಿಂದ ಇನ್ನೊಂದರ ವೇಳೆಗೆ ಸರಕಾರಿ ವಲಯದ ಕಾರ್ಯಚಟುವಟಿಕೆಗಳನ್ನು ಗಮನಾರ್ಹವಾಗಿ ವಿಸ್ತರಿಸುತ್ತಾ ಬರಲಾಯಿತು. ಇವುಗಳ ವ್ಯಾಪಕತೆ ಎಷ್ಟಿದೆಯೆಂದರೆ, ಈ ಆರನೆಯ ಪಂಚವಾರ್ಷಿಕ ಯೋಜನೆಯು ಕೊನೆಯವೇಳೆಗೆ ಇಡೀ ಅರ್ಥವ್ಯವಸ್ಥೆಯಲ್ಲಿನ ಒಟ್ಟು ಕಾರ್ಯ ಚಟುವಟಿಕೆಗಳಲ್ಲಿ ಶೇಕಡ 75 ರಷ್ಟನ್ನು ಸರಕಾರಿ ವಲಯವೇ ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆಯೆಂದು ಹೇಳಲಾಗಿದೆ. ಈಗ ಅದರ ಕಾರ್ಯ ವ್ಯಾಪ್ತಿಯಲ್ಲಿ ಉಕ್ಕು ಮತ್ತು ಕಬ್ಬಿಣದ ತಯಾರಿಕೆ, ಯಂತ್ರಗಳು, ಟೆಲಿಫೋನು, ಗಡಿಯಾರ, ಎಲೆಕ್ಟ್ರಾನಿಕ್ ವಸ್ತುಗಳು, ಔಷಧಿ, ಫಿಲ್ಮ್, ಹತ್ತಿಬಟ್ಟೆ ಮೊದಲಾದುವುಗಳ ತಯಾರಿಕೆಗಳು ಸೇರಿವೆ. ಇವಲ್ಲದೆ, ರಾಸಾಯನಿಕ ಗೊಬ್ಬರ, ಪೆಟ್ರೋಲಿಯಂ ವಸ್ತುಗಳು, ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆ, ಭಾರಿ ನೀರಾವರಿ ಕಾರ್ಯಾಗಾರಗಳು, ಭೂಮಿಯನ್ನು ಸಮಗೊಳಿಸುವ ದೊಡ್ಡ ಯಂತ್ರಗಳು ರಕ್ಷಣಾ ಪಡೆಗಳಿಗೆ ಅಗತ್ಯವಾದ ವಸ್ತುಗಳ ತಯಾರಿಕೆ ಮೊದಲಾದವನ್ನೂ ಸರಕಾರಿ ವಲಯದಲ್ಲಿ ಕಾಣಬಹುದು. ಇವೆಲ್ಲಕ್ಕೂ ಮಿಗಿಲಾಗಿ ಕಲ್ಲಿದ್ದಲ ಗಣಿ ಉದ್ಯಮ, ರೈಲುಗಳು, ರಸ್ತೆ ಸಾರಿಗೆ, ವಿಮಾನಯಾನ, ಸಮುದ್ರ ಸಾಗಣೆ, ಅಂಚೆ, ತಂತಿ ಹಾಗು ದೂರವಾಣಿ ಸೇವೆಗಳು, ಬ್ಯಾಂಕಿಂಗ್ ಮತ್ತು ಜೀವವಿಮಾ ವ್ಯವಸ್ಥೆಗಳು, ರೇಡಿಯೋ ಮತ್ತು ಟೆಲಿವಿಷನ್ ಸೇವೆಗಳು ಮೊದಲಾದವನ್ನು ರಾಷ್ಟ್ರೀಕರಣ ಮಾಡಲಾಗಿದೆ. ಕೃಷಿ ವಸ್ತುಗಳ ಸಂಗ್ರಹಣೆ ಮತ್ತು ಮಾರಾಟ, ವಿದೇಶಿ ವಾಣಿಜ್ಯ ಮುಂತಾದವುಗಳಲ್ಲೂ ಸರಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಗಮನಾರ್ಹವಾಗಿವೆ. ಅಂದರೆ, ನಮ್ಮ

ದೇಶದ ಅರ್ಥವ್ಯವಸ್ಥೆಯಲ್ಲಿನ ಒಟ್ಟು ಉತ್ಪಾದನೆಯಮೇಲೆ ಎಷ್ಟರಮಟ್ಟಿಗೆ ಸರಕಾರಿ ವಲಯವು ತನ್ನ ಹತೋಟಿಯನ್ನು ಅಧಿಕವಾಗಿ ಇಟ್ಟುಕೊಂಡಿದೆ ಎಂಬುದು ಇದರಿಂದ ಸ್ಪಷ್ಟವಾಗಿ ಗೋಚರವಾಗುತ್ತದೆ.

ಭಾರತದಲ್ಲಿ ಖಾಸಗಿ ವಲಯವು ಮುಖ್ಯವಾಗಿ ಕೃಷಿ ಉತ್ಪನ್ನ, ಗುಡಿ ಕೈಗಾರಿಕೆಗಳು ಮತ್ತು ಕರಕುಶಲ ವಸ್ತುಗಳು, ಸಣ್ಣ ಕೈಗಾರಿಕೆಗಳು, ಕಬ್ಬಿಣ, ಉಕ್ಕು, ಸಿಮೆಂಟ್, ರಾಸಾಯನಿಕ ಗೊಬ್ಬರ ಮುಂತಾದ ಕಚ್ಚಾ ವಸ್ತುಗಳ ತಯಾರಿಕೆ, ಬಟ್ಟೆ, ಸಕ್ಕರೆ, ಸಾಬೂನು, ಬೆಂಕಿಪೊಟ್ಟಣ, ಕಾಫಿ, ಟೀ, ಕಾಗದ ಮೊದಲಾದ ದೈನಂದಿನ ಬೇಕೆ ವಸ್ತುಗಳ ಉತ್ಪಾದನೆ, ರೇಡಿಯೊ, ಟ್ರಾನ್ಸಿಸ್ಟರ್, ಟೆಲಿವಿಶನ್ ಮುಂತಾದ ಎಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳು, ಹೊಲಿಗೆ ಯಂತ್ರ, ಫ್ಯಾನ್, ಬೈಸಿಕಲ್, ಸ್ಕೂಟರ್, ಕಾರು, ಬಸ್ಸು, ಯಂತ್ರಗಳ ಬಿಡಿ ಭಾಗಗಳು ಇವೇ ಮುಂತಾದ ಇಂಜನಿಯರಿಂಗ್ ಸರಕುಗಳ ಉತ್ಪಾದನೆಗಳನ್ನು ಒಳಗೊಂಡಿದೆ. ನಮ್ಮ ದೇಶದ ಅರ್ಥ ವ್ಯವಸ್ಥೆಯಲ್ಲಿ ಖಾಸಗಿ ವಲಯದ ಕಾರ್ಯ ಚಟುವಟಿಕೆಗಳು ಹೆಚ್ಚು ವಿಶಾಲವಾಗಿಯೂ ಮತ್ತು ವೈವಿಧ್ಯಮಯವಾಗಿಯೂ ಇವೆಯೆಂಬುದು ಇದರಿಂದ ಕಂಡುಬರುತ್ತದೆ. ಖಾಸಗಿ ವಲಯದ ಕಾರ್ಯಚಟುವಟಿಕೆಗಳು ಸಾಮಾನ್ಯವಾಗಿ ಹೆಚ್ಚು ದಕ್ಷತೆಯಿಂದ ಕೂಡಿ, ಉಪಯುಕ್ತ ವಸ್ತುಗಳ ತಯಾರಿಕೆಯಲ್ಲಿ ಅವು ತೊಡಗಿವೆಯೆಂದು ಹೇಳಬಹುದು. ಆದರೆ ಈ ವಲಯದಲ್ಲಿನ ಉದ್ಯಮ ಸಂಸ್ಥೆಗಳು ಕೆಲವು ಸಂದರ್ಭಗಳಲ್ಲಿ ಅಧಿಕ ಲಾಭದಾಸೆಯಿಂದ ದಕ್ಷತೆ ಹಾಗು ಸರಕುಗಳ ಗುಣ ಮಟ್ಟಗಳೆರಡನ್ನೂ ಕಡೆಗಣಿಸಿರುವ ಎಷ್ಟೋ ನಿದರ್ಶನಗಳೂ ಇವೆ. ಹೀಗಾಗಿ ಖಾಸಗಿ ವಲಯದ ಆರ್ಥಿಕ ಚಟುವಟಿಕೆಗಳೆಲ್ಲವೂ ಯಾವ ಕುಂದುಕೊರತೆಗಳಿಂದಲೂ ಕೂಡಿಲ್ಲವೆಂದು ಹೇಳುವುದು ತಪ್ಪು. ಈ ಕಾರಣದಿಂದ ಖಾಸಗಿ ವಲಯದ ಕಾರ್ಯ ಚಟುವಟಿಕೆಗಳೆಲ್ಲಾ ನಮ್ಮ ಸರಕಾರಗಳ ಸ್ಥೂಲ ನಿರ್ದೇಶನಗಳಿಗೆ ಒಳಗಾಗಿವೆ. ಅದರ ಮುಂದಿನ ಬೆಳವಣಿಗೆ, ಕಾರ್ಯವ್ಯಾಪ್ತಿ ಹಾಗೂ ಅಸ್ತಿತ್ವ ಕೂಡ ಸರಕಾರಗಳ ಒಲವನ್ನು ಅವಲಂಬಿಸಿದೆಯೆಂದರೂ ತಪ್ಪಾಗಲಾರದು.

ಈ ರೀತಿ ಭಾರತದಲ್ಲಿ ಸರಕಾರಗಳ ಅಧಿಕಾರಿಗಳು ಅರ್ಥವ್ಯವಸ್ಥೆಯ ಎಲ್ಲ ಕ್ಷೇತ್ರಗಳನ್ನು ನಿರ್ದೇಶಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿವೆ ಎಂದು ಹೇಳಬಹುದು. ಇವಕ್ಕೆ ಅಗತ್ಯವಾದ ಸಾವಿರಾರು ವಿಧೇಯಕಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಆಚರಣೆಗೆ ತಂದಿವೆ. ಇವುಗಳನ್ನು ಕಾರ್ಯಗತಮಾಡುವ ಜವಾಬ್ದಾರಿಯನ್ನು ಹೊತ್ತಿರುವ ಅಧಿಕಾರಶಾಹಿ ಆಡಳಿತ ವ್ಯವಸ್ಥೆಯೆಂಬ ಮರವು ಅಗಾಧವಾಗಿ ಬೆಳೆದು ತನ್ನ ಬಿಗಿಹಿಡಿತವೆಂಬ ಬೇರುಗಳನ್ನು ಎಲ್ಲ ದಿಕ್ಕುಗಳಲ್ಲೂ ಪಸರಿಸಿದೆ. ಹೀಗೆ, ನಮ್ಮ ದೇಶದಲ್ಲಿ ಇಂದು ಸರಕಾರಗಳ ಅಧಿಕಾರಿಗಳ ಸಂಕೋಲೆಗಳು ದಿಲ್ಲಿಯಿಂದ ಹಳ್ಳಿಯವರೆಗೂ, ರಾಜ್ಯದ ರಾಜಧಾನಿ

ಯಿಂದ ರೈತನ ರಾಶಿನವರೆಗೂ, ಉತ್ಪಾದನೆಯ ಮಟ್ಟದಿಂದ ಅನುಭೋಗದ ಕೊನೆಯ ಹಂತದವರೆಗೂ ಹರಡಿಕೊಂಡಿದೆ. ಇವುಗಳಿಂದ ಪ್ರಯೋಜನಗಳು ಹಾಗೂ ತೊಂದರೆಗಳು ಎರಡೂ ಉಂಟಾಗಿವೆ. ಇವನ್ನು ಸ್ಥೂಲವಾಗಿ ಅರಿತು ಕೊಳ್ಳುವುದು ಅತ್ಯವಶ್ಯಕ.

ಆರ್ಥಿಕವಾಗಿ ಹಿಂದುಳಿದಿದ್ದ ಭಾರತದಲ್ಲಿ ಮಂದಗತಿಯಿಂದ ಮುನ್ನಡೆಯುತ್ತಿದ್ದ ಖಾಸಗಿ ವಲಯದ ನೇತೃತ್ವದಲ್ಲಿ ತೀವ್ರ ಆರ್ಥಿಕ ಪ್ರಗತಿಯನ್ನು ಸಾಧಿಸುವುದು ಅಸಾಧ್ಯವಾಗಿತ್ತು. ಅದರ ಸಂಪನ್ಮೂಲ, ಕಾರ್ಯವ್ಯಾಪ್ತಿ ಹಾಗು ಮನೋಗತಗಳು ಅತ್ಯಂತ ಮಿತವಾಗಿದ್ದವು. ಇಂತಹ ಪರಿಸ್ಥಿತಿಯಲ್ಲಿ ತ್ವರಿತ ಆರ್ಥಿಕಾಭಿವೃದ್ಧಿಯ ಮುಂದಾಳತ್ವವನ್ನು ಸರಕಾರಗಳೇ ವಹಿಸಿಕೊಳ್ಳಬೇಕಾಯಿತು. ಹೀಗೆ, ನಮ್ಮ ದೇಶದಲ್ಲಿ ತೀವ್ರ ಆರ್ಥಿಕ ಮುನ್ನಡೆಗೆ ಅಗತ್ಯವಾದ ಅಭಿವೃದ್ಧಿ ಯೋಜನೆಗಳ ಸಿದ್ಧತೆ, ಸಂಪನ್ಮೂಲಗಳ ಶೇಖರಣೆ, ಉದ್ಯಮ ಸಾಹಸವನ್ನು ಒದಗಿಸುವುದು ಮುಂತಾದ ಕಾರ್ಯಗಳನ್ನು ಸರಕಾರಗಳು ಕೈಗೊಂಡವು. ಇದರ ಫಲವಾಗಿ ಸರಕಾರಿ ವಲಯದ ಕಾರ್ಯಕ್ಷೇತ್ರವು ವಿಶಾಲವಾಗತೊಡಗಿತು. ಇದರೊಂದಿಗೆ ಸರಕಾರಗಳ ಜವಾಬ್ದಾರಿಗಳೂ ಅಧಿಕಗೊಂಡವು. ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಇದು ಪ್ರಯೋಜನಕಾರಿಯಾದ ಅಂಶವೆಂದು ಹೇಳಬಹುದು. ಸರಕಾರಗಳ ನೇತೃತ್ವದಲ್ಲಿ ಭಾರತದ ಕೈಗಾರಿಕೆಗಳು ಎಲ್ಲ ವಿಭಾಗಗಳಲ್ಲೂ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿರುವುದು ಇನ್ನೊಂದು ಪ್ರಯೋಜನಕಾರಿಯಾದ ಅಂಶವೆಂದು ತಿಳಿಯಬಹುದು. ಇದರಿಂದ ಭಾರತವು ಇಂದು ವಿಶ್ವದ ಕೈಗಾರಿಕಾ ರಾಷ್ಟ್ರಗಳಲ್ಲಿ ಹತ್ತನೆಯ ಸ್ಥಾನವನ್ನು ಹೊಂದಿದೆ. ಇದಲ್ಲದೆ, ಖಾಸಗಿ ವಲಯದಲ್ಲಿ ಏಕಸ್ವಾಮ್ಯ, ಸಂಪತ್ತು ಹಾಗು ಆರ್ಥಿಕ ಶಕ್ತಿಗಳ ಕೇಂದ್ರೀಕರಣದಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ತಡೆಯಲು ಸರಕಾರಿ ವಲಯದ ಬೆಳವಣಿಗೆ ಸಹಾಯವಾಗುತ್ತದೆ ಎಂದು ಹೇಳಲಾಗಿದೆ. ಮೇಲಾಗಿ, ಸಂಪತ್ತು ಹಾಗು ವರಮಾನಗಳ ಹಂಚಿಕೆಗಳಲ್ಲಿನ ಅಂತರಗಳನ್ನು ಕಡಿಮೆ ಮಾಡುವುದು, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು, ಸಮಾಜ ಕಲ್ಯಾಣ ಮತ್ತು ಕಾರ್ಮಿಕರ ಕ್ಷೇಮಾಭ್ಯುದಯ ಕಾರ್ಯಗಳನ್ನು ಕೈಗೊಳ್ಳುವುದು, ದುರ್ಬಲರ ಶೋಷಣೆಯನ್ನು ತಡೆಯುವುದು, ಮುಂತಾದ ಗುರಿಗಳನ್ನು ಸಾಧಿಸುವುದು ಸರಕಾರಿ ವಲಯದ ವಿಸ್ತರಣೆಯಿಂದ ಸುಲಭವೆಂದು ನಂಬಲಾಗಿತ್ತು. ಈ ರೀತಿ ನಮ್ಮ ಅರ್ಥವ್ಯವಸ್ಥೆಯ ಮೇಲಿನ ಸರಕಾರಗಳ ಅಧಿಕಾರಗಳು ಮತ್ತು ಸರಕಾರಿ ವಲಯದ ವಿಸ್ತರಣೆಗಳು ಕೆಲವು ಪ್ರಯೋಜನಗಳನ್ನುಂಟುಮಾಡಿವೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ನಮ್ಮ ಅರ್ಥವ್ಯವಸ್ಥೆಯ ಮೇಲೆ ಅಧಿಕಗೊಳ್ಳುತ್ತಿರುವ ಸರಕಾರಗಳ ಅಧಿಕಾರಗಳು ಕೆಲವು ತೊಂದರೆಗಳು ಹಾಗು ದುಷ್ಟ ಪ್ರವೃತ್ತಿಗಳಿಗೆ ಎಡೆಮಾಡಿಕೊಟ್ಟಿರು

ವುದು ನಿಜಕ್ಕೂ ವಿಷಾದನೀಯ ಸಂಗತಿ. ಇವು ಮೇಲೆ ತಿಳಿಸಿರುವ ಪ್ರಯೋಜನಗಳನ್ನೆಲ್ಲಾ ಮರೆಮಾಚಿ, ಜನರಲ್ಲಿ ಒಂದು ಬಗೆಯ ತಾತ್ಸಾರ, ಜಿಗುಪ್ಸೆ ಮತ್ತು ನಿರಾಶೆಗಳಿಗೆ ದಾರಿಮಾಡಿಕೊಟ್ಟಿವೆ ಇವುಗಳನ್ನು ಆರ್ಥಿಕ ದಕ್ಷತೆ, ಆರ್ಥಿಕ ವ್ಯವಹಾರಗಳು ಮತ್ತು ಆತ್ಮಸಾಕ್ಷಿಯ ನಡತೆಯೆಂಬ ಮೂರು ಕೋನಗಳಿಂದ ಅರಿಯಬಹುದು.

ಆರ್ಥಿಕ ದಕ್ಷತೆ ಮತ್ತು ಜನರ ಆರ್ಥಿಕ ವ್ಯವಹಾರಗಳಮೇಲೆ ಸರಕಾರಗಳ ಬೆಳೆಯುತ್ತಿರುವ ಅಧಿಕಾರಗಳು ಹಾಗು ಅಧಿಕಾರಶಾಹಿ ಆಡಳಿತಶಕ್ತಿಯಿಂದುಂಟಾಗಿರುವ ಕೆಲವು ದುಷ್ಪರಿಣಾಮಗಳನ್ನು ಮೊದಲು ಪರಿಶೀಲಿಸೋಣ. ಅರ್ಥವ್ಯವಸ್ಥೆಯ ಕಾರ್ಯದಕ್ಷತೆ ಪರಾಕಾಷ್ಠೆಯನ್ನು ಮುಟ್ಟಿದಾಗ, ಸಂಪನ್ಮೂಲಗಳು ಸದುಪಯೋಗವಾಗಿ, ಉತ್ಪನ್ನ ಹೆಚ್ಚಿ, ವಾಸ್ತವಿಕ ರಾಷ್ಟ್ರೀಯ ವರಮಾನವು ಉನ್ನತಮಟ್ಟವನ್ನು ಮುಟ್ಟುತ್ತದೆ. ಇದಕ್ಕೆ ಪೂರಕವಾಗಿ ಪ್ರಜೆಗಳ ಆರ್ಥಿಕ ವ್ಯವಹಾರಗಳು ಅಷ್ಟೇ ಕಾರ್ಯದಕ್ಷತೆಯಿಂದ ಕೂಡಿ ಪರಿಶುದ್ಧವಾಗಿರಬೇಕು. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಆರ್ಥಿಕ ದಕ್ಷತೆ ಜನರ ಆರ್ಥಿಕ ವ್ಯವಹಾರಗಳ ಪರಿಶುದ್ಧತೆಯನ್ನು ಸಂಪೂರ್ಣವಾಗಿ ಅವಲಂಬಿಸಿದೆ ಎಂದಂತಾಯಿತು. ಈ ದೃಷ್ಟಿಕೋನಗಳಿಂದ ನಮ್ಮ ದೇಶದ ಈಗಿನ ಪರಿಸ್ಥಿತಿಯನ್ನು ನೋಡೋಣ.

ನಮ್ಮ ದೇಶದ ಸರಕಾರಿ ವಲಯದ ಉದ್ಯಮ ಸಂಸ್ಥೆಗಳು ಹಾಗು ಸೇವಾ ಸೌಕರ್ಯಗಳ ಕಾರ್ಯಚಟುವಟಿಕೆಗಳಲ್ಲಿನ ಅದಕ್ಷತೆ ಇಡೀ ನಾಡಿನಲ್ಲಿ ಮನೆ ಮಾತಾಗಿದೆ. ಇವುಗಳಲ್ಲಿ ಭಾರಿ ಕೈಗಾರಿಕೆಗಳು, ಅಗತ್ಯವಾದ ಅಂಚೆ ಮತ್ತು ತಂತಿ, ರೈಲುಗಳು, ಪ್ರಯಾಣಿಕರ ರಸ್ತೆ ಸಾರಿಗೆ, ವಿದ್ಯುಚ್ಛಕ್ತಿ ಸರಬರಾಜು ಮುಂತಾದ ಸೇವೆಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಜೀವವಿಮಾ ಮೊದಲಾದ ಹಣಕಾಸಿನ ಸಂಸ್ಥೆಗಳು ಸೇರಿವೆ. ಇವುಗಳ ಅದಕ್ಷ, ಅಸಮರ್ಪಕ ಹಾಗು ಬೇಜವಾಬ್ದಾರಿಯುತ ಕಾರ್ಯಾಚರಣೆಯ ಬಗ್ಗೆ ಅನೇಕ ದೂರುಗಳಿವೆ. ಈ ದೂರುಗಳಲ್ಲಿ ಕೆಲವು ಸ್ವಲ್ಪ ಉತ್ಪ್ರೇಕ್ಷೆಯಿಂದ ಕೂಡಿದ್ದರೂ, ಅವುಗಳಲ್ಲಿನ ಸತ್ಯಾಂಶವನ್ನು ಮಾತ್ರ ಅಲ್ಲಗಳೆಯುವಂತಿಲ್ಲ. ಸರಕಾರಿ ವಲಯದಲ್ಲಿರುವ ಕೆಲವು ಕಾರ್ಖಾನೆಗಳು ತಯಾರಿಸುತ್ತಿರುವ ವಸ್ತುಗಳಲ್ಲಿ, ಉದಾಹರಣೆ ಭಾರಿ ಯಂತ್ರೋಪಕರಣ, ದೂರವಾಣಿ ಸಲಕರಣೆ ಮುಂತಾದವು, ಹಾಗೂ ಸರಕಾರಗಳ ಇಲಾಖೆಗಳು ಸಲ್ಲಿಸುತ್ತಿರುವ ಸೇವೆಗಳಲ್ಲಿ, ಉದಾಹರಣೆಗೆ ಅಂಚೆ ಮತ್ತು ತಂತಿ, ರೈಲುಗಳು, ವಿದ್ಯುಚ್ಛಕ್ತಿ ಸರಬರಾಜು ಮೊದಲಾದವುಗಳಲ್ಲಿ ಏಕ ಏಕಸ್ವಾಮ್ಯವಿದೆ. ಸಾಮಾನ್ಯವಾಗಿ ಸ್ಪರ್ಧೆಯಿಲ್ಲದೆ, ಸ್ವಾಮ್ಯವಿರುವ ಉದ್ಯಮ ಸಂಸ್ಥೆಗಳಲ್ಲಿ ವಿಪತ್ತಿಗೆ ಒಳಗಾಗುವ ಮೊದಲ ಅಂಶವೆಂದರೆ ದಕ್ಷತೆ. ಖಾಸಗಿ ವಲಯದ ಉದ್ಯಮ ಸಂಸ್ಥೆಗಳು ಸ್ಪರ್ಧೆಯನ್ನು ಎದು

ರಿಸಬೇಕಾಗಿರುವುದರಿಂದ ಹೀಗೆ ಅದಕ್ಷತೆಯಿಂದ ಕಾರ್ಯಮಾಡುವುದು ಅಸಾಧ್ಯ. ಹಾಗೆ ಮಾಡಿದಲ್ಲಿ ನಷ್ಟವನ್ನು ಅನುಭವಿಸಿ ಅವು ಮುಚ್ಚಲ್ಪಡುತ್ತವೆ. ಆದರೆ ಸರಕಾರಿ ವಲಯದ ಉದ್ಯಮ ಸಂಸ್ಥೆಗಳಿಗೆ ಇಂತಹ ಭಯವಿಲ್ಲ. ಸರಕಾರಗಳ ಸಾರ್ವಜನಿಕ ಬೊಕ್ಕಸ ಅವುಗಳ ನಷ್ಟಗಳನ್ನು ಸುಲಭವಾಗಿ ತುಂಬಿಸಬಲ್ಲದು. ಇದರಿಂದ ಜನರ ತೆರಿಗೆಗಳ ಹೊರೆ ಹೆಚ್ಚಾಗುತ್ತದೆ. ಅಮೂಲ್ಯವಾದ ಸಂಪನ್ಮೂಲಗಳು ವ್ಯರ್ಥವಾಗುತ್ತವೆ. ಆರ್ಥಿಕಾಭಿವೃದ್ಧಿಯ ವೆಚ್ಚ ಅನಾವಶ್ಯಕವಾಗಿ ಏರುತ್ತದೆ. ಸಮಾಜ ಕಲ್ಯಾಣ ಗುರಿಯ ಸಾಧನೆಯೂ ದೂರ ದೂರ ಸರಿಯುತ್ತದೆ. ಇಲ್ಲಿ ಕೆಲವು ಪ್ರಶ್ನೆಗಳು ಏಳುತ್ತವೆ. ಸರಕಾರಿ ವಲಯವೆಂಬ ಇಂತಹ 'ಬಿಳಿ ಆನೆ'ಯನ್ನು ಪೋಷಿಸುವುದು ಉಚಿತವೆ? ಅದು ಅನಾವಶ್ಯಕವಾಗಿ ಮಾಡುತ್ತಿರುವ ದುಂದುವೆಚ್ಚದ ಹೊರೆಯ ಸ್ವಲ್ಪ ಭಾಗವನ್ನು ಮೂಕ ಪ್ರಜೆಗಳಮೇಲೆ ಹೊರಿಸುವುದು ಸರಿಯೆ? ಬಡತನದ ಬೇಗುದಿಯಿಂದ ಬಳಲುತ್ತಿರುವ ಭಾರತವು ತ್ವರಿತ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಇಷ್ಟು ಅಧಿಕ ವೆಚ್ಚವನ್ನು ತೆರುವುದು ಅನಿವಾರ್ಯವೇ? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಡುವುದು ಕಷ್ಟಸಾಧ್ಯ. ಏಕೆಂದರೆ, ಅವುಗಳ ಬಗ್ಗೆ ಅನೇಕ ವಾದವಿವಾದಗಳಿವೆ. ಇವಕ್ಕೆ ದೃಷ್ಟಿಕೋನಗಳ ವಿಭಿನ್ನತೆ ಮತ್ತು ಅಭಿಪ್ರಾಯ ಭೇದಗಳೇ ಮುಖ್ಯ ಕಾರಣಗಳಾಗಿವೆ. ಅವುಗಳನ್ನೆಲ್ಲಾ ಈ ಲೇಖನದಲ್ಲಿ ವಿವರವಾಗಿ ಹೇಳುವುದು ಸಾಧ್ಯವಿಲ್ಲ. ಆದ್ದರಿಂದ ಆರ್ಥಿಕ ದಕ್ಷತೆಗೆ ಪೂರಕವಾದ ಜನರ ಆರ್ಥಿಕ ವ್ಯವಹಾರಗಳ ಪರಿಶುದ್ಧತೆಯ ಮೇಲೆ ಆಗಿರುವ ಪರಿಣಾಮಗಳನ್ನು ಇನ್ನು ತಿಳಿಯೋಣ.

ಭ್ರಷ್ಟಾಚಾರ, ಕಪ್ಪುಹಣದ ಗಳಿಕೆ, ತೆರಿಗೆಗಳ್ಳತನ, ಕಳ್ಳಸಾಗಾಣಿಕೆ, ಅಳತೆ, ತೂಕ ಮತ್ತು ಗುಣಮಟ್ಟಗಳ ವಂಚನೆ ಮುಂತಾದ ದುಷ್ಪ್ರವೃತ್ತಿಗಳು ನಮ್ಮ ದೇಶದ ಜನರ ಆರ್ಥಿಕ ವ್ಯವಹಾರಗಳ ಪರಿಶುದ್ಧತೆಯನ್ನು ತುಂಬ ಕಲಕಿಬಿಟ್ಟಿವೆ. ಇವುಗಳಿಂದ ಆರ್ಥಿಕ ದಕ್ಷತೆಗೆ ಅಪಾರವಾದ ಹಾನಿಯುಂಟಾಗಿದೆ. ಇವುಗಳ ಹಾವಳಿ ಎಷ್ಟಿದೆಯೆಂದರೆ, ಅವು ನಮ್ಮ ಅರ್ಥವ್ಯವಸ್ಥೆಗೆ ಸಮಾಂತರವಾದ ನ್ಯಾಯಬಾಹಿರ ಸ್ವಚ್ಛಂದ ಅರ್ಥವ್ಯವಸ್ಥೆಯೊಂದನ್ನು ನಿರ್ಮಿಸಿವೆಯೆಂದು ಹೇಳಲಾಗಿದೆ. ಅವುಗಳನ್ನು ತಡೆಯುವುದರಲ್ಲಿ ನಮ್ಮ ಸರಕಾರಗಳು ಸಂಪೂರ್ಣ ಯಶಸ್ಸನ್ನು ಸಾಧಿಸಿಲ್ಲವೆಂಬ ಟೀಕೆಯೂ ಇದೆ. ಈ ದುಷ್ಪ್ರವೃತ್ತಿಗಳ ನಿರಂತರವಾದ ತಾಂಡವನೃತ್ಯಕ್ಕೆ ನಮ್ಮ ಸರಕಾರಗಳ ಬೆಳೆಯುತ್ತಿರುವ ಅಧಿಕಾರಗಳು, ಇವಕ್ಕೆ ಪೂರಕವಾದ ಕೊನೆಯೇ ಇಲ್ಲದ ಕಾನೂನುಗಳ ಬೆಳವಣಿಗೆ, ಇವುಗಳನ್ನು ಕಾರ್ಯಗತ ಮಾಡುವ ಜವಾಬ್ದಾರಿಯನ್ನು ಹೊತ್ತಿರುವ ಭ್ರಷ್ಟ ಅಧಿಕಾರಶಾಹಿ ಆಡಳಿತ ವ್ಯವಸ್ಥೆ ಮತ್ತು ಅಧಿಕ ವ್ಯಾಪಕವಾದ ಅದಕ್ಷ ಸರಕಾರಿ ವಲಯಗಳು ಮುಖ್ಯ ಕಾರಣಗಳಾಗಿವೆಯೆಂಬ ವಾದವೊಂದಿದೆ. ಆದ್ದರಿಂದಲೇ ನಮ್ಮ ಸರಕಾರಗಳನ್ನು 'ಲೈಸನ್ಸ್-ಪರ್ಮಿಟ್-ಕೋಟಾ

ರಾಜ್ಯಗಳೆಂದು ವರ್ಣಿಸಿ ಕಟು ಟೀಕೆಯನ್ನೂ ಮಾಡಲಾಗಿದೆ. ಈ ವಾದ ಮತ್ತು ಟೀಕೆಗಳಲ್ಲಿರುವ ವಾಸ್ತವಾಂಶಗಳು ಎಲ್ಲರಿಗೂ ತಿಳಿದ ವಿಷಯಗಳೇ ಆಗಿವೆ. ಹೇಗೆಂದರೆ, ಸರಕಾರಗಳ ಅಧಿಕಾರಗಳು ಅಧಿಕಗೊಂಡಂತೆಲ್ಲಾ ಅವಕ್ಕೆ ಅನುಸಾರ ವಾಗಿ ಹೆಚ್ಚು ಹೆಚ್ಚು ಕಾನೂನುಗಳು ಹುಟ್ಟಿಕೊಳ್ಳುತ್ತವೆ. ತಮ್ಮ ಸ್ವಾರ್ಥ ಸಾಧನೆಗಾಗಿ ಇವುಗಳನ್ನು ಮುರಿಯುವ ಪ್ರವೃತ್ತಿಯನ್ನು ಕೆಲವರು ಬೆಳೆಸಿಕೊಳ್ಳು ತ್ತಾರೆ. ಇದು ಅಧಿಕಾರಶಾಹಿ ಆಡಳಿತ ಪಂಗಡವು ಭ್ರಷ್ಟಾಚಾರದಲ್ಲಿ ತೊಡಗು ವಂತೆ ಪ್ರೋತ್ಸಾಹಿಸುತ್ತದೆ. ಈ ಪಿಡುಗು ಅಂಟುರೋಗದೋಪಾಧಿಯಲ್ಲಿ ಬಹು ವೇಗನೆ ಇಡೀ ಸಮಾಜವನ್ನೆಲ್ಲಾ ಆವರಿಸಿಬಿಡುತ್ತದೆ. ಒಳ್ಳೆಯ ಹಾಗೂ ನೀತಿವಂತ ಜನರೂ ಕೂಡ ಈ ಆಮಿಷಗಳಿಗೆ ಬಲಿಯಾಗಿರುವ ಎಷ್ಟೋ ನಿದರ್ಶನಗಳಿವೆ. ಆದ್ದರಿಂದ ಜನರ ಆರ್ಥಿಕ ವ್ಯವಹಾರಗಳಲ್ಲಿನ ಇಂತಹ ದುಷ್ಪ್ರವೃತ್ತಿಗಳನ್ನು ಹತ್ತಿಕ್ಕಲು ಸರಕಾರಗಳ ಕ್ರಮಗಳಿಗೆ ಕೇವಲ ಕಾನೂನುಗಳ ಬಲವೊಂದೇ ಸಾಲದು. ಅವುಗಳನ್ನು ಕಾರ್ಯಗತ ಮಾಡುವ ನಾಯಕರು ಹಾಗು ಆಡಳಿತಗಾರರಿಗೆ ಕೆಚ್ಚೆದೆ ಇರಬೇಕು. ಅವರ ನೈತಿಕ ಮಟ್ಟವು ಸಂಶಯಾತೀತವಾಗಿರಬೇಕು. ಇಂತಹ ಉನ್ನತ ಆದರ್ಶಗಳ ಜನರ ಸಂಖ್ಯೆ ವಿರಳವಾಗುತ್ತಿರುವುದು ನಮ್ಮ ನಾಡಿನ ದೌರ್ಭಾಗ್ಯವೇ ಸರಿ.

ಕೊನೆಯದಾಗಿ, ಆರ್ಥಿಕ ದಕ್ಷತೆ ಮತ್ತು ಆರ್ಥಿಕ ವ್ಯವಹಾರಗಳ ಪರಿಶುದ್ಧತೆಗೆ ಚ್ಯುತಿ ಬಂದಿರುವುದು, ಮುಖ್ಯವಾಗಿ ಜನರ ಆತ್ಮಸಾಕ್ಷಿಯ ನಡತೆಯ ಕೊರತೆಯಿಂದ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಇದು ಮಾನವನ ಸಾಮಾನ್ಯ ನಡೆವಳಿಕೆ ಯೆಂಬ ಮಾನಸಿಕ ಅಂಶವನ್ನು ಬಹುಮಟ್ಟಿಗೆ ಅವಲಂಬಿಸಿದೆ. ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಹೆಚ್ಚಾಗಿ ಅನುಭವಿಸುತ್ತಿರುವ ಮಾನವನ ನಡೆವಳಿಕೆಯೇ ಒಂದು ರೀತಿಯದ್ದಾಗಿರುತ್ತದೆ. ಅದೇ ಮಾನವನು ಈ ಕ್ಷೇತ್ರಗಳಲ್ಲಿ ಅತಿ ಕಠಿನವಾದ ಕಟ್ಟಳೆಗಳನ್ನು ಅನುಸರಿಸಬೇಕಾದಾಗ ಅವನ ನಡತೆಯು ಭಿನ್ನವಾಗಿರುತ್ತದೆ. ಇದು ಎಲ್ಲ ಜನರಲ್ಲಿಯೂ ಸಾಮಾನ್ಯವಾಗಿ ಇರುವ "ಅಧಿಕಾರ ವಿರೋಧ" ವೆಂಬ ಸ್ವಾಭಾವಿಕ ಗುಣವೆಂದು ಹೇಳಬಹುದು. ಇದರ ಹಿನ್ನೆಲೆಯಲ್ಲಿ ಆರ್ಥಿಕ ದಕ್ಷತೆ ಮತ್ತು ಆರ್ಥಿಕ ವ್ಯವಹಾರಗಳ ಪರಿಶುದ್ಧತೆಗೆ ನಮ್ಮ ದೇಶದಲ್ಲಿ ಚ್ಯುತಿ ಬಂದಿರುವು ದನ್ನು ಪರಿಶೀಲಿಸಬೇಕು. ನಮ್ಮ ಸರಕಾರಗಳ ಅಧಿಕಾರಗಳು ಅಗಾಧವಾಗಿ ಬೆಳೆಯು ತ್ತಿವೆ. ಜನರ ಮೇಲೆ ಅವುಗಳ ಬಿಗಿಹಿಡಿತ ಕಠಿನವಾಗುತ್ತಿದೆ. ಇವುಗಳಿಂದ ಯಾವ ರೀತಿಯಿಂದಾದರೂ ತಪ್ಪಿಸಿಕೊಳ್ಳುವ ಮಾರ್ಗಗಳಿಗೆ ಅವರು ವಿಧಿಯಿಲ್ಲದೆ ಶರಣು ಹೋಗುತ್ತಾರೆ. ಅವರ ದೈನಂದಿನ ಕಷ್ಟಕಾರ್ಪಣ್ಯಗಳನ್ನು ಪರಿಹರಿಸುವ ತವಕ ನಮ್ಮ ಸರಕಾರಗಳಲ್ಲಿ ಕಾಣುವುದಿಲ್ಲ. ಆಗ ಅವರು ತಮ್ಮ ಆತ್ಮಸಾಕ್ಷಿಯ ನಡತೆಯನ್ನು ಗಾಳಿಗೆ ತೂರಿಬಿಟ್ಟರೆ ಆಶ್ಚರ್ಯವೇನೂ ಇಲ್ಲ. ಆದರೆ ಇಂತಹ

ಕಾರ್ಯವನ್ನು ನಮ್ಮ ನಾಯಕರು, ರಾಜಕಾರಣಿಗಳು, ಉನ್ನತ ಸ್ಥಾನಗಳಲ್ಲಿರುವ ಆಡಳಿತಗಾರರು, ವಿಶೇಷ ತಜ್ಞರು ಮೊದಲಾದ ಮಾರ್ಗದರ್ಶಕರೇ ಮಾಡಿದಾಗ ಅದು ದುರದೃಷ್ಟಕರವೆಂದೇ ಹೇಳಬೇಕು. ಆದ್ದರಿಂದ ಎಲ್ಲರ ಆತ್ಮಸಾಕ್ಷಿಯ ನಡತೆಯೆಂಬ ಸಚ್ಚಾರಿತ್ರ್ಯ, ಆರ್ಥಿಕ ದಕ್ಷತೆ ಮತ್ತು ಆರ್ಥಿಕ ವ್ಯವಹಾರಗಳ ಪರಿಶುದ್ಧತೆಗೆ ಭದ್ರಬುನಾದಿಯಾಗಿದೆ ಎಂದು ಹೇಳಬಹುದು. ಸರಕಾರಗಳ ಬೆಳೆಯುತ್ತಿರುವ ಅಧಿಕಾರಗಳು ಇವಕ್ಕೆ ಪೋಷಕವಾಗಿರಬೇಕು. ಆಗ ಅವುಗಳಿಂದಾಗುತ್ತಿರುವ ತೊಂದರೆಗಳು ನಿವಾರಣೆಯಾಗುತ್ತವೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲಿನ ಪ್ರಭಾವಗಳು :

ಜನರ ಸಂಘಜೀವನ, ಕುಟುಂಬ ಜೀವನ, ಮೈತ್ರಿಭಾವ, ಸಹಕಾರ, ಜಾತಿ, ಮತ, ಧರ್ಮ, ನೃತ್ಯ, ಸಂಗೀತ, ಕಲೆ, ಸಾಹಿತ್ಯ, ವಿದ್ಯಾಭ್ಯಾಸ ಮುಂತಾದ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲೂ ಆಧುನಿಕ ಸರಕಾರಗಳ ಅಧಿಕಾರಗಳ ಪ್ರಭಾವವಿರುವುದನ್ನು ಕಾಣಬಹುದು. ಈ ಪ್ರಭಾವಗಳು ಭಿನ್ನರೀತಿಯ ರಾಜಕೀಯ ಮತ್ತು ಅರ್ಥವ್ಯವಸ್ಥೆಗಳಿಗನುಗುಣವಾಗಿ ವಿವಿಧ ರಾಷ್ಟ್ರಗಳಲ್ಲಿ ಬೇರೆಬೇರೆಯಾಗಿವೆ. ಭಿನ್ನರೀತಿಯ ರಾಜಕೀಯ ಮತ್ತು ಅರ್ಥವ್ಯವಸ್ಥೆಗಳನ್ನು ಮುಖ್ಯವಾಗಿ ಮೂರು ಗುಂಪುಗಳನ್ನಾಗಿ ವಿಂಗಡಿಸಿ, ಅಲ್ಲಿ ಈ ಮೌಲ್ಯಗಳ ಮೇಲಿನ ಸರಕಾರಗಳ ಅಧಿಕಾರಗಳ ಪ್ರಭಾವವನ್ನು ಸ್ಥೂಲವಾಗಿ ತಿಳಿಯೋಣ.

ಪ್ರಜಾಸ್ವಾಮ್ಯವಾದ ಅಥವಾ ಕಮ್ಯುನಿಸ್ಟ್ ಮಾದರಿ ಸರಕಾರಗಳು ಅಸ್ತಿತ್ವದಲ್ಲಿರುವ ರಾಷ್ಟ್ರಗಳನ್ನು ಮೊದಲು ತೆಗೆದುಕೊಳ್ಳೋಣ. ಈ ದೇಶಗಳ ರಾಜಕೀಯ ಹಾಗು ಅರ್ಥವ್ಯವಸ್ಥೆಗಳ ಮೇಲೆ ಸರಕಾರಗಳ ಅಧಿಕಾರಗಳು ಮತ್ತು ಅಧಿಕಾರಶಾಹಿ ಆಡಳಿತವರ್ಗದ ಪ್ರಭಾವ ಎಷ್ಟು ವ್ಯಾಪಕ ಹಾಗು ಬಿಗಿಯಾಗಿದೆ ಎಂಬುದನ್ನು ಹಿಂದೆಯೇ ತಿಳಿಯಲಾಗಿದೆ. ಸ್ವಲ್ಪ ಹೆಚ್ಚುಕಡಿಮೆ ಈ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಮೇಲೆ ಇದೇ ರೀತಿಯ ಪ್ರಭಾವವಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಈ ದೇಶದಲ್ಲಿ ಕಮ್ಯುನಿಸ್ಟ್ ತತ್ವಗಳ ಬಗ್ಗೆ ಒಂದು ರೀತಿಯ ಧಾರ್ಮಿಕ ಭಾವನೆ ಜನರಲ್ಲಿ ಹುಟ್ಟುವಂತೆ ಎಡೆಬಿಡದೆ ಪ್ರಚಾರ ಮಾಡಲಾಗುತ್ತದೆ. ಈ ತತ್ವಗಳ ಬಗ್ಗೆ ಯಾವ ರೀತಿಯ ವಿರೋಧವನ್ನೂ ಜನರು ತೋರಿಸುವಂತಿಲ್ಲ. ಸಾಹಿತ್ಯ, ಸಂಗೀತ, ಕಲೆ, ನೃತ್ಯ, ವಿದ್ಯಾಭ್ಯಾಸ, ವೃತ್ತಪತ್ರಿಕೆ ಮತ್ತು ಇತರ ಪ್ರಚಾರ ಮಾಧ್ಯಮಗಳು ಮುಂತಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಸಂಘಸಂಸ್ಥೆಗಳನ್ನು ಸರಕಾರಗಳು ನೇರವಾಗಿ ನಿಯಂತ್ರಿಸುವುದನ್ನು ಈ ದೇಶಗಳಲ್ಲಿ ಕಾಣಬಹುದು. ಈ ನಿಯಂತ್ರಣಗಳಲ್ಲಿ ಬಹಳ ಮುಖ್ಯವಾದುದು ಸರಕಾರದ ಧನ

ಸಹಾಯ. ಸರಕಾರದ ಪ್ರೋತ್ಸಾಹ ಮತ್ತು ಧನಸಹಾಯವಿಲ್ಲದೆ ಇಂತಹ ಸಂಘಸಂಸ್ಥೆಗಳು ಮುಂದುವರಿಯುವುದು ಕಷ್ಟಸಾಧ್ಯ. ಅಲ್ಲದೆ ಸರಕಾರದ ಅಪ್ಪಣೆ ಮತ್ತು ಸಹಕಾರಗಳಿಲ್ಲದೆ, ಇಂತಹ ಸಂಘಸಂಸ್ಥೆಗಳು ಇತರ ದೇಶಗಳಲ್ಲಿರುವ ತಮ್ಮ ಪ್ರತಿರೂಪ ಸಂಸ್ಥೆಗಳೊಂದಿಗೆ ಯಾವರೀತಿಯ ಸಂಬಂಧಗಳನ್ನು ಹೊಂದಿರುವುದೂ ಅಸಾಧ್ಯ. ಹೀಗೆ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಮೇಲೆ ಸರಕಾರಗಳ ಅಧಿಕಾರಗಳು ತುಂಬ ಪ್ರಭಾವಯುತವಾಗಿರುವುದನ್ನು ಕಾಣಬಹುದು.

ಎರಡನೆಯದಾಗಿ, ನಿರಂಕುಶಾಧಿಕಾರ ಮತ್ತು ಮಿಲಿಟರಿ ಸರ್ವಾಧಿಕಾರವಿರುವ ದೇಶಗಳಲ್ಲಿಯೂ ಸಹ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಲ್ಲಿನ ಬದಲಾವಣೆಗಳು ಸರಕಾರಗಳ ಅಧಿಕಾರಗಳ ಕಟ್ಟುನಿಟ್ಟಾದ ನಿಯಂತ್ರಣಗಳಿಗೆ ಒಳಗಾಗಿವೆ. ಸಾಮಾನ್ಯವಾಗಿ ಈ ದೇಶಗಳಲ್ಲಿ ಒಬ್ಬ ವ್ಯಕ್ತಿ ಅಥವಾ ಒಂದು ಪ್ರಭಾವಶಾಲಿಗುಂಪಿನ ಅಭಿರುಚಿಗಳಿಗೆ ತಕ್ಕಂತೆ ಈ ಮೌಲ್ಯಗಳು ಮಾರ್ಪಾಟಾಗುತ್ತಾ ಬರುತ್ತವೆ. ಅಲ್ಲದೆ ಇಂತಹ ದೇಶಗಳಲ್ಲಿ ಧಾರ್ಮಿಕ ಮೌಲ್ಯಗಳು ಸಾಮಾನ್ಯವಾಗಿ ಜನರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಮೇಲೆ ಹೆಚ್ಚು ಪ್ರಭಾವ ಬೀರಿರುವುದನ್ನು ಕಾಣಬಹುದು. ಸರಕಾರಗಳು ಮತ್ತು ಅವುಗಳ ಅಂಗಸಂಸ್ಥೆಗಳೂ ಕೂಡ ಇಂತಹ ಪ್ರಭಾವದಿಂದ ಎಷ್ಟೋ ಸಂದರ್ಭಗಳಲ್ಲಿ ಹೊರತಾಗಿರುವುದಿಲ್ಲ. ಆದ್ದರಿಂದ ನಿರಂಕುಶಾಧಿಕಾರ ಅಥವಾ ಮಿಲಿಟರಿ ಸರ್ವಾಧಿಕಾರವಿರುವ ದೇಶಗಳಲ್ಲಿ ಬೆಳೆಯುತ್ತಿರುವ ಸರಕಾರಗಳ ಅಧಿಕಾರಗಳು, ಜನರ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲೆ ಪರಿಣಾಮಕಾರಿಯಾದ ಹತೋಟಿಯನ್ನು ಹೊಂದಿವೆಯೆಂದು ಹೇಳಬಹುದು.

ಇನ್ನು ಕೊನೆಯದಾಗಿ ಪ್ರಜಾಪ್ರಭುತ್ವ ರೀತಿಯ ಸರಕಾರಗಳು ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಈ ವಿಷಯದ ಪರಿಸ್ಥಿತಿಯ ಬಗ್ಗೆ ತಿಳಿಯೋಣ. ಮೇಲೆ ತಿಳಿಸಿದ ಎರಡು ಮಾದರಿಯ ಸರಕಾರಗಳಿಗೆ ಹೋಲಿಸಿದಾಗ, ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲಿ ಜನರು ಹೆಚ್ಚು ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಇದೇ ರೀತಿ ಈ ದೇಶಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಜನರು ಅಧಿಕ ಸ್ವಾತಂತ್ರ್ಯವುಳ್ಳವರಾಗಿದ್ದಾರೆ ಈ ಕ್ಷೇತ್ರಗಳಲ್ಲಿನ ಅಧಿಕ ಸ್ವಾತಂತ್ರ್ಯವು ಎಷ್ಟು ಮುಂದುವರಿದಿದೆಯೆಂದರೆ, ಫ್ರಾನ್ಸ್, ಅಮೆರಿಕ ಮುಂತಾದ ದೇಶಗಳಲ್ಲಿ "ಮುಕ್ತ ಸಮಾಜದ" ಉದಯಕ್ಕೆ ಇದು ಎಡೆ ಮಾಡಿಕೊಟ್ಟಿದೆ. ಇದರಿಂದ ನಾನಾ ಬಗೆಯ ಸಾಮಾಜಿಕ ಪಿಡುಗುಗಳು ಮತ್ತು ಸಾಂಸ್ಕೃತಿಕ ವಿರೂಪಗಳು ಅಲ್ಲಿ ಹುಟ್ಟಿಕೊಂಡಿವೆಯೆಂದು ಟೀಕಿಸಲಾಗಿದೆ. ಆದಿಕಾಲ

ದಿಂದಲೂ ಕಾಪಾಡಿಕೊಂಡು ಬಂದ ಹಲವಾರು ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಈ ದೇಶಗಳಲ್ಲಿ ಗಾಳಿಗೆ ತೂರಿಬಿಡಲಾಗಿದೆಯೆಂದು ವ್ಯಥೆಪಡುವವರೂ ಇದ್ದಾರೆ. ಇವೆಲ್ಲವೂ ಸ್ವೇಚ್ಛಾಚಾರ ಮನೋಪ್ರವೃತ್ತಿಯ ಪರಿಣಾಮಗಳೆಂದು ಎಚ್ಚರಿಕೆಯನ್ನೂ ಕೊಡಲಾಗಿದೆ. ಆದ್ದರಿಂದ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪಾವಿತ್ರ್ಯವನ್ನು ಕಾಪಾಡಿಕೊಂಡು ಬರಬೇಕಾದರೆ, ಸರಕಾರಗಳ ಅಧಿಕಾರಗಳ ನಿಯಂತ್ರಣಗಳಿಗೆ ಸ್ವಲ್ಪಮಟ್ಟಿಗಾದರೂ ಅದು ಒಳಪಟ್ಟಿರಬೇಕೆಂಬ ಒಂದು ವಾದವೂ ಇದೆ. ಆದರೆ ಇಂತಹ ಪರಿಸ್ಥಿತಿ ಒಂದೇ ಸಮನಾಗಿ ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿಯೂ ಇಲ್ಲ. ಎಲ್ಲೋ ಒಂದೆರಡು ದೇಶಗಳನ್ನುಳಿದು ಇತರ ಅನೇಕ ದೇಶಗಳಲ್ಲಿ ವಾಸ್ತವವಾಗಿ ಸರಕಾರಗಳ ಅಧಿಕಾರಗಳು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಮೇಲೆ, ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿ ತಮ್ಮ ಪ್ರಭಾವಗಳನ್ನು ಬೀರುವ ಶಕ್ತಿಯನ್ನು ಪಡೆದಿವೆಯೆಂದು ಹೇಳಬಹುದು. ಪ್ರೋತ್ಸಾಹಿಸುವುದು, ಧನಸಹಾಯ ಕೊಡುವುದು, ವಿದೇಶಗಳಿಗೆ ಸಾಂಸ್ಕೃತಿಕ ತಂಡಗಳನ್ನು ಕಳುಹಿಸುವುದು ಮುಂತಾದವುಗಳ ಮೂಲಕ, ಬೇರೆ ಬೇರೆ ದೇಶಗಳಲ್ಲಿ ಸರಕಾರಗಳು ನಾನಾ ರೀತಿಯಲ್ಲಿ ಇಂತಹ ಕಾರ್ಯಚಟುವಟಿಕೆಗಳನ್ನು ನಿರ್ದೇಶಿಸುವ ಅಧಿಕಾರಗಳನ್ನು ಹೊಂದಿವೆ. ಇದರ ಹಿನ್ನೆಲೆಯಲ್ಲಿ ಭಾರತದಲ್ಲಿರುವ ಪರಿಸ್ಥಿತಿಯನ್ನು ಅರಿಯೋಣ.

ಶಾಸನಗಳು, ಧನಸಹಾಯ, ಪ್ರತ್ಯಕ್ಷ ಅಥವಾ ಪರೋಕ್ಷವಾದ ಪ್ರೋತ್ಸಾಹ ಮೊದಲಾದವುಗಳ ಮೂಲಕ ನಮ್ಮ ಸರಕಾರಗಳು ಜನರ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವ ಅಧಿಕಾರಗಳನ್ನು ಚಲಾಯಿಸುತ್ತಿವೆ. ಉದಾಹರಣೆಗೆ, ಗಂಡು ಹೆಣ್ಣುಗಳ ಮದುವೆಯ ಕನಿಷ್ಠ ವಯಸ್ಸು ವರದಕ್ಷಿಣೆಯ ನಿರೋಧ, ಹೆಂಗಸಿಗೆ ಸಮಾನ ಸ್ಥಾನ, ಕುಟುಂಬ ಯೋಜನೆ, ಸಹಕಾರ ಸಂಘಗಳ ಬೆಳವಣಿಗೆ, ತಾಯಂದಿರು ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಮುಂತಾದ ಸಾಮಾಜಿಕ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವ ಅನೇಕ ಕಾನೂನುಗಳು ನಮ್ಮ ದೇಶದಲ್ಲಿವೆ. ಧಾರ್ಮಿಕ ದೃಷ್ಟಿಯಿಂದ ಭಾರತವು ಐಹಿಕವಾದಿ (secular) ಎಂದು ಘೋಷಿಸಲ್ಪಟ್ಟಿದೆ. ಆದರೂ ಮುಜರಾಯಿ ಮತ್ತು ವಾಕ್ಫ್ (wakf) ಮಂಡಳಿಗಳ ಆಡಳಿತಕ್ಕೆ ಸಂಬಂಧಪಟ್ಟ ಕಾನೂನುಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದು. ಇನ್ನು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಸಂಗೀತ, ಸಾಹಿತ್ಯ, ನಾಟಕ ಅಕೆಡಮಿಗಳು, ಚಲನಚಿತ್ರ ತಯಾರಿಕೆ ಮತ್ತು ಪ್ರದರ್ಶನ, ವೃತ್ತ ಪತ್ರಿಕೆಗಳ ಮುದ್ರಣ ಮತ್ತು ಪ್ರಸಾರ, ಕ್ರೀಡಾ ಮಂಡಳಿಗಳು, ರೇಡಿಯೊ ಮತ್ತು ಟೆಲಿವಿಷನ್ ಪ್ರಸಾರ, ಭಾಷಾಭಿವೃದ್ಧಿ ಮುಂತಾದವುಗಳಿಗೆ ಸಂಬಂಧಿಸಿದ ಕಾನೂನುಗಳೂ ಇವೆ. ಶಾಸನಗಳಲ್ಲದೆ, ಧನಸಹಾಯದ

ಮೂಲಕ ನಮ್ಮ ಸರಕಾರಗಳು ಜನರ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಸಾಕಷ್ಟು ನಿಯಂತ್ರಣಕ್ಕೆ ಒಳಪಡಿಸುವ ಅಪಾರ ಶಕ್ತಿಯನ್ನು ಹೊಂದಿವೆ. ಸಾಮಾನ್ಯವಾಗಿ ಇಂತಹ ಕಾರ್ಯಚಟುವಟಿಕೆಗಳು ಧನ ಸಹಾಯಕ್ಕಾಗಿ ಸರಕಾರಗಳನ್ನು ಒಂದಲ್ಲೊಂದು ರೀತಿ ಅವಲಂಬಿಸಬೇಕಾಗುತ್ತವೆ. ಆಗ ಅವು ಸರಕಾರಗಳ ಅಧಿಕಾರಗಳು ಹಾಗು ಅಧಿಕಾರಶಾಹಿ ಆಡಳಿತವರ್ಗದ ಒತ್ತಡಗಳಿಗೆ ಒಳಗಾಗುವುದು ಅನಿವಾರ್ಯವಾಗುತ್ತದೆ. ಇದೇ ರೀತಿ ಸರಕಾರಗಳ ಪ್ರತ್ಯಕ್ಷ ಅಥವಾ ಪರೋಕ್ಷವಾದ ಪ್ರೋತ್ಸಾಹ ಈ ಕಾರ್ಯ ಚಟುವಟಿಕೆಗಳಮೇಲೆ ಅಪಾರವಾದ ಪ್ರಭಾವವನ್ನು ಬೀರುವ ಶಕ್ತಿಯನ್ನು ಪಡೆದಿವೆ. ಈ ರೀತಿಯ ಪ್ರೋತ್ಸಾಹಗಳು ಅಥವಾ ಅವುಗಳ ಕೊರತೆ, ಇಂತಹ ಕಾರ್ಯ ಚಟುವಟಿಕೆಗಳ ಗತಿಯನ್ನೇ ಬದಲಾಯಿಸಬಲ್ಲವು.

ಹೀಗೆ ನಮ್ಮ ಆಧುನಿಕ ಕಾಲದಲ್ಲಿ ವಿಶ್ವದ ಎಲ್ಲ ರಾಷ್ಟ್ರಗಳಲ್ಲಿ ಜನರ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಮೇಲೆ ಸರಕಾರಗಳ ಅಧಿಕಾರಗಳ ಪ್ರಭಾವ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸಮನಾಗಿರುವುದನ್ನು ಕಾಣಬಹುದು. ಈ ಪ್ರಭಾವಗಳ ವ್ಯಾಪ್ತಿ ಮತ್ತು ಪ್ರಮಾಣಗಳಲ್ಲಿ ವ್ಯತ್ಯಾಸಗಳಿರಬಹುದು ಅಷ್ಟೆ. ಆದರೆ ಅವುಗಳ ಪರಿಣಾಮ ನಿರ್ದಿಷ್ಟ ಗುರಿಗಳನ್ನು ಮುಟ್ಟತಕ್ಕವುಗಳಾಗಿವೆ. ಆದ್ದರಿಂದ ಈ ಕಾರ್ಯಚಟುವಟಿಕೆಗಳ ಮೌಲ್ಯಗಳೂ ಸಹ ಈ ಧ್ಯೇಯಗಳಿಗೆ ಅನುಗುಣವಾಗಿ ಬದಲಾಗುತ್ತಾ ಹೋಗುತ್ತಿವೆ.

ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ :

ಸರಕಾರಗಳ ಬೆಳೆಯುತ್ತಿರುವ ಅಧಿಕಾರಗಳು ಎಲ್ಲ ದೇಶಗಳಲ್ಲೂ ಜನರ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನಗಳಮೇಲೆ ಹೇಗೆ ತಮ್ಮ ಸಂಕೋಲೆಗಳನ್ನು ಸುತ್ತುತ್ತಿವೆ ಎಂಬುದನ್ನು ಸ್ಥೂಲವಾಗಿ ಇದುವರೆಗೂ ವಿವೇಚಿಸಲಾಯಿತು. ಮೊಟ್ಟಮೊದಲೇ ತಿಳಿಸಿದಂತೆ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವೆಂಬ ಎರಡು ದ್ವಂದ್ವ ವಿಷಯಗಳ ಸುತ್ತಲೂ ಈ ಎಲ್ಲ ವಾಗ್ವಿವಾದಗಳನ್ನು ಮಂಡಿಸಲಾಗಿದೆ. ಆದ್ದರಿಂದ ಈ ಅಂಶಗಳ ಬಗ್ಗೆ ಸ್ವಲ್ಪ ವಿವರವಾಗಿ ತಿಳಿದುಕೊಂಡು ಈ ಪ್ರಬಂಧವನ್ನು ಮುಗಿಸಬಹುದು.

ಒಬ್ಬ ವ್ಯಕ್ತಿಯು ತನ್ನ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಎಷ್ಟರಮಟ್ಟಿಗೆ ಅನಿರ್ಬಂಧಿತವಾಗಿ ಕೈಗೊಳ್ಳಬಹುದು ಎಂಬುದನ್ನು ವ್ಯಕ್ತಿಸ್ವಾತಂತ್ರ್ಯ ಎಂಬುದಾಗಿ ಸ್ಥೂಲವಾಗಿ ಪರಿಗಣಿಸಬಹುದು. ಈ ದೃಷ್ಟಿಯಿಂದ ನೋಡಿದಾಗ, ವ್ಯಕ್ತಿಸ್ವಾತಂತ್ರ್ಯದ ಸ್ವರೂಪ ಮತ್ತು ಪ್ರಮಾಣಗಳಲ್ಲಿ ಒಂದು ರಾಷ್ಟ್ರದಿಂದ ಇನ್ನೊಂದಕ್ಕೆ ಸಾಕಷ್ಟು ವ್ಯತ್ಯಾಸ

ಗಳಿವೆ. ಉದಾಹರಣೆಗೆ, ಅಮೆರಿಕ, ಕೆನಡ ಮುಂತಾದ ರಾಷ್ಟ್ರಗಳಲ್ಲಿ ಇವು ಹೆಚ್ಚಾಗಿಯೂ, ರಷ್ಯಾ, ಚೀನಾ ಮೊದಲಾದ ಕಮ್ಯುನಿಸ್ಟ್ ದೇಶಗಳಲ್ಲಿ ಕಡಿಮೆಯಾಗಿಯೂ ಇವೆ.

ಸಾಮಾಜಿಕ ನ್ಯಾಯ ಎಂಬುದು ಪ್ರಜಾಪ್ರಭುತ್ವ, ಸಮತಾ ಸಮಾಜವಾದ ಮತ್ತು ಪ್ರಜಾಸ್ವಾಮ್ಯವಾದದ ಕೆಲವು ಅಂಶಗಳನ್ನು ಒಳಗೊಂಡಿದೆ. ಒಂದು ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಸಮಾನ ಹಕ್ಕುಗಳಿದ್ದು, ತನಗೆ ಇಷ್ಟಬಂದ ವೃತ್ತಿಯನ್ನು ಆರಿಸಿಕೊಳ್ಳುವ ಸಮಾನ ಅವಕಾಶಗಳಿದ್ದು, ತನ್ನ ಯೋಗ್ಯತೆಗೆ ತಕ್ಕಂತಹ ವರಮಾನವನ್ನು ಗಳಿಸುವ ಸಾಧ್ಯತೆಗಳಿದ್ದು, ಅದು ಶೋಷಣಾರಹಿತ ಸಮಾಜವಾಗಿದ್ದರೆ, ಅಲ್ಲಿ ಸಾಮಾಜಿಕ ನ್ಯಾಯ ನೆಲೆಗೊಳಿಸಿದೆಯೆಂದು ಸ್ಥೂಲವಾಗಿ ಹೇಳಬಹುದು. ತಾತ್ವಿಕ ದೃಷ್ಟಿಯಿಂದ ಸಾಮಾಜಿಕ ನ್ಯಾಯವೆಂಬ ಭಾವನೆಯನ್ನು ಸುಲಭವಾಗಿ ಗ್ರಹಿಸಬಹುದಾದರೂ, ವಾಸ್ತವವಾಗಿ ವಿವಿಧ ಸಮಾಜಗಳಲ್ಲಿ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಅನೇಕ ಅಡ್ಡಿಆಡಚಣೆಗಳನ್ನು ಎಲ್ಲ ರಾಷ್ಟ್ರಗಳೂ ಎದುರಿಸುತ್ತಿವೆ. ಆದ್ದರಿಂದ ಪ್ರಪಂಚದ ಯಾವ ರಾಷ್ಟ್ರವನ್ನು ತೆಗೆದುಕೊಂಡರೂ, ನಿಜವಾದ ಸಾಮಾಜಿಕ ನ್ಯಾಯದ ಸಾಧನೆಯು ಒಂದು ಮರೀಚಿಕೆಯಂತೆಯೇ ಉಳಿದಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಈ ವಾಸ್ತವಾಂಶವನ್ನು ಕೆಲವು ನಿದರ್ಶನಗಳಿಂದ ಚೆನ್ನಾಗಿ ಅರಿಯಬಹುದು. ಮೊದಲು ರಷ್ಯಾ, ಚೀನಾ ಮುಂತಾದ ಕಮ್ಯುನಿಸ್ಟ್ ರೀತಿಯ ಸಮಾಜಗಳನ್ನು ತೆಗೆದುಕೊಳ್ಳೋಣ. ಇಂತಹ ಸಮಾಜಗಳಲ್ಲಿ ಸಾಮಾನ್ಯವಾಗಿ ಆರ್ಥಿಕ ದೃಷ್ಟಿಯಿಂದ ವರಮಾನ ಮತ್ತು ಸಂಪತ್ತುಗಳ ಗಳಿಕೆ ಹಾಗು ಹಂಚಿಕೆಗಳಲ್ಲಿನ ಅಸಮಾನತೆಗಳು ಅತ್ಯಲ್ಪವಾಗಿರುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಯೋಗ್ಯತಾನುಸಾರ ಯಾವುದಾದರೊಂದು ಕೆಲಸವನ್ನು ಮಾಡಲೇಬೇಕು. ಯಾವ ರೀತಿಯ ಶೋಷಣೆಗೂ ಈ ಸಮಾಜಗಳಲ್ಲಿ ಅವಕಾಶವಿಲ್ಲ. ಆದ್ದರಿಂದ ಈ ದೇಶಗಳಲ್ಲಿ ಸಾಮಾಜಿಕ ನ್ಯಾಯ ಹೆಚ್ಚಾಗಿ ನೆಲೆಗೊಂಡಿದೆಯೆಂಬ ಒಂದು ವಾದವಿದೆ. ಆದರೆ ಈ ಅಂಶವನ್ನು ವಿರೋಧಿಸುವವರೂ ಇದ್ದಾರೆ. ಕಮ್ಯುನಿಸ್ಟ್ ಮಾದರಿ ಸಮಾಜಗಳಲ್ಲಿ ವರಮಾನ ಮತ್ತು ಸಂಪತ್ತುಗಳ ಗಳಿಕೆ ಹಾಗು ಹಂಚಿಕೆಗಳಲ್ಲಿನ ಅಸಮಾನತೆಗಳನ್ನು ತುಂಬ ಕಠಿನಕ್ರಮಗಳಿಂದ ತೊಡೆದುಹಾಕಲ್ಪಡುತ್ತವೆ. ಇದರಿಂದ ಜನರು ಅನುಭೋಗಿಸುವ ಸರಕು ಸೇವೆಗಳ ಮಟ್ಟವು, ಇತರ ಮುಂದುವರಿದ ರಾಷ್ಟ್ರಗಳೊಂದಿಗೆ ಹೋಲಿಸಿದಾಗ, ಹೆಚ್ಚು ಮಿತವಾಗಿರುವುದು ಕಂಡುಬರುತ್ತದೆ. ಅಲ್ಲದೆ ಈ ದೇಶಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ರಾಜ್ಯ, ಸರಕಾರ ಹಾಗು ಆಡಳಿತದಲ್ಲಿರುವ ರಾಜಕೀಯ ಪಕ್ಷದ ಧೋರಣೆ ಮತ್ತು ನೀತಿಗಳನ್ನು ವಿರೋಧಿಸದೆ ಒಪ್ಪಿಕೊಳ್ಳಬೇಕು. ಆದ್ದರಿಂದ ಈ ದೇಶಗಳಲ್ಲಿ

ವ್ಯಕ್ತಿ ಸ್ವಾತಂತ್ರ್ಯವೆಂಬುದು ಕೇವಲ ಒಂದು ಭ್ರಾಂತಿ. ಮೇಲಾಗಿ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿಯೂ ಸರಕಾರ ಮತ್ತು ಪಕ್ಷದ ಉನ್ನತ ಸ್ಥಾನಗಳಲ್ಲಿರುವ ವ್ಯಕ್ತಿಗಳು ಎಲ್ಲ ರೀತಿಯ ಭೋಗವಿಲಾಸಗಳನ್ನು ಅನುಭವಿಸುತ್ತಾ ಇತರರ ಸುಲಿಗೆ ಮತ್ತು ಶೋಷಣೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಈ ದೇಶಗಳಲ್ಲಿ ಸಾಮಾಜಿಕ ನ್ಯಾಯ ಹೆಚ್ಚಾಗಿ ನೆಲೆಗೊಂಡಿದೆಯೆನ್ನುವುದು ಸರಿಯಲ್ಲ ಎಂಬುದು ವಿರೋಧಿಗಳ ವಾದವಾಗಿದೆ.

ನಿರಂಕುಶಾಧಿಕಾರ ಅಥವಾ ಮಿಲಿಟರಿ ಸರ್ವಾಧಿಕಾರವಿರುವ ಟರ್ಕಿ, ಇರಾಕ್, ಸೌದಿ ಅರೇಬಿಯಾ, ಪಾಕಿಸ್ತಾನ, ಬಂಗ್ಲಾದೇಶ ಮುಂತಾದವುಗಳಲ್ಲಿಯೂ ವ್ಯಕ್ತಿ ಸ್ವಾತಂತ್ರ್ಯ ತುಂಬ ಮೊಟಕಾಗಿದೆಯೆಂದು ಹೇಳಬಹುದು. ಇನ್ನು ಈ ದೇಶಗಳಲ್ಲಿ ಸಾಮಾಜಿಕ ನ್ಯಾಯವೆಂಬುದು ಅಲ್ಲಿನ ಅರಸರ ಅಥವಾ ಆಡಳಿತಾಧಿಕಾರಿಗಳ ಮನೋ ವೈಚಿತ್ರ್ಯಗಳನ್ನು ಬಹಳವಾಗಿ ಅವಲಂಬಿಸಿದೆಯೆಂದು ಧಾರಾಳವಾಗಿ ನುಡಿಯ ಬಹುದು. ಆದ್ದರಿಂದ ವ್ಯಕ್ತಿಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವೆಂಬ ಭಾವನೆ ಹಾಗು ಕಾರ್ಯಕ್ರಮಗಳು ಈ ದೇಶಗಳಲ್ಲಿ ಸಾಕಷ್ಟು ಪ್ರಮುಖವಾಗಿಲ್ಲ ವೆಂಬುದು ಇದರಿಂದ ಗೊತ್ತಾಗುತ್ತದೆ.

ಪ್ರಜಾಪ್ರಭುತ್ವ ಮಾದರಿ ಸರಕಾರಗಳು ಅಸ್ತಿತ್ವದಲ್ಲಿರುವ ಬ್ರಿಟನ್, ಫ್ರಾನ್ಸ್ ಅಮೆರಿಕ, ಕೆನಡ, ಆಸ್ಟ್ರೇಲಿಯಾ, ಜಪಾನ್, ಭಾರತ ಮುಂತಾದ ರಾಷ್ಟ್ರಗಳಲ್ಲಿಯೂ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯಗಳ ನಡುವಿನ ದ್ವಂದ್ವ ಮುಂದು ವರಿದುಕೊಂಡೇ ಬಂದಿದೆ. ವ್ಯಕ್ತಿಸ್ವಾತಂತ್ರ್ಯವನ್ನು ಹೆಚ್ಚು ಹೆಚ್ಚಾಗಿ ಪ್ರತಿ ಪಾದಿಸಬೇಕಾದಾಗ, ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸುವುದು ತುಂಬ ಕಷ್ಟ ವಾಗಿ ಕಂಡು ಬಂದಿರುವ ಅನುಭವ ಈ ದೇಶಗಳಿಗಿದೆ. ಹಾಗೆಯೇ ಸಮತಾ ಸಮಾಜ ವಾದ ಅಥವಾ ಪ್ರಜಾಸ್ವಾಮ್ಯವಾದದ ತತ್ವಗಳ ಆಧಾರದ ಮೇಲೆ ಹೆಚ್ಚಿನ ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸಲು ಅಗತ್ಯವಾದ ಕ್ರಮಗಳನ್ನು ಅಲ್ಲಿನ ಸರಕಾರಗಳು ಕೈಗೊಂಡಾಗ, ಅವುಗಳಿಂದ ಅನಿರ್ಬಂಧಿತ ವ್ಯಕ್ತಿಸ್ವಾತಂತ್ರ್ಯವು ಅನಿವಾರ್ಯವಾಗಿ ಮೊಟಕಾಗುವುದೂ ಈ ರಾಷ್ಟ್ರಗಳ ಅನುಭವಕ್ಕೆ ಬಂದಿದೆ.

ಮೇಲಿನ ವಿಶ್ಲೇಷಣೆಯಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ವ್ಯಕ್ತಿ ಸ್ವಾತಂತ್ರ್ಯವು ಅನಿರ್ಬಂಧಿತವಾಗಿದ್ದಾಗ ಸರಕಾರಗಳ ಅಧಿಕಾರಗಳು ತುಂಬ ಮಿತ ವಾಗಿದ್ದು ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸುವುದು ಕಷ್ಟವಾಗುವುದು, ಅಥವಾ ಸಾಮಾಜಿಕ ನ್ಯಾಯವು ಹೆಚ್ಚಾಗಿ ನೆಲೆಗೊಂಡಾಗ ಅದಕ್ಕೆ ಪೂರಕವಾಗಿ ಸರಕಾರಗಳ ಅಧಿಕಾರಗಳು ಅಗಾಧವಾಗಿದ್ದು ಅದರಿಂದ ವ್ಯಕ್ತಿಸ್ವಾತಂತ್ರ್ಯವು ಸಾಕಷ್ಟು ಮೊಟ ಕಾಗಿರುವುದೇ ಆ ಒಂದು ಮುಖ್ಯ ಅಂಶವಾಗಿದೆ. ಇವುಗಳಲ್ಲಿ ಯಾವುದು ಉತ್ತಮ ವೆಂದು ನಿರ್ಧರಿಸಿ ಆರಿಸಿಕೊಳ್ಳುವುದನ್ನು ಆಯಾ ದೇಶಗಳ ಪ್ರಜೆಗಳೇ ಕೈಗೊಳ್ಳ

ಬೇಕು. ಏಕೆಂದರೆ, ಈ ವಿಷಯದಲ್ಲಿ ವಾದ ವಿವಾದಗಳು ಕೊನೆಮುಟ್ಟುವುದಿಲ್ಲ. ಎರಡು ಅಂಶಗಳನ್ನೂ ಬೆಂಬಲಿಸಬಹುದು ಅಥವಾ ಟೀಕಿಸಬಹುದು.

ಒಟ್ಟಿನಲ್ಲಿ ಹೇಳುವುದಾದರೆ, ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸುವ ಗುರಿಯನ್ನು ಈಗ ಎಲ್ಲ ಸರಕಾರಗಳೂ ಸಾಮಾನ್ಯವಾಗಿ ಹೊಂದಿವೆ. ಇದಕ್ಕೆ ಅಗತ್ಯವಾದ ಕ್ರಮಗಳಿಂದಾಗಿ ಸರಕಾರಗಳ ಅಧಿಕಾರಗಳು ಒಂದೇ ಸಮನಾಗಿ ಬೆಳೆಯುತ್ತಿವೆ. ಇವುಗಳಿಗೆ ಪೂರಕವಾಗಿ ಅಧಿಕಾರಶಾಹಿ ಆಡಳಿತ ವ್ಯವಸ್ಥೆಯು ಬಿಗಿಹಿಡಿತದಿಂದ ವಿಸ್ತಾರವಾಗುತ್ತಿದೆ. ಆದರಿಂದ ಅನಿರ್ಬಂಧಿತ ವ್ಯಕ್ತಿಸ್ವಾತಂತ್ರ್ಯವು ಮೊಟಕಾಗುತ್ತಿದೆ. ಇಂತಹ ಪರಿಮಿತಿಗೊಳಪಟ್ಟ ಪರಿಸರದಲ್ಲಿ ಆಧುನಿಕ ಮಾನವನು ತನ್ನ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದು ಅನಿವಾರ್ಯವಾಗಿದೆ. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಈ ಕಾರ್ಯಕ್ಷೇತ್ರಗಳಲ್ಲಿ ಅವನು ಅನುಭವಿಸಿದ ಅನಿರ್ಬಂಧಿತ ವ್ಯಕ್ತಿಸ್ವಾತಂತ್ರ್ಯವನ್ನು ಪುನಃ ಪಡೆಯುವುದು ಒಂದು ಕನಸಾಗಿಯೇ ಉಳಿಯಬಹುದು.

ಭ್ರಮರ ಗೀತೆ

ಡಾ॥ ಟಿ. ಜಿ. ಪ್ರಭಾಶಂಕರ 'ಪ್ರೇಮಿ'

'ಭ್ರಮರ ಗೀತೆ' ಮೂಲತ: ಭಾಗವತದಲ್ಲಿ ಒಂದು ಪ್ರಸಂಗ ಮಾತ್ರ. ಭಾಗವತದ 46 ಮತ್ತು 47 ನೇ ಆಧ್ಯಾಯದಲ್ಲಿ ಈ ಪ್ರಸಂಗವನ್ನು 17 ಶ್ಲೋಕಗಳಲ್ಲಿ ವರ್ಣಿಸಲಾಗಿದೆ. ಈ ಪ್ರಸಂಗವನ್ನು ಮೊಟ್ಟಮೊದಲು ಕನ್ನಡದಲ್ಲಿ ಶ್ರೀಪಾದರಾಯರು ಮತ್ತು ಹಿಂದೀಯಲ್ಲಿ ಸೂರದಾಸರು ತೆಗೆದುಕೊಂಡು ಹಾಡಿದರು. ಇವರಿಬ್ಬರೂ ಕನ್ನಡಿಗರೇ ಆದ ವಲ್ಲಭಾಚಾರ್ಯರಿಂದ ಪ್ರಭಾವಿತರಾದವರು. ಸೂರದಾಸರಿಗೆ ವಲ್ಲಭಾಚಾರ್ಯರೇ ದೀಕ್ಷಾಗುರು. ಹೀಗೆ ಭ್ರಮರವನ್ನು ಪ್ರತೀಕವಾಗಿಟ್ಟುಕೊಂಡು ಅದರ ಮೂಲಕ ಉದ್ಧವ-ಗೋಪಿಯರು ಸಂಭಾಷಿಸುವ ಈ ಪ್ರಸಂಗ ಕಾವ್ಯ ರೂಪತಾಳಿ ಒಂದು ಪರಂಪರೆಯಾಗಿಯೇ ಬೆಳೆದು ನಿಂತಿತು.

ಭಾಗವತದಲ್ಲಿ ಭ್ರಮರ ಗೀತೆ

ಕೃಷ್ಣ ಭಕ್ತಿಯ ಅನ್ಯ ಪ್ರಸಂಗಗಳಿಗೆ ಭಾಗವತ ಪುರಾಣ ಆಧಾರವಾಗಿರುವಂತೆ ಭ್ರಮರ ಗೀತೆ ಪ್ರಸಂಗಕ್ಕೂ ಇದೇ ಆಧಾರವಾಗಿದೆ. ಭಾಗವತದ 10 ನೇ ಸ್ಕಂಧದಲ್ಲಿ ಶ್ರೀಕೃಷ್ಣನ ಲೀಲೆಗಳನ್ನು ಹಾಡಲಾಗಿದೆ. ಇದೇ ಸ್ಕಂಧದ 46 ಮತ್ತು 47 ನೇ ಆಧ್ಯಾಯಗಳಲ್ಲಿ ವರ್ಣಿಸಿರುವಂತೆ ಭ್ರಮರ ಗೀತೆಯ ಪ್ರಸಂಗ ಸಂಕ್ಷೇಪವಾಗಿ ಹೀಗಿದೆ.

ಒಂದು ದಿನ ಕೃಷ್ಣನಿಗೆ ವ್ರಜ ಭೂಮಿಯ ನೆನಪಾಗಲು, ಅವನು ವೃಷ್ಣಿವಂಶದಲ್ಲಿ ಹುಟ್ಟಿದ, ಮಂತ್ರಿ ಮತ್ತು ಸ್ನೇಹಿತನಾದ ಸಾಕ್ಷಾತ್ ಬೃಹಸ್ಪತಿಯ ಶಿಷ್ಯನಾದ ಉದ್ಧವನನ್ನು ಕರೆದು ವ್ರಜ ಭೂಮಿಗೆ ಹೋಗಿ ಬರಲು ಹೇಳುತ್ತಾನೆ. ಅಲ್ಲಿ ತನ್ನ ತಂದೆ - ತಾಯಿಯರನ್ನು ಸಂತೋಷಗೊಳಿಸಿ, ತನ್ನ ವಿಯೋಗದಲ್ಲೇ ಬೇಯುತ್ತಿರುವ ಗೋಪಿಯರನ್ನು ಸಮಾಧಾನಪಡಿಸೆಂದೂ ಹೇಳುತ್ತಾನೆ. ಗೋಪಿಯರ ಆತ್ಮವೇ ತಾನೆಂದು, ತಾನು ಬರುವೆನೆಂದೂ ಹೇಳುತ್ತಾನೆ. ಆದರೆ ಭಾಗವತದಲ್ಲೆಲ್ಲೂ ರಾಧೆಯ ಹೆಸರೂ ಇಲ್ಲ, ವರ್ಣನೆಯೂ ಇಲ್ಲ. ಇದು ನಂತರದ ಕವಿವರ್ಯರ ಕೊಡುಗೆ. ಭಾಗವತದ ಉದ್ಧವನಲ್ಲಿ ಅಹಂಕಾರವಿಲ್ಲ, ಜ್ಞಾನ ಗರ್ವವಿಲ್ಲ ಮತ್ತು ತರ್ಕ ಮಾಡುವ ಸ್ವಭಾವವಿಲ್ಲ. ಉದ್ಧವ ಸ್ವಾಮಿಭಕ್ತಿಯಿಂದ ಸಂದೇಶವನ್ನು ಹೊತ್ತು ವಿನಯದಿಂದ ವ್ರಜಭೂಮಿಗೆ ಬರುತ್ತಾನೆ. ಅಲ್ಲಿ ನಂದ ಯಶೋದೆಯರೊಡನೆ ಮತ್ತು ಗೋಪಿಯರೊಡನೆ ಸಂವಾದ ನಡೆಸುತ್ತಾನೆ. ನಂದ ಕೃಷ್ಣನ

ಕುಶಲವನ್ನು ಕೇಳುತ್ತಿದ್ದಂತೆ ಯಶೋದೆ ಕೃಷ್ಣನನ್ನು ನೆನೆನೆನೆದು ಪುತ್ರ-ವಾತ್ಸಲ್ಯದ ಅತಿರೇಕದಿಂದ ಕಂಬನಿ ಸುರಿಸುತ್ತಾಳೆ. ಅವಳ ಸ್ತನಗಳಿಂದ ಹಾಲೇ ಹರಿಯುತ್ತದೆ. ಉದ್ಧವ ಇವರನ್ನು ಸಮಾಧಾನ ಪಡಿಸುತ್ತಾ ಕೃಷ್ಣನ ಈಶ್ವರತ್ವವನ್ನೂ, ನಿರ್ಗುಣ ರೂಪವನ್ನೂ ಬಣ್ಣಿಸುತ್ತಾನೆ.

ಗೋಪಿಯರು ಉದ್ಧವನ ರೂಪವನ್ನು ನೋಡಿ ಕೃಷ್ಣನೇ ಬಂದನೆಂದು ಕೊಂಡರು. ಅವನನ್ನು ಗೌರವಾದರಗಳಿಂದ ಬರಮಾಡಿಕೊಂಡು ಸಂವಾದ ನಡೆಸಿದರು. ಅವರು ಮೊದಲು ಕೃಷ್ಣನ ಪ್ರೇಮವನ್ನು ಕುರಿತು ವ್ಯಂಗ್ಯ ಮಾಡುವರು. ನಮ್ಮನ್ನಿನ್ನೆಲ್ಲಿ ನೆನೆಯುವನು. ಸಂಬಂಧವಾದರೂ ಏನಿದೆ? ಅವನ ಪ್ರೇಮ ಸ್ವಾರ್ಥ ಪ್ರೇಮ - ಭ್ರಮರ ಹೂವ ಪ್ರೇಮಿಸಿದಂತೆ. ಪುರುಷರ ಪ್ರೇಮ ನಿಷ್ಠುರವಾದದ್ದು. ಆದರೆ ಕೃಷ್ಣನನ್ನು ಸ್ಮರಿಸುತ್ತ ಭಾವ ಪರವಶರಾಗಿ ರೋಧಿಸುತ್ತಾರೆ.

ಹೀಗೆ ಅವರ ಸಂವಾದ ನಡೆಯುತ್ತಿರುವಾಗಲೇ ಗೋಪಿಯರಿಗೊಂದು ಭ್ರಮರ ಕಾಣಿಸಿಕೊಂಡಿತು. ಭ್ರಮರದ ಸ್ವಭಾವವೂ ಕೃಷ್ಣನ ಸ್ವಭಾವವೂ ಪ್ರೇಮಿಸುವುದರಲ್ಲಿ ಒಂದೇ ಆಗಿತ್ತು. ಅವರಿಬ್ಬರ ಬಣ್ಣವೂ ಕಪ್ಪು. ಆದ್ದರಿಂದ ಕೃಷ್ಣನ ಮೇಲೆ ವ್ಯಂಗ್ಯ ಮಾಡಲು ಒಂದು ಪ್ರತೀಕ ಸಿಕ್ಕಂತಾಯಿತು. ಕೃಷ್ಣನಿಗೆ ಹೇಳಬೇಕಾದುದನ್ನೆಲ್ಲಾ ಭ್ರಮರಕ್ಕೆ ಅನ್ಯೋಕ್ತಿಯಲ್ಲಿ ಹೇಳುತ್ತಾರೆ. ಆದ್ದರಿಂದಲೇ ಈ ಪ್ರಸಂಗವನ್ನು 'ಭ್ರಮರ ಗೀತೆ' ಎನ್ನಲಾಯಿತು. ಭ್ರಮರವನ್ನು ಸಂಬೋಧಿಸಿ ಹೇಳುತ್ತಾರೆ– ನೀನು ಪುಷ್ಪದ ರಸಹೀರಿ ಬಿಟ್ಟಂತೆ ಕೃಷ್ಣ ಅಧರಾಮೃತವನುಣಿಸಿ ಬಿಟ್ಟು ಬಿಟ್ಟ. ಲಕ್ಷ್ಮಿ ಇವನ ಚರಣ ಸೇವೆ ಹೇಗೆ ಮಾಡುವಳೊ ಕಾಣೆವು! ಹೀಗೆ ಭ್ರಮರದ ಮೂಲಕ ಪರೋಕ್ಷವಾಗಿ ಶ್ರೀಕೃಷ್ಣನ ನಿಷ್ಠುರತೆಯನ್ನು ನಿಂದಿಸುತ್ತಾ, ಅವನ ಕುಟಿಲ ಕಾರ್ಯಗಳನ್ನು ಹಳಿಯುತ್ತ, ಅವನನ್ನು ನಂಬಿ ಸಂಸಾರವನ್ನು ತೊರೆದು ಬಂದ ತಮ್ಮನ್ನು ಕಾಮ ಪೀಡಿತರನ್ನಾಗಿಸಿ ಬಿಟ್ಟು ಬಿಟ್ಟನೆಂದು ಸಿಟ್ಟಿನಿಂದ ನಿಂದಿಸಿ ಮನಸ್ಸಿನ ತಾಪವನ್ನು ಕಡಿಮೆ ಮಾಡಿಕೊಳ್ಳುತ್ತಾರೆ.

ಗೋಪಿಯರ ಮಾತುಗಳಿಂದ ಉದ್ಧವ ಪ್ರಭಾವಿತನಾಗಿ ಅವರ ಅನನ್ಯ ಭಕ್ತಿಯನ್ನು ಕೊಂಡಾಡುತ್ತಾನೆ ಮತ್ತು ಕೃಷ್ಣನ ಸಂದೇಶವನ್ನು ತಿಳಿಸುತ್ತಾನೆ. ಆ ಸಂದೇಶದಲ್ಲಿ ಬರುವ ಬ್ರಹ್ಮನ ಸ್ವರೂಪ, ನಿರ್ಗುಣತ್ವ, ಆತ್ಮ, ಮಾಯೆ ಮೊದಲಾದುವನ್ನು ತಿಳಿಹೇಳುತ್ತಾನೆ. ಈ ಸಂದೇಶವ ಅರ್ಥ ಕೃಷ್ಣ ಸರ್ವವ್ಯಾಪಿಯಾದ್ದರಿಂದ ಗೋಪಿಯರೊಂದಿಗೆ ವಿರಹವೇ ಇಲ್ಲ. ಹೀಗೆ ಕೃಷ್ಣ ಗೋಪಿಯರ ವಿರಹವನ್ನು ಶಾಂತಗೊಳಿಸುತ್ತಾನೆ. ಗೋಪಿಯರು ಉದ್ಧವನನ್ನು ತಮ್ಮನ್ನು ಕೃಷ್ಣ ನೆನೆಯುತ್ತಾನೆಯೇ ಎಂದು ಪ್ರಶ್ನಿಸುವರು. ಅವರಿಗೆ ಕೃಷ್ಣ ನೆನೆಯುತ್ತಿರುವನೆಂದು ತಿಳಿದಾಗ ಅತೀವ ಸಂತೋಷವಾಗುವುದು.

ಉದ್ಧವ ಗೋಪಿಯರ ಪ್ರೇಮದಿಂದ ಪ್ರಭಾವಿತನಾಗಿ ಮಥುರೆಗೆ ಹಿಂತಿರುಗುತ್ತಾನೆ. ವ್ರಜಭೂಮಿಯ ನೆನೆದು ಹೇಳುತ್ತಾನೆ, ನಾನು ವ್ರಜಭೂಮಿಯ ಬಳ್ಳಿ-ಬೇರು ಆದರೂ ಸಾಕು. ಗೋಪಿಯರ ಪಾದ ಧೂಳಿ ಪಡೆದು ಧನ್ಯನಾಗಬಹುದು.

ಸೂರದಾಸರ ಭ್ರಮರ ಗೀತೆ

ಈ ಭಾಗವತದ ಪ್ರಸಂಗವನ್ನಾಧರಿಸಿ ಭ್ರಮರ ಗೀತೆಯನ್ನು ಸೂರದಾಸರು ಹೆಚ್ಚು ವಿಸ್ತಾರವಾಗಿಯೂ ಮತ್ತು ಬಹು ತನ್ಮಯತೆಯಿಂದಲೂ ರಚಿಸಿದ್ದಾರೆ. ಅವರ 'ಸೂರಸಾಗರ'ದಲ್ಲಿ ಭ್ರಮರ ಗೀತೆ ಒಂದು ರಸತೀರ್ಥವೇ ಸರಿ. ಈ ಪ್ರಸಂಗದ ನಿರೂಪಣೆಯಲ್ಲಿ ಸೂರದಾಸರ ಮೌಲಿಕತೆ, ಕಲ್ಪನಾ ಶಕ್ತಿ, ಭಕ್ತಿ ಭಾವ, ಭಾವ ಪ್ರವಣತೆ ಎದ್ದು ಕಾಣುತ್ತದೆ. ಅವರ ಕವಿತ್ವ ಶಕ್ತಿ ಪ್ರೌಢತೆಯನ್ನು ಪಡೆದಿದೆ. ಇಲ್ಲಿ ಉದ್ಧವನು ಜ್ಞಾನಗರ್ವಿ. ಅವನ ಪಾತ್ರವೂ ವಿಕಾಸಗೊಂಡಿದೆ.

ಸೂರದಾಸರ 'ಭ್ರಮರ ಗೀತೆ'ಯ ಪ್ರಕಾರ ಶ್ರೀಕೃಷ್ಣನಿಗೆ ವ್ರಜಭೂಮಿಯ ನೆನಪಾಗುತ್ತಲೆ ಮನಸ್ಸಿನಲ್ಲಿ ಉದ್ಧವನನ್ನು ಕಳುಹಿಸುವ ವಿಚಾರ ಹುಟ್ಟಿತು. ಉದ್ಧವ ಕೃಷ್ಣನ ಮಿತ್ರನಾದರೂ ವಿರಹ-ದುಃಖದ ಮಹತ್ವವನ್ನರಿಯನು. ಆತ ರೂಪ, ರೇಖೆ, ವರ್ಣವಿಲ್ಲದವನನ್ನು ಆರಾಧಿಸುವ ನೇಮ ಇಟ್ಟುಕೊಂಡವನು. ಯಾವಾಗಲೂ ನೀರಸವಾದ ಯೋಗದ ಮಾತನ್ನೇ ಆಡುತ್ತಿದ್ದ. ಇಂತಹ ನಿಷ್ಠುರ ಯೋಗಿಯ ಜ್ಞಾನ ಗರ್ವವನ್ನು ಭಂಗಪಡಿಸಲು ವ್ರಜಭೂಮಿಗೆ ಕಳುಹಿಸುವ ಯೋಚನೆ ಕೃಷ್ಣನಿಗಾಯಿತು. ಹೀಗೆ ಉದ್ಧವನು ವ್ರಜಭೂಮಿಗೆ ಹೋಗುವ ಉದ್ದೇಶ್ಯವೇ ಭಾಗವತದಿಂದ ಭಿನ್ನವಾದುದು.

ಕೃಷ್ಣನು, ರಾಧೆ ಮತ್ತು ಗೋಪಿಯರೊಂದಿಗೆ ತನ್ನ ಅಭಿನ್ನ ಸಂಬಂಧವನ್ನು ಬಣ್ಣಿಸಿ, ತಾನಿಲ್ಲದ ವ್ರಜ ಬಾಲೆಯರು ವಿರಹತಪ್ತರಾಗಿದ್ದಾರಾದ್ದರಿಂದ ಅವರಿಗೆ ಯೋಗವನ್ನುಪದೇಶಿಸಿ, ಅವರ ಪ್ರೇಮನಿಷ್ಠೆಯನ್ನಳಿಸಿ, ಜ್ಞಾನವನ್ನು ಬೋಧಿಸಿ ಬಾರೆಂದು ಕಳುಹಿಸಿದ. ಹೊರಡುವಾಗ ಕೃಷ್ಣನು ನಂದ-ಯಶೋದೆ, ರಾಧೆ ಮತ್ತು ಗೋಪಿಯರಿಗೆ ಬೇರೆ ಬೇರೆಯಾಗಿ ಸಂದೇಶ-ಪತ್ರಗಳನ್ನು ಕಳುಹಿಸಿದ.

ಹೀಗೆ ಕೃಷ್ಣನ ಸಂದೇಶವನ್ನು ಹೊತ್ತು ಅವನಂತೆ ಆಕಾರ ತಳೆದು, ಅವನ ರಥವನ್ನೇರಿ ವ್ರಜಭೂಮಿಗೆ ಬಂದ. ಆರಂಭದಲ್ಲಿಯೇ ಉದ್ಧವನ ಆಗಮನದ ಸುದ್ದಿಯನ್ನು ಸಖಿಯರು ರಾಧೆಗೆ ಮುಟ್ಟಿಸುತ್ತಾರೆ. ಸೂರದಾಸರು ಸುದ್ದಿಯ ಪ್ರತಿಕ್ರಿಯೆಯನ್ನೂ ಮತ್ತು ಸಂದೇಶ-ಪತ್ರದ ಪ್ರತಿಕ್ರಿಯೆಯನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಉದ್ಧವ ಗೋಪಿಯರಿಗೆ ಯೋಗ ಸಂದೇಶ ನೀಡಿದ. ಇದರ ಪರಿಣಾಮವಾಗಿ ಗೋಪಿಯರು ಉದ್ಧವನನ್ನು, ಕೃಷ್ಣನನ್ನು ಮತ್ತು ಭ್ರಮರವನ್ನು ಪ್ರತೀಕವಾಗಿಟ್ಟುಕೊಂಡು ನಿಂದಿಸುವ, ರೇಗಿಸುವ ಮತ್ತು ವ್ಯಂಗ್ಯವಾಡುವ ಪ್ರಸಂಗಗಳ ನಿರೂ

ಪಣೆಯಲ್ಲಿ ಸೂರದಾಸರು ತಮ್ಮ ಕಾವ್ಯ ಪ್ರತಿಭೆಯನ್ನು ತೋರಿಸಿದ್ದಾರೆ. ಆದ್ದರಿಂದ ಈ ಪ್ರಸಂಗವನ್ನು ಒಂದು 'ಉಪಾಲಂಭ' ಕಾವ್ಯವೆಂದೇ ಪರಿಗಣಿಸಿದ್ದಾರೆ. ಇಲ್ಲಿ ಉದ್ಧವನ ಯೋಗ ಮತ್ತು ನಿರ್ಗುಣತತ್ವವನ್ನು ಖಂಡಿಸಿ ಗೋಪಿಯರಿಂದ ಪ್ರೇಮಾ ಭಕ್ತಿಯ ಮೂಲಕ ಸಗುಣ ಭಕ್ತಿಯ ಪ್ರತಿಪಾದನೆಯೂ, ಸೂರದಾಸರ ಪ್ರೇಮ ಮೂಲಕ ಪುಷ್ಟಿ ಮಾರ್ಗದ ಅನನ್ಯ ಭಕ್ತಿಯ ಪ್ರತೀಕವಾಗಿದೆ.

ಭಾಗವತದಲ್ಲಿ ರಾಧೆಯ ಕಲ್ಪನೆಯೇ ಇಲ್ಲದಿದ್ದರೆ ಇಲ್ಲಿ ರಾಧೆಯೇ ಗೋಪಿಯರೆಲ್ಲರ ನಾಯಕಿ ಮತ್ತು ಅತ್ಯಪೂರ್ವ ಸೌಂದರ್ಯದ ಪ್ರತೀಕ. ಹೀಗೆ ಸೂರದಾಸರ ಭ್ರಮರ ಗೀತೆಯಲ್ಲಿ ಸ್ತ್ರೀ ಸಹಜ ಅಸೂಯೆಯಿಂದ ಕೂಡಿದ ರಾಧಾದಿ ಗೋಪಿಯರ ಉಪಾಲಂಭ ಮತ್ತು ವ್ಯಂಗ್ಯ ಮಾಡುವ ಪ್ರಸಂಗಗಳನ್ನು ಬಹಳ ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಸೂರದಾಸೋತ್ತರ ಭ್ರಮರ ಗೀತೆಗಳು

ಸೂರದಾಸರ ನಂತರ ನಂದದಾಸರು (1528) 'ಭ್ರಮರ ಗೀತೆ' ಪ್ರಬಂಧ ಕಾವ್ಯ ರಚಿಸಿದರು. ಇದರಲ್ಲಿ ಉದ್ಧವ–ಗೋಪಿ ಸಂವಾದವೇ ಪ್ರಧಾನ. ಗೋಪಿಯರ ಉತ್ತರದಲ್ಲಿ ತಾರ್ಕಿಕತೆ ಎದ್ದು ಕಾಣುತ್ತದೆ. ಈ ರೀತಿಯ ತಾರ್ಕಿಕತೆ ಭಾಗವತದಲ್ಲಾಗಲೀ, ಸೂರದಾಸರ ಭ್ರಮರ ಗೀತೆಯಲ್ಲಾಗಲೀ ಕಂಡುಬರುವುದಿಲ್ಲ.

ಆಧುನಿಕ ಕಾಲದಲ್ಲಿ 'ಭಾರತೇಂದು' ಹರಿಶ್ಚಂದ್ರರು ಭ್ರಮರ ಗೀತ ಪ್ರಸಂಗದ ಕೆಲವು ಪದ್ಯಗಳನ್ನು ರಚಿಸಿದರು. ಈ ಪ್ರಸಂಗವನ್ನು ಕಥಾವಸ್ತುವಾಗಿಟ್ಟುಕೊಂಡು 'ಹರಿಔಧ'ರು 'ಪ್ರಿಯ ಪ್ರವಾಸ' ಎಂಬ ಮಹಾಕಾವ್ಯವನ್ನೇ ರಚಿಸಿದರು. ಪಂಡಿತ್ ಸತ್ಯನಾರಾಯಣ ಕವಿರತ್ನರು 'ಭ್ರಮರ–ದೂತ' ಎಂಬ ಕಾವ್ಯ ರಚಿಸಿದರು. ಇದರಲ್ಲಿ ಭಾರತ ಮಾತೆಯಾದ ಯಶೋದೆ ಕೃಷ್ಣನ ಬಳಿಗೆ ಭ್ರಮರವನ್ನು ದೂತನನ್ನಾಗಿ ಕಳುಹಿಸಿ ಅವನನ್ನು ಕರೆಸಿಕೊಳ್ಳುವ ಪ್ರಯತ್ನದ ಪ್ರಸಂಗವಿದೆ. ಜಗನ್ನಾಥದಾಸ ರತ್ನಕರರು 'ಉದ್ಧವ ಶತಕ'ವನ್ನು ರಚಿಸಿದ್ದು ಅದು ಎಲ್ಲ ಕಾವ್ಯ ಲಕ್ಷಣಗಳಿಂದ ಕೂಡಿದ್ದು ಕಲಾತ್ಮಕವಾಗಿದೆ.

ಕನ್ನಡದಲ್ಲಿ ಭ್ರಮರ ಗೀತೆ

ವಲ್ಲಭಾಚಾರ್ಯರು (1478–1530) ಕರ್ನಾಟಕದ ಬಳ್ಳಾರಿಯ ಸಮೀಪದ ಗ್ರಾಮದಲ್ಲಿ ಹುಟ್ಟಿದ ತೆಲುಗು ಬ್ರಾಹ್ಮಣರು. ಇವರು ವ್ಯಾಸರಾಯರು ಅಧ್ಯಕ್ಷತೆ ವಹಿಸಿದ್ದ ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿ ಶಾಸ್ತ್ರಾರ್ಥ ನಡೆಸಿದ್ದರು. ಇವರ ಪ್ರಭಾವದಿಂದಲೋ ಏನೋ ಸೂರದಾಸರಿಗೂ (1483–1573) ಮುನ್ನವೇ ಶ್ರೀಪಾದರಾಯರು (1422–1480), ವ್ಯಾಸರಾಯರು(1447–1539) ಮತ್ತು

ವಾದಿರಾಜರು (1480-1600) ಭಾಗವತದ ಭ್ರಮರ ಗೀತ ಪ್ರಸಂಗವನ್ನು ಕುರಿತು ಕೀರ್ತನೆಗಳನ್ನು ರಚಿಸಿದರು. ಇವರಲ್ಲಿ ವಾದಿರಾಜರು 'ಭ್ರಮರ ಗೀತಂ' ಕಾವ್ಯವನ್ನು ರಚಿಸಿದರು.

ಶ್ರೀಪಾದರಾಯರ ಭ್ರಮರಗೀತೆಯ ಪ್ರಸಂಗದಲ್ಲಿ ಗೋಪಿಯರು ಉದ್ಧವನು ಬಂದುದನು ಕಂಡು—

'ಅಂದೆಮ್ಮ ಕೊಂದ ಇಂದ್ಯಾರ ಕೊಲ್ಲಲಿ ಬಂದ'

ಎಂದಾಕ್ಷೇಪಿಸುವರು. ಶ್ರೀಪಾದರಾಯರ ಈ ರಚನೆಯಲ್ಲಿ ಅಷ್ಟಪಾದಗಳುಳ್ಳ 9 ನುಡಿಗಳಿವೆ.

ಉದ್ಧವನೊಡನೆ ಮಾತನಾಡುವಾಗ ಒಂದು ದುಂಬಿ ಝೇಂಕರಿಸಿ ಬರುತ್ತದೆ. ಗೋಪಿಯೊಬ್ಬಳು ಅದನ್ನು ಸಂಬೋಧಿಸಿ, ಅದು ಕೃಷ್ಣನ ದೂತನಿರಬೇಕೆಂದು ಭಾವಿಸಿ, ಕೇಳುತ್ತಾಳೆ —

ಭೃಂಗಾ ನಿನ್ನಟ್ಟಿದನೇ ಶ್ರೀರಂಗ......[1]

ಅವರಿಗೆ ಭೃಂಗವನ್ನು ಕಂಡಾಗ ಕೃಷ್ಣನನ್ನೇ ಕಂಡಂತಾಯಿತು—

'ನಿನ್ನ ನೋಡೆ ನಮ್ಮ ಅಚ್ಯುತನ್ನ ಕಂಡಂತಾಯಿತಯ್ಯ।[2]

ಶ್ರೀಕೃಷ್ಣನು ಆ ದುಂಬಿಯಂತೆ ಮೋಸಗಾರನೆಂಬುದನ್ನು ಹಲವಾರು ನಿದರ್ಶನಗಳ ಮೂಲಕ ವ್ಯಕ್ತಗೊಳಿಸಿದ್ದಾರೆ. ಭಾಗವತದಲ್ಲಿ ಬರುವಂತೆ ಇಲ್ಲಿ ಉದ್ಧವನ ಪ್ರವೇಶವೇ ಕಂಡುಬರುವುದಿಲ್ಲ. ಇಲ್ಲಿ ವಿರಹೋದ್ವೇಗವೇ ಪ್ರಧಾನವಾದರೂ, ಈ ಗೋಪಿಯರು ತಮಗೂ ಶ್ರೀಕೃಷ್ಣನಿಗೂ ಎಲ್ಲಿಯ ಸಂಬಂಧವೆಂದು ವಿವೇಚಿಸುವ ನುಡಿ ಬಹಳ ಅರ್ಥವತ್ತಾಗಿದೆ—

ಲಕ್ಷುಮಿರಮಣನವ ಸೂಕ್ಷುಮಗೊಲ್ಲತೇರಾವು
ಕುಕ್ಷಿಯೊಳು ಬೊಮ್ಮಾಂಡವವಗೆ ಮಕ್ಷಿಕಗಳಂತಿಪ್ಪವು
ಮೋಕ್ಷದರಸನು ಅವ ಗೋಕ್ಷೀರದಿ ತೃಪ್ತರಾವು.[3]

ಈ ಗೋಪಿಯರ ಪ್ರೇಮ ನಿಷ್ಕಪಟ, ನಿರ್ಮಲ, ನಿರಸೂಯಾಪರ. ಇಲ್ಲಿ ಗೋಪಿಯರ ಮೊರೆಯೊಂದೇ ಮೊದಲಿನಿಂದ ಕೊನೆಯವರೆಗೆ ಕೇಳಿಬರುತ್ತದೆ.

ಭಾಗವತದ ಮೂಲ ಕಥಾವಸ್ತುವನ್ನು ಯಥಾವತ್ತಾಗಿ ಕನ್ನಡದಲ್ಲಿ ನಿರೂಪಿಸಿದವರು ಕನ್ನಡ ಭಾಗವತದ ಕರ್ತೃವಾದ ನಿತ್ಯಾತ್ಮಕ ಶುಕಯೋಗಿಗಳು.

---

1. 'ಭ್ರಮರಗೀತಾ' ಶ್ರೀಪಾದರಾಯರ ಹಾಡುಗಳು. ಸಂ : ಕಾವ್ಯ ಪ್ರೇಮಿ, ಪು. 74
2. ಅದೇ, ಪುಟ. 74
3. ಅದೇ, ಪುಟ. 76

ವ್ಯಾಸರಾಯರು ಭ್ರಮರ ಗೀತದ ಪ್ರಸಂಗವನ್ನು ಕುರಿತು ಒಂದೇ ನುಡಿಯಲ್ಲಿ ಹೀಗೆ ಹಾಡಿದ್ದಾರೆ—

ಯಾಕೆ ವೃಂದಾವನ ಯಾಕೆ ಗೋಕುಲ ನಮಗೆ ।
ಯಾಕೆ ಬಂದೆಯೊ ಉದ್ಧವ ॥

ಎಂದ ಗೋಪಿಯರು

ವನಜಾಕ್ಷ ವಾಸುದೇವನ ತಂದು ತೋರಿಸಿ
ಒಡಗೂಡಿಸಯ್ಯ ನೀನೆ ಉದ್ಧವ।

ಎಂದು ಬೇಡಿಕೊಳ್ಳುವ ದೃಶ್ಯ ಬಹು ಮಾರ್ಮಿಕವಾಗಿದೆ.

ವಾದಿರಾಜಕೃತ 'ಭ್ರಮರ ಗೀತಂ' ಒಂದು ಚಿರಂತನ ಕಾವ್ಯ. ಇವರು ಮೂಲಕ್ಕೆ ಅನುಸಾರವಾಗಿಯೇ ವಿವಿಧ ರಾಗ ಮತ್ತು ತಾಳಗಳಲ್ಲಿ ಹಾಡಿರುವುದಲ್ಲದೆ, ಸಮಯೋಚಿತವಾದ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ.

ಈ ಮೇಲಿನ ಹಿಂದೀ ಮತ್ತು ಕನ್ನಡ ಭ್ರಮರ ಗೀತೆಗಳನ್ನು ವಿಹಂಗಮವಾಗಿ ನೋಡಿದಾಗ ಪರಿಶುದ್ಧವಾದ ಭಕ್ತಿ ಬುದ್ಧಿಜನ್ಯವಾದ ಜ್ಞಾನಕ್ಕಿಂತ ಮಿಗಿಲೆಂಬ ನಿತ್ಯಸತ್ಯ ಸುವೇದ್ಯವಾಗುತ್ತದೆ.

ಸೂರದಾಸರ ಭ್ರಮರ ಗೀತೆಯ ವಿಶೇಷತೆಗಳು

ಭಾಗವತದ ಭ್ರಮರ ಗೀತೆ ಪ್ರಸಂಗದ ಅಸ್ಥಿಪಂಜರವನ್ನು ತೆಗೆದುಕೊಂಡು ಸೂರದಾಸರು ಅದರಲ್ಲಿ ಪ್ರಾಣ ತುಂಬಿದ್ದಾರೆ. ಮೂಲದ ಪ್ರಸಂಗವನ್ನು ವಿಸ್ತರಿಸುವುದೇ ಅಲ್ಲದೆ ಒಂದು ಹೊಸದೃಷ್ಟಿಯಿಂದ ಯುಗಕ್ಕೆ ಅನುಕೂಲವಾಗಿ ಹೊಂದಿಸಿಕೊಂಡು ತಮ್ಮ ಪ್ರತಿಭೆಯನ್ನು ತೋರಿದ್ದಾರೆ. ಭ್ರಮರ ಗೀತೆಯ 750 ಪದಗಳಲ್ಲಿ ಸೂರದಾಸರ ಮೌಲಿಕತೆ ಎದ್ದು ಕಾಣುತ್ತದೆ.

ಉದ್ದೇಶ್ಯ : ಭ್ರಮರ ಗೀತದಲ್ಲಿ ಕವಿಯ ಉದ್ದೇಶ್ಯಗಳೆರಡು. ಮೊದಲನೆಯದು ನಿರ್ಗುಣೋಪಾಸನೆಯನ್ನು ಖಂಡಿಸಿ ಸಗುಣೋಪಾಸನೆಯನ್ನು ಮಂಡಿಸುವುದು. ಎರಡನೆಯದು ಗೋಪಿಯರ ವಿರಹವೇದನೆಯನ್ನು ಚಿತ್ರಿಸುವುದು. ಉದ್ಧವನ ನಿರ್ಗುಣ ಬ್ರಹ್ಮದ ನಿರೂಪಣೆಗೆ ಗೋಪಿಯರು ಅವಕಾಶವನ್ನೇ ಕೊಡಲಿಲ್ಲ. ಅವರು ಉದ್ಧವನನ್ನು—

ನಿರ್ಗುನ ಕೌನ್ ದೇಸ ಕೋ ವಾಸೀ ?
ಕೋ ಹೈ ಜನಕ, ಜನನಿ ಕೋ ಕಹಿಯತ, ಕೌನ್ ನಾರೀ ಕೋ ದಾಸೀ? [2]

---

1. ವ್ಯಾಸರಾಯರ ಹಾಡುಗಳು, ಸಂ. ಕಾವ್ಯಪ್ರೇಮಿ, ಪುಟ. 163
2. ಭ್ರಮರಗೀತಸಾರ, ಸಂ. ಆಚಾರ್ಯ ರಾಮಚಂದ್ರ ಶುಕ್ಲ. ಪುಟ. 19 ಪದ 64.

ನಿರ್ಗುಣ ಯಾವ ದೇಶದ ವಾಸಿ. ಅವನ ತಂದೆ ಯಾರು ? ತಾಯಿ ಯಾರು ? ಅವನ ಪತಿ ಯಾರು ? ಅವನ ದಾಸಿ ಯಾರು—ಎಂದು ಗೇಲಿ ಮಾಡುತ್ತಾರೆ. ಉದ್ಧವ ಗೋಪಿಯರ ಪ್ರೇಮಾಭಕ್ತಿಯ ಮುಂದೆ ಸೋತು ಕೃಷ್ಣನಲ್ಲಿಗೆ ಹಿಂತಿರುಗಿ ಹೋಗಿ ಹೇಳುತ್ತಾನೆ—

ಧನ್ಯ ಧನ್ಯ ಜೋ ನಾರೀ ವ್ರಜಕೀ ಬಿನು ದರಸನ ಇಹಿ ಟೇಕ್ ।
ದೇಖತ ಉಮಂಗ್ಯೋ ಪ್ರೇಮ, ಯಹಾಂ ಕೀ ಧರೀ ರಹೀ ಸಬ, ರೋಯೋ ।
ಸೂರಸ್ವಾಮಿ ಹೌಂ ರಹ್ಯೋ ಠಗೋ ಸೋ ಜ್ಯೋ ಮೃಗಚೌಂಕೋ ಭೋಯಾಂ ॥[1]

ಹೇ ಕೃಷ್ಣ ! ವ್ರಜ ನಾರಿಯರೇ ಧನ್ಯರು. ಅವರಿಗೆ ನಿನ್ನ ದರ್ಶನದ ಹಠ ಒಂದೇ. ಅವರ ಅನನ್ಯ ಪ್ರೇಮನೋಡಿ ನನ್ನೆದೆಯುಕ್ಕಿ ಬಂತು. ನನ್ನ ನಿರ್ಗುಣ ಬ್ರಹ್ಮದ ವಿಚಾರವೆಲ್ಲ ಹಾಗೆ ಉಳಿಯಿತು. ಪ್ರೇಮಪರವಶನಾಗಿ ನಾನು ಅಳತೊಡಗಿದೆ. ನಾನು ಮೋಸಗೊಂಡವನಂತೆ ನಿಂತೆ. ನನ್ನ ಸ್ಥಿತಿ ಮೃಗ ಮೋಸಹೋದಂತೆ ಆಗಿತ್ತು ಎಂದು ಉದ್ಧವ ಕೃಷ್ಣನಿಗೆ ಹೇಳಿದ ಮಾತನ್ನು ಸೂರದಾಸರು ಹೇಳಿದರು.

ಮೌಲಿಕತೆ : ಸೂರದಾಸರ ಭ್ರಮರ ಗೀತೆ ಮೌಲಿಕತೆಯಿಂದ ಕೂಡಿದ್ದು. ಅವರ ಉದ್ದೇಶ್ಯ, ಅದರ ವಿಸ್ತಾರ, ಕಥಾವಸ್ತುವಿಗಿಂತ ಸೂಕ್ಷ್ಮ ಭಾವನೆಗಳನ್ನು ವಿಸ್ತರಿಸಿ ಅನ್ಯೋಕ್ತಿಯಲ್ಲಿ ಹೇಳುವುದು, ಮಳೆಗಾಲದ ವಾತಾವರಣದಲ್ಲಿ ವಿರಹದ ಉದ್ದೀಪನ, ಮಾತನ್ನು ಯುಕ್ತಿಯಿಂದ ಹೇಳುವ ಅಭಿವ್ಯಂಜನಾ ಶೈಲಿ ಇವೆಲ್ಲವೂ ಸೂರದಾಸರ ಮೌಲಿಕ ದೃಷ್ಟಿಯಿಂದ ಹುಟ್ಟಿದುವೆ ಆಗಿವೆ.

ವಾಗ್ವಿದಗ್ಧತೆ : ಹೇಳುವ ಮಾತನ್ನು ನೇರವಾಗಿ ಹೇಳದೆ ಚಾತುರ್ಯದಿಂದ ಹೇಳಿ ಪ್ರಭಾವಪೂರ್ಣವಾಗಿ ಚಿತ್ರಿಸಿರುವರು ಸೂರದಾಸರು. ಗೋಪಿಯರು ಶ್ರೀ ಕೃಷ್ಣನ ಹಿಂದಿನ ಲೀಲೆಗಳನ್ನು ನೆನಸಿಕೊಂಡು ಹೇಳ ಬಯಸುತ್ತಾರೆ. ಅವರಿಗೆ ಆ ನೆನಪಿನಲ್ಲೇ ಸುಖ. ಸೂರದಾಸರು ಅವರ ಸ್ಮರಣೆಯನ್ನು ತಮ್ಮ ವಾಕ್‌ಚಾತುರ್ಯ ದಿಂದ ಬೇರೊಂದು ರೀತಿಯಲ್ಲೇ ವ್ಯಕ್ತಗೊಳಿಸಿದ್ದಾರೆ. ಕೃಷ್ಣ ವ್ರಜಭೂಮಿಗೆ ಬರದಿರುವುದಕ್ಕೆ ಕಾರಣ ಅವನಿಂದ ಹಿಂದಿನ ಎಲ್ಲ ಕಾರ್ಯಗಳನ್ನು ಗೋಪಿಯರು ಮಾಡಿಸುತ್ತಾರೆ ಎಂದಲ್ಲ.

ಯಹಿ ಡರ ಬಹುರಿ ನ ಗೋಕುಲ ಆಯೇ ।
ಸುನರೀ ಸಖೀ ! ಹಮಾರೀ ಕರನೀ ಸಮುಯಿಝ ಮಧುಪುರೀ ಛಾಯೇ ॥
ಅಧರಾತಿಕ ತೇಂ ಉಠಿ ಬಾಲಕ ಸಬ ಮೋಹಿಂ ಜಗೈಹೈಂ ಆಯ ॥
ಬಿನು ಪತ್ರಾನ ಬಹುರಿ ಪಠವೈಂಗೀ ಬನಹಿ ಚರಾವನ ಗಾಯ ।[2]

---

1. ಭ್ರಮರ ಗೀತಸಾರ. ಸಂ. ಆಚಾರ್ಯ ರಾಮಚಂದ್ರ ಶುಕ್ಲ. ಪುಟ. 106 ಪದ 396.
2. ಅದೇ, ಪುಟ. 80 ಪದ 302.

ಶ್ರೀಕೃಷ್ಣ ಈ ಭಯದಿಂದಲೇ ಮತ್ತೆ ಗೋಕುಲಕ್ಕೆ ಬರಲಿಲ್ಲ. ಹೇ ಸಖೀ, ಕೇಳು, ನಮ್ಮ ಕಾರ್ಯಗಳನ್ನು ನೆನೆದು ಮಥುರೆಯಲ್ಲೇ ಉಳಿದ. ವ್ರಜಭೂಮಿಯಲ್ಲಿ ಅರ್ಧರಾತ್ರಿಯಲ್ಲೇ ಎಲ್ಲ ಬಾಲಕರು ಬಂದು ಎಚ್ಚರಿಸಬಹುದೆಂದು ತಿಳಿದಿರಬಹುದು. ಮೊದಲಿನಂತೆ ಚಪ್ಪಲಿ ಇಲ್ಲದ ಬರಿಗಾಲಿನಲ್ಲೇ ತನ್ನ ಗೋಪಿಯರು ದನಕಾಯಲು ಕಾಡಿಗಟ್ಟುವರೆಂದು ತಿಳಿದಿರಬಹುದು.

ಪ್ರೇಮಮಾರ್ಗದ ಮಹತ್ವ : ಭಾಗವತದಿಂದ ಪ್ರೇರಿತರಾದ ಸೂರದಾಸರು ಪ್ರೇಮಮಾರ್ಗದ ಸುಗಮತೆಯನ್ನು ಮತ್ತು ಮಹತ್ವವನ್ನು ಎತ್ತಿಹಿಡಿದಿದ್ದಾರೆ. ಸೂರದಾಸರ ಗೋಪಿಯರಿಗೆ ರಾಸ-ಕ್ರೀಡೆಯಾಡದಂತಹ ನಿರ್ಗುಣ ಬ್ರಹ್ಮ ಬೇಕಿಲ್ಲ. ಅವರಿಗೆ ವೃಂದಾವನದಲ್ಲಾಡಿದ ಗೊಲ್ಲ ಕೃಷ್ಣನೇ ಬೇಕು. ಅವರಿಗೆ ಕೃಷ್ಣ ಪ್ರೇಮದ ಹಸಿವು. ಅವರ ಕಣ್ಣುಗಳು ಹರಿ ದರುಶನಕ್ಕೆ ಬಳಲಿವೆ. ಗೋಪಿಯರು ಉದ್ಧವನಿಗೆ ಹೇಳುತ್ತಾರೆ—

ಅಂಖಿಯಾಂ ಹರಿ ದರಸನ ಕೀ ಭೂಖೀ ।
ಕೈಸೆ ರಹೈ ರೂಪ ರಸ ರಾಚೀ ಯೇ ಬತಿಯಾಂ ಸುನಿ ರೂಖೀ ॥
ಅವಧಿ ಗನತ ಇಕಟಕ ಮಗ ಜೋಬತ ತಬ ಏತೀ ನಹೀಂ ಝೂಖೀ ।
ಅಬ ಇನ ಜೋಗ-ಸಂದೇಸನ ದಿಯಾವೋ ದುಖಿ ಪಯ ಪಿವತ ಪತೂಖೀ ।
ಸೂರ ಸಿಕತ ಹಠಿ ನಾವ ಚಲಾಯೋ ಯೇ ಸರಿತಾ ಹೈಂ ಸೂಖೀ ॥[1]

ಹೇ ಉದ್ಧವ, ನಮ್ಮ ಕಣ್ಣುಗಳು ಕೃಷ್ಣನ ರೂಪ-ಸೌಂದರ್ಯ ನೋಡಲು ಹಸಿದಿವೆ. ಮತ್ತೆ ನಿನ್ನ ಈ ಯೋಗದ ನೀರಸ ಮಾತುಗಳನ್ನು ಕೇಳಿ ಹೇಗೆ ಇದ್ದಾವು ? ಕೃಷ್ಣ ಬರುವ ಸಮಯವನ್ನು ಎಣಿಸುತ್ತ, ಎವೆ ಇಕ್ಕದೆ, ದಾರಿಯನ್ನು ನೋಡುತ್ತ ಇದ್ದರೂ ಕಣ್ಣುಗಳು ಸಂತಪ್ತವಾಗಲಿಲ್ಲ. ನಮಗೆ ಕೃಷ್ಣನ ಆ ಮುಖವನ್ನು ಮಾತ್ರೊಮ್ಮೆ ತೋರಿಸಿಬಿಡು ಸಾಕು, ದೊನ್ನೆಯಲ್ಲಿ ಹಾಲನ್ನು ಕರೆದುಕೊಳ್ಳುತ್ತ ಕುಡಿವ ಮುಖದ ಸೌಂದರ್ಯವನ್ನು. ಸೂರದಾಸರ ಗೋಪಿಯರು ಉದ್ಧವನಿಗೆ ಹೇಳುತ್ತಾರೆ—ನೀನು ಒಣಗಿದ ನದಿಯಲ್ಲಿ ಮರಳುಗಳ ಮೇಲೆ ದೋಣಿಯನ್ನು ಬಲಾತ್ಕಾರವಾಗಿ ಎಳೆಯುತ್ತಿರುವೆಯಲ್ಲಾ ?

ಪ್ರೇಮದ ಮಹತ್ವವನ್ನು ತಿಳಿಸುತ್ತ ಹೇಳುತ್ತಾರೆ—ಪ್ರೇಮ ಮಾರ್ಗದಲ್ಲಿ ಸಾವು–ಬದುಕಿನ ಚಿಂತೆಯನ್ನು ತೊರೆಯಬೇಕಾಗುತ್ತದೆ.

ಊಧೋ ಪ್ರೀತಿ ನ ಮರನ ಬಿಚಾರೈ ॥
ಪ್ರೀತಿ ಪತಂಗ ಜರೈ ಪಾವಕ ಪರಿ, ಜರತ ಅಂಗ ನಹಿಂ ಟಾರೈ ॥[2]

---

1. ಭ್ರಮರ ಗೀತಸಾರ-ಸಂ. ಆಚಾರ್ಯ ರಾಮಚಂದ್ರ ಶುಕ್ಲ ಪುಟ. 14 ಪದ 42.
2. ಅದೇ, ಪುಟ. 34 ಪದ 121

ಉದ್ಧವ, ಪ್ರೀತಿ ಮಾಡಿದವ ಸಾಯಲು ಹಿಂಜರಿಯುವುದಿಲ್ಲ. ನೋಡು, ಪತಂಗ ಪ್ರೇಮಮಾಡಿ ಬೆಂಕಿಯಲ್ಲಿ ಬಿದ್ದು ಭಸ್ಮವಾಗುತ್ತದೆ. ಅದು ರೆಕ್ಕೆ ಸುಡುತ್ತಿರುವಾಗ ಶರೀರವನ್ನು ಬೆಂಕಿಯಿಂದ ತಪ್ಪಿಸಿಕೊಳ್ಳುವುದಿಲ್ಲ.

ಗೋಪಿಯರದು ಏಕನಿಷ್ಠ ಪ್ರೇಮ. ಉದ್ಧವನಿಗೆ ಹೇಳುತ್ತಾರೆ. ನಮಗಿರುವುದೊಂದೇ ಮನಸ್ಸು. ಅದು ಶ್ಯಾಮಸುಂದರನೊಡನೆ ಹೋಯಿತು. ಈ ಅನ್ಯ ದೇವರನ್ನು ಹೇಗೆ ಪೂಜಿಸಲಾದೀತು ?

ಊ ದೋ ! ಮನ ನಾಹೀ ದಸ ಬೀಸ ॥
ಏಕ ಹುತೋ ಸೋ ಗಯೋ ಹರಿ ಕೇ ಸಂಗ, ಕೋ ಆರಾಧೆ ತುವ ಈಸ್ ?[1]

ಉದ್ಧವ ಮನಸ್ಸು ಹತ್ತಿಪ್ಪತ್ತಿಲ್ಲ. ಇದ್ದ ಒಂದೇ ಮನಸ್ಸು ಹರಿಯ ಜೊತೆಯೇ ಹೋಯಿತು. ಈ ನಿನ್ನ ದೇವರನ್ನು ಹೇಗೆ ಆರಾಧಿಸೋಣ ?

ವ್ಯಂಗ್ಯ-ವಚನಗಳು

ಸೂರದಾಸರ ಭ್ರಮರ ಗೀತೆ ವ್ಯಂಗ್ಯೋಕ್ತಿಗಳಿಂದ ತುಂಬಿಹೋಗಿದೆ. ಕುಬ್ಜೆಯನ್ನು ಕುರಿತಾಡಿದ ವ್ಯಂಗ್ಯ ಮಾರ್ಮಿಕವಾಗಿದೆ. ಗೋಪಿಯರು ಸ್ತ್ರೀ ಸಹಜ ಅಸೂಯೆಯಿಂದ ಕೃಷ್ಣನ ಪ್ರೇಮವನ್ನು ಗಳಿಸಿದ ಕುಬ್ಜೆಯನ್ನು ಕಂಡು ಕೃಷ್ಣನ ಮೇಲೆ ಕೋಪದಿಂದ ಹೇಳುತ್ತಾರೆ.

ವರು ವೈ ಕುಬ್ಜಾ ಭಲೀಕಿಯೋ ।
ಸುನಿ ಸುನಿ ಸಮಾಚಾರ ಊಧೋ ಮೋ ಕಛುಕ ಹಿಯೋ ॥
ಸೂರ ತನಿಕ ಚಂದನ ಚಢಾಯ ತನ ವ್ರಜಪತಿ ಬಸ್ಯ ಕಿಯೋ ॥
ಔರ್ ಸಕಲ ನಾಗರಿ ನಾರಿನ ಕೋ ದಾಸೀ ದಾಂವ್ ಲಿಯೋ ॥[2]

ಉದ್ಧವನ ಮಾತು ಕೇಳಿ ಗೋಪಿಯರು ಹೇಳುತ್ತಾರೆ-ಕುಬ್ಜೆ ಒಳ್ಳೆಯದನ್ನೇ ಮಾಡಿದಳು. ಕೃಷ್ಣ ಒಳ್ಳೆಯ ಪಾಠ ಕಲಿತಿರಬೇಕು. ಈ ಸುದ್ದಿ ಕೇಳಿ ನಮ್ಮ ಹೃದಯಕ್ಕೆ ತಂಪಾಯಿತು. ಇದುವರೆಗೂ ಮನಸ್ಸನ್ನು ಕದಿಯುತ್ತಲೇ ಇದ್ದ. ಈಗ ಕುಬ್ಜೆ ಅವನ ಮನಸ್ಸನ್ನು ಕದ್ದು ಸೋಲಿಸಿದಳು. ಬಹುಶಃ ಕುಬ್ಜೆ ಸ್ವಲ್ಪ ಚಂದನ ಹಚ್ಚಿ ಕೃಷ್ಣನನ್ನು ವಶಪಡಿಸಿಕೊಂಡಿರಬೇಕು. ನಗರದ ಚತುರಸ್ತ್ರೀಯರನ್ನು ಕೃಷ್ಣ ಮೋಸಗೊಳಿಸಿದ್ದ. ಅದಕ್ಕೆ ಕುಬ್ಜೆ ಸೇಡು ತೀರಿಸಿಕೊಂಡಳು.

ಗೋಪಿಯರು ನಮ್ಮ ದುಃಖ ಅರಿಯದವನು ಎಂಥಾ ಅಂತರಯಾಮಿ ಎಂದು ಅವನ ನಿರ್ಗುಣ ರೂಪವನ್ನು ಮೂದಲಿಸಿ ಉದ್ಧವನಿಗೆ ಹೇಳುತ್ತಾರೆ :

---

1. ಭ್ರಮರ ಗೀತಸಾರ-ಸಂ. ಆಚಾರ್ಯರಾಮಚಂದ್ರ ಶುಕ್ಲ, ಪುಟ. 56 ಪದ. 210.
2. ಅದೇ, ಪುಟ. 12 ಪದ 36.

ಹರಿ ಕಾಹೇ ಕೇ ಅಂತರ್ಯಾಮೀ ?
ಜೋ ಹರಿ ಮಿಲತ ನಹೀಂ ಯಹಿ ಔಸರ, ಅವಧಿ ಬತಾವತ ಲಾಮೀ ॥1

ಉದ್ಧವ, ನೀನು ಹರಿಯನ್ನು ಅಂತರ್ಯಾಮಿ ಎನ್ನುವೆ. ಅವನೆಂತ ಅಂತರ್ಯಾಮಿ. ಅಂತರ್ಯಾಮಿಯಾಗಿದ್ದರೆ ನಮ್ಮ ದುಃಖವನ್ನರಿತು ಕೂಡಲೇ ಓಡಿ ಬರುತ್ತಿದ್ದ. ಆದರೆ ಹರಿ ಬಂದು ಈ ಸ್ಥಿತಿಯಲ್ಲಿ ನೋಗುವುದಿರಲಿ, ಬರುವ ಅವಧಿಯನ್ನು ಹೆಚ್ಚಿಸುತ್ತಿದ್ದಾನೆ.

ಗೋಪಿಯರು ಕೃಷ್ಣನ ಕಪ್ಪು ಬಣ್ಣದ ಮೇಲೆ ವ್ಯಂಗ ಮಾಡುತ್ತಾರೆ.

ಮಧುಕರ ! ಕಹ ಕಾರೇ ಕೀ ಜಾತಿ ?
ಜ್ಯೋ ಜಲ ಮೀನ, ಕಮಲ ಪೈ ಅಲಿ ಕೀ, ತ್ಯೋ ನಹಿಂ ಇನಕೀ ಪ್ರೀತಿ ।
ಕೋಕಿಲ ಕುಟಿಲ ಕಪಟ ಬಾಯಸ ಛಲಿ ಫಿರಿ ನಹೀಂ ವಹಿ ಬನಜಾತಿ ।
ತೈಸೆಹಿ ಕಾನ್ಹ ಕೇಲಿ ರಸ ಅಂಚಯೋ ಬೈಠಿ ಏಕ ಲೀ ಪಾಂತಿ ॥2

ಹೇ ಮಧುಕರ (ಉದ್ಧವ), ಕಪ್ಪು ಒಂದು ಜಾತಿಯೇ ? ಇವರ ಪ್ರೀತಿ ಮೀನು ನೀರಿನೊಡನೆ, ಕಮಲ ಭ್ರಮರದೊಡನೆ ಮಾಡಿದಂತಲ್ಲ. ಅಂದರೆ ಇವರ ಪ್ರೇಮ ಸಮರ್ಪಣಭಾವದ್ದು. ಆದರೆ ಕಪ್ಪುಕೋಗಿಲೆ ಕಪಟದಿಂದ ಕಾಗೆಗೆ ಮೋಸಮಾಡುತ್ತದೆ. ತನ್ನ ಮೊಟ್ಟೆಯನ್ನು ಕಾಗೆಯ ಗೂಡಿನಲ್ಲಿಟ್ಟು, ಅದರ ಸೇವೆ ಪಡೆಯುತ್ತದೆ. ಆದರೆ ಮತ್ತೆ ಆ ವನಕ್ಕೆ ಹೋಗುವುದೇ ಇಲ್ಲ. ಹಾಗೆಯೇ ಕೃಷ್ಣ ನಮ್ಮೊಡನೆ ರಾಸಲೀಲೆಯಾಡಿ ಹೊರಟು ಹೋದ. ಆದ್ದರಿಂದ ಕೋಗಿಲೆ ಕೃಷ್ಣರಿಬ್ಬರನ್ನು ಒಂದೇ ಪಂಕ್ತಿಯಲ್ಲಿಡಬೇಕು.

ಮತ್ತೊಂದು ಕಡೆ ಕೃಷ್ಣನ ನಿಷ್ಠುರತೆಯನ್ನು ಕಂಡು ಭ್ರಮರವನ್ನು ತೊಲಗೆಂದು ವ್ಯಂಗೋಕ್ತಿಗಳಿಂದ ನುಡಿಯುತ್ತಾರೆ.

ಜಾ ಜಾ ರೇ ಭೌಂರಾ । ದೂರ ದೂರ ।
ರಂಗ ರೂಪ ಔ ಏಕಹಿ ಮೂರತಿ, ಮೆರೋ ಮನ ಕಿಯೋ ಚೂರ ಚೂರ ।
ಜೌ ಲೌಂ ಗರಜ ನಿಕಟ ತೌ ಲೌಂ ರಹೈ ಕಾಜ ಸರೆ ಪೈ ರಹೈ ಘೂರ ।
ಸೂರ ಶ್ಯಾಮ ಅಪನೀ ಗರಜನ ಕೋಂ ಕಲಿಯನ ರಸ ಲೈ ಘೂರ ಘೂರ ॥3

ಹೇ ಭ್ರಮರ ದೂರ ಹೋಗು. ನಿನ್ನ, ರಂಗ, ರೂಪ ಮತ್ತು ಆಕೃತಿ ಕೃಷ್ಣನಂತೆಯೇ ಇದೆ. ಒಬ್ಬ ಗೋಪಿ ಹೇಳುತ್ತಾಳೆ–ಇಂತಹ ಆಕೃತಿಯುವ ನನ್ನ ಮನಸ್ಸನ್ನು ಚೂರು ಚೂರು ಮಾಡಿದ. ಕಪ್ಪು ಜನರ ಸ್ವಭಾವವೆಂದರೆ ತನ್ನ

---

1. ಭ್ರಮರ ಗೀತಸಾರ- ಸಂ. ಆಚಾರ್ಯ ರಾಮಚಂದ್ರ ಶುಕ್ಲ, ಪುಟ. 12 ಪದ 37
2. ಅದೇ, ಪುಟ. 43, ಪದ 157
3. ಅದೇ, ಪುಟ. 93–94 ಪದ 352

ಸ್ವಾರ್ಥವಿರುವವರೆಗೂ ಹತ್ತಿರವಿದ್ದು ಕೆಲಸವಾದ ಮೇಲೆ ದೂರ ಹೋಗುವುದು. ಸೂರದಾಸರ ಗೋಪಿಯರು ದುಂಬಿಗೆ ಹೇಳುತ್ತಾರೆ. ನೀನು ಕೆಲಸ ಬಿದ್ದಾಗ ಹೊಗಳುತ್ತ ತಿರುಗಿ ರಸ ಹೀರುವೆ. ಕೆಲಸವಾದ ಮೇಲೆ ದೂರಹೋಗುವೆ.

ವಿನಯ – ಸೂರದಾಸರ ಗೋಪಿಯರು ವಿರಹದ ಉದ್ವೇಗದಿಂದ ಹಳಿಯುವ, ನಿಂದಿಸುವ, ವ್ಯಂಗದ ಮಾತುಗಳನ್ನಾಡಿದಂತೆ ಉದ್ಧವನೊಡನೆ ವಿನಯದಿಂದಲೂ ನಡೆದು ಕೊಂಡಿದ್ದಾರೆ.

ಮಧುಕರ ! ತುಮ ಹೌ ಸ್ಯಾಮ–ಸಖಾಯೀ ।
ಪಾ ಲಾಗೋಂ ಯಹ ದೋಷ ಬಕಸಿಯೋ ಸಮ್ಮುಖ ಕರತ ಢಿಠಾಈ ॥
ಕೌನೇ ರಂಕ ಸಂಪದಾ ಬಿಲಸೀ ಸೋವತ ಸಪನೇ ಪಾಈ ? [1]

ಜ್ಞಾನ ಮಾರ್ಗದ ಉಪದೇಶವನ್ನು ಕೇಳಿ ಗೋಪಿಯರು ಕೃಷ್ಣನ ಮೇಲಿನ ತಮ್ಮ ನಿಷ್ಠೆಯನ್ನು ವ್ಯಕ್ತಗೊಳಿಸುತ್ತಾ ವಿನಯದಿಂದ ಹೇಳುತ್ತಾರೆ–ಹೇ ಮಧುಕರ (ಉದ್ಧವ). ನೀನು ಕೃಷ್ಣನ ಸ್ನೇಹಿತ. ನಿನ್ನೊಡನೆ ನಾವು ಮಾತನಾಡುವುದೇ ಧೃಷ್ಟತೆ. ನಾವು ನಿನ್ನ ಕಾಲಿಗೆ ಬೀಳುತ್ತೇವೆ. ನಮ್ಮನ್ನು ಕ್ಷಮಿಸು. ನಾವು ನಮ್ಮ ಮಾತನ್ನು ಅವಶ್ಯವಾಗಿ ಹೇಳುತ್ತೇವೆ. ನೀ ಹೇಳುವಂತೆ ನಿರ್ಗುಣ ಬ್ರಹ್ಮನಿಂದ ಸುಖ ಸಿಗುತ್ತದೆ ಎಂಬುದು ಅಸತ್ಯ. ಯಾವನಿಗಾದರೂ ನಿದ್ರಿಸುವಾಗ ಸ್ವಪ್ನದಲ್ಲಿ ಸಂಪತ್ತು ಸಿಕ್ಕರೆ ಅವನು ಆ ಸಂಪತ್ತಿನ ಒಡೆಯನಾಗುವನೇನು ? ನಿರ್ಗುಣ ಬ್ರಹ್ಮನ ಮಾತು ಸ್ವಪ್ನದಷ್ಟೇ ಅಸತ್ಯ ಎಂಬುದು ಅವರ ಅಭಿಪ್ರಾಯ.

ಮತ್ತೊಂದು ಕಡೆ ವಿಯೋಗಿನಿ ರಾಧೆ ಉದ್ಧವನನ್ನು ಹೀಗೆ ಪ್ರಾರ್ಥಿಸುತ್ತಾಳೆ–
ಊಧೋ ಜೂ ! ಮೈಂ ತಿಹಾರೇ ಚರನನ ಲಾಗೌಂ ಬಾರಕ ಯಾ ವ್ರಜ ಕರಬಿ ಭಾಂವರೀ ।
ನಿಸಿ ನ ನೀಂದ ಆವೈ, ದಿನ ನ ಭೋಜನ ಭಾವೈ, ಮಗ ಜೋವತ ಭಈ ದೃಷ್ಟಿ ಝಾಂವರೀ॥
ಬಹೈ ಬೃಂದಾವನ ಸ್ಯಾಮ ಸಘನ ಬನ, ಬಹೈ ಸುಭಗ ಸರಿ ಸಾಂವರೀ ।
ಏಕ ಸ್ಯಾಮ ಬಿನು ಸ್ಯಾಮ ನ ಭಾವೈ ಸುಧಿ ನ ರಹೀ ಜೈಸೇ ಬಕತ ಬಾವರೀ ।
ಲಾಜ ಛಾಂಡಿ ಹಮ ಉತಹಿಂ ಆವತೀಂ ಚಲಿ ನ ಸಕತಿ ಆವೈ ಬಿರಹ–ತಾಂವರೀ ।
ಸೂರದಾಸ ಪ್ರಭು ಬೇಗಿ ದರಸ ದೀಜೈ ಹೋಯ ಹೈ ಜಗಮೇಂ ಕೀರತಿ ರಾವರೀ ॥[2]

ರಾಧೆ ದೈನ್ಯದಿಂದ ಉದ್ಧವನಿಗೆ ಹೇಳುತ್ತಾಳೆ–ನಾನು ನಿನ್ನ ಕಾಲಿಗೆ ಬೀಳುತ್ತೇನೆ. ಹೇಗಾದರೂ ಒಮ್ಮೆ ಶ್ರೀಕೃಷ್ಣನ ವ್ರಜಭೂಮಿಯಲ್ಲಿ ಅಡ್ಡಾಡಿ ಬಾ. ನನಗೆ ರಾತ್ರಿ ನಿದ್ದೆ ಹತ್ತದು, ಹಗಲು ಊಟ ಸೇರದು. ಕೃಷ್ಣನ ದಾರಿ ಕಾದು ಕಾದು ದೃಷ್ಟಿಯೇ ಮಂಕಾಗಿದೆ. ಈ ವೃಂದಾವನ ಮೊದಲಿದ್ದದ್ದೆ. ಇಲ್ಲಿರುವ ಶ್ಯಾಮಲ ವನ ಮತ್ತು ಶ್ಯಾಮಲ ಕಾಲಿಂದೀ ನದಿ ಕೂಡ ಮೊದಲಿನವೇ. ಆದರೆ

---

1 'ಭ್ರಮರ ಗೀತ ಸಾರ'. ಸಂ. ಆಚಾರ್ಯ ರಾಮಚಂದ್ರ ಶುಕ್ಲ. ಪುಟ. 39. ಪದ 142.

2 ಅದೇ, ಪುಟ. 98. ಪದ 369.

ಶ್ಯಾಮಲ ಕೃಷ್ಣನಿಲ್ಲದೆ ನನಗಾವ ಶ್ಯಾಮಲ ವಸ್ತುವೂ ಚೆನ್ನಾಗಿ ಕಾಣಿಸುವುದಿಲ್ಲ. ನನಗೆ ನನ್ನ ಮೈಮೇಲೆಚ್ಚರವೇ ಇಲ್ಲ. ಹುಚ್ಚಿಯಂತಾಗಿ ಮಾತಾಡುವೆ. ಲಜ್ಜೆ ಬಿಟ್ಟು ನಾನು ನಿನ್ನಲ್ಲಿಗೆ ಬರುತ್ತಿದ್ದೆ. ಆದರೆ ನಡೆಯಲು ಶಕ್ತಿಯೇ ಇಲ್ಲ. ನಡೆಯ ಹೊರಟರೆ ವಿರಹದಿಂದಾಗಿ ತಲೆಸುತ್ತುತ್ತದೆ. ಆದ್ದರಿಂದ ಕೃಷ್ಣನನ್ನು ಕುರಿತು ಹೇಳುತ್ತಾಳೆ– ಹೇ ಪ್ರಭು ಕೂಡಲೇ ಬಾ. ಈ ಸಾಯುತ್ತಿರುವ ಗೋಪಿಯರ ಪ್ರಾಣ ರಕ್ಷಿಸಿ ಕೀರ್ತಿಪಡೆ.

ವಿಯೋಗ ವರ್ಣನೆ

ಗೋಪಿಯರ ಕೃಷ್ಣನ ಅಗಲಿಕೆಯಿಂದಾಗಿ ಹರಿಸಿದ ಕಣ್ಣೀರು ಒಂದೇ ಸಾಹಿತ್ಯದ ಅಕ್ಷಯನಿಧಿ. ಈ ವಿಯೋಗದ ವರ್ಣನೆ ನಿಜಕ್ಕೂ ಹೃದಯಸ್ಪರ್ಶಿ. ಕೃಷ್ಣನೊಡನೆ ಸಂಪರ್ಕವಿದ್ದುದ್ದರಿಂದ ಅವರ ವಿಯೋಗ ಮತ್ತೂ ದಾರುಣ. ಒಂದಿನ ಬಾಲ್ಯದ ಪ್ರೇಮವನ್ನು ಕಡೆಗಾಣಿಸುವಂತಿಲ್ಲ. ಆ ಪ್ರೇಮದ ನೆನಪಿನಿಂದ ಅವರ ದುಃಖ ಇಮ್ಮಡಿಯಾಗುತ್ತದೆ. ಉದ್ಧವನಿಗೆ ಹೇಳುತ್ತಾರೆ—

ಲರಿಕಾಯೀ ಕೋ ಪ್ರೇಮ, ಕಹೌ ಅಲಿ, ಕೈಸೇ ಕರಿಕೈ ಛೂಟತ ?
ಕಹಾ ಕಹೌಂ ವ್ರಜನಾಥ-ಚರಿತ ಅಬ ಅಂತರಗತಿ ಯೋಂ ಲೂಟತ ॥
ಚಂಚಲ ಚಾಲ ಮನೋಹರ ಚಿತವನಿ, ವಹ ಮುಸುಕಾನಿ ಮಂದ ಧುನಿ ಗಾವತ ।
ನಟವರ ಭೇಸ ನಂದನಂದನ ಕೋ ವಹ ವಿನೋದ ಗೃಹ ಬನ ತೇಂ ಆವತ ॥
ಚರನಕಮಲ ಕೀ ಸಪಥ ಕರತಿ ಹೌಂ ಯಹ ಸಂದೇಸ ಮೋಹಿಂ ವಿಷ ಸಮ ಲಾಗತ ।
ಸೂರದಾಸ ಮೋಹಿ ನಿಮಿಷ ನ ಬಿಸರತ ಮೋಹನ ಮೂರತಿ ಸೋವತ ಜಾಗತ ॥

ಉದ್ಧವ, ನೀನೇ ಹೇಳು ನಮ್ಮ ಪ್ರೇಮ ಬಾಲ್ಯ ಕಾಲದ್ದು. ಅದು ಹೇಗೆ ಬಿಡಲು ಸಾಧ್ಯ. ವ್ರಜನಾಥ ಶ್ರೀಕೃಷ್ಣನ ಚರಿತ್ರೆಯನ್ನು ಎಷ್ಟು ಬಣ್ಣಿಸಲಿ. ಅವನ ಸೌಂದರ್ಯ ನನ್ನ ಮನಸ್ಸನ್ನು ಸೂರೆಗೊಂಡಿತ್ತು. ಅವನ ನಡಿಗೆ ಚಂಚಲವಾದ್ದು. ಮನಸ್ಸನ್ನು ಹರಿಸುವಂತಹ ಮನೋಹರ ಚಿತವನ. ಅವನ ಮಂದಹಾಸ, ಮಂದಸ್ವರದಲ್ಲಿ ಹಾಡುತ್ತಾ ಮನೆಗೆ ಬರುವಾಗ ಮನೋಹರವಾಗಿ ಕಾಣುತ್ತಿದ್ದ. ಆಗ ಅವನ ನಟವರ ವೇಷ, ಅವನ ವಿನೋದ ಮತ್ತೆ ಮತ್ತೆ ನೆನಪಾಗುತ್ತದೆ. ಉದ್ಧವ ನಾನು ಕೃಷ್ಣನ ಚರಣ ಕಮಲದಾಣೆ ಹೇಳುತ್ತೇನೆ–ನಿನ್ನ ನಿರ್ಗುಣ ಸಂದೇಶ ವಿಷವಂತೆ. ಸೂರದಾಸರ ಗೋಪಿ ಹೇಳುತ್ತಾಳೆ—ನಾನು ಕೃಷ್ಣನ ಮೋಹಕ ಮೂರ್ತಿಯನ್ನು ನಿದ್ದೆಯಲ್ಲಿ, ಎಚ್ಚರದಲ್ಲಿ, ಯಾವ ಕ್ಷಣಕ್ಕೂ ಮರೆಯಲಾರೆ.

---

1 ಪುಟ. 12. ಪದ 34. ಭ್ರಮರ ಗೀತ ಸಾರ. ಸಂ. ಆಚಾರ್ಯ ರಾಮಚಂದ್ರ ಶುಕ್ಲ.

ವಿರಹದಲ್ಲಿ ಮಳೆ ಮತ್ತು ಬೇಸಿಗೆ ಕಾಲಗಳು ಗೋಪಿಯರಿಗೆ ಕಷ್ಟದಾಯಕ

ಬ್ರಜತೈಂ ದ್ವೈ ಋತು ಪೈ ನಗಈ
ಪಾವಸ ಅರು ಗ್ರೀಷಮ ಪ್ರಚಂಡ, ಸಖಿ ! ಹರಿ ಬಿನು ಅಧಿಕ ಭಈ ।।[1]

ಕೃಷ್ಣ ಮಥುರೆಗೆ ಹೋದಂದಿನಿಂದ ಬ್ರಜಭೂಮಿಯಲ್ಲಿ ಎರಡು ಋತುಗಳಿವೆ. ಹೇ ಸಖಿ ! ಒಂದು ಮಳೆಗಾಲ ಮತ್ತೊಂದು ಬೇಸಿಗೆ ಕಾಲ. ಇವೆರಡು ಶ್ರೀಕೃಷ್ಣ ನಿಲ್ಲದೆ ಅಧಿಕ ಪ್ರಚಂಡವಾಗಿವೆ.

ಸಂಯೋಗದಲ್ಲಿ ಆನಂದದಾಯಕ ವಸ್ತುಗಳೇ ವಿಯೋಗದಲ್ಲಿ ದುಃಖದಾಯಕ ವಾಗುತ್ತವೆ. ಕೃಷ್ಣನೊಡನೆ ವಿಹರಿಸುತ್ತಿದ್ದ ವನಗಳು ಶತ್ರುಗಳಾಗಿವೆ.

ಬಿನ ಗೋಪಾಲ ಬೈರಿನ ಭಈ ಕುಂಜೈಂ ।
ತಬ ಯೇ ಲತಾ ಲಗತಿ ಅತಿ ಸೀತಲ, ಅಬ ಭಈ ವಿಷಮ ಜ್ವಾಲಕೀ ಪುಂಜೈಂ ।
ವೃಥಾ ಬಹತಿ ಜಮುನಾ, ಖಗ ಬೋಲತ, ವೃಥಾ ಕಮಲ ಫೂಲೈಂ ಅಲಿ ಗುಂಜೈಂ॥[2]

ಉದ್ಧವನಿಗೆ ಗೋಪಿಯರು ಹೇಳುತ್ತಾರೆ—ಗೋಪಾಲನಿಲ್ಲದೆ ಈ ಸುಖ ದಾಯಕ ಕುಂಜಗಳು ಶತ್ರುಗಳಾಗಿವೆ. ಕೃಷ್ಣನಿದ್ದಾಗ ಈ ಲತೆಗಳು ಶೀತಲವಾಗಿದ್ದವು. ಆದರೀಗ ಅವು ಬೆಂಕಿಯಾಗಿ ನಮ್ಮನ್ನು ಸುಡತೊಡಗಿವೆ. ಯಮುನೆ ವ್ಯರ್ಥ ವಾಗಿ ಹರಿಯುತ್ತಿದೆ, ಪಕ್ಷಿಗಳು ವ್ಯರ್ಥವಾಗಿ ಕಲರವ ಮಾಡುತ್ತಿವೆ, ಕಮಲ ವ್ಯರ್ಥ ವಾಗಿ ಅರಳುತ್ತಿವೆ ಮತ್ತು ಭ್ರಮರದ ಝೇಂಕಾರದಲ್ಲಿ ಯಾವ ಮೋಹಕತೆಯೂ ಇಲ್ಲ.

ಕಣ್ಣೀರು– ಗೋಪಿಯರು ಕೃಷ್ಣನ ಆಗಲಿಕೆಯಿಂದಾಗಿ ಕ್ಷಣಕ್ಷಣಕ್ಕೂ ಕಣ್ಣೀರು ಸುರಿಸುತ್ತಾರೆ. ಗೋಪಿಯರ ಕಣ್ಣೀರಿನ ವರ್ಣನೆ ನೋಡಿ–

ನಿಸಿ ದಿನ ಬರಸತ ನೈನ ಹಮಾರೆ ।
ಸದಾ ರಹತಿ ಪಾವಸ ರಿತು ಹಮ ಪೈ ಜಬ ತೇಂ ಸ್ಯಾಮ ಸಿಧಾರೆ'।
ದೃಗ ಅಂಜನ ಲಾಗತ ನಹೀಂ ಕಬಹೂಂ, ಉರ ಕಪೋಲ ಭಯೇ ಕಾರೇ ।।
ಕಂಚುಕಿ ನಹೀಂ ಸೂಖತ ಸುನು ಸಜನೀ ! ಉರ–ಬಿಚ ಬಹತ ಪನಾರೇ ।।
ಸೂರದಾಸ ಪ್ರಭು ಅಂಬು ಬಢಯೋ ಹೈ, ಗೋಕುಲ ಲೇಹು ಉಬಾರೇ ।
ಕಹ ಲೌಂ ಕಹೌಂ ಸ್ಯಾಮಘನ ಸುಂದರ ವಿಕಲ ಹೋತ ಅತಿ ಭಾರೇ ॥[3]

ಗೋಪಿಯರು ವಿರಹ ದುಃಖದಿಂದ ಹೇಳುತ್ತಾರೆ–ನಮ್ಮ ಕಣ್ಣುಗಳು ಹಗಲೂ ರಾತ್ರಿ ಸುರಿಸುತ್ತವೆ. ಕೃಷ್ಣ ಹೋದಂದಿನಿಂದ ಸದಾ ಅಳುತ್ತಿರುವುದರಿಂದ ಮಳೆ

---

3. ಅದೇ, ಪುಟ. 84 ಪದ 316.

ಸಹಾಯಕ ಗ್ರಂಥಗಳು

1 ಭ್ರಮರಗೀತ ಸಾರ ಸಂ. ಆಚಾರ್ಯ ರಾಮಚಂದ್ರ ಶುಕ್ಲ, ಪುಟ. 92. ಪದ 346.

2 ಅದೇ, ಪುಟ. 25 ಪದ 85

ಗಾಲವೇ ಬಂದಂತಾಗಿದೆ. ನಮ್ಮ ಕಣ್ಣಲ್ಲಿ ಕಾಡಿಗೆ ನಿಲ್ಲುವುದೇ ಇಲ್ಲ. ಕಣ್ಣೀರಲ್ಲಿ ತೊಯ್ದು ಹೋಗುತ್ತವೆ. ಅದರಿಂದ ನಮ್ಮ ಎದೆ, ಕಪೋಲಗಳೆಲ್ಲ ಕಪ್ಪಾಗುತ್ತವೆ. ನಮ ರವಿಕೆ ಒಣಗುವುದೇ ಇಲ್ಲ, ಕಾರಣ ಹೃದಯದ ಮಧ್ಯೆ ಕಣ್ಣೀರು ಧಾರೆಯಾಗಿ ಹರಿಯುತ್ತದೆ. ಸೂರರ ಗೋಪಿಯರು ಹೇಳುತ್ತಾರೆ— ಈ ವ್ರಜದಲ್ಲಿ ಪ್ರವಾಹವೇ ಬಂದಿದೆ. ಗೋಕುಲವ ಕಾಪಾಡು. ಹೇ ಕೃಷ್ಣ, ನಾವೆಷ್ಟು ಹೇಳೋಣ. ನಾವು ಹೆಚ್ಚು ವ್ಯಾಕುಲರಾಗಿದ್ದೇವೆ. ಬೇಗ ದರ್ಶನ ಕೊಡು.

ಕೊನೆಗೆ ಗೋಪಿಯರು ಉದ್ಧವನಿಗೆ ಹೇಳಿ ಕಳುಹಿಸುತ್ತಾರೆ–ಕೃಷ್ಣನಿಲ್ಲದೆ ಜೀವಿಸಲಾರೆವೆಂದು. ರಾಧೆ ಹೇಳುತ್ತಾಳೆ—ಉದ್ಧವ, ಕೃಷ್ಣನಿಗೆ ನನ್ನ ಚರಣ ಸ್ಪರ್ಶಗಳು. ಕೃಷ್ಣನ ದರ್ಶನವಿಲ್ಲದೆ ಬದುಕುವುದು ದುಸ್ಸಹವಾಗಿದೆ. ಶರದ ಚಂದ್ರನು ಶತ್ರುವಾಗಿ ತಾಪ ಕೊಡುತ್ತಿದ್ದಾನೆ.

ಉದ್ಧವ ಗೋಪಿಯರ ಏಕನಿಷ್ಠ, ಸಮರ್ಪಣ ಪ್ರೇಮಾ ಭಕ್ತಿಯಿಂದ ಪ್ರಭಾವಿತನಾಗಿ ತನ್ನ ಜ್ಞಾನ ಗರ್ವವನ್ನು ಕಳೆದುಕೊಂಡು, ನಿರ್ಗುಣೋಪದೇಶ ಇವರ ಮುಂದೆ ವ್ಯರ್ಥವೆಂದು ತಿಳಿದು ಹಿಂತಿರುಗುತ್ತಾನೆ. ಕೃಷ್ಣ ಈ ಎಲ್ಲ ಸಮಾಚಾರ ತಿಳಿದು ಹೇಳುತ್ತಾನೆ-ಉದ್ಧವ ನನ್ನಿಂದಲು ವ್ರಜ ಭೂಮಿಯನ್ನು ಮರೆಯಲಾಗುತ್ತಿಲ್ಲ. ಯಮುನೆ, ವನ, ಪಸು, ಗೋಪಿಯರು, ಗೊಲ್ಲರು ಎಲ್ಲ ಸ್ಮರಣೀಯ. ವ್ರಜಭೂಮಿಯ ಮುಂದೆ ಈ ಮಥುರಾ ನಗರಿಯ ವೈಭವ ಏನೂ ಇಲ್ಲ. ಕೃಷ್ಣ ತಾನು ವ್ಯರ್ಥವಾಗಿ ಉದ್ಧವನೊಡನೆ ಯೋಗ ಸಂದೇಶ ಕಳುಹಿಸಿ ಗೋಪಿಯರಿಗೆ ನೋವುಂಟುಮಾಡಿದ ಎಂದು ನಿಟ್ಟುಸಿರುಬಿಡುತ್ತಾನೆ.

ಹೀಗೆ ಸೂರದಾಸರ ಭ್ರಮರ ಗೀತೆ ವ್ರಜ ಭಾಷೆಯಲ್ಲಿ, ಮಧುರ ಶೈಲಿಯಲ್ಲಿ ಹೊರಹೊಮ್ಮಿ ಜ್ಞಾನ, ಯೋಗಗಳಿಗಿಂತ ಭಕ್ತಿಯು ಹಿರಿದೆಂದು ಕೊಂಡಾಡಿದೆ.

ಸಹಾಯಕ ಗ್ರಂಥಗಳು

1. ಸೂರದಾಸ–ಸಂ. ಹರಬಂಶಲಾಲ ಶರ್ಮ
2. ಸೂರದಾಸಕೃತ ಭ್ರಮರ ಗೀತ_ಸಾರ-ಸಂ. ಆಚಾರ್ಯ ರಾಮಚಂದ್ರ ಶುಕ್ಲ
3. ಹಿಂದೀ ಸಾಹಿತ್ಯಕಾ ಇತಿಹಾಸ–ಲೇಖಕ ,,
4. ಶ್ರೀಪಾದರಾಯರ ಹಾಡುಗಳು–ಸಂ. ಕಾವ್ಯಪ್ರೇಮಿ
5. ವ್ಯಾಸರಾಯರ ಹಾಡುಗಳು ,,
6. ವಾದಿರಾಜರ ಹಾಡುಗಳು ,,

“ಆಗ ಎಲ್ಲ ಇತ್ತು”

ಎಚ್. ಎಚ್. ಗಂಗಾಧರಾಚಾರ್

ಆಗ ಎಲ್ಲ ಇತ್ತು,
ಉಟ್ಟು-ತೊಟ್ಟು, ತಿಂದು-ತೇಗಿ, ಬೆಳೆದು ಮರವಾಗಬೇಕೆಂಬ ಬಯಕೆ ಇತ್ತು.
ಅಜ್ಜಿಯ ಕಥೆಗಳಲ್ಲಿ ರಾಜಕುಮಾರ–ರಾಜಕುಮಾರಿಯರ
ಗಂಧರ್ವ ಲೋಕ ತೆರೆದುಕೊಳ್ಳುತ್ತಿತ್ತು.
ಹಬ್ಬ ಹರಿದಿನಗಳಲ್ಲಿ ಅಮ್ಮನ ಅಡಿಗೆ ರುಚಿ
ನಾಲಿಗೆಯಲ್ಲಿ ನೀರೂರಿಸುತ್ತಿತ್ತು.
ಅಪ್ಪತಂದ ಹೊಸಬಟ್ಟೆ ಹೊಲಿಸಿಕೊಳ್ಳುವವರೆಗೂ ಜೀವ ಚಡಪಡಿಸುತ್ತಿತ್ತು.
ಆಗ ಎಲ್ಲ ಇತ್ತು, ನಿಜ...ಆಗ ಎಲ್ಲ ಇತ್ತು.
ಗೋಲಿ ಬುಗುರಿ ಚೆಂಡಾಟಗಳಲ್ಲಿ ಸೋತರೂ ಪಟ್ಟು ಬಿಡದೆ
ಮತ್ತೆ ಮತ್ತೆ ಆಡತೊಡಗಿದ್ದು,
ಮರ ಕೋತಿಯಾಟದಲ್ಲಿ ಕೋತಿಯಂತೆ
ಕೊಂಬೆಯಿಂದ ಕೊಂಬೆಗೆ ಜಿಗಿದದ್ದು,
ಈಜಾಟದಲ್ಲಿ ಮೀನಾಗಿ ನೀರ ಸೀಳಿದ್ದು,
ಒಮ್ಮೆ ಮುಳುಗಿ, ನೀರು ಕುಡಿಯುತ್ತಿದ್ದಾಗ
ನಮ್ಮಣ್ಣ ದಡಕ್ಕೆಳೆದು ಹಾಕಿದ್ದು,
ಬರಿಯ ನೆನಪಲ್ಲ, ನನ್ನ ಅಂತರಾಳಕ್ಕಿಳಿದ ತಾಯಿ ಬೇರುಗಳು.
ಉಪಾಧ್ಯಾಯರು ಹೇಳಿಕೊಟ್ಟ ಪದ್ಯ ಉರು ಹೊಡೆದು.
ಹೇಳುವಾಗ ತಡವರಿಸಿ, ಬೆತ್ತಕ್ಕೆ ಕೈಯೊಡ್ಡಿ
ಚುರುಗುಟ್ಟತೊಡಗಿದ ಕೈಯ ತೊಡೆಸಂದಿ ಸಿಕ್ಕಿಸಿಕೊಂಡು
ತುಟಿ ಕಡಿದಿದ್ದು, ಬೇತಾಳ ಕಥೆಯಲ್ಲ;
ದೇಹದಂಚಿಂಚಿನಲ್ಲೂ ಅದರ ಹಾಡಿದೆ; ಅದರದೇ ಆದ ರಾಗವಿದೆ.
ಯುಗಾದಿ ಹಬ್ಬದಲ್ಲಿ ನನ್ನ ಒಡಿತಂದು, ಮೈಗೆ ಹರಳೆಣ್ಣೆ ಹಚ್ಚಿ.
ತುಂಬಿದ ಹಂಡೆಯ ಬಿಸಿನೀರು ಎರೆಯುತ್ತಿದ್ದ ಅಮ್ಮನ ಸಡಗರ,
ಹಬ್ಬದ ಅಡಿಗೆಗೆ ಅಕ್ಕಿ-ಬೇಳೆ-ಬೆಲ್ಲ ಖರೀದಿಸಿ ತರುತ್ತಿದ್ದ ಅಪ್ಪನ ಜವಾಬ್ದಾರಿ
ಅಕ್ಕ ತಂಗಿ. ಅಣ್ಣ ತಮ್ಮಂದಿರ ಬಾಲ್ಯದೊಡನಾಟ

ನನ್ನೆದೆ ತುಂಬಿವೆ ; ಮಾತುಗಳ ಮರೆಸಿವೆ.
ಎಳನೀರು ಕುಡಿಯುವ ಹಂಬಲಕ್ಕೆ ಮರಹತ್ತಿ, ತೊಡೆ ತರಚಿಕೊಂಡದ್ದು,
ಸೈಕಲ್ ಕಲಿಯಲು ಹೋಗಿ ಬಿದ್ದು, ಮಂಡಿಯೊಡೆದು ಕೊಂಡದ್ದು,
ಜಾತ್ರೆಯಲ್ಲಿ ಕಡಲೆ-ಪುರಿ-ಬತ್ತಾಸುಗಳ ಖರೀದಿಸಿ,
ದಾರಿಯುದ್ದಕ್ಕೂ ತಿನ್ನುತ್ತ ಹರಟೆ ಕೊಚ್ಚಿದ್ದು,
ಬರಿಯ ನೆನಪಲ್ಲ :
ಆ ಭೂಮಿಯ ಆಳದಲ್ಲೆಲ್ಲೊ ನನ್ನ ಬೇರುಗಳಿವೆ, ಅಲ್ಲೀ ನೀರಿನ ಒರತೆಯಿದೆ.

ಆಗ ಎಲ್ಲ ಇತ್ತು, ನಿಜ,
ಸೋದರತ್ತೆಯ ಮಗಳ ಮಲ್ಲಿಗೆಯ ನಗೆಯಿತ್ತು,
ಮಾವನ ಮನೆಯ ಆದರದ ಸುಸ್ವಾಗತವಿತ್ತು
ಬದುಕಿಗೆ ಗುರಿಯಿತ್ತು, ಜೀವನವಿತ್ತು, ಸೆಳೆತವಿತ್ತು ಎಲ್ಲ ಇತ್ತು,
ಈಗ ಏನಿದೆ ?
ನೆನಪಿನ ಈ ಮುತ್ತುರತ್ನಗಳ ಹೊರತು
ಈಗ ಏನಿದೆ ?

ತಬ್ಬಲಿಯು ನೀನಾದೆ ಮಗನೆ ಕಾದಂಬರಿಯಲ್ಲಿ ಧರ್ಮಪ್ರಜ್ಞೆ, ಆಧುನಿಕ ವಿಚಾರಗಳ ಮಧ್ಯೆ ಸಂಘರ್ಷ*

ಮಿಣಕನಗುರಿಕಿ ದಿವಾಕರ

ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ಕೊಡುವ ನಿರ್ಣಯ ಹೊಸದೇನಲ್ಲ. ವಿಚಾರ ಚಿಂತನೆ ನಡೆಸುವಂತೆ ಕಂಡುಬಂದರೂ ಕೂಡ ಅವರ ಹಿಂದೆ (ಭೈರಪ್ಪನವರಲ್ಲಿ) ಒಂದೂ ಪ್ರಜ್ಞೆ ಕೆಲಸ ಮಾಡುತ್ತಿರುತ್ತದೆ. ಆದ್ದರಿಂದ ಅವರು ಹೇಳುವುದರಲ್ಲಿ ಮತೀಯ ಅಂಶ ಎದ್ದು ಕಾಣುತ್ತದೆ. ಭೈರಪ್ಪನವರು ತಮ್ಮ ಕೃತಿಗಳಲ್ಲಿ ಆಧುನಿಕತೆಗೂ ಸಂಪ್ರದಾಯಕ್ಕೂ ತೊಯ್ದಾಟ ತಂದು ಕೊನೆಯಲ್ಲಿ ಸಂಪ್ರದಾಯದ ಕಡೆಗೆ ಓದುಗರನ್ನು ಎಳೆದೊಯ್ಯುತ್ತಾರೆ. ಭೈರಪ್ಪನವರು ತಮ್ಮ ಕೃತಿಗಳಲ್ಲಿ ಮೂಲತತ್ವದ ಚಿಂತನೆಯನ್ನು ಪೂರ್ವನಿಶ್ಚಿತ ರೂಪದಲ್ಲಿ ಧರ್ಮಶಾಸ್ತ್ರ, ತತ್ವಶಾಸ್ತ್ರದ ಫಲಕದಲ್ಲಿ ಮೂಡಿಸಿರುವುದರಿಂದ ಕೆಲವೊಂದು ಪಾತ್ರಗಳು ಸ್ವತಂತ್ರವಾಗಿ ಮೂಡಿಬರುವುದಿಲ್ಲವೆಂದೆನಿಸುತ್ತದೆ. ಮೂಲತತ್ವದ ಸಾಧನೆಯ ಕಡೆಗೇ ಹೆಚ್ಚು ಗಮನ ಕೊಡುತ್ತ ಬದಲಾಗುತ್ತಿರುವ ಸಮಾಜ ಆಶಿಸುವ ಪ್ರಗತಿಪರ ಧೋರಣೆಯನ್ನು ಕೊಡುವುದಿಲ್ಲ. ಇದಕ್ಕೆ ಕಾರಣ ಇಷ್ಟೇ, ಅವರು ಪ್ರತಿಪಾದಿಸುವ ಸಮಸ್ಯೆಗೆ ಯಾವ ಆರೋಗ್ಯಪೂರ್ಣವಾದ ನಿರ್ಣಯವನ್ನೂ ಕೊಡದೆ ಇರುವುದು ಮತ್ತು ಅವರ ನಿರ್ಣಯಗಳು ಸಾಮಾಜಿಕ ಬದುಕನ್ನು ಪ್ರಗತಿಪಥದಿಂದ ಹಿಂದಕ್ಕೆ ಜಗ್ಗುವಂಥದ್ದಾಗಿರುತ್ತವೆ. ಉದಾಹರಣೆಗೆ 'ವಂಶವೃಕ್ಷ' ಮತ್ತು 'ದಾಟು' ಕಾದಂಬರಿಗಳಲ್ಲಿ ಬರುವ ಕಾತ್ಯಾಯಿನಿ ಮತ್ತು ಸತ್ಯಭಾಮೆ ಪಾತ್ರಗಳು ಪ್ರಗತಿಪರ ಪಾತ್ರಗಳೆಂದು ಕಂಡುಬಂದರೂ ಅವರು ಸಂಪ್ರದಾಯ ಪರಂಪರೆಯ ಚೌಕಟ್ಟಿನಲ್ಲೇ ತಮ್ಮ ಅಂತವನ್ನು ಕಂಡುಕೊಳ್ಳುತ್ತಾರೆ.

ಭೈರಪ್ಪನವರನ್ನು ಇಂದು ಜನಪ್ರಿಯ ಕಾದಂಬರಿಕಾರರು ಎಂದು ಕರೆಯುವುದು ವಾಡಿಕೆ. ನನಗೆ ಅನ್ನಿಸುವ ಮಟ್ಟಿಗೆ ಇವರ ಜನಪ್ರಿಯತೆಗೆ ಕಾರಣ ಇವರು ತಮ್ಮ ಕಾದಂಬರಿಗಳಲ್ಲಿ ತೆಗೆದುಕೊಳ್ಳುವ ವಸ್ತು ವೈವಿಧ್ಯತೆಯೇ ಆಗಿದೆ. ಅಂದರೆ,

* ಈ ಪ್ರಬಂಧ ರಚಿಸುವಾಗ ಅನೇಕ ಸೂಕ್ತ ಸಲಹೆಗಳನ್ನಿತ್ತು, ಪ್ರಬಂಧ ಒಂದು ಸ್ಪಷ್ಟರೂಪ ಧರಿಸಲು ಕಾರಣರಾದ ಅಧ್ಯಾಪಕರಾದ ಶ್ರೀ ಕೆ. ವಿ. ನಾರಾಯಣ ಅವರಿಗೆ ಕೃತಜ್ಞನಾಗಿದ್ದೇನೆ.

ಒಂದು ಕಾಲದ ನೀತಿ, ನಿಯಮ, ಸಂಪ್ರದಾಯ, ನಡವಳಿಕೆಗಳು ಸದಾಕಾಲ ಸತ್ವ ಯುತವಾಗಿರುವುದಿಲ್ಲ. ಅವು ಸತ್ವಹೀನವಾದಂತೆಲ್ಲಾ ವ್ಯಕ್ತಿ ಅವುಗಳಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅಷ್ಟು ಬೇಗ ಹಳೆಯುದನ್ನು ಬಿಡಲಾರ, ಹಳಿಯಲಾರ. ಹೊಸ ಮತ್ತು ಹಳೆಯ ಮೌಲ್ಯಗಳು ಅವನಲ್ಲಿ ತಿಕ್ಕಾಟವನ್ನಾರಂಭಿಸುತ್ತವೆ. ಇಂತಹ ಸಂಕ್ರಮಣ ಕಾಲದಲ್ಲಿರುವ ನಮ್ಮ ಸಮಾಜದ ಗತಿ-ಸ್ಥಿತಿಗಳನ್ನು, ಸಮಸ್ಯೆಗಳನ್ನು ಭೈರಪ್ಪನವರು ತಮ್ಮ ಕಾದಂಬರಿಗಳಿಗೆ ವಸ್ತುವನ್ನಾಗಿ ಆರಿಸಿಕೊಂಡಿರುವುದರಿಂದಲೇ ಅವರು ಜನಪ್ರಿಯ ಕಾದಂಬರಿಕಾರರಾಗಿದ್ದಾರೆ ಎನ್ನಬಹುದು.

ಭೈರಪ್ಪನವರು ತಮ್ಮ 'ವಂಶವೃಕ್ಷ' ಕಾದಂಬರಿಯ ಹಿನ್ನುಡಿಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. "ವ್ಯಕ್ತಿಯ ಮತ್ತು ಸಮಾಜದ ಜೀವನ ವಿಧಾನಕ್ಕೆ ಆಧಾರವಾಗಿರುವ ಕೆಲವೊಂದು ಮೌಲ್ಯಗಳ ಸಂಘಟನೆಯು ಕ್ರಮೇಣವಾಗಿ ಅಥವಾ ಒಮ್ಮಿಂದೊಮ್ಮೆಗೆ ಶಿಥಿಲವಾಗಿ ಹೊಸ ಮೌಲ್ಯಗಳ ಸಂಘಟನೆಯಲ್ಲಿ ವ್ಯಕ್ತಿ ಮತ್ತು ಸಮಾಜ ಜೀವನವು ಹೊಸ ವಿಧಾನದಲ್ಲಿ ರಚಿಸಲ್ಪಡುವ ಕಾಲವನ್ನು ಮನ್ವಂತರವೆಂದಾಗಲಿ, ಯುಗ ಸಂಧಿಕಾಲವೆಂದಾಗಲೀ ಕರೆಯಬಹುದು. ಈ ಮನ್ವಂತರ ಕಾಲದಲ್ಲಿ ಜೀವನವು ಅಸ್ತವ್ಯಸ್ತವಾಗುವುದು ಮಾತ್ರವಲ್ಲ ವ್ಯಕ್ತಿ ವ್ಯಕ್ತಿಗಳ ನಡುವೆ, ವ್ಯಕ್ತಿಗಳ ಸಮಾಜದ ನಡುವೆ, ವ್ಯಕ್ತಿಯ ಒಳಗೆ ಎರಡು ಪ್ರವೃತ್ತಿಗಳ ಅಥವಾ ಶ್ರದ್ಧೆಗಳ ಘೋರವಾದ ಸಂಘರ್ಷಣೆ ಉಂಟಾಗುತ್ತದೆ. ಇದು ವಾಸ್ತವವಾಗಿಯೂ ಮೌಲ್ಯಗಳ ನಡುವೆ ಆಗುವ ಸಂಘರ್ಷ. ಯುಗ ಸಂಧಿಕಾಲದಲ್ಲಿ ವ್ಯಕ್ತಿಯಾಗಲೀ ಸಮಾಜವಾಗಲೀ ಹಳೆಯ ಮೌಲ್ಯಗಳಿಂದ ಪೂರ್ಣವಾಗಿ ಮುಕ್ತವಾಗಿರುವುದಿಲ್ಲ. ಹಾಗೆಯೇ ಹೊಸ ಮೌಲ್ಯಗಳು ಜೀವನವನ್ನು ಅಸಂದಿಗ್ಧವಾಗಿ ನಡೆಸುವಮಟ್ಟಿಗೆ ಬೇರು ಬಿಟ್ಟಿರುವುದಿಲ್ಲ. ಕೆಲವು ವ್ಯಕ್ತಿಗಳಲ್ಲಿ ಹೊಸ ಮೌಲ್ಯಗಳ ಗಾಳಿ ಬೀಸಿ ಹಳೆಯದರ ಬಗೆಗೆ ಶ್ರದ್ಧೆಯು ದುರ್ಬಲವಾಗಿರುತ್ತದೆ. ಅಂತಹವರು ಇನ್ನೂ ಹಳೆಯದರ ಪ್ರಭಾವದಲ್ಲಿ ಇರುವ ವ್ಯಕ್ತಿಯೊಡನೆಯಾಗಲೀ, ಸಮಾಜದೊಡನೆ ಆಗಲಿ ಸಂಘರ್ಷದಲ್ಲಿ ಬೀಳುವುದು ಅನಿವಾರ್ಯ ಅಥವಾ ಹಳೆಯ ಶ್ರದ್ಧೆಯಿಂದ ಪೂರ್ಣವಾಗಿ ಮುಕ್ತನಾಗದೆ. ಹೊಸದನ್ನು ಅನುಸರಿಸಲು ಹೊರಟಾಗ ವ್ಯಕ್ತಿಯ ಒಳಗೇ ಸಂಘರ್ಷ ಅನಿವಾರ್ಯವಾಗುತ್ತೆ."

ಮೇಲಿನ ಅಂಶಗಳು ಪ್ರಸ್ತುತ "ತಬ್ಬಲಿಯು ನೀನಾದೆ ಮಗನೆ" ಕಾದಂಬರಿಯಲ್ಲಿ ಹೆಚ್ಚು ಅರ್ಥವಂತಿಕೆಯನ್ನು ಪಡೆಯುತ್ತವೆ.

"ತಬ್ಬಲಿಯು ನೀನಾದೆ ಮಗನೆ"ಯಲ್ಲಿ ನಿನ್ನೆಯ–ಇಂದಿನ–ನಾಳೆಯುದರ ಮೌಲ್ಯಗಳ ಘರ್ಷಣೆ ನಡೆಯುತ್ತದೆ. ಹಳೆಯ ಹಾಗೂ ಹೊಸ ದೃಷ್ಟಿಯ ಮೌಲ್ಯಗಳೆರಡೂ ಏಳುತ್ತ, ಬೀಳುತ್ತ, ಕೊನೆಗೆ ಹಳೆಯ ದೃಷ್ಟಿಯ ಮೌಲ್ಯಗಳೇ ತಮ್ಮ

ಅಧಿಕಾರವನ್ನು ಸ್ಥಾಪಿಸಿಕೊಂಡುಬಿಡುತ್ತವೆ. ಕಾದಂಬರಿಕಾರರು "ತಬ್ಬಲಿ..." ಯಲ್ಲಿ ಹೇಳಲು ಹೊರಟಿರುವುದಾದರೂ ಏನು ? ಕಾದಂಬರಿಯ ವಸ್ತುವಾದರೂ ಏನು ? ಎಂಬುದನ್ನು ಕಾದಂಬರಿಕಾರರು ಪ್ರಸ್ತುತ ಕಾದಂಬರಿಯ ಹೊರ ಹೊದಿಕೆ ಪುಟದಲ್ಲಿ ಹೇಳಿರುವ ಅಭಿಪ್ರಾಯವನ್ನೇ ಇಲ್ಲಿ ಉದ್ಧರಿಸಿದರೆ ಹೆಚ್ಚು ಸ್ಪಷ್ಟತೆ ಕಂಡು ಬರುತ್ತದೆ. "ಪ್ರಾಚೀನ ಕಾಲದಿಂದ ಗೋವು ಭಾರತೀಯ ಸಂಸ್ಕೃತಿಯ ಕೇಂದ್ರ ವಾಗಿದೆ. ಹೊಸ ಜೀವನ ದೃಷ್ಟಿಯಲ್ಲಿ ಅದರ ಸ್ಥಾನ ಬದಲಾಯಿಸುತ್ತಿರುವುದು ಈ ಕಾದಂಬರಿಯ ವಸ್ತು. ಬಸವನ ಅವಲಂಬನೆಯನ್ನು ಬಿಟ್ಟು ಟ್ರ್ಯಾಕ್ಟರ್ ಬಳಕೆ ಪ್ರಚಲಿತವಾದ ಮೇಲೆ ಈ ದೇಶದಲ್ಲಿ ಗೋವಿನ ಸ್ಥಾನ ಹೇಗಿರುತ್ತದೆ? ಎಂಬುದು ಬಹು ಮುಖ್ಯವಾದ ಪ್ರಶ್ನೆ. ಕುಡಿಯುವ ಹಾಲು, ತಿನ್ನುವ ಮಾಂಸವನ್ನೊದಗಿಸುವ ಒಂದು ಉಪಯುಕ್ತ ಪ್ರಾಣಿ ಹಸು, ಎಂಬ ಪಾಶ್ಚಿಮಾತ್ಯ ವಿಚಾರ ಭಾರತದಲ್ಲಿ ಬೆಳೆಯುತ್ತಿದೆ. ಮೂವತ್ತು ಮೂರು ಕೋಟಿ ದೇವತೆಗಳ ಪ್ರತೀಕವೇ ಗೋವು ಎಂಬ ಪ್ರಾಚೀನ ಶ್ರದ್ಧೆಯನ್ನು ಪತ್ತಿ ಹಿಡಿದಿರುವವರು ಇನ್ನೂ ಹೆಚ್ಚು ಸಂಖ್ಯೆಯಲ್ಲಿದ್ದಾರೆ."

ಮೇಲಿನ ಕಾದಂಬರಿಕಾರರ ಮಾತುಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಭೈರಪ್ಪನವರು ಪ್ರಾಚೀನ ಧಾರ್ಮಿಕ ಶ್ರದ್ಧೆಯ ವಿಜಯವನ್ನು ಈ ಕಾದಂಬರಿಯ ಮೂಲಕ ಸಾಧಿಸಲು ಹೊರಟಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಭೈರಪ್ಪನವರು ನಮ್ಮ ಸಂಸ್ಕೃತಿಯ ಬಗೆಗೆ ಸದಾ ಕಳಕಳಿಯ ಭಾವವಿಟ್ಟುಕೊಂಡಿರುವುದರಿಂದ ಈ ಕೃತಿಯಲ್ಲಿ ಅರಿತೋ ಅರಿಯದೆಯೋ ತತ್ವವೊಂದಕ್ಕೆ ವಕಾಲತ್ತು ವಹಿಸುವುದು ಕಂಡುಬರುತ್ತದೆ. ಏಕೆಂದರೆ ಕಾದಂಬರಿಯಲ್ಲಿ ಚಿತ್ರಿತವಾಗಿರುವ 'ರಾಷ್ಟ್ರೀಯ ಸ್ವಯಂಸೇವಕ ದಳ'ದವರು ನಡೆಸುವ ಗೋವಧೆ ನಿಷೇಧ ಚಳುವಳಿಗೆ ಕಾದಂಬರಿಯಲ್ಲಿ ಬರುವ ಕೇಂದ್ರ ಪಾತ್ರವನ್ನು ಪರೋಕ್ಷವಾಗಿ ಸೇರಿಸಿರುವುದರಿಂದ ಆ ಕಾಲದಲ್ಲಿ ಬರೆದ ಕಾದಂಬರಿ ಎಂದೆನಿಸುತ್ತದೆ. ಗೋವಧೆ ನಿಷೇಧ ಚಳುವಳಿಯಿಂದ ಲೇಖಕರು ಬಹಳಷ್ಟು ಪ್ರಭಾವಿತರಾಗಿದ್ದಾರೆಂಬ ಸಂಶಯ ನಮ್ಮಲ್ಲಿ ಸಹಜವಾಗಿ ಮೂಡಿ ಬರುತ್ತದೆ.

'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯಲ್ಲಿ ವಿಚಾರ ಮಾಡಬೇಕಾದ ಪಾತ್ರಗಳು ಮೂರು—ಕಾಳಿಂಗ, ವೆಂಕಟರಮಣ, ಮತ್ತು ಓಲ್ಗ.

ಕಾದಂಬರಿಯಲ್ಲಿ ಕಾದಂಬರಿಕಾರ ತಾನು ಪ್ರತಿಪಾದಿಸುವ ನಿಲುವುಗಳಿಗೆ ಪ್ರಾಮುಖ್ಯ ತೋರಲು ತನ್ನ ಕೈಗೊಂಬೆಯಂತೆ ಒಂದು ಪಾತ್ರವನ್ನು ಸೃಜಿಸುತ್ತಾನೆ. ಅಂತಹ ಪಾತ್ರವನ್ನು ನಾವು "ಹುಸಿತನವುಳ್ಳ ಪಾತ್ರ" (psuedo Character] ಎಂದು ಕರೆಯಬಹುದು. ಕಾದಂಬರಿಕಾರ ಸೃಷ್ಟಿಸಿದ ಇಂತಹ

ಹುಸಿತನವುಳ್ಳ ಪಾತ್ರಕ್ಕೆ ಯಾವುದೇ ರೀತಿಯ ಸ್ವತಂತ್ರ ಅಸ್ತಿತ್ವ ಇರುವುದಿಲ್ಲ. ಕಾದಂಬರಿಕಾರನ ಕೈಗೊಂಬೆ ಮಾತ್ರ ಈ ಪಾತ್ರ. ಇಂತಹ ಹುಸಿತನವುಳ್ಳ ಪಾತ್ರದ ನಿಲುವುಗಳು, ಕಾದಂಬರಿಕಾರ ತಾನು ಪ್ರತಿಪಾದಿಸಲು ಹೊರಟ ನಿಲುವುಗಳಿಗೆ ವ್ಯತಿರಿಕ್ತವಾಗಿರುತ್ತದೆ, ಕೊನೆಗೆ ಈ ಪಾತ್ರ ಸೋಲಿನಲ್ಲಿಯೇ ತನ್ನ ಅಂತ್ಯವನ್ನು ಕಂಡುಕೊಳ್ಳುತ್ತದೆ ಎಂದರೆ ಕಾದಂಬರಿಕಾರ ಪ್ರತಿಪಾದಿಸಿದ ನಿಲುವುಗಳನ್ನು ಒಪ್ಪಿಕೊಂಡು ತನ್ನ ನಿಲುವುಗಳನ್ನು ಬಿಟ್ಟು ಬಿಡುತ್ತದೆ, ಇಂತಹ ಹುಸಿತನವನ್ನುಳ್ಳ ಪಾತ್ರವೇ ಕಾಳಿಂಗನದು ಎಂದರೆ ಅತಿಶಯೋಕ್ತಿ ಆಗಲಾರದು.

ಕಾದಂಬರಿಕಾರ ಒಂದು ಪ್ರಾಚೀನ ಧಾರ್ಮಿಕ ಶ್ರದ್ಧೆಯ ಅರ್ಥ ಉಳಿಯಬೇಕೆಂದು ಬರೆಯಲು ಹೊರಟಾಗ, ಆ ಪ್ರಾಚೀನ ಧಾರ್ಮಿಕ ಶ್ರದ್ಧೆಯು ಹೆಚ್ಚು ಪ್ರಭಾವಶಾಲಿಯಾಗಿ ಕಂಡುಬರುವುದು ಅದಕ್ಕೆ ವಿರೋಧಾಭಾಸ ವ್ಯಕ್ತಪಡಿಸುವ ಮತ್ತು ಸ್ವತಂತ್ರ ಅಸ್ತಿತ್ವವಿಲ್ಲದ ಪಾತ್ರದ ರಚನೆಯಾದಾಗಲೇ. ಅಂತಹ ಸ್ವತಂತ್ರ ಅಸ್ತಿತ್ವವಿಲ್ಲದ, ಕಾದಂಬರಿಕಾರರ ನಿಲುವಿಗೆ ವಿರೋಧ ವ್ಯಕ್ತಪಡಿಸಿ, ಕೊನೆಗೆ ಆ ನಿಲುವನ್ನೇ ಒಪ್ಪಿಕೊಳ್ಳುವ ಪಾತ್ರವೇ ಕಾಳಿಂಗನದು.

ವಿದೇಶದಿಂದ ಕಾಳಿಂಗನ ಆಗಮನ ಆಧುನಿಕ ಪ್ರಜ್ಞೆಯ ಆಗಮನದ ಸಂಕೇತ. ಕಾಳೇನಹಳ್ಳಿಯ ಗೌಡಜ್ಜನ ಸಾವು ಊರಿನಲ್ಲಿ ಬೇರು ಬಿಟ್ಟುಕೊಂಡಿರುವ ಪ್ರಾಚೀನ ಧಾರ್ಮಿಕ ಶ್ರದ್ಧೆಯು ಶಿಥಿಲವಾಗುತ್ತಿದೆಯೆಂಬುದರ ಸಂಕೇತ. ಆದರೆ ಪ್ರಾಚೀನ ಧಾರ್ಮಿಕ ಶ್ರದ್ಧೆಯು ಶಿಥಿಲವಾಗಿ ಹೊಸ ಪ್ರಜ್ಞೆಯೊಂದರ ಆಗಮನಕ್ಕೆ ಮುಂಚಿತವಾಗಿಯೇ ಊರಿನ ಪ್ರಾಚೀನ ಧಾರ್ಮಿಕ ಶ್ರದ್ಧೆಯನ್ನು ಭದ್ರಗೊಳಿಸುವ ವೆಂಕಟರಮಣನ ಪಾತ್ರ ಊರಿನಲ್ಲಿ ಸಾಕಷ್ಟು ಪ್ರಭಾವ ಬೀರಿರುತ್ತದೆ ಎಂಬುದು ಗಮನೀಯವಾದ ಅಂಶ.

ಕಾದಂಬರಿಯಲ್ಲಿ ಬರುವ "ಕೋಲೆ ಬಸವನವರ ಗುಂಪು" ಕಾಳಿಂಗನ ಪಾತ್ರದ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಕೋಲೆ ಬಸವನವರು ಗೌಡಜ್ಜ ಸಾಯುವಾಗ ಮತ್ತು ಕಾಳಿಂಗ 'ತಬ್ಬಲಿ'ಯಾದಾಗ ಬರುವುದರಲ್ಲಿ ಹೆಚ್ಚು ಅರ್ಥವಂತಿಕೆಯಿದೆ. ಎಂದರೆ ಗೌಡಜ್ಜನ ಸಾವು ಪ್ರಾಚೀನ ಧಾರ್ಮಿಕ ಶ್ರದ್ಧೆಯೊಂದು ಶಿಥಿಲವಾಗುತ್ತಿರುವುದರ ಸಂಕೇತವೆಂದು ಮೊದಲೇ ತಿಳಿಸಿದ್ದೇನೆ. ಹೊಸ ಪ್ರಜ್ಞೆಯ ಸಂಕೇತವಾದ ಕಾಳಿಂಗನ ಆಗಮನದ ಮುಂಚೆ ಕೋಲೆ ಬಸವನವರು ಗೌಡಜ್ಜ ಕೊಡುವ ಹಣ ಎಂದರೆ ಪ್ರಾಚೀನ ಶ್ರದ್ಧೆಯನ್ನು ತೆಗೆದುಕೊಂಡು ಹೋಗುತ್ತಾರೆ. ಕೊನೆಯಲ್ಲಿ ಕೋಲೆ ಬಸವನವರು ಕಾಳಿಂಗನಿಗೆ ಕೊಡುವ ಹಣ ಎಂದರೆ ಪ್ರಾಚೀನ ಶ್ರದ್ಧೆಯ ಬೀಜವನ್ನು ಬಿತ್ತಿ ಹೋಗುತ್ತಾರೆ. ಈಗಾಗಲೆ ಕಾಳಿಂಗನ ಪ್ರಾಚೀನ ಶ್ರದ್ಧೆಯ ಭೂಮಿ ನೆನೆದಿರುವುದರಿಂದ ಕೋಲೆ ಬಸವನವರು ಬಿತ್ತಿ ಹೋದ ಬೀಜ ಮೊಳಕೆ ಒಡೆಯಲು ಹೆಚ್ಚು ಕಾಲಾವಕಾಶದ ಅಗತ್ಯವಿರಲಿಲ್ಲ.

ಇಡೀ ಕಾದಂಬರಿಯಲ್ಲಿ ಕಾಳಿಂಗನ ಆಧುನಿಕ ಪ್ರಜ್ಞೆ ವ್ಯಕ್ತವಾಗುವುದು ಕೆಲವೇ ಕಡೆ. ಮೊದಮೊದಲು ಕಾಳಿಂಗ ತನ್ನ ತಾತನ ಶ್ರಾದ್ಧದಲ್ಲಿ ತಲೆಮುಂಡನ ಮಾಡಿಸಿಕೊಳ್ಳಲು ನಿರಾಕರಿಸಿ "ನನಗೆ ಅವರಲ್ಲೆಲ್ಲ ನಂಬಿಕೆಯಿಲ್ಲ, ನೀವು ಉಳಿದ ಎಲ್ಲಾ ಕೆಲಸ ಮಾಡಿಸಿ ಆಗುತ್ತೆ." ಎನ್ನುವ ಮಾತು, ಊರಿನ ಜನರ ಪೂಜ್ಯಭಾವನೆಗೆ ಪಾತ್ರವಾದ ಗುಡಿಯ ಕಲ್ಯಾಣಿಯ ನೀರನ್ನು ತನ್ನ ವ್ಯವಸಾಯಕ್ಕೆ ಬಳಸಿಕೊಳ್ಳುವುದು ಮತ್ತು ಊರಿನ ಗೋಮಾಳಗಳನ್ನೆಲ್ಲ ವ್ಯವಸಾಯದ ಭೂಮಿಯನ್ನಾಗಿ ಪರಿವರ್ತಿಸುವುದು—ಇವನ್ನೆಲ್ಲ ನೋಡಿದರೆ ಕಾಳಿಂಗ ಊರಿನ ಜನರಲ್ಲಿ ಬೇರು ಬಿಟ್ಟಿದ್ದ ಆಚಾರ ವಿಚಾರ ಶ್ರದ್ಧೆಗಳ ವಿರುದ್ಧ ಕ್ರಾಂತಿ ಮಾಡಲು ಹೊರಟಿದ್ದಾನೆ ಎಂದೆನಿಸುತ್ತೆ. ಆದರೆ ಈ 'ಅನಿಸಿಕೆ' ಅನಿಸಿಕೆಯಾಗಿಯೇ ಉಳಿದುಬಿಡುವುದು ಕಾದಂಬರಿಕಾರರು ತಾವು ಪ್ರತಿಪಾದಿಸಲು ಹೊರಟಿರುವ ಅಂಶವೇ ಬೇರೆ ಎಂದು ತಿಳಿದಾಗ.

ಕಾದಂಬರಿಕಾರರು ಒಂದು ನಿರ್ದಿಷ್ಟ ಉದ್ದೇಶಕ್ಕೆ ಬದ್ಧವಾಗಿರುವುದರಿಂದ ಮತ್ತು ತಮ್ಮ ಮೂಲತತ್ವವನ್ನು ಪ್ರತಿಪಾದಿಸುವ ಸಲುವಾಗಿ ಕಾಳಿಂಗನನ್ನು ಕಾದಂಬರಿಯುದ್ದಕ್ಕೂ ಹಂತಹಂತವಾಗಿ ಸೋಲಿಸುತ್ತಾ ಹೋಗುತ್ತಾರೆ. ಕಾಳಿಂಗನು ಕಾದಂಬರಿಯುದ್ದಕ್ಕೂ ಮೂರು ಹಂತಗಳಲ್ಲಿ ಕಾಣಿಸಿಕೊಳ್ಳುತ್ತಾನೆ; ಬಾಲ್ಯದಲ್ಲಿ ತನಗೇ ತಿಳಿಯದಂತೆ ಊರಿನ ಪ್ರಾಚೀನ ಧಾರ್ಮಿಕ ಶ್ರದ್ಧೆಗೆ ಅಂಟಿಕೊಂಡು ಬೆಳೆದ ಕಾಳಿಂಗ; ಕಾದಂಬರಿಯ ಮಧ್ಯಭಾಗದಲ್ಲಿ ಹೊಸ ಪ್ರಜ್ಞೆಯ ಸಂಕೇತವಾಗಿ ಬರುವ ಕಾಳಿಂಗ: ಕೊನೆಗೆ ಊರಿನ ಪ್ರಾಚೀನ ಶ್ರದ್ಧೆಯನ್ನು ವಿರೋಧಿಸಿ ಜೀವನವನ್ನು ತಬ್ಬಲಿಯನ್ನಾಗಿಸಿಕೊಳ್ಳುವುದು ಸರಿಯಲ್ಲವೆಂದು ತಿಳಿದು ಊರಿನ ಪ್ರಾಚೀನ ಧಾರ್ಮಿಕ ಶ್ರದ್ಧೆಗೇ ಅಂಟಿಕೊಂಡು ಬಿಡುವ ಕಾಳಿಂಗ.

ಕಾಳಿಂಗನ ವ್ಯಕ್ತಿತ್ವವು ಊರಿನಲ್ಲಿ ಆಳವಾಗಿ ಬೇರುಬಿಟ್ಟಿದ್ದ ಪ್ರಾಚೀನ ಶ್ರದ್ಧೆಯನ್ನು ಸ್ವೀಕರಿಸುತ್ತದೆಯೆಂಬ ಅನುಮಾನ ಬರುವುದು ಆತ ತನ್ನ ಆಳಾದ ಮಲ್ಲೇಶಿಯ ಮುಖಾಂತರ ವೆಂಕಟರಮಣನಿಗೆ ತಿಳಿಯದಂತೆ ಊರಿನ ಗುಡಿಯ ಪೂಜೆ ಮಾಡಿಸಿ ಪ್ರಸಾದ ಸ್ವೀಕರಿಸುವುದರಿಂದ. ಈ ಅನುಮಾನ ಸತ್ಯವಾಗುವುದು ಹಿಲ್ಡಾ ಮುದಿಹಸುಗಳನ್ನು ಕಟುಕರಿಗೆ ಮಾರಿದಾಗ ಮತ್ತು "ನೀನು ಆ ಪೂಜಾರಿಯಿಂದ ಸಂಪೂರ್ಣವಾಗಿ ಬದಲಾಯಿಸಿದ್ದೀಯ" ಎಂದು ಹೇಳಿದಾಗ ಕಾಳಿಂಗ ತೋರುವ ಈ ಕೆಳಗಿನ ಪ್ರತಿಕ್ರಿಯೆಯಿಂದ. ಈ ಕೆಳಗೆ ಉದ್ಧರಿಸಿರುವ ಕಾಳಿಂಗನ ಮಾತುಗಳು ನನ್ನ ಅಭಿಪ್ರಾಯಕ್ಕೆ ಸಹಾಯಕವಾಗುತ್ತದೆ.

(i) "ನಮ್ಮ ಮಗು ಸಾಯುವ ಸ್ಥಿತಿಯಲ್ಲಿರುವಾಗ ಅದಕ್ಕೆ ತನ್ನ ಕೆಚ್ಚಲನ್ನು ಉಣ್ಣಿಸಿ ಬದುಕಿಸೋ ತಾಯಿ ಹಸುಗಳನ್ನು ಮುಪ್ಪಿನ ವಯಸ್ಸಿನಲ್ಲಿ ತಾಯಿಯ ಹಾಗೆ ಕಾಪಾಡಬೇಡವೇ, ನೀನು ಮಾರಿದ ಹಸು ಎತ್ತುಗಳೆಲ್ಲ ಅಂಥ ತಾಯಿತಂದೆಗಳೇ." [ಪುಟ. 375].

(ii) "........ಶ್ರದ್ಧೆ ಮೂಡಬೇಕಾದರೂ ಸಂಸ್ಕಾರಬೇಕು, ನನಗೆ ಆ ಸಂಸ್ಕಾರ ಹುಟ್ಟಿನಿಂದಲೇ ಇತ್ತು ಅಂತ ಕಾಣುತ್ತೆ. ನಾನು ಮೈಸೂರಿನಲ್ಲಿ ಕಾಲೇಜು ಓದುವಾಗ ಒಂದು ದಿನ ತಿಳಿಯದೆ ಒಬ್ಬ ಯೂರೋಪಿಯನ್ ಪ್ರಿನ್ಸಿಪಾಲರ ಮನೇಲಿ ಗೋಮಾಂಸ ಊಟ ಮಾಡಿದೆ. ಅದು ತಿಳಿದಮೇಲೆ ಪಂಚಗವ್ಯ ಸ್ವೀಕರಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳೋತನಕ ಮನಸ್ಸು ತಡೆಯಲಿಲ್ಲ. ಈ ನಡುವೆ ಅಮೇರಿಕಕ್ಕೆ ಹೋದಮೇಲೆ ನನ್ನ ಶ್ರದ್ಧೆ ಬದಲಾಯಿಸಿತ್ತು. ಈಗ ಹಳೆಯದೇ ಮತ್ತೆ ತನ್ನ ಶಕ್ತಿಯನ್ನು ಸ್ಥಾಪಿಸಿಕೊಂಡಿದೆ." [ಪುಟ. 369].

ಕಾಳಿಂಗನು ಊರಿನ ಪ್ರಾಚೀನ ಶ್ರದ್ಧೆಯನ್ನು ವಿರೋಧಿಸುವುದರಿಂದ ಒಬ್ಬಂಟಿಗನಾಗುತ್ತಾನೆ, ತಬ್ಬಲಿಯಾಗುತ್ತಾನೆ. ಕಾಳಿಂಗನನ್ನು ತಬ್ಬಲಿಯನ್ನಾಗಿ ಮಾಡುವುದರ ಮೂಲಕ ಭೈರಪ್ಪನವರು ಓದುಗರಿಗೆ ಒಂದು ಹೆದರಿಕೆಯನ್ನು ಹುಟ್ಟಿಸುತ್ತಾರೆಂದೆನಿಸುತ್ತದೆ. ಏನೆಂದರೆ "ಒಂದು ಪರಂಪರೆಯಲ್ಲಿ ದೇವತಾಸ್ಥಾನ ಪಡೆದಿರುವ ಗೋವನ್ನು ತೃಣವಾಗಿ ಕಂಡರೆ ನೀವೂ (ಓದುಗರು) ಕೂಡ ತಬ್ಬಲಿಗಳಾಗುತ್ತೀರಿ" ಎಂಬುದೇ ಆಗಿದೆ. ಭೈರಪ್ಪನವರ ಈ ಕಾದಂಬರಿ ಗೋವಧೆ ವಿರೋಧಿಸುವವರಿಗೆ ಒಂದು ಶ್ರೇಷ್ಠ ಕಾದಂಬರಿ ಆಗುವುದರಲ್ಲಿ ಸಂಶಯವಿಲ್ಲ ಎಂದು ನನ್ನ ಭಾವನೆ.

ಒಟ್ಟಿನಲ್ಲಿ ಇಲ್ಲಿ ಬರುವ ಎಲ್ಲಾ ಪಾತ್ರಗಳೂ–ಕಾಳಿಂಗ ಮತ್ತು ಹಿಲ್ಡಾ ಪಾತ್ರಗಳನ್ನು ಬಿಟ್ಟರೆ ಪರಂಪರೆ. ಧಾರ್ಮಿಕ ಶ್ರದ್ಧೆಗಳಲ್ಲಿ ನಂಬಿಕೆಯಿಟ್ಟುಕೊಂಡು ನಡೆಯುವಂತಹವೇ ಆಗಿವೆ. ಕಾದಂಬರಿಕಾರರು ಕಾಳಿಂಗನ ಆಧುನಿಕ ಪ್ರಜ್ಞೆಯ ನಿಲುವು, ವಿಚಾರಗಳನ್ನು ಕಾದಂಬರಿಯ ಕೊನೆಯಲ್ಲಿ ಸಡಲಿಸಿ ದುರ್ಬಲಗೊಳಿಸುತ್ತಾರೆ. ಇದು ಕೇವಲ ಕಾಳಿಂಗನ ದೌರ್ಬಲ್ಯವನ್ನಲ್ಲದೆ ಭೈರಪ್ಪನವರ ಸಂಪ್ರದಾಯ ಶರಣತೆಯನ್ನೂ ತೋರಿಸುತ್ತದೆ.

ಕಾಳಿಂಗನ ಪಾತ್ರ ಒಂದು ರೀತಿಯಲ್ಲಿ ಕಾದಂಬರಿಯ ಮಧ್ಯಭಾಗದಲ್ಲಿ ಪ್ರಗತಿಗಾಮಿಯಾಗಿ ಕಂಡುಬಂದರೂ ಕೊನೆಗೆ ಪ್ರತಿಗಾಮಿಯಾಗಿ ಬಿಡುತ್ತದೆ. ಇದು ಕಾದಂಬರಿಕಾರರ ದೋಷವೂ ಹೌದು. 'ವಂಶವೃಕ್ಷದ ಕಾತ್ಯಾಯಿನಿ', 'ನಾಯಿ ನೆರಳಿ'ನ ಅಚ್ಯುತ 'ದಾಟು'ವಿನ ಸತ್ಯಭಾಮೆ ಪಾತ್ರಗಳಂತೆ ಕಾಳಿಂಗನದೂ ಒಂದು ದ್ವಂದ್ವಪಾತ್ರವೆನಿಸಿ ಏನನ್ನೂ ಹೇಳದೆ ಮತ್ತು ಸಾಧಿಸದೆ ಹೋಗುತ್ತದೆ.

"ತಬ್ಬಲಿಯು ನೀನಾದೆ ಮಗನೆ" ಕಾದಂಬರಿಯಲ್ಲಿ ಬರುವ ವೆಂಕಟರಮಣನು ಕೇವಲ ವ್ಯಕ್ತಿಯಲ್ಲ. ಭೈರಪ್ಪನವರು ಪ್ರತಿನಿಧಿಸುವ ಪ್ರಾಚೀನ ಪರಂಪರೆಯೊಂದರ ಶ್ರದ್ಧೆಯ ಪ್ರತಿನಿಧಿ. ವೆಂಕಟರಮಣನು ಕಾಳೇನಹಳ್ಳಿಯ ಧಾರ್ಮಿಕ ಗುರುವಾಗಿ (Spiritual director) ಕಂಡುಬರುತ್ತಾನೆ. ಕಾದಂಬರಿಯ ಕೇಂದ್ರ ಪಾತ್ರ

ವೆಂಕಟರಮಣನದೇ ಆಗಿದೆ. ಕಾದಂಬರಿಕಾರರು ತಾವು ಹೇಳಲೆಂದು ಹೊರಟಿರುವ ಧರ್ಮದ ಪಾವಿತ್ರ್ಯತೆ, ಗೋವಿನ ಸ್ಥಾನ, ಧಾರ್ಮಿಕ ಶ್ರದ್ಧೆಯ ಪ್ರಭಾವವೆಲ್ಲವನ್ನು ವೆಂಕಟರಮಣನ ಪಾತ್ರದ ಮೂಲಕ ಹೇಳಿಸಿದ್ದಾರೆ. ಕಾದಂಬರಿಯ ಮೊದಲಿನಿಂದಲೂ ವೆಂಕಟರಮಣನಿಗೆ ಕಾದಂಬರಿಕಾರರು ವಿಶಿಷ್ಟ ಸ್ಥಾನವನ್ನು ಕೊಟ್ಟಿರುವುದರಿಂದ, ವೆಂಕಟರಮಣನ ಪಾತ್ರ ಇಡೀ ಕಾದಂಬರಿಯ ಪ್ರವಾಹದುದ್ದಕ್ಕೂ ಧೀರೋದಾತ್ತವಾಗಿ ಯಾವ ಅಡೆತಡೆಗಳಿಲ್ಲದೆ ಮೂಡಿಬಂದಿದೆ. ಇಡೀ ಕಾದಂಬರಿಯ ಉಳಿದ ಪಾತ್ರಗಳೆಲ್ಲ ವೆಂಕಟರಮಣನ ಸುತ್ತಲೂ ಸುತ್ತುತ್ತವೆ. ಸಮಾಜದ ಕೆಲವೊಂದು ಮೌಲ್ಯಗಳ ಅವನತಿ ಪ್ರಾರಂಭವಾದಾಗ ಮೌಲ್ಯಗಳ ರಕ್ಷಣೆಯ ಹೊಣೆ ಕೆಲವು ವ್ಯಕ್ತಿಗಳ ಮೇಲೆ ಬೀಳುವುದು ಅನಿವಾರ್ಯ. ಅಂತಹ ಮೌಲ್ಯಗಳ ರಕ್ಷಣೆಯ ಹೊಣೆಗಾರಿಕೆ ವೆಂಕಟರಮಣನ ಪಾತ್ರದ್ದಾಗಿದೆ ಎಂದೇ ಹೇಳಬೇಕು. ಕಾದಂಬರಿಕಾರರ ಧ್ಯೇಯವೂ ಇಂತಹ ಅವನತಿ ಹೊಂದುತ್ತಿರುವ ಮೌಲ್ಯಗಳನ್ನು ಕಾಪಾಡುವುದೇ ಆಗಿರುವ ಇಂತಹ ಸಂದರ್ಭದಲ್ಲಿ ವೆಂಕಟರಮಣನ ಪಾತ್ರದ ವರ್ಚಸ್ಸಿನ ಮುಂದೆ ಉಳಿದ ಪಾತ್ರಗಳ ವರ್ಚಸ್ಸು ಕುಗ್ಗುವುದು ಸರ್ವೇಸಾಮಾನ್ಯವಾದ ಸಂಗತಿ.

ವೆಂಕಟರಮಣನು, ಹಿಲ್ಡಾಳನಡುವೆ ನಡೆಸುವ ಧರ್ಮದ, ಪ್ರಾಚೀನ ಶ್ರದ್ಧೆಯ ಆಚಾರ-ವಿಚಾರಗಳ ಚರ್ಚೆ, ಹಳೆಯ ಪ್ರಜ್ಞೆಯ ಜೊತೆಯಲ್ಲಿ ಹೊಸ ಪ್ರಜ್ಞೆಯೊಂದರ ಚರ್ಚೆ ಎಂದು ಅರ್ಥವಾಗುತ್ತದೆ. ಆದರೆ, ಬದಲಾಗುತ್ತಿರುವ ಸಮಾಜದಲ್ಲಿ ಹೊಸ ಪ್ರಜ್ಞೆಯ ವಿಜಯದ ಬದಲು ಹಳೆಯ ಪ್ರಜ್ಞೆಯ ವಿಜಯ ನಮಗೆ ಸ್ಪಷ್ಟವಾಗಿ ಕಂಡು ಬರುತ್ತೆ. ಕಾರಣ ಇಷ್ಟೇ–ಇಲ್ಲಿ ಕಾದಂಬರಿಕಾರರು ಹೇಳಲು ಹೊರಟಿರುವುದು ಹಳೆಯ ಪ್ರಜ್ಞೆಯ ವೈಶಿಷ್ಟ್ಯಪೂರ್ಣವಾದ ಪಾವಿತ್ರ್ಯತೆಯನ್ನೇ ಹೊರತು ಹೊಸ ಪ್ರಜ್ಞೆಯ ವೈಶಿಷ್ಟ್ಯವನ್ನಲ್ಲ.

ವೆಂಕಟರಮಣ ಹಳೆಯ ಪ್ರಜ್ಞೆಯ, ಪ್ರಾಚೀನ ಧಾರ್ಮಿಕ ಶ್ರದ್ಧೆಯ, ಹಳೆಯ ಮೌಲ್ಯಗಳ ಪ್ರತಿನಿಧಿ ಎಂದು ಮೊದಲೇ ಸ್ಪಷ್ಟಪಡಿಸಿದ್ದೇನೆ. ಆತ ಊರಿನ ಅಗ್ರಹಾರದ ಉಪಾಧ್ಯಾಯಗಿರಿಗೆ ರಾಜೀನಾಮೆ ಕೊಡುವುದು, ಕಾಳಿಂಗನ ಜಮೀನನ್ನು ಹಿಂತಿರುಗಿಸುವುದು – ಇವನ್ನೆಲ್ಲ ನೋಡಿದರೆ ಬದಲಾಗುತ್ತಿರುವ ಹೊಸ ಸಾಮಾಜಿಕ ಮೌಲ್ಯಗಳು ತನಗೆ ಬೇಡವೆಂಬ ವೆಂಕಟರಮಣನ ಧೋರಣೆ ಸ್ಪಷ್ಟವಾಗುತ್ತದೆ.

ಹೊಸ ಪ್ರಜ್ಞೆಯ ಸ್ಥಾನದಲ್ಲಿರುವ ಹಿಲ್ಡಾ ಕೇಳುವ "ದೇವ ದೇವತೆಗಳನ್ನು ಗೋವು ಪ್ರತಿನಿಧಿಸುತ್ತೆ. ಆದರೆ ಆ ಪ್ರತೀಕವು ಗೋವೇ ಯಾಕಾಗಬೇಕು, ನಾಯಿ ಅಥವಾ ಎಮ್ಮೆ ಯಾಕಾಗಬಾರದು?" ಎಂಬ ಪ್ರಶ್ನೆಗೆ ವೆಂಕಟರಮಣನ ಪಾತ್ರದ ಮೂಲಕ ಉತ್ತರ ಕೊಡಿಸದೆ ಕಾದಂಬರಿಕಾರರೂ ಕೂಡ ತಟಸ್ಥರಾಗಿಬಿಡುತ್ತಾರೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

ವೆಂಕಟರಮಣನ ಧಾರ್ಮಿಕ ಶ್ರದ್ಧೆ, ತಾತ್ವಿಕ ಚಿಂತನೆ; ಪ್ರಾಚೀನ ಶ್ರದ್ಧೆಯನ್ನು ವಿರೋಧಿಸುವ, ಗೋಹತ್ಯೆ ಮಾಡುವ ವ್ಯಕ್ತಿಗಳ ಮೇಲೆ ಎಷ್ಟು ರೋಸಿ ಹೋಗಿತ್ತು [ಬೈರಪ್ಪನವರ ಮನಸ್ಸು ಕೂಡ!] ಎಂಬುದನ್ನು ಕಾದಂಬರಿಕಾರರು ವೆಂಕಟರಮಣನ ಮೂಲಕ ಹೇಳಿಸುವ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ [ಕಾಳಿಂಗ ತನ್ನ ಸಾಯು ತ್ತಿರುವ ಮಗುವಿಗಾಗಿ ಪುಣ್ಯಕೋಟಿ ಹಸುವನ್ನು ಕೇಳಲು ಬಂದಾಗ ವೆಂಕಟರಮಣನ ಪ್ರತಿಕ್ರಿಯೆ]

"ನಿನ್ನ ಸಂತಾನ ಅಂದ್ರೆ ನಿನಗೆ ಹುಟ್ಟಿದ್ದು, ನಿನ್ನ ಹೆಂಡತಿಯ ಹೊಟ್ಟೆಯಲ್ಲಿ ವೃದ್ಧಿಯಾದದ್ದು ಸತ್ತಹೂ ಧರ್ಮಕ್ಕೆ ಒಳ್ಳೆಯದೇ. ಇವತ್ತು ಅವರ ಜೀವ ಉಳಿಯೋಕೆ ಅಂತ ನನ್ನ ಹಸೂನ ಕೊಟ್ಟೆ ಅನ್ನು, ಮುಂದೆ ಅದು, ಅವರ ಹೊಟ್ಟೇಲಿ ಹುಟ್ಟೋ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳು ಒಟ್ಟು ಸಹಸ್ರ ಸಹಸ್ರ ಗೋವುಗಳನ್ನು ಕೊಂದು ತಿಂತಾವೆ. ಅಷ್ಟು ಗೋಹತ್ಯೆಗೆ ಪರ್ಯಾಯವಾಗಿ ಯಾವರೂ ಹೊಣೆಯಾಗುವಷ್ಟು ದಡ್ಡ ನಾನಲ್ಲ."

ಕಾದಂಬರಿಯಲ್ಲಿ ಚಿತ್ರಿತವಾಗಿರುವ ಹಿಲ್ಡಾಳ ಪಾತ್ರದ ಬಗೆಗೆ ಕಾದಂಬರಿ ಕಾರರು ಹೆಚ್ಚಿನ ಕಾಳಜಿಯನ್ನು ವಹಿಸಿಲ್ಲವೆಂದು ತೋರುತ್ತದೆ. ವಿದೇಶದಿಂದ ಬಂದ ಹಿಲ್ಡಾಗೆ ಭಾರತೀಯ ಪ್ರಾಚೀನ ಧಾರ್ಮಿಕ ಶ್ರದ್ಧೆ, ಆಚಾರ ವಿಚಾರಗಳಲ್ಲಿ ಆಸಕ್ತಿಯಿಲ್ಲದಿದ್ದರೂ ಕೂಡ ತಿರಸ್ಕಾರವನ್ನು ವ್ಯಕ್ತಪಡಿಸುವ ಮನೋಭಾವದ ಹೆಂಗಸಲ್ಲ. ಭಾರತೀಯರ ಈ ಪ್ರಾಚೀನ ಶ್ರದ್ಧೆ, ಆಚಾರ ವಿಚಾರ ಮತ್ತು ಮೂಢ ನಂಬಿಕೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಹೊಸ ಪ್ರಜ್ಞೆಯ ಒರೆಗಲ್ಲಿಗೆ ಹಚ್ಚಿ ಸತ್ಯ ವೆಷ್ಟು? ಮಿಥ್ಯವೆಷ್ಟು? ಎಂಬುದನ್ನು ತಿಳಿಯಲು ಹೊರಟ. ಆಸಕ್ತಿ ಹೊಂದಿದ ಮಹಿಳೆಯಾಗಿ ಹಿಲ್ಡಾ ಕಾಣುತ್ತಾಳೆ.

ಕಾದಂಬರಿಕಾರ ತಾನು ಹೇಳಲು ಹೊರಟಿರುವ ತತ್ವ ಹೆಚ್ಚು ಪ್ರಭಾವಶಾಲಿ ಯಾಗುವುದು ಆತನ ಧೋರಣೆಗೆ ವ್ಯತಿರಿಕ್ತವಾದುದು ನಡೆದಾಗಲೇ. ಅಂತಲೇ ಕಾದಂಬರಿಯುದ್ದಕ್ಕೂ ಗೋಹತ್ಯೆ ನಿಷೇಧ ತತ್ವವನ್ನು ಹೇಳುತ್ತಾ ಹೋಗುತ್ತಾರೆ. ಆದರೆ ಆ ತತ್ವ ವಾಚಕರ ಮೇಲೆ ಹೆಚ್ಚು ಪ್ರಭಾವ ಶಾಲಿಯಾಗುವುದು ಹಿಲ್ಡಾ ಮಾಡಿಸುವ ಗೋಹತ್ಯೆಯಿಂದಲೇ! ಹಿಲ್ಡಾಳಿಗೆ ಗೋಹತ್ಯೆ ಮಾಡಿಸಬೇಕೆಂಬ ಅಭಿ ಪ್ರಾಯ ಮೂಲತಃ ಇರಲಿಲ್ಲ. ಹಿಲ್ಡಾ ಮಾಡಿಸುವ ಗೋಹತ್ಯೆಗೆ ಪರೋಕ್ಷವಾಗಿ ವೆಂಕಟರಮಣನೇ ಕಾರಣ ಎಂದೆನಿಸುತ್ತದೆ. ಇದಕ್ಕೆ ಎಂದರೆ ಈ ನನ್ನ ಅಭಿಪ್ರಾಯಕ್ಕೆ ಪೂರಕವಾಗಿ ಹಿಲ್ಡಾ, ಕಾಳಿಂಗನಿಗೆ ಹೇಳುವ ಈ ಕೆಳಗಿನ ಮಾತುಗಳೇ ಸಾಕ್ಷಿಯಾಗಿವೆ.

"ಓ, ಆ ಪೂಜಾರಿ [ವೆಂಕಟರಮಣ] ನನ್ನನ್ನು ಕೆರಳಿಸಿ ಬಿಟ್ಟ . . . . ನೀವು ಅನಾಗರೀಕರು, ಅನಾಗರೀಕ ಜನಾಂಗಕ್ಕೆ ಸೇರಿದವಳು ನೀನು, ಅಂತ ಏನೇನೋ

ಬೈದ, ಆಮೇಲೆ ಹಸುವಿನ ಅಂಗ ಅಂಗಗಳಲ್ಲೂ ದೇವ ದೇವತೆಗಳಿದ್ದಾರೆ. ಎಚ್ಚರಿಕೆ ಅಂತ ಹೇಳಿ ಹೊರಟು ಹೋದ. ಈ ಅಪಮಾನವನ್ನು ಯಾರು ತಾನೆ ಸಹಿಸಬೇಕು ? ಈವತ್ತು ಒಂದು ಹಸುವನ್ನು ಕೊಲ್ಲಿಸಿ ಅದರ ಅಂಗಾಂಗಗಳನ್ನು ಪರೀಕ್ಷಿಸಿ ನೋಡಿದೆ''.

ಒಟ್ಟಿನಲ್ಲಿ ಹಿಲ್ಡಾಗೆ ಭಾರತೀಯ ಧಾರ್ಮಿಕ ಶ್ರದ್ಧೆ, ಗೋಪೂಜೆ, ಮುಂತಾದವುಗಳ ಬಗೆಗೆ ಅರ್ಥ ಕಾಣುವುದಿಲ್ಲ. ಮಾರಿಪೂಜೆಗಾಗಿ ಹಿಂಡು ಹಿಂಡಾಗಿ ಕೋಣಗಳನ್ನು ಕಡಿದರೆ ಅವುಗಳಿಗೆ ಸ್ವರ್ಗ ಲಭಿಸುವುದೆಂದೂ, ಗೋಹತ್ಯೆ ಮಾಡಿದವರಿಗೆ ರೌರವ ನರಕ ಲಭಿಸುವುದೆಂಬುದು ಅರ್ಥಹೀನವಾಗಿ ಕಂಡು ಬರುತ್ತೆ. ಹಿಲ್ಡಾ ವೆಂಕಟರಮಣನಲ್ಲಿ ಕೇಳುವ "ಗೋವು ದೇವದೇವತೆಗಳನ್ನು ಪ್ರತಿನಿಧಿಸುತ್ತದೆ. ಆದರೆ ಆ ಪ್ರತೀಕವು ಗೋವೇ ಯಾಕಾಗಬೇಕು ? ಉದಾಹರಣೆಗೆ ನಾಯಿ ಅಥವಾ ಎಮ್ಮೆ ಯಾಕಾಗಬಾರದು ?" ಎಂಬ ಪ್ರಶ್ನೆ ಭಾರತೀಯ ಧರ್ಮದ ಅರ್ಥ ಕೇಳಿದ್ದೇ ಹೊರತು, ಕುಚೋದ್ಯಕ್ಕಾಗಲೀ, ಅಪಹಾಸ್ಯಕ್ಕಾಗಲೀ ಕೇಳಿದುದಲ್ಲ. ಆದರೆ ಕಾದಂಬರಿಕಾರರು ಈ ಪ್ರಶ್ನೆಗೆ ಉತ್ತರವನ್ನು ಹೇಳದೆ ತೇಲಿಸಿಬಿಡುತ್ತಾರೆ ಎಂಬುದು ಗಮನಾರ್ಹ ಸಂಗತಿ.

ಕಾದಂಬರಿಯ ಕೊನೆಯಲ್ಲಿ ಹಿಲ್ಡಾ ಒಬ್ಬಂಟಿಗಳಾಗಿ, ತಬ್ಬಲಿಯಾಗಿ ಕಾಣುತ್ತಾಳೆ ಎಂಬುದು ಈ ಕೆಳಗೆ ಹಿಲ್ಡಾಳೇ ಹೇಳುವ ಮಾತುಗಳಿಂದ ತಿಳಿದುಬರುತ್ತದೆ.

"ನೀನು ನನ್ನನ್ನು ಕೈಬಿಟ್ಟು ಬಿಟ್ಟೆ ಡಿಯರ್, ನನ್ನ ಮರ್ಯಾದೆ ಕಾಯಲಿಲ್ಲ, ನಾನು ಒಬ್ಬಂಟಿಗಳಾದೆ. ...... ಅಷ್ಟು ದೂರದೇಶದಿಂದ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದೆ. ನೀನೇ ನನ್ನ ಬುದ್ಧಿಯ ನಿರ್ದೇಶಕಳು ಅಂತ ಹೆಮ್ಮೆಯ ಸ್ಥಾನದಲ್ಲಿ ಕೂರಿಸಿದೆ. ಈಗ ನಾನೇ ಬೇರೆ, ನನ್ನ ಸಂಸ್ಕಾರವೇ ಬೇರೆ. ನಿನ್ನ ಸಂಸ್ಕಾರವೇ ಬೇರೆ ಅಂತ ನನ್ನ ಎದುರಿಗೇ ಕೂತು ಅಂತಿದೀಯ ?...ನಿನ್ನನ್ನು ಎಳೆಸಿಕೊಂಡು ಆ ಅಪರಿಚಿತ ದಾರಿಯಲ್ಲಿ ಮೈಕೈ ತರಿಸಿಕೊಂಡು ಚಲಿಸಬೇಕು... ನನ್ನನ್ನು ಕೊಲ್ತಾ ಇದೀಯಾ..."

ಇದರಿಂದ ಹಿಲ್ಡಾ ಅನುಭವಿಸುತ್ತಿರುವ ಆಂತರಿಕ ವೇದನೆ, ಎಷ್ಟರಮಟ್ಟದ್ದು ಎಂಬುದು ವ್ಯಕ್ತವಾಗುತ್ತದೆ. ಆದರೆ ಹಿಲ್ಡಾಳ ಈ ಏಕಾಂಗಿತನಕ್ಕೆ ತಬ್ಬಲಿತನಕ್ಕೆ ಕಾದಂಬರಿಕಾರರು ಹೆಚ್ಚು ಪ್ರಾಮುಖ್ಯತೆ ಕೊಡುವುದಿಲ್ಲವೆಂದೆನಿಸುತ್ತದೆ. ಏಕೆಂದರೆ ಅವರು ಪ್ರತಿಪಾದಿಸಲು ಹೊರಟ ತತ್ವದ ಮುಂದೆ ಹಿಲ್ಡಾಳ ಪಾತ್ರ ಗೌಣವಾಗಿ ಕಾಣುತ್ತದೆ.

'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯಲ್ಲಿ ವಾಸ್ತವವಾಗಿ 'ತಬ್ಬಲಿ'ಯಾಗುವುದು ಯಾರು ? ಎಂಬ ಪ್ರಶ್ನೆ ನಮಗೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವಾಗಿ ಕಾಳಿಂಗ ಮತ್ತು ಹಿಲ್ಡಾ ಇಬ್ಬರೂ ನಮ್ಮೆದುರಿಗೆ ಬರುತ್ತಾರೆ. ಆದ್ದರಿಂದ

‘ತಬ್ಬಲಿ’ಯಾಗುವುದು ಕಾಳಿಂಗನೋ ಅಥವಾ ಹಿಲ್ಡಾಳೋ ಎಂಬುದು ಓದುಗರ ವೈಯಕ್ತಿಕ ಅಭಿಪ್ರಾಯಕ್ಕೆ ಬಿಟ್ಟದ್ದಾಗಿದೆ. ನನ್ನ ಅಭಿಪ್ರಾಯದಲ್ಲಿ ‘ತಬ್ಬಲಿ’ಯಾಗುವುದು ಹಿಲ್ಡಾಳೇ ಹೊರತು ಕಾಳಿಂಗನಲ್ಲ.

ಒಟ್ಟಿನಲ್ಲಿ, ಭೈರಪ್ಪನವರ “ತಬ್ಬಲಿಯು ನೀನಾದೆ ಮಗನೆ” ಒಂದು ವಿಶಿಷ್ಟ ಕಾದಂಬರಿ ಎಂದ ಮಾತ್ರಕ್ಕೆ ಉತ್ತಮ ಕಾದಂಬರಿಯೆಂದೇನಲ್ಲ ನನ್ನ ಅಭಿಪ್ರಾಯ. ಪ್ರಾಚೀನ ಶ್ರದ್ಧೆಯಲ್ಲಿ ನಂಬಿಕೆಯಿಟ್ಟುಕೊಂಡು, ಗೋಪೂಜೆ ಮಾಡುವವರಿಗೆ ಮತ್ತು ‘ಗೋವಧೆ ನಿಷೇಧ ಚಳುವಳಿ’ಗಾರರಿಗೆ ಈ ಕಾದಂಬರಿ ಒಂದು ಪೂಜ್ಯ ಕೃತಿ ಆಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ಸಾಂಖ್ಯದರ್ಶನದಲ್ಲಿ ಪುರುಷ ಬಹುತ್ವ ಹಾಗೂ ಭೋಕ್ತೃಭಾವದ ಸಮಸ್ಯೆ

ಮೀರಾ ಚಕ್ರವರ್ತಿ

ಭಾರತೀಯ ದರ್ಶನ ಶಾಖೆಗಳಲ್ಲೆಲ್ಲ ಸಾಂಖ್ಯದರ್ಶನ ಹೆಚ್ಚು ಸಮಸ್ಯಾತ್ಮಕವಾದುದೆನ್ನಬಹುದು. 'ಪ್ರಕೃತಿ' ಹಾಗೂ 'ಪುರುಷ'ರ ನಡುವಿನ ಸಂಬಂಧ ಎಂತಹುದು, ಅಚೇತನ ಸ್ವಭಾವದ ಪ್ರಕೃತಿ, ಪುರುಷನೊಡನೆ ಸಹಕರಿಸುವುದು ಹೇಗೆ ಸಾಧ್ಯ - ಇವೇ ಮೊದಲಾದ ಹಲವಾರು ಸಮಸ್ಯೆಗಳು ನಮ್ಮನ್ನು ಎದುರಿಸುತ್ತವೆ. 'ಪುರುಷ' ಮತ್ತು 'ಜೀವ' ಶಬ್ದಗಳನ್ನು ಸಾಂಖ್ಯದರ್ಶನದ ವ್ಯಾಖ್ಯಾನಕಾರರು ಎಷ್ಟು ಸಮಾನಾರ್ಥದಲ್ಲಿ ಬಳಸುತ್ತಾರೆ ಎಂದರೆ, ಡಾ॥ ರಾಧಾಕೃಷ್ಣನ್ ಅವರು, 'ಸಾಂಖ್ಯದರ್ಶನದಲ್ಲಿ ಮೊದಲಿನಿಂದ ಕೊನೆಯವರೆಗೆ ಪುರುಷ ಮತ್ತು ಜೀವಗಳ ನಡುವೆ ಗೊಂದಲ ಕಂಡುಬರುತ್ತದೆ'[1] ಎನ್ನುತ್ತಾರೆ.

ಪುರುಷದ ಸ್ವರೂಪದ ಬಗ್ಗೆಯೂ ಸಾಂಖ್ಯದರ್ಶನದಲ್ಲಿ ಸಾಕಷ್ಟು ಸಂದಿಗ್ಧತೆ ಕಂಡು ಬರುತ್ತದೆ. ಈಶ್ವರ ಕೃಷ್ಣರು ರಚಿಸಿರುವ ಸಾಂಖ್ಯಕಾರಿಕೆಯ ಕೆಲವು ಕಾರಿಕೆಗಳಲ್ಲಿ ಪುರುಷದ ಸ್ವರೂಪವನ್ನು ವಿವರಿಸುವಾಗ ಸಾಕಷ್ಟು ವಿರೋಧಾಭಾಸಗಳು ಕಂಡುಬರುತ್ತವೆ. ಒಂದು ಕಾರಿಕೆಯಲ್ಲಿ ಪುರುಷನನ್ನು ಉದಾಸೀನ ಅಥವಾ ತಟಸ್ಥಭಾವ ಉಳ್ಳದ್ದು ಎಂದು ವರ್ಣಿಸಿ, ಇನ್ನೊಂದರಲ್ಲಿ ಅದು ಒಂದು ಮಧ್ಯಸ್ಥ ಹಾಗೂ ಭೋಗಿ ಎಂದು ವಿವರಿಸಿದ್ದು ಒಂದು ಸಮಸ್ಯೆಯಾಗಿದ್ದರೆ, ಸಾಂಖ್ಯದರ್ಶನ ಪುರುಷದ ಏಕತ್ವವನ್ನು ಪ್ರತಿಪಾದಿಸುತ್ತದೆಯೋ ಅಥವಾ ಬಹುತ್ವವನ್ನು ಪ್ರತಿಪಾದಿಸುತ್ತದೆಯೋ ಎನ್ನುವುದು ಇನ್ನೊಂದು ಸಮಸ್ಯೆಯಾಗಿದೆ.

ಈಶ್ವರ ಕೃಷ್ಣರ ಸಾಂಖ್ಯಕಾರಿಕೆಯ 10 ಮತ್ತು 11ನೆಯ ಕಾರಿಕೆಗಳಲ್ಲಿ ಪ್ರಕೃತಿಯ ಸ್ವಭಾವ ಮತ್ತು ಅದರ ವ್ಯಕ್ತ ಸ್ವರೂಪಗಳನ್ನು, ಪುರುಷನೊಡನೆ ಅದರ ಸಾಮ್ಯ ಹಾಗೂ ವೈಷಮ್ಯಗಳನ್ನೂ ಸ್ಪಷ್ಟವಾಗಿ ವಿವರಿಸಲಾಗಿದೆ. ಜೊತೆಗೆ ಇದೇ ದೃಷ್ಟಿಯಿಂದ ಪುರುಷದ ಸ್ವಭಾವವನ್ನು 11ನೆಯ ಕಾರಿಕೆಯ ಕೊನೆಯಲ್ಲಿ ವಿವರಿಸಲಾಗಿದೆ.

---

1 ಇಂಡಿಯನ್ ಫಿಲಾಸಫಿ ವಾಲ್ಯೂಂ 1 ಪುಟ. 323

10 ಮತ್ತು 11ನೆಯ ಕಾರಿಕೆಗಳನ್ನು ಒಟ್ಟಿಗೆ ಓದಿದಾಗ ಪುರುಷ ಒಂದೇ ಒಂದೆಂದೂ ಅನೇಕ ಅಲ್ಲವೆಂದೂ ತಿಳಿಯುತ್ತದೆ.

'ಹೇತುಮದನಿತ್ಯಮವ್ಯಾಪಿ ಸಕ್ರಿಯ–ಮನೇಕಮಾಶ್ರಿತಂ ಲಿಂಗಮ್
ಸಾವಯವಂ ಪರತಂತ್ರಂ ವ್ಯಕ್ತಂ ವಿಪರೀತಮವ್ಯಕ್ತಮ್' –ಸಾಂ.ಕಾ. 10

(ವ್ಯಕ್ತವು, ಕಾರಣವುಳ್ಳದ್ದು, ಅನಿತ್ಯ, ಅವ್ಯಾಪಿ, ಸಕ್ರಿಯ, ಅನೇಕ, ಆಶ್ರಿತ, ಲಯವುಳ್ಳದ್ದು ಸಾವಯವ ಹಾಗೂ ಪರತಂತ್ರವಾಗಿದೆ. ಅವ್ಯಕ್ತವು ಇವರ ವಿರೋಧಿ ಗುಣಗಳುಳ್ಳದ್ದು.)

ಮತ್ತು

'ತ್ರಿಗುಣಮವಿವೇಕ ವಿಷಯಃ ಸಾಮಾನ್ಯ ಜೇತನಂ ಪ್ರಸವಧರ್ಮಿ
ವ್ಯಕ್ತಂ ತಥಾ ಪ್ರಧಾನಂ ತದ್ವಿಪರೀತಸ್ತಥಾ ಚ ಪುಮಾನ್' –ಸಾಂ.ಕಾ. 11

(ವ್ಯಕ್ತವು, ತ್ರಿಗುಣಾತ್ಮಕ, ವಿವೇಕರಹಿತ, ವಸ್ತು, ಸಾಮಾನ್ಯ, ಅಚೇತನ ಹಾಗೂ ಪ್ರಸವಧರ್ಮಿಯಾಗಿದೆ; ಪ್ರಕೃತಿಯೂ ಹಾಗೆಯೇ, ಪುರುಷವು ಇದಕ್ಕೆ ಸಾದೃಶವಾಗಿದ್ದರೂ ಭಿನ್ನವಾಗಿದೆ.)

ಪ್ರಕೃತಿ 'ಹೇತುಮತ್' (ಕಾರಣದಿಂದ ಕೂಡಿದ) ಅನಿತ್ಯ ಇತ್ಯಾದಿ ಗುಣಗಳ ಗುಂಪಿಗೆ ಸೇರಿದ್ದಲ್ಲ, ಪುರುಷವೂ ಅಷ್ಟೆ. 11ನೆಯ ಕಾರಿಕೆಯಲ್ಲಿ 'ತಥಾ ಚ ಪುಮಾನ್' ಎಂದು ಹೇಳಿರುವುದನ್ನು ನೋಡಿದರೆ ಇದೇ ಅನುಮಾನ ಬರುತ್ತದೆ. 10ನೆಯ ಕಾರಿಕೆಯಲ್ಲಿ ಈ ಪುರುಷದ ವಿಚಾರವಾಗಿ ಪ್ರತ್ಯಕ್ಷವಾಗಿ ಏನೂ ಹೇಳಿಲ್ಲವಾದರೂ ಪುರುಷದ ಸ್ವಭಾವವನ್ನು ಅರ್ಥ ಮಾಡಿಕೊಳ್ಳಲು 'ತಥಾ ಚ ಪುಮಾನ್' ಎಂಬುದನ್ನು ಬಳಸಬೇಕು. ಇಲ್ಲವಾದರೆ 11ನೆಯ ಕಾರಿಕೆಯ ಸಂದರ್ಭದಲ್ಲಿ ಈ 'ತಥಾ ಚ ಪುಮಾನ್' ಎಂಬುದಕ್ಕೆ ಅರ್ಥವೇ ಬರುವುದಿಲ್ಲ.

ಗೌಡಪಾದರು 11ನೆಯ ಕಾರಿಕೆಯನ್ನು ವ್ಯಾಖ್ಯಾನಿಸುವಾಗ 'ಹಿಂದಿನ ಕಾರಿಕೆಯಲ್ಲಿರುವ ಪ್ರಕೃತಿಯ ಸ್ವಭಾವದ ವರ್ಣನೆ ಪುರುಷಕ್ಕೂ ಅನ್ವಯಿಸುತ್ತದೆ'[2] ಎನ್ನುತ್ತಾರೆ. 11ನೆಯ ಕಾರಿಕೆಯಲ್ಲಿ 'ತದ್ವಿಪರೀತಃ' (ತದ್ವಿರುದ್ಧವಾದುದು) ಎಂದು ಹೇಳಿದ್ದು ಪ್ರಕೃತಿ ಹಾಗೂ ಅದರ ವ್ಯಕ್ತ ಸ್ವರೂಪ ಮೂರು ಗುಣಗಳಿಂದ ಕೂಡಿ ಅದು ಸ್ವಭಾವತಃ ಅಚೇತನ ಮತ್ತು ಅವಿವೇಕಿಯಾದುದರಿಂದ ಪುರುಷಕ್ಕಿಂತ ಅದು ದೂರವಾಗಿದೆ ಎಂಬುದನ್ನು ಸೂಚಿಸುತ್ತದೆ. ಇದೇ ವಿಷಯವನ್ನು ಸಮೀಕ್ಷಿಸುತ್ತ ಗೌಡಪಾದರು 'ಪ್ರಕೃತಿ ಹಾಗೂ ಅದರ ವ್ಯಕ್ತ ಸ್ವರೂಪಗಳಿಗಿಂತ ಪುರುಷ ಭಿನ್ನವಾದುದು'[3] ಎನ್ನುತ್ತಾರೆ. 10ನೆಯ ಕಾರಿಕೆಯಲ್ಲಿ ವ್ಯಕ್ತವು 'ಅನೇಕ' ಎಂದು

2 ತತ್ ಪೂರ್ವಸ್ಯಾಮಾರ್ಯಾಯಾಮ್ ಪ್ರಧಾನಮಹೇತುಮದ್ಯಥಾ ವ್ಯಾಖ್ಯಾತಮ್ ತಥಾ ಚ ಪುಮಾನ್ ಇತಿ.

3 ತದ್ವಿಪರೀತಸ್ತಾಭ್ಯಾಮ್‌ವ್ಯಕ್ತಾ ವ್ಯಕ್ತಾಭ್ಯಾಮ್ ವಿಪರೀತಃ ಪುಮಾನ್ ಇತಿ.

ಹೇಳಿ ಪ್ರಕೃತಿ (ಅಥವಾ ಪ್ರಧಾನ) ತದ್ವಿರುದ್ಧವಾದುದು ಅಂದರೆ 'ಏಕ' ಎಂದು ಹೇಳಲಾಗಿದೆ. ಮೇಲೆ ಹೇಳಿದ ಗೌಡಪಾದರ ವ್ಯಾಖ್ಯಾನದ ಪ್ರಕಾರ 10ನೆಯ ಕಾರಿಕೆಯಲ್ಲಿ ಹೇಳಲಾದ ವ್ಯಕ್ತ ಸ್ವರೂಪಗಳ ವಿರೋಧಿ ಗುಣಗಳ ಪಟ್ಟಿಗೆ ಮಾತ್ರ ಪುರುಷ ಪ್ರಕೃತಿಯೊಂದಿಗೆ ಸಮಾನತೆ ಹೊಂದಿದೆ. ಹೀಗೆ ಪುರುಷ ಸಹಿತ ಒಂದೇ – 'ಏಕ'.

ಹಾಗಿದ್ದರೂ ಇನ್ನೊಂದು ಕಾರಿಕೆಯಲ್ಲಿ ಮೇಲಣ ಅಭಿಪ್ರಾಯದ ವಿರೋಧಾಭಾಸ ಕಂಡುಬರುತ್ತದೆ.

"ಜನ್ಮ ಮರಣ ಕರಣಾನಾಂ ಪ್ರತಿನಿಯಮಾದಯುಗಪತ್ಪ್ರವೃತ್ತೇಶ್ಚ।
ಪುರುಷ ಬಹುತ್ವಂ ಸಿದ್ಧಂ ತ್ರೈಗುಣ್ಯವಿಪರ್ಯಯಾಚ್ಚೈವ" ಸಾಂ. ಕಾ. 18

(ಪುರುಷಗಳು ಅನೇಕ ಇವೆ. ಏಕೆಂದರೆ ಜನನ ಮರಣಗಳು ಹಾಗೂ ಇಂದ್ರಿಯಗಳು, ಮತ್ತು ಅವುಗಳ ಕ್ರಿಯೆಗಳು ಭಿನ್ನವಾಗಿರುವುದರಿಂದ ಹಾಗೂ ತ್ರಿಗುಣಗಳು ಬೇರೆ ಬೇರೆ ಪುರುಷಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಕ್ರಿಯಾತ್ಮಕವಾಗಿರುವುದರಿಂದ ಪುರುಷದ ಬಹುತ್ವವು ರುಜುವಾತಾಗುತ್ತದೆ.)

ಮೇಲಿನ ಕಾರಿಕೆಯನ್ನು ಓದಿದಾಗ ಈ ವಿರೋಧಾಭಾಸ ಸ್ಪಷ್ಟವಾಗುತ್ತದೆ. ಹೀಗಿದ್ದರೂ ವ್ಯಾಖ್ಯಾನಕಾರರು ಈ ವಿಚಾರವಾಗಿ ಮೌನವಹಿಸಿರುವುದು ಆಶ್ಚರ್ಯಕರ; ವಿವಾದವನ್ನು ಸ್ಪಷ್ಟಪಡಿಸಿ ಅದನ್ನು ನೇರವಾಗಿ ಪರಿಹರಿಸಲು ಪ್ರಯತ್ನಿಸದೆಯೇ ಇರುವುದನ್ನು ನೋಡಿದರೆ ಅವರು ಯಾವ ದ್ವಂದ್ವವನ್ನೂ ಎದುರಿಸಲಿಲ್ಲವೆಂಬಂತೆ ಕಾಣಿಸುತ್ತದೆ. ಈ ವಿರೋಧಾಭಾಸ ಅವರ ಕಣ್ಣಿಗೆ ಬೀಳಲಿಲ್ಲ ಎಂದು ಹೇಳಿದರೆ ಬಹುಶಃ ತಪ್ಪಾದೀತು, ಏಕೆಂದರೆ ಈ ವಿರೋಧಾಭಾಸ ಇಷ್ಟು ಸ್ಪಷ್ಟವಾಗಿರುವಾಗ ಗೌಡಪಾದರು, ವಾಚಸ್ಪತಿ ಮಿಶ್ರರಂತಹ ಧೀಮಂತವ್ಯಾಖ್ಯಾನಕಾರರು ಅದನ್ನು ನೋಡಿಯೂ ಉಪೇಕ್ಷಿಸಿರಲು ಹೇಗೆ ಸಾಧ್ಯ ?

ಪುರುಷದ ಬಹುತ್ವವನ್ನು ಸಮರ್ಥಿಸುತ್ತ ಡಾ॥ ಅನಿಮಾ ಸೇನ್‌ಗುಪ್ತರು, ಸಾಂಖ್ಯದರ್ಶನ ಪುರುಷ ಬಹುತ್ವವನ್ನು ಪ್ರತಿಪಾದಿಸುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಅದ್ವೈತ ವೇದಾಂತವು ಪುರುಷ ಬಹುತ್ವವನ್ನು ತಳ್ಳಿಹಾಕಬಹುದಾದರೂ ಸಾಂಖ್ಯದರ್ಶನದ ಪ್ರಕಾರ ಪುರುಷ ಬಹುತ್ವವು ಅನುಭವ ಸಾಧ್ಯ ಹಾಗೂ ಸತ್ಯ. ಆ ಕಾರಣದಿಂದ ಇದನ್ನು ಒಪ್ಪಲೇ ಬೇಕು. "ಅದ್ವೈತ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಸಾಂಖ್ಯವನ್ನು ವ್ಯಾಖ್ಯಾನಿಸಲು ಹೊರಟಾಗ, ನಾವು ಹೆಜ್ಜೆ ಹೆಜ್ಜೆಗೂ ತಾರ್ಕಿಕ ವಿರೋಧಾಭಾಸಗಳನ್ನೂ ಕ್ರಮಹೀನತೆಯನ್ನೂ ಕಂಡೇ ಕಾಣುತ್ತೇವೆ"[4]. ಪ್ರಜ್ಞೆ ಏಕ ಹಾಗೂ ಬಹುತ್ವ ಬರಿ ತೋರಿಕೆ ಎಂದು ಸಾಂಖ್ಯ

4. ಎಸ್ಸೇಸ್ ಆನ್ ಸಾಂಖ್ಯ ಎಂಡ್ ಅದರ್ ಸಿಸ್ಟಮ್ಸ್ ಆಫ್ ಇಂಡಿಯನ್ ಫಿಲಾಸಫಿ —ಡಾ॥ ಅನಿಮಾ ಸೇನ್‌ಗುಪ್ತ–ಪುಟ. 34

ಹೇಳುತ್ತದೆ ಎಂದು ಹೇಳಿದರೆ ಅದು ಅತಾರ್ಕಿಕವಾದೀತು ಎಂದು ಅಸಿವಾ ಸೇನ್‌ಗುಪ್ತರು ಹೇಳುತ್ತಾರೆ. ಏಕೆಂದರೆ ಆಗ ಅದರ ವಾಸ್ತವಿಕ ಹಾಗೂ ದ್ವೈತ ಸ್ವರೂಪದ ಗತಿ ಏನಾದೀತು? ಆದರೆ ಡಾ॥ ಅಸಿವಾ ಸೇನ್ ಗುಪ್ತರು 10 ಮತ್ತು 11 ನೆಯ ಕಾರಿಕೆಗಳಲ್ಲಿ ಕಂಡು ಬರುವ ಪುರುಷ ಬಹುತ್ವದ ವಿರೋಧಾಭಾಸವನ್ನು ಕುರಿತು ಚರ್ಚಿಸುವ ಹಾಗೆ ಕಾಣುವುದಿಲ್ಲ.

ಇನ್ನೊಂದು ರೀತಿಯಲ್ಲಿ ವಿಚಾರ ಮಾಡ ಹೊರಟರೂ ಪುರುಷ ಬಹುತ್ವವನ್ನೇ ಸಾಂಖ್ಯದರ್ಶನ ಸಮರ್ಥಿಸುತ್ತದೆ ಎಂದು ತೋರುತ್ತದೆ. ಜೀವಗಳು ದುಃಖಮಯವಾಗಿವೆ ಎಂಬುದನ್ನು ತೋರಿಸಲು ಸಾಂಖ್ಯಕಾರಿಕೆಯು ಪ್ರಾರಂಭದಲ್ಲಿಯೇ ದುಃಖದ ಸಿದ್ಧಾಂತವನ್ನು ಪ್ರತಿಪಾದಿಸಲಾಗಿದೆ.[5] ಈ ದುಃಖದಿಂದ ನಾವು ಸಂಪೂರ್ಣ ಉದಾಸೀನರಾಗಿರಬೇಕಾದರೆ ನಮಗೆ ಸಂಪೂರ್ಣ ಮುಕ್ತಿಯನ್ನು ತಂದು ಕೊಡುವ ಬೇರೆ ಒಂದು ದೃಷ್ಟಿಕೋನದಿಂದ ನಾವು ಜೀವನವನ್ನು ನೋಡಬೇಕಾಗುತ್ತದೆ. ಈ ಸಿದ್ಧಾಂತ ಪುರುಷ ಬಹುತ್ವವನ್ನು ನಾವು ನಿರ್ವಿವಾದವಾಗಿ ಒಪ್ಪಿಕೊಳ್ಳುವಂತೆ ಮಾಡುತ್ತದೆ. ಏಕೆಂದರೆ ಒಂದೇ ಪುರುಷಕ್ಕೆ ಅನ್ವಯಿಸಿದಲ್ಲಿ ಅದು ತನ್ನ ಮಹತ್ವವನ್ನೇ ಕಳೆದುಕೊಳ್ಳುತ್ತದೆ.

ಈ ಮೇಲಿನ ವಿರೋಧಾಭಾಸದಿಂದಾಗಿ ನಮಗೆ ಒಂದೇ ಒಂದು ಪರ್ಯಾಯ ಉಳಿಯುತ್ತದೆ. ಸಾಂಖ್ಯದರ್ಶನ ಪುರುಷದ ಏಕತೆಯನ್ನು ಪ್ರತಿಪಾದಿಸುತ್ತದೆ ಎಂದು ಹೇಳಿ ಈ ಆಧಾರದ ಮೇಲೆ 18 ನೆಯ ಕಾರಿಕೆಯಲ್ಲಿ ಹೇಳಲಾದ ಪುರುಷ ಬಹುತ್ವವನ್ನು ವಿವರಿಸಲು ಪ್ರಯತ್ನಿಸಬೇಕು. ಅಥವಾ ಸಾಂಖ್ಯದರ್ಶನ ಪುರುಷ ಬಹುತ್ವವನ್ನು ಸಮರ್ಥಿಸುತ್ತದೆ ಎಂದು ಹೇಳಿ ಆ ಆಧಾರದ ಮೇಲೆ 10 ಮತ್ತು 11 ನೆಯ ಕಾರಿಕೆಗಳಲ್ಲಿ ಹೇಳಲಾಗಿರುವ ಪುರುಷದ ಏಕತೆಯನ್ನು ವಿವರಿಸಲು ಪ್ರಯತ್ನಿಸಬೇಕು. ಆದರೆ ಸಾಂಖ್ಯದರ್ಶನ ಪುರುಷ ಬಹುತ್ವವನ್ನೇ ಪ್ರತಿಪಾದಿಸುತ್ತದೆ ಎಂದು ಎಲ್ಲರೂ ಒಪ್ಪಿಕೊಳ್ಳುವುದರಿಂದ 10 ಮತ್ತು 11ನೆಯ ಕಾರಿಕೆಗಳನ್ನು ನಾವು ಸರಿಯಾದ ಪರಿಪ್ರೇಕ್ಷದಲ್ಲಿಟ್ಟು ನೋಡಲು ಪ್ರಯತ್ನಿಸುವದೇ ಸಮಂಜಸ ಎನಿಸುತ್ತದೆ.

ಈ ಎಲ್ಲ ಕಾರಿಕೆಗಳಲ್ಲೂ ಕಂಡು ಬರುವ ವಿರೋಧಾಭಾಸಗಳನ್ನು ವಿಚಾರ ಮಾಡುವ ಸಂದರ್ಭ ಒಂದೇ ಆಗಿರಬಾರದು. ಏಕೆಂದರೆ ಪುರುಷನ ಮುಕ್ತಿಗಾಗಿ ಪ್ರಕೃತಿ ಸೃಷ್ಟಿಯಲ್ಲಿ ತೊಡಗಿರುವ ಸಂದರ್ಭದಲ್ಲಿ ಪುರುಷ ಒಂದೇ ಎಂಬ ಅರ್ಥ ಬರುತ್ತದೆ. ಇದನ್ನೇ 10 ನೆಯ ಕಾರಿಕೆ ಸೂಚಿಸುತ್ತದೆ. ಒಂದು ಸಾರಿಗೆ ಒಂದೇ

---

5. ದುಃಖತ್ರಯಾಭಿಘಾತಾಜ್ಜಿಜ್ಞಾಸಾ ತದಭಿಘಾತಕೇ ಹೇತೌ ।
ದೃಷ್ಟೇ ಸಾದಾರ್ಥಾ ಚೇನ್ನೈಕಾಂತಾತ್ಯಂತತೋಽಭಾವಾತ್ ॥

ವಿರೋಧಾಭಾಸವನ್ನು ಸಮರ್ಥಿಸದೆ ಸಂದರ್ಭವನ್ನು ಸ್ಪಷ್ಟೀಕರಿಸುತ್ತದೆ. ಅಂದರೆ ಪುರುಷಗಳು ಅನೇಕವಿದ್ದರೂ ಪ್ರಕೃತಿ ಒಂದು ಸಾರಿಗೆ ಒಂದೇ ಪುರುಷವನ್ನು ಮುಕ್ತಗೊಳಿಸುತ್ತದೆ.

'ಅಯುಗಪತ್' ಎಂಬ ಶಬ್ದವನ್ನು ಬಳಸಿ ಕಾರಿಕೆ ಗೊಂದಲವನ್ನು ತಿಳಿಗೊಳಿಸುತ್ತದೆ. 'ಅಯುಗಪತ್' ಅಂದರೆ 'ಏಕಕಾಲಿಕವಲ್ಲ' ಎಂದು ಅರ್ಥ. ಅಂದರೆ ಪ್ರತಿಯೊಂದು ಪುರುಷಕ್ಕೂ ಹುಟ್ಟು, ಸಾವು, ಮುಕ್ತಿ ಬೇರೆ ಬೇರೆಯಾಗಿರುತ್ತವೆ. ಆದುದರಿಂದ 18 ನೆಯ ಕಾರಿಕೆ ಪುರುಷ ಬಹುತ್ವವನ್ನು ಉಲ್ಲೇಖಿಸಿದಾಗ ಒಂದಣ ಅಂದರೆ 10 ನೆಯ ಕಾರಿಕೆಗೂ ಇದಕ್ಕೂ ಯಾವ ತರಹದ ಸಂಬಂಧವೂ ಇಲ್ಲ. ಅಲ್ಲಿ ಅದರ ಆಧಾರವೇ ಬೇರೆ. 'ಪ್ರತಿ ಪುರುಷ ವಿಮೋಕ್ಷಾರ್ಥಮ್' ಎಂದು ಹೇಳುವುದರ ಮೂಲಕ ಮುಂದಿನ ಇನ್ನೊಂದು ಕಾರಿಕೆ ಇದನ್ನೇ ಸಮರ್ಥಿಸುತ್ತದೆ.[6] 10 ನೆಯ ಕಾರಿಕೆಯಲ್ಲಿ ಪ್ರಕೃತಿ ಪುರುಷಗಳ ಸಂಯೋಗವನ್ನು ತೋರಿಸಲಾಗಿದೆ. ಹೀಗೆ, ಸಂಯೋಗ ಯಾವಾಗಲೂ ಒಂದೇ ಪುರುಷದೊಡನೆ ಇರುವುದರಿಂದ 'ಏಕ:' ಶಬ್ದದ ಬಳಕೆ ಇಲ್ಲಿ ಸಮರ್ಪಕವಾಗಿದೆ. 18 ನೆಯ ಕಾರಿಕೆಯಲ್ಲಿ 'ಅಯುಗಪತ್ ಪ್ರವೃತ್ತಿ' ಎಂದು ಹೇಳಿರುವುದು ಸಾಂಖ್ಯ ದರ್ಶನ ಪುರುಷ ಬಹುತ್ವವನ್ನು ಪ್ರತಿಪಾದಿಸುತ್ತದೆ ಎನ್ನುವುದನ್ನು ಸಮರ್ಥಿಸುತ್ತದೆ. ಹೀಗೆ ನಾವು ಈ ಎಲ್ಲ ಕಾರಿಕೆಗಳನ್ನು ಒಟ್ಟಿಗೆ ಓದಿ ಒಂದೇ ತತ್ತ್ವವನ್ನು ಎರಡು ಬೇರೆ ಬೇರೆ ದೃಷ್ಟಿಕೋಣಗಳಿಂದ ನೋಡಲು ಪ್ರಯತ್ನಿಸಿದಾಗ ವಿರೋಧಾಭಾಸ ಎದುರಾಗುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಈ ವಿಶ್ಲೇಷಣೆಯಿಂದ ಕಾರಿಕೆಗಳಲ್ಲಿ ತೋರಿಕೆಯ ವಿರೋಧಾಭಾಸವೇ ಆಗಲಿ, ನಿಜವಾದ ವಿರೋಧಾಭಾಸವೇ ಆಗಲಿ ಇಲ್ಲ ಎಂದು ತಿಳಿಯುತ್ತದೆ. ತಪ್ಪು ಎರಡು ವಿಚಾರಗಳನ್ನು ಒಂದೇ ಎಂದು ಭಾವಿಸುವ ನಮ್ಮ ದೃಷ್ಟಿಕೋಣದಲ್ಲಿದೆ. ಆದುದರಿಂದ ಈ ಸಮಸ್ಯೆ ನಿಜವಾದ ಸಮಸ್ಯೆಯಾಗಿರದೆ ನಾವೇ ಕಲ್ಪಿಸಿಕೊಂಡ ಸಮಸ್ಯೆಯಾಗಿರುತ್ತದೆ.

ಸಾಂಖ್ಯ ದರ್ಶನದ ಇನ್ನೊಂದು ಸಮಸ್ಯೆ ಪುರುಷನ ಸ್ವಭಾವಕ್ಕೆ ಸಂಬಂಧಪಟ್ಟಿದ್ದು. ಇಲ್ಲೂ ಅಷ್ಟೆ, ಎರಡು ಕಾರಿಕೆಗಳು ಪರಸ್ಪರ ವಿರೋಧಿಸುತ್ತಿರುವ ಹಾಗೆಯೇ ಕಾಣುತ್ತವೆ.

"ಸಂಘಾತ ಪರಾರ್ಥತ್ವಾತ್ ತ್ರಿಗುಣಾದಿ ವಿಪರ್ಯಯಾದಧಿಷ್ಠಾನಾತ್ ।
ಪುರುಷೋಽಸ್ತಿ ಭೋಕ್ತೃಭಾವಾತ್ ಕೈವಲ್ಯಾರ್ಥ ಪ್ರವೃತ್ತೇಶ್ಚ"—
ಸಾಂ. ಕಾ. 17

---

6. ಸ್ವಾರ್ಥ ಇವ ಪರಾರ್ಥ ಆರಂಭಃ — ಸಾಂಖ್ಯಕಾರಿಕಾ. 56

(ವಸ್ತುಗಳು ಇನ್ನೊಂದರ ಪ್ರಯೋಜನಕ್ಕಾಗಿಯೇ ಇರುವುದರಿಂದ ಅವುಗಳನ್ನು ಭೋಗಿಸಲು, ಮೋಕ್ಷವನ್ನು ಸಾಧಿಸಲು, ತ್ರಿಗುಣಾತ್ಮಕ ಪ್ರಕೃತಿಯ ವಿರೋಧಿ ತತ್ವವೊಂದು ಅಸ್ತಿತ್ವವನ್ನು ಪಡೆದಿರಲೇಬೇಕು. ಆ ತತ್ವವೇ ಪುರುಷ.)

17ನೆಯ ಕಾರಿಕೆಯ ವಸ್ತುವಿನ ವಿಷಯವಾಗಿ ವಿಚಾರ ಮಾಡುವುದಕ್ಕಿಂತ ಮೊದಲು ಪುರುಷದ ಸ್ವಭಾವವನ್ನು ಅರಿಯುವುದು ಉಚಿತ. ಏಕೆಂದರೆ ಈ ಮೇಲಿನ ಕಾರಿಕೆಯಲ್ಲಿ ಅದರ ಸ್ವಭಾವದ ಮೂಲಕವೇ ಪುರುಷದ ಅಸ್ತಿತ್ವವನ್ನು ರುಜುವಾತು ಪಡಿಸಲು ಪ್ರಯತ್ನಿಸಲಾಗಿದೆ. ಸಾಂಖ್ಯದಲ್ಲಿ ಪುರುಷವು ಶಾಂತ ಸ್ವಭಾವದ್ದೆಂದು ವರ್ಣಿಸಲಾಗಿದೆ. ಅಂತಹ ಸ್ಥಿತಿಯಲ್ಲಿ ಮನಸ್ಸಿನ ಅಶಾಂತ ಪರಿಸ್ಥಿತಿ ಅದಕ್ಕೇನೂ ಮಾಡಲಾರದು. ಪುರುಷದಲ್ಲಿ ಯಾವ ಆಕಾಂಕ್ಷೆಯೂ ಸಾಧ್ಯವಿಲ್ಲವಾದುದರಿಂದ ಅದಕ್ಕೆ 'ಉದಾಸೀನ' 'ಮಧ್ಯಸ್ಥ' ಮೊದಲಾದ ಗುಣಗಳನ್ನು ಆರೋಪಿಸಲಾಗಿದೆ. 19 ಹಾಗೂ 20ನೆಯ ಕಾರಿಕೆಗಳು ಇದೇ ವಿಚಾರವನ್ನು ಸಮರ್ಥಿಸುತ್ತವೆ.

"ತಸ್ಮಾಚ್ಚ ವಿಪರ್ಯಾಸಾತ್ ಸಿದ್ಧಂ ಸಾಕ್ಷಿತ್ವಮಸ್ಯ ಪುರುಷಸ್ಯ
ಕೈವಲ್ಯಂ ಮಾಧ್ಯಸ್ಥ್ಯಂ ದೃಷ್ಟತ್ವಮಕರ್ತೃಭಾವಶ್ಚ

—ಸಾಂ. ಕಾ. 19

ಮೇಲೆ ಹೇಳಿದ ವಿರೋಧಿ ಗುಣಗಳಿಂದ ಪುರುಷವು ಸಾಕ್ಷಿ ಮಾತ್ರ ಎನ್ನುವುದು ರುಜುವಾತಾಗುತ್ತದೆ. ಅದು ಸುಖ-ದುಃಖ ರಹಿತ, ಉದಾಸೀನ, ಪ್ರೇಕ್ಷಕ ಹಾಗೂ ನಿಷ್ಕ್ರಿಯವಾಗಿರುತ್ತದೆ).

"ತಸ್ಮಾತ್ತತ್ಸಂಯೋಗಾದಚೇತನಂ ಚೇತನಾವದಿವ ಲಿಂಗಮ್
ಗುಣಕರ್ತೃತ್ವೇಚ ತಥಾ ಕರ್ತೇವ ಭವತ್ಯುದಾಸೀನಃ"

—ಸಾಂ. ಕಾ. 20

(ಆದುದರಿಂದ ಅದರ ಸಂಸರ್ಗದಿಂದಾಗಿ ಅಚೇತನ ಲಿಂಗವು ಅಂದರೆ ಶರೀರವು ಚೇತನದಂತೆ ಕಾಣುತ್ತದೆ. ಹಾಗೂ ಕ್ರಿಯೆ ಗುಣಗಳಿಗೆ ಸಂಬಂಧ ಪಟ್ಟಿದ್ದರೂ ಸಹ, ಉದಾಸೀನ ಪುರುಷ ಕರ್ತೃವಿನಂತೆ ಕಾಣುತ್ತದೆ.)

ಈ ಕಾರಿಕೆಗಳನ್ನು ಕುರಿತು ವ್ಯಾಖ್ಯಾನಿಸುವಾಗ ಗೌಡಪಾದ ಹಾಗೂ ವಾಚಸ್ಪತಿ ಮಿಶ್ರರು ಯಾವ ತರಹದ ವಿರೋಧಾಭಾಸದ ಬಗ್ಗೆಯೂ ಮಾತನಾಡುವುದಿಲ್ಲ. ಅಷ್ಟೇ ಅಲ್ಲ, ಯಾವುದೇ ಅಸಂಗತಿಯ ಮಾತೆತ್ತದೆ ಅವರು ಆಯಾ ಕಾರಿಕೆಗಳಲ್ಲಿ ಉಲ್ಲೇಖಿಸಲಾದ ಪುರುಷದ ಸ್ವಭಾವವನ್ನೇ ವಿವರಿಸುತ್ತ ಹೋಗುತ್ತಾರೆ. 17ನೆಯ ಕಾರಿಕೆಯಲ್ಲಿ ಪುರುಷವು ಭೋಕ್ತೃ ಸ್ವಭಾವ ಉಳ್ಳದ್ದೆಂದು ಹೇಳಿದುದರ ಬಗ್ಗೆ ವ್ಯಾಖ್ಯಾನಿಸುತ್ತ ಗೌಡಪಾದರು, "ಪುರುಷ ಅಸ್ತಿತ್ವ ಉಳ್ಳದ್ದು, ಅದಕ್ಕಾಗಿಯೇ

'ಮಹತ್'ನ್ನುಳ್ಳ ಶರೀರವನ್ನು ಸೃಷ್ಟಿಸಲಾಗಿದೆ..."[7] ಎಂದು ಹೇಳಿ "ಸಿಹಿ, ಹುಳಿ, ಉಪ್ಪು, ಖಾರ, ಕಹಿ, ಕಷಾಯ ಇತ್ಯಾದಿ ಷಡ್ರಸಗಳ ಭೋಕ್ತೃ ಒಬ್ಬ ಇರಲೇಬೇಕೆಂದು ಅನುಮಾನಿಸುವಂತೆ 'ಮಹತ್' ಹಾಗೂ ಇನ್ನಿತರ ಗುಣಗಳು ತಾವೇ ಭೋಕ್ತೃಗಳಾಗಲಾರವಾದುದರಿಂದ ಈ ಶರೀರವನ್ನು ಅನುಭೋಗಿಸುವ ಆತ್ಮ ಒಂದಿರಲೇ ಬೇಕು ಎಂದು ಅನುಮಾನಿಸುತ್ತೇವೆ..."[8] ಎನ್ನುತ್ತಾರೆ.

ಇದೇ ರೀತಿಯಲ್ಲಿ ವಾಚಸ್ಪತಿ ಮಿಶ್ರರೂ ಮೇಲೆ ಹೇಳಿದ ಸ್ವಭಾವವನ್ನು ಸಮೀಕ್ಷಿಸುತ್ತ ಯಾವ ವಿರೋಧಾಭಾಸವನ್ನು ಉಲ್ಲೇಖಿಸದೆಯೇ ಆ ಸ್ವಭಾವನ್ನೇ ಸಮರ್ಥಿಸುತ್ತಾರೆ. 17ನೆಯ ಕಾರಿಕೆಯನ್ನು ಕುರಿತು ಅವರು 'ಯಾರಾದರೊಬ್ಬ ಅನುಭೋಗಿಸಲು ಇರಲೇಬೇಕು, ಆದ್ದರಿಂದ ಆತ್ಮ ಎಂಬುದೊಂದು ಇದ್ದೇ ಇರಬೇಕು. 'ಯಾರಾದರೂ ಭೋಗಿಸಲು ಇರಲೇಬೇಕು' ಎಂಬುದು ಸುಖ-ದುಃಖಗಳ ರೂಪದಲ್ಲಿ ಅನುಭವಿಸುವ ವಸ್ತುಗಳನ್ನು ಸೂಚಿಸುತ್ತದೆ. ಸುಖ-ದುಃಖಗಳ ಅನುಭವದ ವಸ್ತುಗಳು, ಅವುಗಳನ್ನು ಎಲ್ಲರೂ ಅನುಕೂಲ ಹಾಗೂ ಪ್ರತಿಕೂಲ ಭಾವಗಳ ರೂಪದಲ್ಲಿ ಅನುಭವಿಸುತ್ತಾರೆ. ಆದರೆ ಯಾವುದಕ್ಕೆ ಈ ಭಾವಗಳು ಅನುಕೂಲ ಹಾಗೂ ಪ್ರತಿಕೂಲವಾಗಿರುತ್ತವೆಯೋ ಅಂತಹುದೊಂದು ಇರಲೇಬೇಕು. ಮಹತ್ ಹಾಗೂ ಇನ್ನಿತರ ಗುಣಗಳಿಗೆ ಈ ಭಾವಗಳು ಅನುಕೂಲ ಅಥವಾ ಪ್ರತಿಕೂಲವಾಗಿರಲಾರವು. ಏಕೆಂದರೆ, ಮಹತ್ ಮೊದಲಾದವುಗಳು ಸುಖ-ದುಃಖ ಹಾಗೂ ಮಾಯೆಗಳಿಂದಲೇ ಕೂಡಿಕೊಂಡಿರುವುದರಿಂದ, ಹಾಗಿರುವುದು ವಸ್ತುಗಳು ತಮ್ಮ ಬಗ್ಗೆ ತಾವೇ ಪ್ರತಿಕ್ರಿಯೆ ಹೊಂದುವ ವಿರೋಧಾಭಾಸದಲ್ಲಿ ಪರಿಣಮಿಸುತ್ತದೆ. ಹೀಗೆ ಯಾವುದು ಸುಖ ಮೊದಲಾದವುಗಳಿಂದ ಕೂಡಿರುವುದಿಲ್ಲವೋ ಅದಕ್ಕೇ ವಸ್ತುಗಳು ಅನುಕೂಲ ಅಥವಾ ಪ್ರತಿಕೂಲವಾಗಿರುತ್ತವೆ. ಹಾಗೂ

---

7. ಅಸ್ತಿ ಪುರುಷ : ಯಸ್ಯೇದರ ಭೋಗ್ಯಂ ಶರೀರಂ ಮಹದಾದಿ ಸಂಘಾತರೂಪಂ ಸಮುತ್ಪನ್ನಮಿತಿ.

8. ಯಥಾ ಮಧುರಾಮ್ಲಲವಣ ಕಟುತಿಕ್ತ ಷಡ್ರಸೋಪಬೃಂಹಿತಸ್ಯ ಸಂಯುಕ್ತಸ್ಯಾನ್ನಸ್ಯ ಸಾಧ್ಯತೆ ಏವಂ ಮಹದಾದಿಲಿಂಗಸ್ಯ ಭೋಕ್ತೃತ್ವ ಭಾವಾದಸ್ತಿ ಸ ಆತ್ಮಾ ಯಸ್ಯೇದಂ ಭೋಗ್ಯಂ ಶರೀರಮಿತಿ

ಅಂತಹುದು ಆತ್ಮವೇ ಆಗಿರಬೇಕು"[9] ಎನ್ನುತ್ತಾರೆ. ಪುರುಷವು 17 ನೆಯ ಕಾರಿಕೆಯಲ್ಲಿ ವಿವರಿಸಿರುವುದರ ತದ್ವಿರುದ್ಧವಾಗಿರುತ್ತದೆ ಅಂದರೆ ಉದಾಸೀನ ಹಾಗೂ ತಟಸ್ಥವಾಗಿರುತ್ತದೆ ಎನ್ನುವುದನ್ನು 19 ಹಾಗೂ 20 ನೆಯ ಕಾರಿಕೆಗಳು ಸ್ಪಷ್ಟಪಡಿಸುತ್ತವೆ. ಈ ಬಗ್ಗೆ ಚರ್ಚಿಸುತ್ತ ಗೌಡಪಾದರು, 'ಪುರುಷವು ಪರಿವ್ರಾಜಕನಂತೆ ಉದಾಸೀನವಾಗಿರುತ್ತದೆ'[10] ಎನ್ನುತ್ತಾರೆ. ವಾಚಸ್ಪತಿ ಮಿಶ್ರರೂ ಪುರುಷದ ಈ ಸ್ವಭಾವವನ್ನೇ ಒಪ್ಪಿಕೊಳ್ಳುತ್ತ, 'ಗುಣಗಳು ಇಲ್ಲದಿರುವುದರಿಂದ ಪುರುಷ ಮಧ್ಯಸ್ಥ ಭಾವ ಉಳ್ಳದ್ದಾಗಿರುತ್ತದೆ. ಸುಖದಲ್ಲಿ ತೃಪ್ತರಾಗಿರುವವರೂ ದುಃಖದಿಂದ ತಪ್ತರಾಗಿರುವವರೂ? ಈ ಮಧ್ಯಸ್ಥ ಭಾವವನ್ನು ಹೊಂದಿರುವುದು ಸಾಧ್ಯವಿಲ್ಲ. ಇವೆರಡೂ ಇಲ್ಲವಾದುದರಿಂದಲೇ ಅದನ್ನು ಮಧ್ಯಸ್ಥ ಅಥವಾ ಉದಾಸೀನ ಎನ್ನಲಾಗುತ್ತದೆ'[11] ಎನ್ನುತ್ತಾರೆ.

ಪುರುಷವು ವಾಸ್ತವವಾಗಿ ಉದಾಸೀನವಾಗಿದ್ದಲ್ಲಿ, 17ನೆಯ ಕಾರಿಕೆಯಲ್ಲಿ ಅದನ್ನು 'ಭೋಗಿ' ಎಂದು ವರ್ಣಿಸಿದ್ದು ವಿಚಿತ್ರವಾಗಿ ಕಾಣುತ್ತದೆ. ಕಾರ್ಯದ ಪ್ರಮಾಣವು ಕಾರಣದ ಪ್ರಮಾಣವೂ ಆಗುವಂತೆ, ಪುರುಷದ ಅಸ್ತಿತ್ವವನ್ನು ರುಜುವಾತು ಪಡಿಸಲು ಮಾತ್ರ ಇಲ್ಲಿ ಅದರ ಭೋಕ್ತೃಭಾವವನ್ನು ಬಳಸಲಾಗಿದೆ. ಪ್ರಕೃತಿ ಭೋಗ್ಯವಸ್ತುವಾದುದರಿಂದ ಅದನ್ನು ಭೋಗಿಸಲು ಯಾರಾದರೂ ಇರಲೇಬೇಕು. ಹಿಂದಣ ಕಾರಿಕೆಯಲ್ಲಿ ಲೇಖಕ ಪ್ರಕೃತಿಯ ಅಸ್ತಿತ್ವವನ್ನು ರುಜುವಾತುಪಡಿಸಿ, 17ನೆಯ ಕಾರಿಕೆಯಲ್ಲಿ ಪುರುಷದ ಅಸ್ತಿತ್ವವನ್ನು ರುಜುವಾತುಪಡಿಸಲು ಪ್ರಯತ್ನಿಸುತ್ತಾನೆ. ಹಿಂದಣ ಕಾರಿಕೆಯಲ್ಲಿ ಪ್ರಕೃತಿಯನ್ನು ಭೋಗ್ಯವಸ್ತುವೆಂದು ತೋರಿಸಿದ ಮೇಲೆ ಪುರುಷದ ಅಸ್ತಿತ್ವವನ್ನು ರುಜುವಾತುಪಡಿಸಲು ಅದನ್ನು "ಭೋಕ್ತೃ" ಎಂದು ತೋರಿಸುವುದು ಸ್ವಾಭಾವಿಕ ಹಾಗೂ ಸುಸಂಗತ ಎನಿಸುತ್ತದೆ.

---

9. ಭೋಕ್ತೃಭಾವೇನ ಭೋಗ್ಯೇ ಸುಖದುಃಖೇ ಉಪಕ್ಷಯತಿ
ಭೋಗ್ಯೇಹಿ ಸುಖದುಃಖೇ ಅನುಕೂಲ ಪ್ರತಿಕೂಲ ವೇದನೀಯೇ
ಪ್ರತ್ಯಾತ್ಮಮನುಭೂಯೇತೇ. ತೇನ್ಯಾ ನ ಯೋರನುಕೂಲ
ನೀಯೇನ ಪ್ರತಿಕೂಲನೀಯೇನ ಚ್ಕೇನಚಿದಪ್ಯನ್ಯೇನ
ಭವಿತವ್ಯಮ್ ನ ಚಾನುಕೂಲನೀಯಾಃ ಪ್ರತಿಕೂಲನೀಯಾ ವಾ
ಬುದ್ಧ್ಯಾದಯಃ ತೇಷಾಮ್ ಸುಖ ದುಃಖಾದ್ಯಾತ್ಮಕತ್ವೇನ
ಸ್ವಾತ್ಮನಿ ವೃತ್ತಿವಿರೋಧಾತ್ ತಸ್ಮಾತ್ ಯಾ ಸುಖಾದ್ಯಾತ್ಮಾ
ಕೋನುಕೂಲನೀಯ ಪ್ರತಿಕೂಲನೀಯೋವಾ. ಸ ಚಾತ್ಮೇತಿ

10. ಮಾಧ್ಯಸ್ಥ – ಮಧ್ಯಸ್ಥಭಾವ :, ಪರಿವ್ರಾಜಕವತ್ ಮಧ್ಯಸ್ಥ : ಪುರುಷ :

11. 'ಅತ ಏವಾತ್ರೈಗುಣ್ಯಾನ್ಮಾಧ್ಯಸ್ಥಂ ಸುಖಿ ಹಿ ಸುಖೇನ ತೃಪ್ಯನ್, ದುಃಖಿ ಹಿ ದುಃಖಂ ದ್ವಿಷನ್ ಮಧ್ಯಸ್ಥೋನ ಭವತಿ ತದುಭಯರಹಿತಸ್ತು ಮಧ್ಯಸ್ಥ ಇತ್ಯುದಾಸೀನ ಇತಿ ಚಾರನ್ಯಾಯೆತ್'

ಇನ್ನೊಂದು ವಿಚಾರ ಸರಣಿಯೂ ನಮ್ಮನ್ನು ಇದೇ ದಿಕ್ಕಿನಲ್ಲಿ ಕೊಂಡೊಯ್ಯುತ್ತದೆ. ಪುರುಷದ ಅಸ್ತಿತ್ವವನ್ನು ರುಜುವಾತುಪಡಿಸಲು ಅದರ ಒಂದು ಕಾಲ್ಪನಿಕ ಹಾಗೂ ಆಂಶಿಕ ಸ್ವಭಾವವನ್ನೇ ಏಕೆ ಈಶ್ವರಕೃಷ್ಣರು ಬಳಸುತ್ತಾರೆ? ಇದಕ್ಕೆ ಉತ್ತರ ಸುಲಭವಾಗಿಯೇ ದೊರೆಯುತ್ತದೆ. 17ನೆಯ ಕಾರಿಕೆಯಲ್ಲಿ ಪುರುಷದ ಮಧ್ಯಸ್ಥ ಹಾಗೂ ಉದಾಸೀನ ಭಾವಗಳನ್ನು ಹೇಳಿ ಅದರ ಅಸ್ತಿತ್ವವನ್ನು ರುಜುವಾತು ಪಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಹಾಗಾದಲ್ಲಿ ಈಶ್ವರಕೃಷ್ಣರು ಈಗ ಬಳಸಿರುವ ತರ್ಕವಿಧಾನವನ್ನು ಬಳಸುವುದು ಸಾಧ್ಯವಾಗುತ್ತಿರಲಿಲ್ಲ.

ಮನುಷ್ಯನನ್ನು ನಿರ್ವಚಿಸುವಾಗ, ಬರಿ ಗುಂಪನ್ನು ನಿರ್ದೇಶಿಸುತ್ತ ಅವನೂ ಒಂದು ಪ್ರಾಣಿ ಎಂದು ಹೇಳಿದರೆ ಆಗದು. ಅವನ ಜಾತಿಯನ್ನೂ ನಿರ್ದೇಶಿಸುತ್ತ ಅವನ 'ವೈಚಾರಿಕತೆ'ಯನ್ನು ಹೇಳದೇ ಇದ್ದಲ್ಲಿ ನಿರ್ವಚನ ಅಸಂಪೂರ್ಣವಾಗಿ ಉಳಿಯುವುದರ ಜೊತೆಗೆ ಅದೊಂದು ಸುಳ್ಳು ಹಾಗೂ ತಪ್ಪುದಾರಿಗೆ ಎಳೆಯುವ ನಿರ್ವಚನವಾಗುತ್ತದೆ. ಇದೇ ರೀತಿ ಪುರುಷದ ಸಂಪೂರ್ಣ ಗುಣಗಳನ್ನು 17ನೆಯ ಕಾರಿಕೆಯಲ್ಲಿಯೇ ಹೇಳಲಾಗಿದೆ ಎನ್ನುವುದಾದರೆ, 19 ಹಾಗೂ 20ನೇ ಕಾರಿಕೆಗಳಲ್ಲಿ ಲೇಖಕ ಮತ್ತೆ ಪುರುಷದ ಗುಣಗಳನ್ನು ಹೇಳಲು ಪ್ರಯತ್ನಿಸುತ್ತಿರಲಿಲ್ಲ. ಏಕೆಂದರೆ ಹಾಗೆ ಮಾಡುವುದು ಭಾರತೀಯ ತರ್ಕಶಾಸ್ತ್ರದ ಪ್ರಕಾರ ಪುನರುಕ್ತಿದೋಷವಾಗುತ್ತದೆ. ಆದುದರಿಂದ ಬಂಧನದಲ್ಲಿರುವ ಪುರುಷದ–ಅಂತಹ ಸ್ಥಿತಿ ಎಷ್ಟೇ ಅದರ ಸಂಪೂರ್ಣ ಸ್ವಭಾವವಾಗಿರದಿದ್ದರೂ ಕೂಡ–ಅಸ್ತಿತ್ವವನ್ನು ರುಜುವಾತುಪಡಿಸುವ ಸೀಮಿತ ದೃಷ್ಟಿಯಿಂದ ಲೇಖಕ ಬಹಳ ಜಾಣಾಕ್ಷತೆಯಿಂದ 'ಭೋಕ್ತೃ' ಎಂಬ ಶಬ್ದವನ್ನು ಬಳಸುತ್ತಾನೆ.

ಹೀಗೆ ಮೇಲೆ ತೋರಿಸಿದ ವೈಪರೀತ್ಯಗಳು ಬರಿ ಮೇಲ್ನೋಟಕ್ಕೆ ಕಾಣುವ ವೈಪರೀತ್ಯಗಳೆಂದೂ. ಅವು ನಿಜವಾದ ವೈಪರೀತ್ಯಗಳಲ್ಲವೆಂಬುದೂ ಸ್ಪಷ್ಟವಾಗುತ್ತದೆ. ಆದುದರಿಂದಲೇ ಬಹುಶಃ ಗೌಡಪಾದ ಹಾಗೂ ವಾಚಸ್ಪತಿ ಮಿಶ್ರರಂತಹ ಶ್ರೇಷ್ಠ ಭಾಷ್ಯಕಾರರೂ ಇವುಗಳ ಬಗ್ಗೆ ಚಕಾರವನ್ನೂ ಎತ್ತುವುದಿಲ್ಲ ಎಂದು ತೋರುತ್ತದೆ.

ಬಸವ ಪುರಾಣದ ಸಾಮಾಜಿಕ ಅಧ್ಯಯನ

(ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ)

ಡಾ. ಬಿ. ಪಿ. ಜವಳಿ

ಹಬ್ಬ ಹಾಗೂ ಉತ್ಸವದ ದಿನಗಳು : ಬಸವ ಪುರಾಣವು ಹಲವು ಹಬ್ಬ ಹರಿದಿನಗಳನ್ನು, ಜಾತ್ರೆ, ಉತ್ಸವಗಳನ್ನು ನಿರೂಪಿಸುತ್ತದೆ. ನಮ್ಮ ಹಬ್ಬಗಳ ಪುರಾತನತೆಯನ್ನು ಕಂಡುಹಿಡಿಯಲು ಇವು ಬಹು ಉಪಯುಕ್ತ ದಾಖಲೆಗಳೆನ್ನಬಹುದು. ವೀರಭದ್ರದೇವರ ಜಾತ್ರೆ, ಶಿವರಾತ್ರಿ, ನೂಲಹಬ್ಬ, ವಸಂತೋತ್ಸವ, ದೀವಳಿಗೆ ಮೊದಲಾದ ಹಬ್ಬಗಳ ಹೆಸರನ್ನು ಕವಿಯು, ಮಲುಹಣಿಯು ಆಚರಿಸುತ್ತಿದ್ದ ಹಬ್ಬದ ದಿನಗಳೆಂದು, ಮಲುಹಣನ ಕಥೆಯಲ್ಲಿ ತಿಳಿಸಿದ್ದಾನೆ.[62] ಈ ಹಬ್ಬಗಳನ್ನು ನಮ್ಮ ನಾಡಿನಲ್ಲಿ ಜನತೆ ಬಹುಕಾಲದಿಂದ ಆಚರಿಸುತ್ತ ಬಂದುದಂ ಮಾತ್ರವಲ್ಲ. ಒಂದೊಂದು ಹಬ್ಬ, ಒಂದೊಂದು ಕಾರ್ಯಕ್ಕೆ ಮೀಸಲಾಗಿದೆಯೆಂದೂ ಎನಿಸುತ್ತದೆ. ಈ ಪ್ರಸಂಗದಲ್ಲಿ ಒಂದು ಜಾನಪದ ಪದ್ಯವು ನೆನಪಿಗೆ ಬಂದುದನ್ನು ಇಲ್ಲಿ ಉಲ್ಲೇಖಿಸಬಹುದು :

"ಸೀಗಿಯ ಹುಣ್ಣಿವೆ ಹಿರಿ ಸಣ್ಣ ಮಗಳಿಗೆ.
ಮಹಾನವಮಿ ಹಬ್ಬ ಮಗನಿಗೆ, ದೀವಳಿಗೆ –
ಹಬ್ಬ ಅಳಿಯರಿಗೆ"

ಸೀಗಿಯ ಹುಣ್ಣಿವೆ ಮಗಳ ಸಲುವಾಗಿ, ಮಹಾನವಮಿ ಹಬ್ಬ ಮಗನಿಗಾಗಿ ಇದ್ದರೆ, ಅಳಿಯಂದಿರ ವೈಭವಕ್ಕಿರುವುದು ದೀವಳಿಗೆಯ ಹಬ್ಬ. ಒಂದೊಂದೂ ಹಬ್ಬ ಈ ನಾಡಿನಲ್ಲಿ ವೈಶಿಷ್ಟ್ಯಪೂರ್ಣವಾಗಿವೆಯೆಂಬುದು ಗಮನಾರ್ಹ. ಬಸವಪುರಾಣವು ಈ ದಿಶೆಯಲ್ಲಿ ನಮ್ಮ ಕೆಲವು ಪ್ರಮುಖ ಹಬ್ಬಗಳನ್ನು ಹೆಸರಿಸುತ್ತದೆ.

ಒಡೆತನ ಹಾಗೂ ರಾಜಸಭೆ : ಕವಿಯು, ಮೇಲಿಂದಮೇಲೆ ಬಿಜ್ಜಳನ ಸಭೆಯನ್ನು ವರ್ಣಿಸುತ್ತಾನೆ. ಅದರೊಂದಿಗೆ ಶಿವಸಭೆಯನ್ನೂ–ದೇವಲೋಕವನ್ನೂ ವರ್ಣಿಸುತ್ತಾನೆ. ಒಂದು ಕಾಲ್ಪನಿಕ ಮತ್ತು (ಲೌಕಿಕ) ಐತಿಹಾಸಿಕ : ಶಿವಸಭೆಯು ಕಾಲ್ಪನಿಕವೆಂದರೂ ಅದು ಭೂಲೋಕದ ರಾಜರ ಆಸ್ಥಾನದ ಒಂದು ಉತ್ಕೃಷ್ಟ ಮಾದರಿಯೆನ್ನಬೇಕು. ಅಂತಹ ಮಾದರಿಗಳನ್ನು ಕೊಡುವಲ್ಲಿ ಕವಿಯ ಉನ್ನತ ಆದರ್ಶ, ಸಾಂಸ್ಕೃತಿಕ ಹಿನ್ನೆಲೆಯ ದೃಷ್ಟಿಯನ್ನು ಗುರುತಿಸುವುದು ಸಾಧ್ಯ. ಆ ದೃಷ್ಟಿ

62 ಬ.ಪು. ಸಂಧಿ 42; ಪದ್ಯ 10-12

ಬಂದ ಕವಿಯು ಶಿವಸಭೆಯ ವಿವರಗಳನ್ನು ನೀಡುವ ರೀತಿಯಿದು : "ಇಂದುರುಚಿ ಬಳಿದು, ಪರಸ್ಮೈರಂ ದಿವಿಯೊಳಾಕಾರವಾಗಿ, ಶಿವನ ಘನೀಭೂತವಾಗಿ, ಸುಧೆ ಬೆಳೆದು ಪರ್ವತವಾದಂತೆ ; ಕುಂದಚಂದನಮಲ್ಲಿಕಾಪರಿಚಂದನ, ಅಮರ ಸಿಂಧುಜಲ ಸಿತಪುಂಡವು ರೂಪಾದಂತೆ–ರಜತಾದ್ರಿ ; ಪರುಷದ ಕಣಿ, ಚಿಂತಾಮಣಿಯ ನಿಧಿ, ದಿವಿಜಧಾರುಣೆರುಹಂಗಳ ಸೆಲೆ ನಂದನ...ಬನ್ನಿಪ ಕಲಧೌತಶೈಲ ; ಅಲ್ಲಿ ಇಂದ್ರನೀಲ ಮರಕತಮೌಕ್ತಿಕ ರುಂದ್ರಮಾಣಿಕ್ಯಪ್ರವಾಳ, ದಿನೇಂದ್ರ ಕಾಂತಾನಂತಮಣಿಗಣಖಚಿತ ಲಾಲಿತ್ಯ ಸಾಂದ್ರ ರಮ್ಯ ಆಸ್ಥಾನಮಂಟಪ ; ಚಂದ್ರಕಾಂತ ಕುಟ್ಟಿಮ ; ರತ್ನಮಯ ಸಿಂಹಾಸನ ; ಅದರಮೇಲೆ ಅಗಜೇಂದ್ರ. ಆತನನ್ನು ಓಲಗಿಸಲು ಬಂದ ಅಂಬುಜಾಂಬಕ, ತೋಯಜಪ್ರಭವರು, ದಿಶಾಧಿಪರು, ವರುಣಾದಿ ವಸುಗಳು, ಧೀಮಂತರು, ನವನಾಥಸಿದ್ಧರು, ಮಹಾಯತೀಂದ್ರರು, ದ್ವಾದಶಾದಿತ್ಯರು, ನವಬ್ರಹ್ಮರ್ಷಿಬುಧಸಪ್ತಋಷಿಗಳು, ಏಕಾದಶರುದ್ರರು, ಸನಂದ ಶುಕಾದಿ ಮುನಿವರರು, ಸುರನಿಕರ, ದನುಜರು, ಕಿನ್ನರರು, ಗಂಧರ್ವರು, ಕಿಂಪುರುಷರು, ರಾಕ್ಷಸಗಣ, ನಾಗರು, ಮಯೂರರು, ಗರುಡರು, ಯಕ್ಷರು, ವಿಯಚ್ಚರರು, ಮಾನವರು"– ಈ ರೀತಿಯ ವರ್ಣನೆ ಒಬ್ಬ ಚಕ್ರವರ್ತಿಯ ವೈಭವವನ್ನು, ಸಂಪತ್ತನ್ನು, ಪ್ರಭುತ್ವವನ್ನು ನಮಗೆ ಸೂಚಿಸುತ್ತವೆ. ಆ ಸಭೆಯಲ್ಲಿ ಗದ್ದಲವಾಗದಂತೆ ನೋಡಿಕೊಳ್ಳಲು 'ದೌವಾರಿಕ'ರಿದ್ದಾರೆ ; ಆ ಪ್ರಸಂಗದಲ್ಲಿ ಶಿವನು 'ಸಿರಿಯ ವರನೊಳು ಮಲಗಿ' 'ವಾಣೀಶ್ವರನ ಮೇಲೆ ಕರಕಮಲಮಂ ನೀಡಿ'ರುತ್ತಾನೆ ; ಸುರಪನು ಶ್ರೀಪದವನ್ನೊತ್ತುತ್ತಾನೆ' ; 'ತರಣಿ ಶಶಿಗಳು ಚಾಮರವಿಕ್ಕುತ್ತಾರೆ ;' 'ಕುಬೇರನು ಹಡಪವನ್ನು ಹಿಡಿದಿರುತ್ತಾನೆ : 'ಅನಿಮಿಷರು ಜಯಜಯಕಾರ' ಮಾಡುತ್ತಾರೆ ; 'ಚತುರ್ವೇದ ಓಂಕಾರನಾದ'ಗಳು ಮೊರೆಯಿಡುತ್ತವೆ : ಪರಮತರ್ಕಪುರಾಣ ಶಾಸ್ತ್ರೋತ್ಕರದ ವಿವರಣಕಳಾಪ್ರವೀಣಸ್ಫುರಣದಿಂದ, ಗೌತಮ ಪುರೋಗಮರು, ಒಂದು ದೆಸೆಯಲ್ಲಿರುತ್ತಾರೆ ; ತತವಿತತಘನಸುಷಿರ ವಾದ್ಯಪ್ರತಿಮಿಳಿತ ಷಡ್ಜಾದಿ ಸಪ್ತಶ್ರುತಿಗಳಿಂಪ್ಪಗೆ, ಮಂದ್ರಮಧ್ಯಮತಾರವಿಶ್ರಮದ ಅತಿಮಧುರಮೃದುಗೀತಜಾತೋನ್ನತ ರಸದೊಳೊಳಗೂಡಿ ಪಾಡುವ ಚತುರ ತುಂಬುರ ನಾರದರು' ಮತ್ತೊಂದು ದೆಸೆಯಲ್ಲಿರುತ್ತಾರೆ. ಅಂಗವಂ ನಡುಗಿಸುತ, ಬಸುರಂ ಪೊಂಗಿಸುತ, ಅಕ್ಕಳಿಸುತ್ತ, ವಾದ್ಯಂಗಳಿಗೆ ಚಿಮ್ಮುತ್ತ, ಬಾಯ್ದೆರೆದುರುಗಿಸಿ, ಕಂಗಳಂ ಮೆಳ್ಳಿಸುತ್ತ, ಪಲುಗಿರಿದು, ಉಂಗುಟಂಗಳ ನೂರಿ ನಡೆವುತ್ತಿರ್ದ ಭೃಂಗಿಯ ನರ್ತನ ; ಗಿರಿಜೆ, ಗುಹ, ಗಣಪರಿಂದೊಡಗೂಡಿ ಬೇಡಿದರ್ಗಭಯವೀವ ಪರಮೇಶ್ವರನ ಸಭೆ ಮೆರೆದಿರುತ್ತದೆ.[63] ಇಲ್ಲಿ ಅಂದಿನ ಚಕ್ರವರ್ತಿಗಳು ಕರೆಯುತ್ತಿರ್ದ ರಾಜದರಬಾರದ ಮತ್ತು ರಾಜನ ದರ್ಪದ ಒಡೆತನದ ಒಂದು ಮಾದರಿಯೇ ಕಾಣುತ್ತದೆ. ರಾಜಸಭೆಗೆ ಭೂಷಣಪ್ರಾಯರಾದ ವಿದ್ವಾಂಸರು

---

63 ಬ.ಪು. ಸಂಧಿ 1, ಪದ್ಯ 38-51

ಸಂಗೀತ ನರ್ತನಾದಿಗಳ ಉಲ್ಲೇಖವಿರುವುದನ್ನು ನೋಡಿದರೆ, ಅಂದಿನ ಕಾಲದ ಚಕ್ರವರ್ತಿಗಳು ನೀಡಿದ ಕಲಾಪ್ರೋತ್ಸಾಹವೂ ಎದ್ದುಕಾಣುತ್ತದೆ. ರಾಜಸಭೆಗೆ ಸಾಕಷ್ಟು ಭದ್ರಕಾವಲು ಇರುತ್ತಿತ್ತು. 'ಪರಿಗೆ, ಅಪಾಯುಧ, ಕರವಾಳ, ಬಿಲ್ಲು, ಸಬಳ, ಈಟಿ, ಕೋಲು, ಸುರಿಗೆಗಳಿಂದ ಸುಸಜ್ಜಿತರಾದ ; ಕಠಾರಿ, ಕಬ್ಬಿಣ ಶಲಾಕೆಗಳನ್ನು ಹಿಡಿದು ನಿಂತಿರುತ್ತಿದ್ದ ವೀರರಿಂದ ಸಭೆಗೆ ಭದ್ರತೆ ಇರುತ್ತಿತ್ತು ; ದ್ವಾರ ದ್ವಾರದಲ್ಲಿ ಅಗಲದೆ ಕಾಯ್ದಿರುತ್ತಿದ್ದ ವೀರರಿಂದ ನೃಪಸಭೆಗೆ ಕಾವಲಿರುತ್ತಿತ್ತು ; ಅನೇಕದೇಶದ ರಾಜರುಗಳು ಪ್ರಸಿದ್ಧ ನೃಪನ ಸೇವೆಯಲ್ಲಿರುತ್ತಿದ್ದರು. ಅಲ್ಲಲ್ಲಿ ರಾತ್ರಿಹೊತ್ತಿನಲ್ಲಿ ಇಕ್ಕೆಲದಲ್ಲಿ 'ಕೈದೀವಿಗೆ'ಗಳು ಶೋಭಿಸುತ್ತಿದ್ದುವು.[64] ರಾಜ್ಯದ ಭಂಡಾರಕ್ಕೆ ಸಾಕಷ್ಟು ರಕ್ಷಣೆಯಿರುತ್ತಿತ್ತು.[65] ಬಸವಣ್ಣನವರಿಗೆ ಬಿಜ್ಜಳನಲ್ಲಿ 'ಭಂಡಾರದೊಡೆಯ' ಮತ್ತು 'ಪ್ರಧಾನಿ' (ಪ್ರಧಾನಮಂತ್ರಿಪಟ್ಟ) ಎರಡೂ ಪದವಿಗಳಿದ್ದುವೆಂದು ಭೀಮಕವಿಯ ಹೇಳಿಕೆ.[66]

ಮದುವೆಯ ಸಮಾರಂಭ : ಕನ್ಯೆ ಕೊಡುವವರು ವರನಿದ್ದೆಡೆಗೆ ಹೋಗುವುದು ಬ್ರಾಹ್ಮಣರಲ್ಲಿ ರೂಢಿ. ಬಲದೇವನು ಬಸವಣ್ಣನಿದ್ದೆಡೆಗೆ ಹೋಗಿ ಮಗಳು ಗಂಗಾಂಬಿಕೆಯನ್ನು ಕೊಡುವುದಾಗಿ ತಿಳಿಸುತ್ತಾನೆ. ಬಸವಣ್ಣನು ಬಲದೇವನಿಗೆ ಸೋದರಳಿಯನಾದುದರಿಂದ ಮಗಳನ್ನು ಕೊಡುವವರು ಮೊದಲ ಅವಕಾಶವನ್ನು ಸೋದರಳಿಯನಿಗೇ ಅಂದೂ ಕೊಡುತ್ತಿದ್ದುದರಿಂದ, ಬಸವಣ್ಣನನ್ನೇ ಅಳಿಯನನ್ನಾಗಿ ಆಯ್ದುಕೊಳ್ಳಲು ಬಲದೇವನು ಮನಸ್ಸು ಮಾಡಿದನು. ಬಲದೇವನ ಮಗಳ ಮದುವೆಯೆಂದರೆ ಒಬ್ಬ ಅಧಿಕಾರಿಯ ಮಗಳ ಮದುವೆ. ಆದುದರಿಂದ ಅದು ಒಳ್ಳೆಯ ಅದ್ದೂರಿಯಿಂದಲೇ ನಡೆಯಬೇಕು. ಮನೆಮನೆಗಳಲ್ಲಿ ಕುಂಕುಮ ಕಸ್ತೂರಿಗಳ ಸಾರಣೆ, ಮುತ್ತಿನ ರಂಗವಾಲಿಗಳನ್ನು ಹಾಕಿ ಶೃಂಗಾರ ಮಾಡಲಾಗಿದೆ. ಬೀದಿಗಳಲ್ಲಿ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿದೆ. ಬಲದೇವನು 'ಪಡಿಹಾರರನ್ನು' ಕಳಿಸಿ, ಬಸವಣ್ಣನಿಗೆ ಪ್ರಿಯರಾದ ಭಕ್ತ ಜಂಗಮರನ್ನು ಆಮಂತ್ರಿಸಿದ್ದಾನೆ. ತಂಡತಂಡದಲ್ಲಿ ಬರುತ್ತಿದ್ದವರನ್ನು ಪುರಜನರು ಮನೆಗೊಡಗೊಂಡು ಬಂದು ಆಸನಗಳನ್ನು ನೀಡಿ ಸತ್ಕರಿಸುತ್ತಾರೆ. ವಿಭೂತಿವೀಳೆಯ-ವಿತ್ತ ಸ್ನಾನ–ಪೂಜಾದಿಗಳಿಂದ ಸತ್ಕರಿಸುತ್ತಾರೆ. ಭಕ್ತಿಯ ಸಕಳ ಸ್ಥಾನಗಳಲ್ಲಿ, 'ಕೇಳಿಕೆಗಳ ಒಗ್ಗಿನ ಮೇಳವ', 'ನಾಟಕದ ಪಾತ್ರದ ಪೇರಣೆಯ (ನಾಟ್ಯದ) ಜೋಗಿಗಳ ಜೋಕೆ', 'ವೀಣಾಸಿಕರ ನಾದ', 'ಕಕುಭಾಷ್ಟಕ', 'ಆನಂದಗೀತ', 'ಶಂಕರಗೀತ'ಗಳಲ್ಲಿ ರುದ್ರನ ಮಹಿಮೆಯನ್ನು ಹಾಡುವುದು, 'ಸಂಗೀತ ಮೇಳಕ್ಕೆ ಕೆಲವರು' 'ಬಿತ್ತಕರಣೆಯುವುದು', ಕೆಲವರು 'ಪುರಾತನರ

---

64. ಬ. ಪು, ಸಂಧಿ 62 ಪದ್ಯ 25-30

65. ಅದೇ 31, 12.

66. ಅದೇ 11, 7.

ಸ್ವಾರ್ಥ ವಿವರಿಸುವುದು', 'ಯೋಗ ಗೋಷ್ಠಿ' ನಡೆಸುವುದು, – ಈ ರೀತಿಯ ಕಾರ್ಯಕ್ರಮಗಳು ನಡೆದುವೆಂದು ಕವಿ ವಿವರಿಸಿದ್ದಾನೆ.[67] ಇದನ್ನು ನೋಡಿದರೆ ಮದುವೆಯೆಂಬುದು ಒಂದು ಪವಿತ್ರಕಾರ್ಯ ಮಾತ್ರವಲ್ಲ, ಕಲಾ ಪ್ರದರ್ಶನ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ ಕೊಡುವಂತಹ ಒಂದು ಅವಕಾಶವಾಗಿತ್ತೆಂದೆನ್ನಿಸುತ್ತದೆ. ಭಕ್ತನಾದ ಬಸವಣ್ಣನಿಗೆ ಈ ಭಕ್ತಿಯ ಕಾರ್ಯಕ್ರಮಗಳು ಬಹಳ ಹಿತಕಾರಿಯೆನಿಸಿವೆ. ಬಸವಣ್ಣನನ್ನು ಆ ಪ್ರಸಂಗದಲ್ಲಿ 'ದೇವವಿಪ್ರರು ಹರಸುತ್ತಾರೆ'. ಮದುವೆಯ ಕನ್ನೆಯನ್ನು ಅಲಂಕರಿಸುವುದು ಸಹಜವೇ. ಅಂತೆಯೇ ಬಲದೇವನ ಕುಮಾರಿ ಗಂಗಾಂಬಿಕೆಯನ್ನು ಮದುವೆಗೆ ಸಿಂಗರಿಸುತ್ತಾರೆ. ಗಂಗಾಂಬಿಕೆಗೆ ಆಭರಣಗಳೇ ಬೇಕಿಲ್ಲ "ಆಭರಣತತಿಗೆ ಈ ತಳೋದರಿ ಆಭರಣ; ಅಲ್ಲದೆ ಆಭರಣ ಈ ರೂಪವತಿಗೆ ಆಭರಣವಲ್ಲ; ಶೋಭನಾರ್ಥಕ್ಕೆಂದು ಕೆಲವು ಆಭರಣಗಳನ್ನು ತೊಡಿಸಿದರು.[68] ಮೊದಲು 'ಸೌರಭ್ಯತೈಲಾಂಗ'ವನಾಚರಿಸುತ್ತಾರೆ; 'ನವದುಕೂಲ'ವನುಡಿಸುತ್ತಾರೆ; ಸಿರಿವಂತರ ಮಗಳಾದುದರಿಂದ ಅಗಿಲು, ಸಾದು, ಜವಾಜಿ, ಚಂದನ, ಮೃಗಮದ, ಘನಸಾರ. ಗಂಧಾದಿಗಳೆಲ್ಲವನ್ನು ಪನ್ನೀರಿಂದ ಕೂಡಿಸಿ, ಸೌರಭ್ಯತನುವಿನ ಮೃಗನಯನೆಗೆ ಅನುಲೇಪಿಸುತ್ತಾರೆ; ತಿಲಕವನ್ನು ಕುಂಕುಮದೊಳಿಡುತ್ತಾರೆ; 'ಉಂಗುಟದೆಳೆ' 'ಮುಂಟಿಗೆ', 'ಪಿಲ್ಲಿ', 'ಅಂದುಗೆ' 'ಮಣಿಪಾಯವಟ್ಟ' ಧರಿಸುತ್ತಾರೆ; 'ಕಾಂಚೀದಾಮ' ಬಿಗಿಯುತ್ತಾರೆ. ಭುಜವಳಿಯ 'ಭುಜಕೀರ್ತಿ'; 'ಕಡಗ' 'ಕಂಕಣ', 'ಸೂಡಗ', 'ಉಂಗುರ', 'ಮುದ್ರಿಕೆಯುಂಗುರ'ಗಳನ್ನು ಅಲಂಕರಿಸುತ್ತಾರೆ. ಉರಗಳಲ್ಲಿ 'ಹೀರಾವಳಿ, 'ಮೌಕ್ತಿಕಹಾರ', 'ಮಣಿಪದಕ', 'ಲೀವಕ'ಗಳನ್ನು ಅನುಗೊಳಿಸುತ್ತಾರೆ; ಕಿವಿಯಲ್ಲಿ 'ಸುವರ್ಣ ಪತ್ರ'. 'ಹೊನ್ನಹೂ'ಗಳನ್ನು ಕೀಲಿಸುತ್ತಾರೆ; ಅಲ್ಲದೆ 'ಚಾಕುಳಿಯ ಮುತ್ತಿನ ಸಣ್ಣಗಡುಕು', 'ಮುತ್ತಿನಕೊಪ್ಪ'ಗಳಿಂದ ಕರ್ಣಗಳು ಶೋಭಿಸುತ್ತವೆ; ಕಾಂತೆಯ 'ಮುತ್ತಿನ ಮೂಗುತಿ' ತಾರಕೆಯಂತೆ ಮಿರುಗುತ್ತದೆ; ಹಣೆಗೆ ಮುತ್ತಿನ ಬೊಟ್ಟನಿಟ್ಟು, 'ಹೊಂಬಾಸಿಗ'ವ ಧರಿಸುತ್ತಾರೆ; ಬೈತಲೆಯಲ್ಲಿ 'ಸಿಂಧೂರ'ವನ್ನು ತಳಿದು, ಮುಂದೆಯಲ್ಲಿ 'ಮುತ್ತಿನ ಸೂಸಕವ' ಇಕ್ಕುತ್ತಾರೆ; 'ಸೀಮಂತ ಮಣಿ' ತಲೆಯಲ್ಲಿ ರಾರಾಜಿಸುತ್ತದೆ—ಹೀಗೆ ಗಂಗಾಂಬಿಕೆಯನ್ನು ಆಕೆಯ ಸಖಿಯರು ಅಲಂಕರಿಸಿದರೆಂದು ಹೇಳುವಲ್ಲಿ ಕವಿ ಅಂದಿನ ಕಾಲದ ಸಮಗ್ರ ಮದುವೆಯ ಕಾರ್ಯಗಳ ಚಿತ್ರಣವನ್ನೇ ನಮ್ಮ ಮುಂದಿರಿಸುತ್ತಾನೆ.[69] ಬಲದೇವನು ತನ್ನ ಮಗಳನ್ನು ಬಂದ ಭಕ್ತಾವಳಿಗೆ ನಮಸ್ಕರಿಸಲು ಹೇಳುತ್ತಾನೆ. ಈಶ್ವರ ಭಕ್ತಾಂಗನೆಯರು ಗಂಗಾಂಬಿಕೆಯನ್ನು ಹರಸಿ ಮಂಗಳಾಕ್ಷತೆ ನೀಡುತ್ತಾರೆ. 'ಈಶ್ವರಬಲ ಮುಹೂರ್ತ'ವೊದಗಲು

---

67. ಬ. ಪು. ಸಂಧಿ 4 ಪದ್ಯ 5–10

68, ,, 4 33

69. ,, 4 33–42

‘ವೇದೋಕ್ತ ಶಿವಪಥವಡರಿದುತ್ತಮಧರ್ಮವಿಧಿಯುಳವಡಲು’ ಬಲದೇವನು ಬಸವಣ್ಣನಿಗೆ ಮದುವೆ ಮಾಡುತ್ತಾನೆ; ಭಕ್ತರ ಕೃಪಾಲೋಕನವೆ ವರಲಗ್ನ. ಶರಣರ ಒಳು ಮಾಟವೆ ಮುಹೂರ್ತ; ಶರಣರ ಹರಕೆಯೇ ಸರ್ವಬಲವಾಗಿ ಪರಿಣಮಿಸುತ್ತದೆ; ಬಸವಣ್ಣನು ಬಂದ ಭಕ್ತರಿಗೆ ವಂದಿಸಿದುದು ಮಾತ್ರವಲ್ಲ; ಅವರನ್ನು ಇಷ್ಟಾರ್ಥಂಗಳಿಂದ ತಣಿಸುತ್ತಾನೆ; ಮದುವೆಯಾದೊಡನೆ ಸಾಮಾನ್ಯವಾಗಿ ದಂಪತಿಗಳು (ಕುಲದೇವರು) ಮನೆದೇವರುಗಳಿಗೆ ಹೋಗಿ ಬರುವ ರೂಢಿ ಇಂದಿಗೂ ಈ ನಾಡಿನಲ್ಲಿದೆ; ಅದರಂತೆ ಬಸವಣ್ಣನೂ ಮದುವೆಯ ನಂತರ ‘ಮುಂಗಡೆಯೊಳಿದೆ ಕಪ್ಪಡಿ ಸಂಗಮೇಶ್ವರ’, ‘ಅಲ್ಲಿ ಮದ್ಗುರುವಿದ್ದಪನು’: ‘ಅವರಡಿಗಳಂ ಕಂಡು ಭಕ್ತ್ಯಂಗನೆರೆಯನಪ್ಪೆವು’- ಎಂದು ಹೇಳಿ, ಗಂಗಾದೇವಿ, ನಾಗಲದೇವಿಯೊಡನೆ ಬಲದೇವನ ಅನುಮತಿ ಪಡೆದು ಅಲ್ಲಿಗೆ ಹೋಗುತ್ತಾನೆ.[70] ಈ ಎಲ್ಲ ಕ್ರಿಯೆಗಳಲ್ಲಿ ಅನೂಚಾನವಾಗಿ ನಡೆದು ಬಂದ ಮದುವೆ ಪದ್ಧತಿಯನ್ನು ನಾವು ಕಾಣುತ್ತೇವೆ; ಅಲ್ಲದೆ ಸಿರಿವಂತರ ಮನೆಯ ಮದುವೆ ಒಂದು ಆಕರ್ಷಣೀಯವೂ ಆದ ಘಟನೆಯಾಗಿ ಗೋಚರಿಸುತ್ತದೆ. ಗಂಗಾಂಬೆಯ ಮದುವೆಯ ಪ್ರಸಂಗದಲ್ಲಿ ಕವಿಯು ಸ್ತ್ರೀಯರ ಅಲಂಕಾರ, ವೇಷ ಭೂಷಣಗಳ ವಿವರಗಳನ್ನು ನೀಡಲು ಒಂದು ಅವಕಾಶವೆಂದು ಭಾವಿಸಿದ್ದಾನೆ. ಮದುಮಗನಿಗಿಂತ ಮದುಮಗಳ ಶೃಂಗಾರಕ್ಕೆ ಹೆಚ್ಚು ಪ್ರಾಶಸ್ತ್ಯವು ಎಂದಿನಿಂದಲೂ ಇರುವುದಾಗಿ ತಿಳಿದುಬರುತ್ತದೆ

ಆಭರಣಗಳು: ಗಂಗಾಂಬಿಕೆಯ ಮದುವೆಯ ಪ್ರಸಂಗದಲ್ಲಿ ಸಾಕಷ್ಟು ಆಭರಣಗಳನ್ನು ಕವಿ ವರ್ಣಿಸಿರುವುದಲ್ಲದೆ ಇತರ ಪ್ರಸಂಗಗಳಲ್ಲೂ, ಸಂದರ್ಭಾನುಸಾರ ಅನೇಕ ತೊಡಿಗೆ, ಆಭರಣಗಳನ್ನು ಕವಿ ವಿವರಿಸುತ್ತಾನೆ. ಹಸ್ತಕಡಗೆ, ನೀಲಮುತ್ತಿನ ಬೊಂಬೆಗಡುಕು, ಮುತ್ತಿನೋಲೆ—ಪೊನ್ನೋಲೆ, ತೋಳಮಣೆ, ಮೂಕುತಿ, ಮುರುಹು, ಕರ್ಣಾವತಂಸ, ಕೇಯೂರ, ನೇವುರ, ಕಡುಕು, ಬಣ್ಣಸರ, ಪೆಂಡೆ, ಉತ್ತರಿಗೆ ಸರಪಣೆ, ತೋಳಬಂದಿ, ಕಿಂಕಿಣೀ ಮಣಿಹಾರ, ನೂಪುರ, ಮೇಖಳಾವಳಿ, ಈ ಮೊದಲಾದ ಆಭರಣಗಳನ್ನು ನೋಡಿದರೆ ನಮ್ಮ ಜನರ ಅಲಂಕಾರ ಪ್ರಿಯತೆ ವ್ಯಕ್ತವಾಗುತ್ತದೆ.

ಮೆರವಣಿಗೆ ಸಮಾರಂಭ: ಮದುವೆ ಸಮಾರಂಭ, ಜಾತ್ರೆಯ ಕಾಲ, ದೇವರ ರಥೋತ್ಸವ ಪ್ರಸಂಗ, ಸ್ವಾಮಿಗಳವರ ಪಲ್ಲಕ್ಕಿ ಉತ್ಸವ–ಇಂತಹ ಹಲವು ಮೆರವಣಿಗೆಯ ಪ್ರಸಂಗಗಳನ್ನು ನಾವು ಇಂದಿಗೂ ಕಾಣುತ್ತೇವೆ. ಮದುವೆಯ ಕಾಲದಲ್ಲಿ ವರನ ಮೆರವಣಿಗೆ (ಅವರವರ ಸ್ಥಾನಮಾನಕ್ಕನುಸರಿಸಿ) ನಡೆಯುತ್ತದೆ; ಹಳ್ಳಿಗಳಲ್ಲಿ ಇಂದಿಗೂ ಮದುವೆಯು ಮೆರವಣಿಗೆಯಿಂದಲೇ ಮುಕ್ತಾಯವಾಗುತ್ತದೆ. ಒಂದು ಊರಿಗೆ ಒಬ್ಬರು ಬಂದರೆ ಅವನ ಪರಿಚಯವು ಈ ಮೆರವಣಿಗೆಯ ಮೂಲಕ ಇಡೀ

70. ಬ.ಪು. ಸಂಧಿ 4 ಪದ್ಯ 43-49.

ಊರಿನವರಿಗೇ ಆಗುತ್ತದೆ; ಇಲ್ಲದಿದ್ದರೆ ಆ ವ್ಯಕ್ತಿ ಇರುವ ಒಂದು ಓಣಿಯವರಿಗೆ ಮಾತ್ರ ಪರಿಚಯವಾಗುತ್ತದೆ. ಇದೇ ರೀತಿ ರಾಜ್ಯದಲ್ಲಿ ಯಾರಾದರೂ ಒಂದು ದೊಡ್ಡ ಹುದ್ದೆಗೆ ಆಗಮಿಸಿದರೆ, ಅವರನ್ನೂ ಮೆರವಣಿಗೆಯಲ್ಲಿ ಕರೆತಂದು, ಊರ ಜನರಿಗೆ ಪರಿಚಯಿಸುವುದು ರೂಢಿಯಾಗಿದ್ದಂತೆ ಕಂಡುಬರುತ್ತದೆ. ಆದುದರಿಂದಲೇ ಭೀಮಕವಿಯು, ಬಸವಣ್ಣನು ಬಿಜ್ಜಳನಲ್ಲಿ ಹೊಸಹುದ್ದೆ ಸ್ವೀಕರಿಸಿದ ಸನ್ನಿವೇಶವನ್ನು ಬಳಸಿಕೊಂಡು, ಕಥಾನಾಯಕನ ಮೆರವಣಿಗೆ, ಪುರಜನರು ಆತನನ್ನು ಕಂಡು ತಂತಮ್ಮ ಅಭಿಪ್ರಾಯ ವ್ಯಕ್ತಪಡಿಸುವುದು—ಇವೇ ಮೊದಲಾದ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ಇತರ ವೀರಕಾವ್ಯಗಳಲ್ಲಿ ಕಥಾನಾಯಕರು ದಿಗ್ವಿಜಯಕ್ಕೆ ಹೊರಡುವ ಸನ್ನಿವೇಶದಲ್ಲಿ ಕವಿಗಳು ಇಂತಹ ವರ್ಣನೆ ತರುತ್ತಾರೆ. ಒಂದು ಸೈನ್ಯದಿಂದ ಸಿದ್ಧವಾಗಿ ಹೊರಟ ರಾಜನ ದೃಶ್ಯ; ಇನ್ನೊಂದು ಸಾಮಾನ್ಯ ದೃಶ್ಯ. ಬಿಜ್ಜಳನಿಂದ ಆಹ್ವಾನಿತನಾದ ಬಸವನು 'ಲೋಕಹಿತ' ದೃಷ್ಟಿಯಿಂದ, ಭಕ್ತೋದ್ಧಾರಕ್ಕಾಗಿ ಅವನಲ್ಲಿ ಮಂತ್ರಿ ಪದವಿಯನ್ನು ಸ್ವೀಕರಿಸುತ್ತಾನೆ. ಸಂಗಮದಿಂದ ಕಲ್ಯಾಣಕ್ಕೆ ಆಗಮಿಸುತ್ತಾನೆ. 'ಹನ್ನೆರಡು ಗಾವುದದಳತೆಯ ಕಲ್ಯಾಣಪುರದ, ಕೇರಿಕೇರಿ, ಮನೆಮನೆಗಳಲ್ಲಿ, ಗುಡಿತೋರಣಂಗಳು, ಮಣಿಮಯ ತೋರಣಂಗಳು, ಕಳಶಕನ್ನಡಿಯ ತೋರಣಗಳು, ಬಸವಣ್ಣನನ್ನು ಇದಿರುಗೊಳ್ಳಲು ಸಿದ್ಧವಾಗಿವೆ. ಆತನ ಸ್ವಾಗತಕ್ಕೆ ನವಾಂಬರ, ರತ್ನಭೂಷಣಗಳಿಂದಲಂಕೃತನಾದ ಬಿಜ್ಜಳ, ದಂಡನಾಥ, ಅಮಾತ್ಯಶೇಖರ, ಮಂಡಳಿಕ, ಸಾಮಂತ, ಹಯ, ವೇತಂಡ, ರಥ, ಪರಿಕರವೆಲ್ಲ ಸಿದ್ಧವಾಗಿ ಹೊರಟಿವೆ. ಏಳುನೂರು ಆನೆ, ತೊಂಬತ್ತು ಸಾವಿರ ಕುದುರೆ, ಲಕ್ಕದಮೇಲಿನ ತೊಂಬತ್ತೆಂಟುಸಾವಿರ ಕಾಲ್ದಳ, ಹನ್ನೆರಡು ಜನ ಭಂಡಾರಿಗಳ ಎದುರಿನಲ್ಲಿ ಬಿಜ್ಜಳನು ಬಸವಣ್ಣನಿಗೆ 'ಹಿರಿಯ ಭಂಡಾರಾಧಿಪತ್ಯದೊಳಿರಲು' ಅನುಮತಿಯೀಯುತ್ತಾನೆ. ಕಲ್ಯಾಣ ಪಟ್ಟಣದ ಹೊರವಲಯದಲ್ಲಿಯೇ ಈ ಕಾರ್ಯ ನಡೆದಿದೆ; ಅಲ್ಲಿಂದ ಎಲ್ಲರೂ ಅರಮನೆಯತ್ತ ಮೆರವಣಿಗೆಯಲ್ಲಿ ಹೊರಟಿದ್ದಾರೆ.

ಬಸವಣ್ಣನನ್ನು ನೋಡಲು ಆತುರದಿಂದ ಅನೇಕ ನಾರಿಯರು ನೆರೆದಿರುತ್ತಾರೆ; ಮರಾಳಯಾನ, ಥಳಥಳಿಸುವ ಕಟಾಕ್ಷವೀಕ್ಷಣ, ಮಂದಹಾಸದ, ನಾನಾ ಆಭರಣಗಳಿಂದ ಅಲಂಕೃತರಾದ, ಕುಂಕುಮ, ಮಲಯರುಹ, ಕಸ್ತೂರಿ, ಅಗರು, ಕರ್ಪೂರಾದಿಗಳನ್ನು ಲೇಪಿಸಿಕೊಂಡವರು, ಸುರಪುನ್ನಿಕಾ, ನವಮಾಲಿಕಾ ಮಾಲಾಲಂಕೃತರು, ವಿವಿಧಾಂಬರಧಾರಿಣಿಯರು, ಮಂದಹಸಿತೋಲ್ಲಸಿತೆಯರು, ಶರದಿಂದು ಬಿಂಬನಿಭಾನನೆಯರು, ಕಳಕಂಠವಾಣಿಯರು ಬಸವಣ್ಣನನ್ನು ನೋಡಲು ಆಗಮಿಸಿರುತ್ತಾರೆ. ವಿವಿಧವಾದ್ಯಧ್ವನಿ, ಕವಿಗಮಕಿವಾದಿವಾಗ್ಮ್ಯಾದಿ ಜನ–ಸಂಸ್ತವನರವ, ಯುವತೀಕಂಕಣ ಕಿಂಕಿಣೀ ಝಣಝಣಿತ ರವ ಅಲ್ಲಿ ತುಂಬಿರುತ್ತದೆ. ಬಸವಣ್ಣನನ್ನು ನೋಡದಿರುವುದು ತಮಗೆ ಬಲುದೊಡ್ಡ ಹಾನಿ

ಯೆನ್ನುವಂತೆ ಅಪಾರ ಸುಂದರ ಸ್ತ್ರೀಯರೆಲ್ಲ ನೆರೆದಿದ್ದಾರೆ. ಬಸವಣ್ಣನನ್ನು ಕಂಡ ಕೆಲವು ಸ್ತ್ರೀಯರು, ಬಸವನನ್ನು 'ಭೂಮಂಡಲದ ಶಂಭು'ವನ್ನು ನೋಡಿದವರ 'ಜನ್ಮಂ ಸಫಲ' ವೆನ್ನುತ್ತಾರೆ. ಬಸವನೊಡನೆ ಬರುವವರು ಕೆಲರು ; ಅವನನ್ನು ನೋಡಲು ಬಂದವರು ಕೆಲವರು ; ಕೆಲವರು ಅವನಿಗೆ ಉಡುಗೊರೆ ಕೊಡುತ್ತಾರೆ ; ಕೆಲವರು ವಿಭೂತಿ ವೀಳೆಯವನರ್ಪಿಸುತ್ತಾರೆ ; ಕೆಲವರು ಪುಷ್ಪಾಂಜಲಿ ನೀಡುತ್ತಾರೆ. ಕೆಲರು ನಮಿಸಿ ಶೋಭಾರತಿಯೆತ್ತುತ್ತಾರೆ: "ಸ್ವಸ್ತಿದೀರ್ಘಾಲಯ : ಪ್ರಶಸ್ತಸಮಸ್ತ ಶಂಕರಂ" ಎಂದು ಪಂಡಿತರು ಹರಸುತ್ತಾರೆ; 'ಗದ್ಯಸ್ತವನ', 'ಪದ್ಯಸ್ತುತಿ'ಗಳಿಂದ ಕೆಲವರು ಹೊಗಳುತ್ತಾರೆ; ಮೆರವಣಿಗೆಯಲ್ಲಿ ಅರಸು ; ಅವನ ಮುಂದೆ ಬಸವಣ್ಣ ; ಮಂಗಳಪಾಠಕರು ; ಕಳಕಳದ ಮುಂದಿ-ಮುಂದೆ 'ತಂಬಟದ (ತಮಟೆ) ನಿಸ್ಸಾಳ ಕೋಟಿ, ಎತ್ತಿಬಾರಿದ 'ವಾದ್ಯ' ವಿತತಿ ; ಎತ್ತಿದ ನಂದಿಧ್ವಜ ; ಅಗ್ಗದ ದಾವುಲಿಯ ತೊಡರುಗಳ ವೀರಗಣಾವತಾರದ ವೀರ ಭಕ್ತರು ; 'ವೀರವಲಗೆ' ; ಇವುಗಳ ಮುಂದೆ ಹಲವು ರಥ ; ಅವುಗಳ ಮುಂದೆ ತ್ರಿಪುರಾಂತಕನ ಲೀಲೆಯನ್ನು ನಟಿಸಿ ತೋರುವ ನರ್ತಕರು ; 'ಪ್ಯಾಂಗಿರುಗಟಿಯ ಕೇಳಿಕೆಯ ಜೋಕೆ', 'ಸೊನ್ನಲಿಗೆ ಪುರಮೇಳ' ದವರು ; ಸೌರಾಷ್ಟ್ರದೊಡೆಯನ ನಟಿಸುವ ನರ್ತನ ; ಸಂಪ್ರದಾಯದ ಜೇಡು(?) ಗಳ ಜೊತೆ ; ವೀಣಾದಿವಾದ್ಯ ಧ್ವನಿಗೆ ಕುಣಿವ ಮೇಳ ; 'ಕೂಡಲ ಸಂಗಮೇಶ'ನ ಮೇಳದವರ ಸುರಾಗರಸ ಸುಧಾಲಹರಿಯ ವಮನ ; ಓಲಗದವರ ಚಿತ್ರದಾಟ ; ಕಹಳೆಕಾರರು, ತಾಳಧಾರಿಗಳು, ಕಂಸಾಳಗಿತ್ತಿಯರು-ಇವರೇ ಮೊದಲಾದವರಿಂದ ಈ ಮೆರವಣಿಗೆ ಒಂದು ಸುಂದರ ಕಲಾಮೇಳವಾಗಿ ಕಂಗೊಳಿಸುತ್ತದೆ. ಅಂದಿನ ಸಮಾರಂಭದ ಸುಂದರ ಚಿತ್ರವನ್ನು ಕಣ್ಮುಂದೆ ಕಟ್ಟುತ್ತದೆ. ಅಲ್ಲಿ ಕೂಡಲಸಂಗಮೇಶ್ವರ ನೃತ್ಯಮೇಳ 'ಸೊನ್ನಲಿಗೆ ನೃತ್ಯಮೇಳ'- ಇರುವುದನ್ನು ನೋಡಿದರೆ ಇಂದಿನ ಭಜನಾಸಂಘ, ನಾಟಕ ಕಂಪನಿಗಳ ನೆನಪು ನಮಗಾಗುತ್ತದೆ. ಇವರೆಲ್ಲರೂ ಈ ಸಮಾರಂಭದಲ್ಲಿ ಪಾಲ್ಗೊಂಡುದೊಂದು ವಿಶೇಷ. ವಾದ್ಯ, ನೃತ್ಯ, ಕುಣಿತ, ಸಂಗೀತ, ಭಜನೆ-ನಾಟಕಗಳ ಅಸ್ತಿತ್ವವನ್ನು ಈ ವರ್ಣನೆ ನಮಗೆ ನೆನಪು ಮಾಡಿ ಕೊಡುತ್ತದೆ[71] ನೋಡಲು ಬಂದ ಹೆಂಗಳೆಯರಲ್ಲಿ ಒಬ್ಬಳು 'ಈತನೇ ನಂದೀಶ್ವರನ ಮೂರ್ತಿ' ಎಂದರೆ ಇನ್ನೊಬ್ಬಳು 'ಅಕ್ಕ ಈತನೇ ಭುವನ ಪಾವನನು ; ಬಾಗವಾಡಿ ಪುಲಿ ಮೂದಲೆ ನೋಂತು ಪಡೆದ ಸುಪುತ್ರ : 'ಬಲದೇವನಾತ್ಮಜೆಯ ವಲ್ಲಭ' ವೆಂದೆನ್ನುತ್ತಾಳೆ ; ಮತ್ತೊಬ್ಬಳು 'ಈತನೇ ಸಂಗಮೇಶನ ಮನವೊಲಿಸಿ ನುಡಿಸಿದ ಮಹಾತ್ಮ ; ಮನುಜಪತಿಯಿಂದ ಘನದ ಮನ್ನಣೆವೆತ್ತವಾತ್ಯ ; ವಿನುತಿಸಲು ಜಿಹ್ವೆಗಳ ಪರ್ಬ ; 'ನೋಡಿದೊಡೆ ಕಂಗಳ ಪರ್ಬ' ಎಂದು ಕೊಂಡಾಡುತ್ತಾಳೆ.[72]

---

71. ಬ.ಪು. ಸಂಧಿ 5, ಪದ್ಯ 8–43
72. ಬ. ಪು. ಸಂಧಿ. 5, ಪದ್ಯ 49–50

ನಾಟಕ, ನೃತ್ಯ, ಸಂಗೀತ, ಕಲೆ, ವಾದ್ಯ ವಿಶೇಷ ಮತ್ತು ಜಾನಪದ ಕಲೆ : ಬಸವಣ್ಣನ ಮದುವೆಯ ಪ್ರಸಂಗ, ಮೆರವಣಿಗೆಯ ಪ್ರಸಂಗಗಳಲ್ಲಿ ಅನೇಕ ಕಲೆಗಳು ಉಲ್ಲೇಖಿತವಾದುದನ್ನು ಈಗಾಗಲೇ ಗಮನಿಸಲಾಗಿದೆ. ಮದುವೆ, ನೃತ್ಯ, ಸಂಗೀತ, ಪೂಜೆ, ಮೆರವಣಿಗೆಯಂತಹ ಪ್ರಸಂಗಗಳು ಅನೇಕ ವಾದ್ಯ (ವಸ್ತುಗಳನ್ನು) ಉಪಕರಣಗಳ ಹೆಸರನ್ನು ಸೂಚಿಸುತ್ತವೆ. ಮದ್ದಳೆ. ಕಹಳೆ, ಕಂಸಾಳೆ, ದುರಪದ, ಕೊಳಲು, ವೀಣೆ ಮೊದಲಾದವುಗಳ ಹೆಸರು ಸುವಿಖ್ಯಾತ. ಒಂದು ಪದ್ಯದಲ್ಲಿ ನಾಟಕದ ಒಬ್ಬ ಸ್ತ್ರೀ (ನೃತ್ಯಗಾರ್ತಿ ಇರಬೇಕು) ಯ ವೇಷಭೂಷಣಗಳನ್ನು ಇಂತು ವರ್ಣಿಸಲಾಗಿದೆ: "ಇಟ್ಟು ಜೆಡೆ, ಚೊಲ್ಲೆಹವಮರ್ದಿರೆ. ತೊಟ್ಟು ಕಂಚುಕಮಂ, ದುಕೂಲವನುಟ್ಟು, ಚಲ್ಲಣಮಂ ಬಿಗಿಸಿ, ಮಣಿರಚಿತ ಕಿಂಕಿಣಿಯ ಕಟ್ಟಿಕೊಂಡು, ಬೆಡಂಗಡರೆ ನೆರೆದಿಟ್ಟ, ನೀನೀನಾಟಕಕ್ಕಳವಟ್ಟ ರೀತಿಯೊಳೊಪ್ಪಿ ಸೋವಲದೇವಿ ನದೆತಾರೌ''—ಎಂದು[73]. ದೇಸಿ ಮತ್ತು ಮಾರ್ಗ ಪದ್ಧತಿಗಳಲ್ಲಿ 'ಕಾವ್ಯ' 'ನಾಟಕ' ಗಳು ಉಪಲಬ್ಧವಿದ್ದುದನ್ನು ಬಸವಪುರಾಣವು ತಿಳಿಸುತ್ತದೆ. "ಸರಸ ಭಾಷಾಂಗ (ವರ್ಣನೆ) ಕ್ರಿಯಾಂಗೋ(ಅಭಿನಯ)ತ್ಕರದ ನಾಟಕ, ಗದ್ಯ, ಪದ್ಯ ವಿಸರ ಮಧುರ ಗೀತೋಕ್ತಿಯಿಂ ಸಲೆ ದೇಶದೇಶದಲಿ. ಕರಮೆಸೆಯಲೂರೂರೊಳು, ಅತಿಶುಭಕರಮೆನಲು ಸಿರಿಯಾಳ ಚರಿತೆಯನೊರೆದೊರೆದು ವಿರಚಿಪರು ಭಕ್ತ ಸಭಾಂತರಂಗಳೊಳು"; ಅಲ್ಲದೆ "ಮನೆ ಮನೆಗೆ ತಮತಮಗೆ ಸತಿಯರು ಕೂಡೆ ಒನಕೆವಾಡಂ ಪಾಡುವರು"–[74] ಎಂದು ಸಿರಿಯಾಳನ ಕಥೆ ಪಡೆದ ಪ್ರಚಾರ ಮತ್ತು ಹೊಂದಿದ ಕಲಾಮಾಧ್ಯಮಗಳನ್ನು ಈ ಮಾತು ತಿಳಿಸುತ್ತದೆ. ಭಕ್ತರ ತಂಡಗಳು ಶರಣರ ಕತೆಗಳನ್ನು 'ದೇಶಿ' 'ಮಾರ್ಗ' ಎರಡರಲ್ಲೂ ಸಾಹಿತ್ಯ, ಸಂಗೀತ, ನೃತ್ಯ, ನಾಟಕಗಳ ಮೂಲಕ ನಿವೇದಿಸುತ್ತಿದ್ದವು ಎಂಬುದಕ್ಕೆ ಇದು ಉತ್ಕೃಷ್ಟ ನಿದರ್ಶನ* ಒಂದು ಪದ್ಯದಲ್ಲಿ ನೃತ್ಯಮಾಡುತ್ತಿರುವುದನ್ನೇ ವರ್ಣಿಸಲಾಗಿದೆ :

"ಸುಲಲಿತದ ಮುಖರಸದ, ಸೌಷ್ಟವದ ಸಭಾವದ, ವಿಭ್ರಮದ, ನಿಶ್ಚಲದ ನೋಟದ, ದೃಢದ ಝಂಕೆಯ, ಬಿಂಕದಂಕಿತದ ; ಲಳಿಯ ರೀವಿಯ, ನಿಜಸುರೇಖೆಯ, ಲಲನೆ ಈ ಪರಿಯಿಂದ ನೃತ್ಯವ ಸಲಿಸೆ, ಶಿವಲಿಂಗಾರ್ಚನೆಯನೊಲವಣ್ಮೆ ಮಾಡು

73. ಬ. ಪು. ಸಂಧಿ. 12 ಪದ್ಯ 43

74. ಬ. ಪು. ಸಂಧಿ. 25 ಪದ್ಯ 20, 21

* ಏಕಾಂತರಾಮಯ್ಯನು ಕತ್ತರಿಸಿಕೊಂಡ ಶಿರವನ್ನು ಭಕ್ತರು ಮೆರೆಸಿದ ರೀತಿ ಇದು : "ಬಹಳ ವಾದ್ಯಧ್ವನಿಗಳಗ್ಗಳಿಸೆ, ವಿವಿಧ ವಿಧನವನಾಟಕ ಮಹೋತ್ಸವ ಸಮುಚ್ಚಯ ವೆಸೆಯೆ, ಏಕಾಂತ ವಿಭು ಬಲಗೈಯಲಿಗೆಡೆದಕರದಲ್ಲಿ ಶಿರಂ ಮೆರೆಯೆ, ನಲಿನಲಿದು ಪುರವೀಧಿವೀಧಿಗಳೊಳಗೆ ಜತಿಗಳ ತಾಳಗತಿಗಳೆಗಳಸಿ ಕುಣಿದಾಡುತ್ತ ಡಾಕಾರದ ಮೇಲೆ ನಿಲುವುತ್ತ...ಸಂಧಿ 52– ಪದ್ಯ 41–42.

ತಿರೆ", ಎಂದು.[75] ಸಕಳೇಶ ಮಾದರಸರು 'ನಾದವಿದ್ಯಾಪಂಡಿತ'ರೂ, 'ವೀಣಾದಿ ಸಕಳಕಳಾವಿದ'ರೂ. 'ಭರತಾದಿ ಶಾಸ್ತ್ರವಿಚಕ್ಷಣ'ರೂ ಆಗಿ, 'ಬತ್ತೀಸಾದಿ ರಾಗಂಗಳನು' 'ದಂಡಿಗೆ'ವಿಡಿದು 'ರಾಗಗಳಿಂದೆ' ಸಕಳೇಶನೊಲಿಯುವಂತೆ ಹಾಡುತ್ತಿದ್ದರು. ಅವರು ವಿಖ್ಯಾತವಾದ ರಾವಣವೀಣೆ, ವಾರಣವೀಣೆ, ಗೌರೀವೀಣೆ, ಕಚ್ಛಪವೀಣೆ, ಕೈಲಾಸವೀಣೆ, ತುಂಬುರವೀಣೆ, ಪದ್ಮಜವೀಣೆ, ಸ್ವಾಯಂಭುವೀಣೆ, ಸಾರಂಗವೀಣೆ ; ಪಿನಾಕವೀಣೆ ಮೊದಲಾದ ವೀಣೆಗಳನ್ನು ನುಡಿಸುತ್ತಾರೆ. ಮೇಘಜಾಳ, ಯೌತಾಣ, ನವತಾಣ ಮೊದಲಾದ ರಾಗಗಳಲ್ಲಿ ಸಪ್ತಸ್ವರಗಳಲ್ಲಿ ಇಪ್ಪತ್ತೆರಡು ಶ್ರುತಿಗಳು ಕೂಡಿ, ನಾರಾಟ ಕಾವ್ಯಳೆಂಬ ಧ್ವನಿಗೂಡಿ, ಗಮಕಸಪ್ತಕದಲ್ಲಿ, ನಾರ ಮಾರ್ದವ, ಮಾಂದ್ರ ಮಧ್ಯಮ ಚಾರವೆಂಬಲಯ ಲಂಕಿತಗೂಡಿ, ಶುದ್ಧ ಸಾಳಗ ಪೂರ'ದೇಶಿ' 'ಮಾರ್ಗ'ದಲ್ಲಿ, ಲಳಿದ್ರುತ ಮಧ್ಯಲಲಿತ, ವಿಳಂಬಿತದಲ್ಲಿ ಸಂಗೀತದ ಓರಿಯರಾಗಗಳಲ್ಲಿ ನುಡಿಸುತ್ತಿದ್ದುದನ್ನು ಭೀಮಕವಿಯು ಸುದೀರ್ಘವಾಗಿ ವರ್ಣಿಸಿದ್ದಾನೆ. ಸಕಳೇಶಮಾದರಸರಂತೆ. ಕವಿಗೂ ಈ ವಿಷಯಗಳಲ್ಲಿ ವಿಶೇಷಜ್ಞಾನವಿತ್ತೆಂಬುದಕ್ಕೆ ಇಲ್ಲಿಯ ಪಾರಿಭಾಷಿಕ ಪದ ಬಳಕೆ ವಿಷಯ ನಿರೂಪಣೆ ಇವೇ ಸಾಕ್ಷಿ.[75] ಕಿನ್ನರಿ ಬೊಮ್ಮಯ್ಯನು ಕಿನ್ನರಿ ನುಡಿಸುವಲ್ಲಿ ನಿಪುಣ : ಅವನು ಪ್ರಾಪಂಚಿಕವನರಿಯದೆ, ನಿರ್ವಂಚಕದೊಳು ಪಂಚವದನನ ಭಕ್ತರಿಗೆ ಬಂದ ಹಣವನ್ನು ಸಲ್ಲಿಸಿ. "ಚಮತ್ಕೃತಿಯಿಂದೆ 'ಕಿನ್ನರವೀಣೆ' ಪಿಡಿದು ಬಾರಿಸುತ್ತಿರಲು, ಬಾಲೇಂದುಮೌಳಿಯು ಮೆಚ್ಚಿ, ಅವನಿಗೆ ಪ್ರತಿಯಾಗಿ 'ಒಂದು ಹೊನ್ನು' 'ಒಂದು ಹಣ' 'ಒಂದು ಹಾಗ'ವನ್ನು" ದಯಪಾಲಿಸುತ್ತಾನೆ[77] ಕಲಕೇತ ಬೊಮ್ಮಯ್ಯನೆಂಬ ಶಿವಶರಣನು 'ಬಹುರೂಪಿ ವೇಷಗಾರ'. ಆತನ ವೇಷಭೂಷಣಗಳನ್ನು ಇಂತು ವರ್ಣಿಸಲಾಗಿದೆ ; "ಮುಂದಲೆಯ ಮುಡಿನಡುಗೆ, ಭಸಿತವನೊಂದಲಳಿಕದೊಳಿಟ್ಟು, ಕಿವಿಯಲಿ ಕೆಂದಳಿರನಳವಡಿಸಿ, ಕಾಗಿನ ಕಪ್ಪಡವನುಟ್ಟು, ಅಂದುಗೆಯನೆರಡಡಿಯೊಳೊಡರಿಚಿ, ಒಂದು ಕಾಲಲಿ ಗೆಜ್ಜೆಯಂ ಬಿಗಿದು, ಅಂದದಿಂದೊಲಿದೊಲಿದು, ನಡೆವುತ ಗಹಗಹಿಸಿ ನಗುತ ; ಗಿಲಿಕೆ ಘಲಿಲ್ ಎಂದು ಉಲಿಯೆ, ದಕ್ಷನ ತಲೆಯ ಕೋಡಿನ ತೆಜಿರಿ, ತಗರಿನ ಬಲಿದ ಕೊಂಬಂ ಎಡದ ಕೈಯಲಿ ತಾ ಪಿಡಿದಂಕೊಂಡು, ಬಲಿಹರಣಕಾರಣಕವತರಿಸಿ ಬೆಳೆದವನ ನೆಟ್ಟೆಲುವಿನಂದದಿ ಬೆಳುಗುದುಗೆಯಂ ಬಲದ ಕರದಲಿ ಪಿಡಿದು ತಿರುಪುತ್ತ ಅಳವಡಿಪ ಕಲಕೇತ ವೇಷಂದಳೆದು, ಶಿವಭಕ್ತರ ನಿವಾಸಂಗಳಿಗೆ ಗಮನಿಸಿ, ತನ್ನ ಮೋಜಿಯನಂತು ಮುಚುಕಿಸುತ, ಪರಸಮಯಂಗಳಂ ಮುಳಿದು ವೆಗ್ಗಳಿಸಿ ತಾಗುವ ಹರನಸಿಟಿಲಾಸನದ ಉಗ್ರದ ತಗರು ಬಂದಿದೆ ನೋಡಿ ನೀವು"[78]– ಎನ್ನುತ್ತಾ ಶಿವಭಕ್ತರ ನಿಳಯಂಗಳಿಗೆ ಚಲಿಸು

---

75. ಬ. ಪು. ಸಂಧಿ 12, ಪದ್ಯ 45
76. ಬ. ಪು. ಸಂಧಿ 19, ಪದ್ಯ 2–19
77. ಬ. ಪು. ಸಂಧಿ 29 ಪದ್ಯ 5–6
78. ಬ. ಪು. ಸಂಧಿ 28 ಪದ್ಯ 3–8

ತ್ತಾನೆ. 'ಕಲಿಮಲಾಂಬುಜಷಂಡವಂ ಕೊತ್ತಳದುಳಿವ ಘನವೀರಭದ್ರನ ಬಲವತ್‌ ಇಭ; ಅರಿಷಡ್ವರ್ಗಮಾತಂಗಕುಲವನೊತ್ತಿ ವಿಚಾರಿಸುವ ಕಳಕಳದ ಸಿಂಹಾಯುಧ; ಪ್ರಮಥಾವಳಿಯ ಕೂರ್ಪಣುಗ; ಶರಣರ ಮುದ್ದಿಗ; ಆದ್ಯರೊಳೆನಿ ಕೋಡಗ ದಾಟಪಾಡುವ ಭೃಂಗಿ, ಲಿಂಗವಂತರ ಲೈಂಗಿ; ಜಂಗಳಿಯ ಶಿಶು; ಆದಯ್ಯಂಗಳಾಳಂ; ದುಗ್ಗಳೆಯ ಮನೆಯುವರ ಸಂಗಡಿಗ; ಅಭವಭಕ್ತರ ಡಿಂಗರಿಗ ಬಂದ'– ಎಂದೂ 'ಅಪ್ಪಗಳಿರ, 'ಅಕ್ಕಗಳಿರಾ' ಎಂದು ತನ್ನ ಬಹುರೂಪಿ ವೇಷಗಳನ್ನು ಪ್ರದರ್ಶಿಸಿ, ಅವರನ್ನು ನಗಿಸಿ ಅವರಿಂದ ಭತ್ತವನ್ನು ತರುತ್ತಿದ್ದನೆಂದು ವರ್ಣಿಸಲಾಗಿದೆ.[79]

ಸ್ತ್ರೀಯರ ಸ್ಥಾನಮಾನ: ಈ ಕಲಕೇತ ಬೊಮ್ಮಯ್ಯನು ತನ್ನ ಬಹುರೂಪಿ ವೇಷಗಳನ್ನು ಪ್ರದರ್ಶಿಸುತ್ತಿದ್ದುದಂ ಶಿವಭಕ್ತರ ಮನೆಗಳಲ್ಲಿ, ಮತ್ತು 'ಅಪ್ಪಗಳಿರ'. 'ಅಕ್ಕಗಳಿರ' ಎಂದು ಗೌರವದಿಂದ ಸ್ತ್ರೀಯರನ್ನು ಸಂಬೋಧಿಸಿ, ಅವರಿಂದ ತನ್ನ ಕಲಾಪ್ರದರ್ಶನಕ್ಕೆ ಪ್ರತಿಫಲವಾಗಿ ಭತ್ತ ಪಡೆಯುತ್ತಿದ್ದುದೂ ಆ ಸ್ತ್ರೀಯರಿಂದಲೇ. ವಿದ್ಯಾಪ್ರಸಾರವು ಕಡಿಮೆ ಇದ್ದ ಆ ಕಾಲದಲ್ಲಿ ಇಂತಹ ಕಲೆಗಳ ಮೂಲಕ ಕಲೆ, ವಿದ್ಯೆ ಪ್ರಸಾರ ಮಾಡಿ ಸ್ತ್ರೀಯರನ್ನು ಉದ್ಧರಿಸಿದ ಪುಣ್ಯ ಇಂತಹ ಕಲಾವಿದರಿಗೆ ಸಲ್ಲುತ್ತದೆ. ಪುರಾಣ, ಕೀರ್ತನೆಗಳನ್ನು ಕೇಳುವುದರಿಂದಲೂ ನಮ್ಮಲ್ಲಿ ಅನೇಕ ಸ್ತ್ರೀಯರು ಶಿವಭಕ್ತಿಯ ಸಂಸ್ಕಾರ ಪಡೆದಿದ್ದಾರೆ. ಬಿಜ್ಜಮಹಾದೇವಿಯ ಕತೆ ಇದಕ್ಕೆ ನಿದರ್ಶನ. ಬಸವಣ್ಣನವರು ಅಧಿಕಾರ ವಹಿಸಿಕೊಳ್ಳಲು ಬಿಜ್ಜಳನ ಅರಮನೆಗೆ ಹೊರಟಾಗ ಆತನನ್ನು ನೋಡಲು ಬೀದಿಗಳಲ್ಲಿ, ಉಪ್ಪರಿಗೆಗಳಲ್ಲಿ "ಬಾಲಶಶಿಸಮಭಾಳತಟದ, ಅಳಿನೀಲಕುಂಚಿತ ಕಚಭರದ, ಮೃಗಲೋಲನಯನದ, ನಳಿನವದನದ, ವಟಫಲಾಧರದ, ಮರಾಳಯಾನದ ಬಾಲೆಯರು, ತಿಲಕುಸುಮನಾಸಿಕದ, ಮುಖ ಮಂಡಲದ, ಮೃದುದೋರ್ಲತಿಕೆಗಳ, ಕೋಮಳ ಶರೀರದ ಯುವತಿಯರು, ಲಲನೆಯರು" ನಿರ್ಭಯವಾಗಿ ಸಂದಣಿಸಿದ್ದರೆಂದು ಕವಿಯು ವರ್ಣಿಸಿದ್ದಾನೆ.[80] ಗೊಲ್ಲತಿಯೊಬ್ಬಳು ಬಸವಣ್ಣನ ಭಕ್ತಿಯ ಮಹಿಮೆಯನ್ನು ಬಿಜ್ಜಳನ ಸಭೆಯಲ್ಲಿ ನಿರ್ಭಯವಾಗಿ ಕೊಂಡಾಡುತ್ತಾಳೆ. ಮೋಳಿಗೆ ಮಾರಯ್ಯಗಳ ಕಥೆಯಲ್ಲಿ, ಮಾರಯ್ಯಗಳು ಘೋರ ಕಾಂತಾರಕ್ಕೆ ಕಟ್ಟಿಗೆ ತರಲು ಹೋದ ವೇಳೆಯಲ್ಲಿ ಮಾರಯ್ಯ ಮತ್ತು ಆತನ ಪತ್ನಿ ಇವರ ಕಾಯಕ ಮತ್ತು ಭಕ್ತಿನಿಷ್ಠೆಯ ಪರೀಕ್ಷೆಗೆಂದು. 'ಪ್ರಚ್ಛನ್ನಭಾವ'ದಿಂದ ಅವರ ಮನೆಗೆ ಬಸವಣ್ಣನು ಆಗಮಿಸುತ್ತಾನೆ. ಮಾರಯ್ಯನಿಲ್ಲದ ವೇಳೆಯಲ್ಲಿ ಜಂಗಮ ವೇಷದಲ್ಲಿ ಬಂದ ಬಸವಣ್ಣನನ್ನು ಕಂಡು ಆತನ ಮಡದಿ, ಮೈಯಿಕ್ಕಿ, ಇದಿರ್ಗೊಂಡು, ಲಿಂಗಾರ್ಚನೆ ಮಾಡಿಸಿ ಉಣಬಡಿಸುತ್ತಾಳೆ. ಇಲ್ಲಿ ಒಬ್ಬ ಗೃಹಿಣಿಯನ್ನು ಬಸವಣ್ಣ ಕಂಡ ರೀತಿಯಾಗಲಿ, ಮಾರಯ್ಯನವರ ಪತ್ನಿ ಛದ್ಮವೇಶದ ಬಸವಣ್ಣನನ್ನು ಆದರಿಸಿದ

---

79. ಬ. ಪು. ಸಂಧಿ 29, ಪದ್ಯ 6–9

80. ಬ. ಪು. ಸಂಧಿ 5, ಪದ್ಯ 21–24

ರೀತಿಯಾಗಲಿ ಮೆಚ್ಚತಕ್ಕಂತಹವೇ. ಇಂತಹ ಸ್ತ್ರೀಯರನ್ನು ನಿರ್ಮಿಸಿದ ಪವಾಡ ಶಿವಶರಣರದಾಗಿದೆ. ಸಾಮಾನ್ಯ ಸ್ತ್ರೀಯರಿರಲಿ, ಬಸವಪುರಾಣದಲ್ಲಿ ಉಕ್ತರಾದ ಅನೇಕ ವೇಶ್ಯಾಸ್ತ್ರೀಯರ ನಡತೆಯೂ ಮೇಲ್ತರಗತಿಯದಾಗಿದೆ ಎಂಬುದಕ್ಕೆ ಗುರುಭಕ್ತ ಆಂಡಾರಿ, ಮುಗ್ಧ ಸಂಗಯ್ಯನ ಕಥೆಗಳೇ ನಿದರ್ಶನ.

ಕುಲ, ಜಾತಿ, ವರ್ಣಗಳು : ಸಾಮಾನ್ಯವಾಗಿ ಕಾಯಕವನ್ನಾಧರಿಸಿ ಪರಿಗಣಿತ ವಾದ ಅನೇಕ ಕುಲಗಳನ್ನು ಶರಣರು ಮನ್ನಿಸುವುದಿಲ್ಲ; ಕುಲಗಳ ಆಧಿಕ್ಯ ಕಿರಿಮೆಯನ್ನೂ ಮನ್ನಿಸುವುದಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಕುಂಬಾರ, ಬಳೆಗಾರ, ಕಮ್ಮಾರ, ಅಕ್ಕಸಾಲಿ, ಕಿರಾತ, ತುರುಗಾರ, ಸೂತ್ರಿಕ ಅಸಗ–ಇವುಗಳನ್ನು ಕುಲವೆಂದು ಪರಿಗಣಿಸಿದ ಹಿಂದೂ ಸಮಾಜದಲ್ಲಿ ಉತ್ತಮ ಕುಲದವರು ಇತರರನ್ನು ಕೀಳಾಗಿ ಹೀಯಾಳಿಸುತ್ತಿದ್ದರು. ಒಂದು ದೃಷ್ಟಿಯಿಂದ ನೋಡಿದರೆ ಶಿವಭಕ್ತರು ಅನೇಕ ಕಾಯಕಗಳನ್ನು ಮಾಡುತ್ತಿದ್ದರೂ ಅವರ ದೇವರು ಒಬ್ಬನೇ; ಅವರ ಕಸಬುಗಳಿಗೆಲ್ಲ ಆ ಶಿವನೇ ಮೂಲ; ಶಿವನೂ ನಾನಾ ಕಸಬುಗಳನ್ನು ಮಾಡುತ್ತಾನೆ. 'ಪಂಕಜಭವನ ಜಡೆಗಳ ಜನ್ನಿವಾರವನ್ನಿಕ್ಕಿಕೊಂಡು ಭಕ್ಷಿಸುವ ಶಿವನೂ ಬ್ರಾಹ್ಮಣನೆ; ದುರ್ಘವ ಭೂರಿಕರ್ಮೋತ್ಕಟ ಘಟವಹಿತ್ರವನಳ ವಡಿಸಿ ಭವಾಂಬುಧಿಯೊಳು ತಿರುಗಿಸುವ ವೈಶ್ಯನೂ, ಸನ್ನುತಾನಂದಾಪವರ್ಗೋತ್ತುಂಗ ಸಾಮ್ರಾಜ್ಯಾಧಿಪಟ್ಟವ ಪಾಲಿಸುವ ಕ್ಷತ್ರಿಯನೂ ಆಗಿದ್ದಾನೆ. ಹೀಗೆಯೇ ಜಗವನ್ನು ಸೃಷ್ಟಿಸುವ ಕಲೆಯಲ್ಲಿ ಅವನು ಕುಂಬಾರನೂ, ಬಳೆಗಾರನೂ, ಕಮ್ಮಾರನೂ, ಅಕ್ಕಸಾಲಿಗನೂ, ಕಿರಾತನೂ ಆಗಿರುವುದರಿಂದ ಅವೇ ವೃತ್ತಿಗಳನ್ನು ಮಾಡುವ ಭೂಲೋಕದ ಮನುಜರಿಗೆ ಬಂದ ಕುಲಗೋತ್ರಗಳಲ್ಲಿ ಮೇಲು ಕೀಳೆಂಬುದು ಎಲ್ಲಿಂದ? ಎಂದು ಬಸವಣ್ಣನವರು ಮಡಿವಳ ಮಾಚಿದೇವನನ್ನು 'ಅಸಗ'ನೆಂದು ಹೀಯಾಳಿಸಿದ ಬಿಜ್ಜಳನಿಗೆ ಪ್ರಶ್ನಿಸಿದುದನ್ನು ಬಸವಪುರಾಣವು ವಿವರಿಸುತ್ತದೆ.[81] "ಶಿವನಾಗಮಯ್ಯನೊಡನೆ ಬಸವಣ್ಣನು ಹಿರಿಯಭಕ್ತನೆಂದು ಹೇಳಿಕೊಂಡು, ಆ ಹಿರಿಯಭಕ್ತ ಶಿವನಾಗಮಯ್ಯನೊಡನೆ ಕೂಡುಂಡುದಲ್ಲದೆ, ಅವರ ಕಾಲ್ಗಳ ಮೇಲೆ ಬೀಳುತ್ತಾನೆ. ಅವನನ್ನು ಕೊಂಡಾಡುವುದಲ್ಲದೆ ಸಭ್ಯನ ಹಾಗೆ ಬೀದಿಗಳಲ್ಲಿ ನಡೆದು ಬಂದು, ನಿಮ್ಮೊಡನೆ ಕೂಡಿ ಹೊಲೆಗಲಸುತ್ತಾನೆ. ಎಲ್ಲಿಯ ವರ್ಣಾಶ್ರಮ, ಎಲ್ಲಿಯ ಯಜ್ಞಯಾಗ?" ಎಂದು ಬಿಜ್ಜಳ ಭೂಪನಿಗೆ ಕೆಲವು ವೈಷ್ಣವರು ಚಾಡಿ ಹೇಳಿ, "ಭೂಪನಂ ಹೊದ್ದುವುದು ರಾಷ್ಟ್ರದ ಪಾಪ''; ಅಲ್ಲಿಂದ ಆ ಪಾಪವು ಹರಿದು ಪುರೋಹಿತರನ್ನು ತಲುಪುತ್ತದೆ ಎಂದೂ ದೂರುತ್ತಾರೆ; ಬಿಜ್ಜಳನೂ ಬಸವಣ್ಣನಿಗೆ "ಹೊಲೆಗಲಸಿ ಕುಲಸಂಕರವನಗ್ಗಳಿಸಿ, ಈ ಕಲ್ಯಾಣಕಟಕವನಿಂತು ಕೆಡಿಸುವರೆ''–ಎಂದು ಕೇಳುತ್ತಾನೆ. ಅಲ್ಲದೆ ''ಶಿವಭಕ್ತಿ ನಿನ್ನ ತಲೆಯಲ್ಲಿಯೇ ಉದಯವಾಯಿತೇ?

81. ಬ. ಪು. ಸಂಧಿ 21, ಪದ್ಯ 23–33

ನೀತಿಗಳನತಿಗಳೆದು ನಡೆವುತ್ತಿಪ್ಪ; ಸುರಿವುದೇ ಮಳೆ ? ಬೆಳೆವುದೇ ನೀನಿರ್ದಧರೆ?''[82] —ಎಂದೂ ಕೇಳುತ್ತಾನೆ. ಅದಕ್ಕೆ ಬಸವಣ್ಣನು, 'ಬಡಗಿ' ಮಾಚಲದೇವಿಯಿಂದ ಹೊನ್ನು ತಿಂದು, ಅವಳನ್ನು 'ಕ್ಷತ್ರಿಯ'ರೆಂದಿರಿ. 'ಪಶುವನುಬ್ಬಸಗೊಳಿಸಿ ವಧಿಸುವವರು ಹಸಿಯ ಹೊಲೆಯರು'. ಓದನಕ್ಕೆಯು ಹೊನ್ನು ಅರ್ಥವಾಗುವಂತೆ ಭೂಲೋಕದ ಕುಲಂಗಳು ಭಕ್ತಕುಲಕೆ ಸಮಾನವಿಲ್ಲ[83] ಎಂದು ವಾದಿಸುತ್ತಾನೆ. ನಿಜವಾದ ಶಿವಭಕ್ತನಿಗೆ ಕುಲಗಳಿಲ್ಲ. ಯಾಕೆಂದರೆ ಶಿವನಿಗೆ ಕುಲವಿಲ್ಲ ಎಂದು ವಾದ ಮಾಡಿದರು. ಈ ಚರ್ಚೆಯನ್ನು ನೋಡಿದರೆ ಕುಲಗಳನ್ನು ತ್ಯಜಿಸಿ ಹೊಸ ಸಮನ್ವಯ ಸಮಾಜ ರೂಪಿಸುವ ಉದ್ದೇಶವು ಶರಣರದಾಗಿತ್ತೆಂಬುದು ತಿಳಿಯುತ್ತದೆ. 'ಶಿವಭಕ್ತನಾದೊಡನಾಮಿಕಂ ಅಗ್ರಜನ್ಮನು ; ಈಶಭಕ್ತಿವಿಹೀನಭೂಸುರನು ಅನಾಮಿಕಾಧಮನು' ಎಂಬುದು ಶರಣರ ನಿಲವಾಗಿತ್ತು.[84] ಬ್ರಾಹ್ಮಣವು 'ಜಾತಿಗುತ್ತಮ ಕುಲ'ವೆಂದೂ ಬ್ರಾಹ್ಮಣನು ಸಮಸ್ತವರ್ಣವ್ರಾತದೊಳಗೆ 'ಅಗ್ರಜ ಕುಲಾಗ್ರಣಿ'ಯೆಂದೂ ಪರಿಗಣಿತರಾದ ಕಾಲವದು. 'ಕುಲದೀಪಕ'ನಿಂದ ಕುಲದ ಉದ್ಧಾರ, 'ಕುಲನಾಶಕ'ನಿಂದ ಕುಲವಳಿಯುತ್ತದೆಯೆಂದೂ ಜನರು ನಂಬಿದ್ದರು. ಬ್ರಾಹ್ಮಣೋತ್ತಮನಾಗಲು ಉಪನಯನ ಸಂಸ್ಕಾರವು ಅಲ್ಲದೆ ಇತರ ಹದಿನಾರು ಆದಿಕರ್ಮಂಗಳು ಬ್ರಾಹ್ಮಣರಿಗೆ ಅವಶ್ಯವೆಂಬ ಭಾವನೆ ಬ್ರಾಹ್ಮಣರಲ್ಲಿದ್ದುದನ್ನು ಬಸವ ಪುರಾಣವು ನಿವೇದಿಸುತ್ತದೆ.[85]

ಅಂದಿನ ಉದ್ಯೋಗಕಾರರು ; ಕೆಲವು ವ್ಯಕ್ತಿಗಳ ಹೆಸರುಗಳು : ಬಸವ ಪುರಾಣದಲ್ಲಿ ನಾನಾ ಉದ್ಯೋಗ ಮತ್ತು ಆ ಉದ್ಯೋಗ ಮಾಡುವವರ ಹೆಸರುಗಳನ್ನು ಹೇಳುವುದಲ್ಲದೆ ಅಲ್ಲಿ ವ್ಯಕ್ತಿಗಳ ಹೆಸರುಗಳೂ, ಅಡ್ಡಹೆಸರುಗಳೂ ದೊರೆಯುತ್ತವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬವು ವರ್ಣಗಳ ಹೆಸರುಗಳಾಗಿದ್ದು ಅವರು ಮಾಡುವ ವೃತ್ತಿಗಳನ್ನೂ ಸೂಚಿಸುತ್ತವೆ. ಇವಲ್ಲದೆ ಕುಂಬಾರ, ಕಮ್ಮಾರ, ಅಕ್ಕಸಾಲಿ, ಅಗಸ, ಜೇಡ, ಬೇಡ, ತಳವಾರ, ಗಾರುಡಿಗ, ಪಾಠಕ, ದೈವಜ್ಞ, ವೈದ್ಯ, ಗಾಯಕ, ಭರತಜ್ಞ, ಕೊಟ್ಟಾರಿ (ಕೋಠಾರಿ), ಪಸ್ಕಟಿಗ, ಸಬಳಿಗ, ಹಲಗೆಕಾರ, ದೀವಟಿಗ, ದೇವಲಕ, ಪ್ರಾವಡಿಗ, ಬಾಗಿಲವ, ಸುಯಿಧಾನ (watch man) ಕರಣಿಕ, ದಂಡನಾಥ, ಮಂಡಲೀಕ, ಕಟ್ಟಿಗೆಕಾರ, (police). ಬಂಡಿಬೋವ, ನಾಟಕ ಪಂಡಿತ, ಕೊಟ್ಟಿಗೆಯ, ಕಮ್ಮತಿಗ, ಕೀಲಾರಕೊಡೆಯ, ಸುರಗಿಕಾರ, ಮಡಿವಳ, ಕುಲಾಲ, ಹೆಗ್ಗಡೆ, ಬಡಿಗ, (ತುರಗ ಗಜ) ಸಾಹಣಿ, ಪಡಿಹಾರಿ, ಭಂಡಾರಿ, ಸುಂಕಿಗ,

---

82 ಬ.ಪು. ಸಂಧಿ 55 ಪದ್ಯ 13

83 ಬ.ಪು. ಸಂಧಿ 55 ಪದ್ಯ 54–55

84 ಬ.ಪು. ಸಂಧಿ 57 ಪದ್ಯ 5

85 ಬ.ಪು. ಸಂಧಿ 3 ಪದ್ಯ 3-43, 52, 56, 57

ಅಡಬಳ, ಬಾಣಸಗಿತ್ತಿ, ಕುಂಟಣಿ, ನಗಿಸುವವ, ಹಲಗೆಕಾರ, ಕಂಚಿಕಾರ, ಸಮ್ಮಾರ್ಜನೆ ಯುವ, ಕಾಬ್ಯ, ಪುರೋಹಿತ, ಪೌರಾಣಿಕ, ಮಂತ್ರವಾದಿ, ದಾದಿ, ಹಡಪಿಗ, ದಳವಾಯಿ, ಪಸಾಯಿತ, ಗೊಲ್ಲಿತಿ, ದಾಂಡಾರಿ, ಅಂಗರಕ್ಷಕ, ಭಂಡಾರಿ – ಇತ್ಯಾದಿಯಾಗಿ ಇಲ್ಲಿ ಸುಮಾರು ಅರುವತ್ತು ಉದ್ಯೋಗದವರ ಹೆಸರಾದರೂ ದೊರೆಯುತ್ತವೆ. ಅಂದಿನ ಸಮಾಜವು ಹೀಗೆ ಭಿನ್ನ ಭಿನ್ನ ವೃತಿಯುವರನ್ನೊಳಗೊಂಡುದಕ್ಕೆ ಇದೇ ಸಾಕ್ಷಿಯಾಗಿದೆ. ಈ ವೃತ್ತಿಗಳಲ್ಲದೆ ಕೆಲವರ ಹೆಸರುಗಳೂ ನಮಗೆ ಮೋಜಿನವಾಗಿ ಕಾಣಿಸುತ್ತವೆ. ವ್ಯಕ್ತಿಗಳನ್ನು ಗುರುತಿಸುವ ವಿಧಾನಗಳನ್ನೂ ಎತ್ತಿ ತೋರಿಸುತ್ತವೆ. ಸಾಮಾನ್ಯ ವಾಗಿ ವ್ಯಕ್ತಿಗಳನ್ನು ಅವರ ಕಾಯಕದಿಂದ ಗುರುತಿಸುವುದು ರೂಢಮೂಲವಾಗಿದ್ದಿ ತೆಂಬುದಕ್ಕೆ ಮಡಿವಳ ಮಾಚಿದೇವ, ಕಿನ್ನರಿ ಬೊಮ್ಮಣ್ಣ, ನಿವಾಳಿಯ ಬೊಮ್ಮಿದೇವ, ಡೋಹರ ಕಕ್ಕಿದೇವ, ಚವರದ ಚಿಕ್ಕದೇವ, ಶಿವರಾತ್ರಿ ಸಂಕಯ್ಯ, ಕದಿರ ರೇಮಯ್ಯ, ಬಡಿಹೋರಿ ಬೊಮ್ಮಯ್ಯ, ಗೋಡೆ ಮಲ್ಲಯ್ಯ, ನುಲಿಯ ಚಂದಯ್ಯ – ಇವು ಒಂದು ವಿಧವಾದರೆ ವ್ಯಕ್ತಿಗಳನ್ನು ಗುಣದಿಂದ ಗುರುತಿಸುವ, ಊರಿನಿಂದ ಗುರುತಿ ಸುವ ರೂಢಿಯೂ ಇದ್ದಿತ್ತು. ಉತ್ತಮಾಂಗದ ಕೇಶಿ, ಭಾಷೆವಂತಲ್ಲಯ್ಯ, ಶೀಲವಂತ ಅಗ್ಗಯ್ಯ, ಹಾವಿನಹಾಳ ಕಲ್ಲಯ್ಯ, ವೀರಗೆಲಸದ ಸೋಯಿದೇವ, ತಂಪ್ಪದಯ್ಯ ಒರತೆಯ ಬೊಪ್ಪಿದೇವ, - ಈ ಹೆಸರುಗಳೆಲ್ಲ ಮತ್ತೊಂದು ವಿಧವಾಗಿವೆ. ಇನ್ನು ಕೆಲವರ ಹೆಸರನ್ನು ನೋಡಬಹುದು. ಗಡ್ಡ ಹರಿ, ದೊಡ್ಡ ರಾಮ, ಹೆಡ್ಡ ದಾಮೋ ದರ, ದೊಡ್ಡಹೊಟ್ಟೆಯ ಮಾಧವ, ಗಡ್ಡದ ಆದಿತ್ಯ, ಹೊಟ್ಟೆಯ ಅಚ್ಯುತ, ಪಟ್ಟವರ್ಧನ ನಾರಸಿಂಹ, ಭಟ್ಟರಪ್ಪಣ, ಅಗವೀಕ, ಸೋಮಯಾಜಿ, ಸಾಮವೇದಿ, ಅಚಪೆದ್ದಿ, ತೊಗೆ (ವೆ)ಯ ಚಿನ್ನಪ್ಪ, ಮುಂಡಗೆ ವಸುದೇವ, ವೇದಾಂತಿಗಳ ಕೃಷ್ಣಪ್ಪ ಪೌರಾಣಿಕ ಬಲಭದ್ರ, ಹೆಗಲ ಮಿಟ್ಟಣ್ಣ, ಮೆಳ್ಳಗಣ್ಣ ಅಲ್ಲಾಳನಾಥ, ಡೊಳ್ಳು ಹೊಟ್ಟೆಯ ಕೋಟಿ ಇತ್ಯಾದಿ. ಈ ಹೆಸರುಗಳಲ್ಲಿ ವ್ಯಕ್ತಿಗಳು ಯಾವರೀತಿ ಹೆಸರು ಪಡೆಯುತ್ತಾರೆಂಬುದನ್ನೂ ಅವರನ್ನು ಆಯಾ ಹೆಸರಿನಿಂದ ಗುರುತಿಸಿ ಕರೆಯುವಾಗ, ಅಂದಿನ ಜನರ ಮನೋಭಾವವನ್ನೂ ಕಾಣುತ್ತೇವೆ.

ವಿವಿಧ ನಮೂನೆಯ ಸೀರೆಗಳು : ಮಲಯಜಶ್ರೀ, ಕೊಳನಮೋಂಚಿನಿ, ಭಾವಜ ತಿಳಕ, ಜಯರಂಜಿ, ಕಾಂಬೋಜಿ, ರುದ್ರತಿಳಕ, ಚಂದ್ರಾತಪ, ಭೂತಿಳಕ, ಮಣಿವಟ್ಟು, ಪಿಂಜಾವಳಿ, ಸಂಧ್ಯಾರಾಗ. ಕೈದೊಡಕು, ಉದಯರಾಗ, ಪಳಿ, ಪಟ್ಟಾವಳಿ, ನೇತ್ರಾ ವಳಿ, ಹಂಸಾವಳಿ, ನಾಗಾವಳಿ, ಗಜದಾಳ, ಪುಲಿಯುಗುರಪಟ್ಟು, ಇಂದ್ರರಾಗ, ಚಿತ್ರಾ ವಳಿ, ಕಟ್ಟುವಣ್ಣದ ಪಟ್ಟೆ, ಬಲ್ಲಳದಟ್ಟೆ, ಮೇಘವಣ್ಣದ ಪಟ್ಟೆ, ತವರಾಜ, ಮರತ ಕದ ಪಟ್ಟೆ, ಮಾಂದಳಿರಪಟ್ಟೆ, ಕದವಟ್ಟೆ, ಸಣ್ಣಪಡಂಜಿ, ಮೊಂಬಟ್ಟೆ, ಸಿರಿಗಣಿ, ಗುಜ್ಜ ರಾಪ್ಪದ ಪಟ್ಟೆ,ವಾರಣಾಸಿಯ ದಸರಿ–ಇತ್ಯಾದಿ. ಇಲ್ಲಿ ಸುಮಾರು ಹದಿನೆಂಟು ಜಾತಿಯ ಸೀರೆಗಳನ್ನು ಹೆಸರಿಸಲಾಗಿದೆ. ಕಾಂಬೋಜ, ಗುಜರಾಥ ಮತ್ತು ವಾರಣಾಸಿಯಿಂದಲೂ

ಇಲ್ಲಿಗೆ ಸೀರೆಗಳನ್ನು ತರಿಸಿ ಮಾರುತ್ತಿದ್ದುದನ್ನೂ ನಾನಾವರ್ಣ, ನಾನಾಗುಣಯುಕ್ತ ಸೀರೆಗಳ ಲಭ್ಯತೆಯನ್ನೂ ಈ ಪಟ್ಟಿಯು ನಮಗೊದಗಿಸುತ್ತದೆ.

ಇತರ ಅಂಶಗಳು : ಬಳ್ಳ, ಕುಳ (ಕೊಳಗ), ಖಂಡುಗ, ಹೇರು ಮೊದಲಾದವು ಅಳತೆಯ ಸಾಧನಗಳಾಗಿದ್ದುವು. ಹೊನ್ನು, ಹಣ, ಹಾಗ ಅಂದಿನ ಚಲಾವಣೆಯ ನಾಣ್ಯಗಳಾಗಿದ್ದುವು ; ಅಂದಿನಕಾಲದ ವಿದ್ಯಾಭ್ಯಾಸದಲ್ಲಿ ಬರಹ, ವಾಚನ, ಗಣಿತ, ಶಬ್ದಾರ್ಥ, ರಸಭಾವೋಕ್ತಿ ಪ್ರವೀಣತೆ, ಭರತ, ಛಂದಸ್, ವ್ಯಾಕರಣ, ಸಂಗೀತ, ಸಾಹಿತ್ಯ, ರಹಸ್ಯಾಗಮ, ಪುರಾಣ, ವೇದ—ಇವು ಮುಖ್ಯವಾದ ವಿಷಯಗಳಾಗಿದ್ದುವು ; ಶಿವಭಕ್ತರು, ಯಾವುದೋ ಮದುವೆ, ಮಂಗಳಕಾರ್ಯ, ನಾಮಕರಣ ಮೊದಲಾದ ಕಾರ್ಯಕ್ರಮಗಳಿಗೆ ಇಂದು ಅರಿಷಣ-ಕುಂಕುಮ ಕೊಟ್ಟು ಆಮಂತ್ರಣವೀಯುವಂತೆ ಅಂದು ವಿಭೂತಿ, ವೀಳ್ಯಕೊಟ್ಟು ಆಮಂತ್ರಿಸುತ್ತಿದ್ದರು ; ಅಗ್ರಹಾರ, ಬ್ರಹ್ಮಪುರಿಗಳು ಅಸ್ತಿತ್ವದಲ್ಲಿದ್ದವು ; ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದುವು. ಆದುದರಿಂದಲೇ ಬಸವಣ್ಣನು ಕೂಡಲಸಂಗಮ ಕ್ಷೇತ್ರಕ್ಕೆ ಹೋಗುತ್ತಾನೆ. ಧರ್ಮದ ಹೆಸರಿನಲ್ಲಿ, ವೇಷದ ಮರೆಯಲ್ಲಿ, ವಂಚನೆ, ಮೋಸ ನಡೆಯುತ್ತಿದ್ದುವು. ಅಂತೆಯೇ ಬಟ್ಟೆಯಲ್ಲಿ ಬದನೇಕಾಯಿ ಇಟ್ಟುಕೊಂಡು ಲಿಂಗವೆಂದು ಬಂದವರ ಉದಾಹರಣೆ ಇದೆ. ನಾಲಗೆ ಕೊಯ್ದು ಸುಣ್ಣವನೊರೆಸುವುದು, ಹುರಿದ ಮಳಲ ಬಾಯ್ದುಂಬಿಸುವುದು ತಪ್ಪುಗಾರರನ್ನು ಶಿಕ್ಷಿಸುವ ಸಾಧನಗಳಾಗಿದ್ದುವು. ವೇಶ್ಯೆಯರ ವೃತ್ತಿ ಕೀಳಾದುದಾಗಿರಲಿಲ್ಲ. ಧರ್ಮದಿಂದ ನಡೆಯದವರಿಗೆ ಬಹಿಷ್ಕಾರ ಹಾಕುವ ಪದ್ಧತಿ ಇತ್ತು. ಅಂಬಲಿ, ಹರವಿ, ಗಡಗಿ, ಬಡವರ ವಸ್ತುವಾಗಿದ್ದುವು. ಜೋಳ, ನೆಲ್ಲು, ಜನಪ್ರಿಯ ಆಹಾರ ಧಾನ್ಯಗಳಾಗಿದ್ದುವು. ದೇವರ ಹೆಸರಲ್ಲಿ ಆಡಿನ ಬಲಿ ನಡೆದೇ ಇತ್ತು. ಕಿನ್ನರಯ್ಯ ಇದನ್ನು ತಡೆದುದರ ನಿದರ್ಶನ ಕಾವ್ಯದಲ್ಲಿದೆ. 'ಜೀತ' ಪದ್ಧತಿಯ ಉಲ್ಲೇಖವು (ಸಂಧಿ 16, ಪದ್ಯ 5) ಒಂದೆಡೆ ಆಗಿದೆ. ಶಿವಭಕ್ತರ ಮನೆಗಳಲ್ಲಿ ಯಾರಾದರೂ ತೀರಿಕೊಂಡಾಗ ಕೆಲವರು ಮನೆಯಲ್ಲಿಯೇ ಸಮಾಧಿಮಾಡುತ್ತಿದ್ದುದರ ಉಲ್ಲೇಖಗಳೂ ಗಮನಾರ್ಹವಾಗಿವೆ. ವೈರಿಗಳ ಮೇಲೆ ಸೇಡು ತೀರಿಸಿಕೊಳ್ಳುವುದು, ಧಾರ್ಮಿಕ ಕಲಹಗಳು ಸಾಮಾನ್ಯವಾಗಿದ್ದುವು. ಕರ್ನಾಟಕದ ರಾಜರು ಧರ್ಮಸಹಿಷ್ಣುಗಳಾಗಿದ್ದರೂ ಅರಸನಾದ ಬಿಜ್ಜಳನು ನಡೆದುಕೊಂಡ ರೀತಿ ಸಹಿಷ್ಣು ಸ್ವಭಾವದ್ದಾಗಿರಲಿಲ್ಲ. ಯಾರದಾದರೂ ಬರಹವನ್ನು ಪರೀಕ್ಷಿಸಲು ಅದನ್ನು ಬೆಂಕಿಯಲ್ಲಿ ಇಲ್ಲವೆ ಜಲದಲ್ಲಿ ಹಾಕಿ ಪರೀಕ್ಷಿಸಲಾಗುತ್ತಿತ್ತೆಂದು ಎಂದರೆ ಅಗ್ನಿಪರೀಕ್ಷೆ, ಜಲಪರೀಕ್ಷೆಗೆ ಒಳಗಾಗಿಸಲಾಯಿತೆಂದು ಕೆಲವೆಡೆ (ಸಂಧಿ 50-33, ಸಂಧಿ 50-38) ಹೇಳಲಾಗಿದೆ. ಲೆತ್ತ, ಕಳವು, ಬೇಟೆ, ನಾನಾವಿಧ ರೋಗಗಳ ಅಸ್ತಿತ್ವ ಮತ್ತು ಪರಿಹಾರಗಳನ್ನೂ ಈ ಕಾವ್ಯವು ಹೆಸರಿಸುತ್ತದೆ. ಯಾರಾದರೂ ತಪ್ಪುಮಾಡಿದರೆ ತಪ್ಪುಗಾರನನ್ನು ಸುಧಾರಿಸುವ ಉದ್ದೇಶವಿರಬೇಕೇ ವಿನಾ

ಆದರಲ್ಲಿ ವ್ಯಕ್ತಿಗೆ ಪ್ರಾಣಹಾನಿಮಾಡಬಾರದೆಂದು ಇಲ್ಲಿ (ಸಂಧಿ 36, ಪದ್ಯ 46-47) ಹೇಳಲಾಗಿದೆ. ಶಾಸನ, ಶಾಸನಗಳ ಉದ್ದೇಶ, ಇತಿಹಾಸಗಳ ಸ್ಪಷ್ಟ ಕಲ್ಪನೆ ಶಿವ ಶರಣರಿಗಿದ್ದುದನ್ನು ಬಸವ ಪುರಾಣವು ಸ್ಪಷ್ಟವಾಗಿ ಎತ್ತಿತೋರಿಸುತ್ತದೆ. 'ವರ್ಣ ಸಂಕರದ ಪ್ರಯೋಗಗಳು ಅಂದು ನಡೆದುದನ್ನು ಕಾವ್ಯದಲ್ಲಿ ಪರಸಮಯಿಗಳು ಬಿಜ್ಜಳನಿಗೆ ದೂರಿದುದು ಕಂಡುಬರುತ್ತದೆ. ಪಾತಿವ್ರತ್ಯ ಮತ್ತು ಪಾತಿವ್ರತ್ಯದಂತಹ ಶಿವಭಕ್ತಿಗೆ ಶರಣರು ಬೆಲೆಕೊಟ್ಟಿದ್ದಾರೆ. ಕಲ್ಯಾಣದೊಳಗೆ ಬಸವಣ್ಣನು ಶಿವಭಕ್ತರ ನಡೆನುಡಿಗಳ ಬಗೆಗೆ ಶಿವಭವನಾ ಸಮಗ್ರದ ಮುಂದೆ ಶಿಲೆಯೊಳು ದೇಶದೇಶಂ ಅರಿಯೆ ಶಾಸನವ ಹೊಯಿಸಿದನೆಂದು ಉಕ್ತವಾಗಿದೆ.[86] ಗಂಗಾಳ, ತಂಬುಗೆಗಳ ಉಲ್ಲೇಖವನ್ನೂ ಒಂದೆಡೆ ಕಾಣುತ್ತೇವೆ.[87] ಶರಣರು ಬಹುದೇವತಾವಾದವನ್ನು ತಿರಸ್ಕರಿಸಿ ಏಕದೇವೋಪಾಸನೆ (ಶಿವೋಪಾಸನೆ)ಗೇ ಹೋರಾಡಿದ್ದಾರೆ. ಭಕ್ತನು ತನ್ನ ದೇವನಿಗೆ 'ಜೋಳವಾಳಿ'ಯನ್ನು ಪಾಲಿಸುತ್ತಿದ್ದುದನ್ನು ಇಲ್ಲಿ ನಿರೂಪಿಸಲಾಗಿದೆ. ನುಡಿಗಿಂತ ಶರಣರು ನಡೆಗೆ ಪ್ರಾಮುಖ್ಯವಿತ್ತುದನ್ನು 'ನಡೆಯಬಹುದೇ ಅರಿಗಾದೊಡೆ ನುಡಿಯಬಹುದಲ್ಲದೆ' ಎಂದು ಒಂದೆಡೆ ಉಲ್ಲೇಖಿಸಲಾಗಿದೆ.[88] ಅಂದಿನ ಕಾಲದ ಶರಣರ ಮಾತುಗಳನ್ನು ಪರೀಕ್ಷಿಸಿದರೆ ಬಸವಣ್ಣನೇ ಶರಣರ ನಾಯಕನೆಂಬುದೂ ಸುಸ್ಪಷ್ಟವಿದೆ. ಬಸವಣ್ಣನ ನುಡಿಗಳೇ "ಶಿಲಾಶಾಸನ" ಎಂದಿದ್ದಾನೆ ಮಡಿವಳ ಮಾಚಿದೇವ.[89] ಸನ್ಮಾನವಿಲ್ಲದ ನಂಟು, ಪ್ರಭುವಿಲ್ಲದ ಗ್ರಾಮ, ಸುಜ್ಞಾನವಿಲ್ಲದ ಜೋಗಿ, ದಾನವಿಲ್ಲದನ ಸಿರಿ, ಅಭಿಮಾನವಿಲ್ಲದ ಭಾರ್ಯೆ, ಆಪತ್ತಿಗಿಲ್ಲದ ಅರ್ಥ, ಗಾನವಿಲ್ಲದ ನರ್ತನ, ಸಂತಾನವಿಲ್ಲದ ಮನೆ, ನಲ್ಲನಿಲ್ಲದ ನಲ್ಲಳು, ಅಂಗನೆಯಿಲ್ಲದಿಪ್ಪ ಗೃಹಸ್ಥ ಅಮಾತ್ಯನಿಲ್ಲದ ಭೂಪರು, ಹಮುಳವಿಲ್ಲದ ದೇಹರ-ಇವು ಶೋಭಿಸುವುದಿಲ್ಲ ಎಂಬುದು ಕವಿಯ ಭಾವನೆ.[90]

ಜಾನಪದ ಭಾಷೆ : ಗಾದೆಮಾತು. ನುಡಿಗಟ್ಟು : ಬಸವ ಪುರಾಣವು ತನ್ನ ಸ್ವಾರಸ್ಯವನ್ನು, ರಸಗ್ರಹಣತೆಯನ್ನು ಕಾಯ್ದುಕೊಂಡಿರುವ ಪ್ರಮುಖ ಅಂಶಗಳಲ್ಲಿ ಭಾಷೆಗೆ ಮೇಲ್ಪಟ್ಟದ ಸ್ಥಾನವು ಇರುವುದನ್ನು ನಾವು ಗಮನಿಸಬಹುದು. 'ಊರಡಿಯಾದ ಕೊಳಗ' 'ಸೊಕ್ಕಿಮಿಗೆ ನುಡಿವ ಅಳ್ತಿಕಾರನು ಲೆಕ್ಕಿಸುವನೇ ದೋಷವನು' ? 'ಈರೈದು ಸಾಸಿರದೊಕ್ಕಲು' 'ಸಾಸಿವೆಯ ತೋರು' (ಸಾಸವೆಯ ಭಾರ), 'ತಲೆಯಲಿ ಭಕ್ತಿಮೂಡಿದುದೇ ? ' 'ಕುಲನಾಶಕನು ಹುಟ್ಟಲು ಕುಲವಳಿದು ಪೋಕು.

86. ಬ. ಪು. ಸಂಧಿ 60, ಪದ್ಯ 56
87. „ „ „ 2 ಮತ್ತು ಸಂಧಿ 59, ಪದ್ಯ 68
88. „ 44 ಪದ್ಯ 44
89. „ 37 ಪದ್ಯ 25
90. „ 37 ಪದ್ಯ 32–34

'ಒಕ್ಕಯ್ಯೋಗರ' 'ಕಣು (ಕಣ್ಣು) ಕರುಳಾಗು' 'ಹಸುವಿಗಾಪತಿಗುಳ್ಳುದುದೆ ನೈವ' 'ಚಾಡಿಗುಸ್ಸಿ', ಮುಂಗೈಯ ಕಡಗಕೆ ಮುಕುರವೇತಕೆ ? 'ಪೆತ್ತಮೋಹಕ್ಕಧಿಕ ಸಾಕಿದ ಮೋಹ', ಎಳೆ ಧೂಳಿಪಟವಾಗು' 'ಹೊಲದಲಿ ಗೂಳಿಯುಂ ಸುಲಿಕೊಂಡೊಲಾಯಿತ್ತು. 'ಅಸಗರಿಗೆ ಸವಣರಿಗೆ ಸಂಬಂಧಿಸುವುದೇ ಕೆಳೆ ?' 'ಹುಳಿಗೆ ಹಾಲಿಗೆ ಸಸರವಹುದೇ ?' 'ಎತ್ತು ಈಯಿತೆಂದೊಡೆ ಮೂಲಿಯಲಿ ಕಟ್ಟಿಸ ವುದು ಎಂಬನ ಚಾಳಿ', ಹೊಲಗೇರಿಯೊಳುಂಟೇ ವೇದ ಘೋಷಣ' 'ಕವಿಯ ಕಲ್ಲಿಯ ನೇಣುಮಂ ಬಿಟ್ಟವೊಲ್, 'ಮುಂಡಮೋಚಿದ ಹಾಗೆ ಅರಚು', 'ಆಚಾರಕ್ಕೆ ಕೋಡು ಬಂದಂತೆ' 'ಎಣ್ಣೆ ಅಂಬಿಲ (ಅಂಬಲಿ) ಕೂಡಿದಂತೆ', 'ಜಿಗುಳೆ ಓಡಿದಂತೆ' 'ಕೆಂಡವಂ ಮುಟ್ಟಿದಂತೆ', 'ತಲೆಸತ್ತು ಬಾಲಂ ಸಾಯದು' 'ಔಷಧಕಾದೊಡಂ ಒರ್ಬನುಂ ಇಲ್ಲ'. 'ಮುಳ್ಳಂ ಕಳೆದು ದಸಿ ಸಿಕ್ಕಿದಂತಾಯಿತ್ತು' ಎಂಬವೇ ಮೊದಲಾದವುಗಳನ್ನು ಉದಾಹರಣೆಯಾಗಿ ಕೊಡಬಹುದು. ಈ ಮಾತುಗಳಲ್ಲಿ ಕನ್ನಡ ನುಡಿಯ ಮೋಡಿ, ಕನ್ನಡಿಗರ ಮನೋಭಾವನೆಯನ್ನು, ಕನ್ನಡಿಗರ ಸಾಮಾಜಿಕ ರೂಢಿಗಳನ್ನು ಕಾಣುತ್ತೇವೆ. ಒಂದನ್ನು ಇಲ್ಲಿ ಮಾದರಿಯಾಗಿ ವಿವರಿಸಬಹುದಾಗಿದೆ. 'ಮುಂಡಮೋಚಿದಹಾಗೆ ಅರಚು' ಎಂಬ ಮಾತನ್ನು ಭೀಮಕವಿಯು ಇಲ್ಲಿ ಅರಚುವವರಿಗೆ ಉಪಮಾನವಾಗಿ ಬಳಸಿದ್ದಾನೆ. ಮುಂಡಮೋಚುವುದು ದುಃಖದಾಯಕ ಸ್ತ್ರೀಗೆ ಗಂಡಸತ್ತ ದುಃಖ ಒಂದು, ಇದರ ಮೇಲೆ ಸ್ತ್ರೀಯು ವಿಧವೆಯಾದ ಕಾಲದಲ್ಲಿ ಅವಳ ತಲೆ ಬೋಳಿಸುವುದು ಮತ್ತೊಂದು ; ಬೋಳುದಲೆಗೆ ಅಣೆಕಲ್ಲು ಒಡಿದಂತೆ. ಮುಂಡನಕ್ಕೊಳಗಾದ ಸ್ತ್ರೀಗೆ ಆದ ದುಃಖ, ಆ ದುಃಖದ ಪರಿಣಾಮಕ್ಕೊಳಗಾದ ಸ್ತ್ರೀ ಅರಚುವುದು-ಇವುಗಳನ್ನು ಕಣ್ಣಾರೆ ಕಂಡ ಕವಿಯು ಅಂದಿನ ಈ ಸಾಮಾಜಿಕ ಅನಿಷ್ಟಕ್ಕೆ ಇದು ತೋರಿದ ಒಂದು ಪ್ರತಿಕ್ರಿಯೆ ಎನ್ನಬಹುದು. ಇಲ್ಲಿಯ ಪ್ರತಿಯೊಂದು ಜಾನಪದ ನುಡಿಗಟ್ಟಿನಲ್ಲಿ ಜನಾಂಗದ ವೇದನೆ-ಭಾವನೆಗಳ ಮಿಡಿತಗಳನ್ನು ಕಾಣುತ್ತೇವೆ.

ಈ ಎಲ್ಲ ಅಂಶಗಳನ್ನು ನೋಡಿದರೆ ಬಸವಪುರಾಣವು ಅಂದಿನ ಸಮಾಜದ ಅಧ್ಯಯನಕ್ಕೆ ಒಂದು ಉತ್ಕೃಷ್ಟ ಸಾಧನೆಯೆಂಬುದು ಖಚಿತವಾಗದಿರದು.

ಮನುಸ್ಮೃತಿಯಲ್ಲಿ ರಾಜನೀತಿ ಅಥವಾ ರಾಜಧರ್ಮ

ಎಂ. ಪಿ. ಭುವನೇಶ್ವರ ಪ್ರಸಾದ್

ರಾಜಕೀಯ ಶಾಸ್ತ್ರ ಅಥವಾ ರಾಜಧರ್ಮ ಮಾನವನಿಗೆ ಅತ್ಯವಶ್ಯಕ, ಏಕೆಂದರೆ ಮಾನವ ಜೀವನ ಇದರಡಿಯಲ್ಲಿಯೇ ನಡೆಯಬೇಕು. ಇಲ್ಲದಿದ್ದರೆ ಮಾನವ ಬದುಕುವುದೇ ಒಂದು ಸಮಸ್ಯೆ ಆಗಬಹುದು. ಮಾನವ ರಾಜಕೀಯ ಕ್ಷೇತ್ರವನ್ನು ನೇರವಾಗಿ ಪ್ರವೇಶ ಮಾಡದಿದ್ದರೂ ಅದರೊಳಗೇ ಆತ ಇರುತ್ತಾನೆ. ಆದ್ದರಿಂದ ರಾಜ್ಯಶಾಸ್ತ್ರಜ್ಞರಾದ ಅರಿಸ್ಟಾಟಲ್‌ರ ಪ್ರಕಾರ ಮಾನವ ರಾಜಕೀಯ ಮತ್ತು ಸಾಮಾಜಿಕ ಪ್ರಾಣಿ. ರಾಜ್ಯಶಾಸ್ತ್ರ ಮಾನವನಿಗೆ ಪ್ರಮುಖವಾದ, ಅವಶ್ಯಕವಾದ ಅಂಗ. ಯಾವುದೇ ಶಾಸ್ತ್ರ ವಿಕಸಿಸಬೇಕಾದರೆ ರಾಜ್ಯಶಾಸ್ತ್ರವನ್ನು ಅವಲಂಬಿಸಬೇಕಾದ್ದರಿಂದ ಇದನ್ನು ಎಲ್ಲಾ ಶಾಸ್ತ್ರಗಳಿಗೂ ಅಡಿಗಲ್ಲು ಎಂದು ಹೇಳಬಹುದು. ಈ ಕಲ್ಪನೆಯನ್ನು ಭಾರತ ದೇಶದ ರಾಜ್ಯಶಾಸ್ತ್ರಜ್ಞರುಗಳಾದ ಮನು. ಶುಕ್ರಾಚಾರ್ಯ, ಕೌಟಿಲ್ಯ, ಕಾಮಂದಕ, ಬೃಹಸ್ಪತಿ ಎಲ್ಲರೂ ಪ್ರಾಮಾಣಿಸಿ ಪ್ರತ್ಯಕ್ಷವಾಗಿ. ಪರೋಕ್ಷವಾಗಿ ಪ್ರತಿಪಾದಿಸಿದ್ದಾರೆ.

ಭಾರತದ ನಾಗರಿಕತೆಗೆ ಮನುವಿನ ಕೊಡುಗೆ ಬಹಳ. ಮನುಸ್ಮೃತಿಯೆಂದರೇನು ? ಆ ಹೆಸರಿನಿಂದಲೇ ಅದನ್ನು ಏಕೆ ಕರೆದಿರುವರು ಎಂಬುದು ಮುಖ್ಯ ವಿಚಾರ. 'ಮನ್' ಧಾತುವಿನಿಂದ ಹುಟ್ಟಿದ 'ಮನು' ಎಂದರೆ ಮನುಷ್ಯ ಎಂದರ್ಥ. 'ಸ್ಮೃತಿ' ಎಂದರೇನು ? ಪರಂಪರಾಗತ ಕಾಯಿದೆ ಅಥವಾ ನಿಯಮ, ಕಟ್ಟಳೆಗಳ ಸಂಗ್ರಹಗ್ರಂಥವೇ ಸ್ಮೃತಿ. ಇದರಿಂದ ತಿಳಿಯುವುದೇನೆಂದರೆ ಮನುಷ್ಯನಿಗೆ ನೀತಿ ನಿಯಮ ಬಹಳ ಮುಖ್ಯ. ಇದಿಲ್ಲದಿದ್ದರೆ ರಾಜ್ಯ ಹಾಗೂ ವ್ಯಕ್ತಿ, ಜೊತೆಯಾಗಿಯೇ ಅವನತಿ ಹೊಂದಬಹುದು. ಮಾನವನಿಗೆ ಕಾಯಿದೆಯ ರೂಪದಲ್ಲಿ ಇರುವುದೇ ಮನುಸ್ಮೃತಿ. ಮನುವು ಈ ಕಾನೂನುಗಳನ್ನು ಮುಖ್ಯವಾಗಿ ರಾಜಧರ್ಮ, ಶಾಸನಧರ್ಮ, ಪ್ರಜಾಧರ್ಮ, ಯೋಧಧರ್ಮ, ವರ್ಣಾಶ್ರಮಧರ್ಮವೆಂದು ವಿಂಗಡಿಸಿ ವಿವರಿಸಿದ್ದಾನೆ.

ರಾಜಧರ್ಮ

ರಾಜನ ಆಯ್ಕೆ, ಅರ್ಹತೆ, ಕರ್ತವ್ಯಗಳು : ಮಾನವ ಸಮಾಜದಲ್ಲಿ ಬೇರೊಬ್ಬರ ಜೊತೆಯಲ್ಲಿ ತನ್ನ ಜೀವನವನ್ನು ನಡೆಸಬೇಕಾದ್ದರಿಂದ (ಮಾನವನು ಸ್ವಭಾವತಃ

ಕೆಟ್ಟವನಾದ್ದರಿಂದ) ಇವನಿಗೆ ಒಡೆಯನಿರಲೇಬೇಕು, ಇಲ್ಲವಾದರೆ ವ್ಯಕ್ತಿ, ದೇಶ, ಅಥವಾ ರಾಜ್ಯ ಅರಾಜಕತೆಯನ್ನು ಎದುರಿಸಬೇಕಾಗುತ್ತದೆ. ಮನುವಿನ ಪ್ರಕಾರ ರಾಜನನ್ನು ಆರಿಸುವಾಗ ಅನೇಕ ನಿಯಮಗಳನ್ನು ಅನುಸರಿಸಬೇಕು. ಆ ನಿಯಮಗಳಾವುವೆಂದರೆ ರಾಜನಾಗುವನು ಕ್ಷತ್ರಿಯನಾಗಿದ್ದರೆ ಪಟ್ಟಾಭಿಷಕ್ತನಾಗಿರಬೇಕು; ಇವನು ದೈವಾಂಶ ಸಂಭೂತನು; ದೇಶದ ಪ್ರಜಾರಕ್ಷಣೆಗೆ ಧರ್ಮರಕ್ಷಣೆಗೆ ಅವತಾರ ತಾಳಿದವನು; ಆದ್ದರಿಂದ ಇವನನ್ನು 'ನಾವಿಷ್ಣೂ ಪೃಥಿವಿಪತಿಃ' ಎಂದಿದ್ದಾರೆ. ಅವನು ಅಷ್ಟದಿಕ್ಪಾಲಕರ ಅಂಶಗಳನ್ನು ಹೊಂದಿದವನು.

"ಇಂದ್ರಾನಿಲಯಮಾರ್ಕಾಣಾಮಗ್ನೇಶ್ಚ ವರುಣಸ್ಯಚ
ಚಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀ"

ಬ್ರಹ್ಮನಿಂದ ಈ ದಿಕ್ಪಾಲರ ಅಂಶಗಳನ್ನು ಹೊಂದಿ ಜನಿಸಿದವನೆಂದು ಇದರರ್ಥ. ರಾಜನಾಗುವವನು ತೇಜಸ್ಸಿನಿಂದ ಕೂಡಿ, ಸಕಲ ಗುಣ ಸಂಪನ್ನನಾಗಿಯೂ, ವಿಚಾರವಂತನೂ, ಶೀಲವಂತನೂ, ಆಚಾರಶೀಲನೂ, ಕಾಯಿದೆಗಳನ್ನು ತಿಳಿದ ಪಂಡಿತನೂ ಆಗಿರಬೇಕು. ದಂಡನೀತಿಜ್ಞನಾಗಿ ಎಲ್ಲ ಕ್ಷೇತ್ರದಲ್ಲಿಯೂ ಎಲ್ಲರಿಗೂ ಸಮನಾಗಿ ನಡೆಯುವಂತಹ ವ್ಯಕ್ತಿಯಾಗಿರಬೇಕು. ವಿಷಯವನ್ನು ವಿಚಾರಿಸಿ ಧರ್ಮಬದ್ಧವಾಗಿ ನಡೆಯುವವನಾಗಿರಬೇಕು. ರೀತಿ–ನೀತಿ, ತರ್ಕಶಾಸ್ತ್ರಗಳನ್ನು ಬಲ್ಲವನಾಗಿರಬೇಕು. ಅಂತರ-ಬಾಹಿರ ಶಕ್ತಿಗಳ ಆದರ್ಶವನ್ನೂ ದೇಶದಲ್ಲಿರುವ ವಾಣಿಜ್ಯ, ಕೃಷಿ ಮುಂತಾದ ಉದ್ಯೋಗಗಳ ಮಾಹಿತಿಯನ್ನೂ ಪಡೆದವನಾಗಿದ್ದು ಅಹಿಂಸೆ, ಸತ್ಯ, ಧರ್ಮ, ನ್ಯಾಯ, ವಿನಯಗಳುಳ್ಳವನೂ ವಿಧೇಯನೂ, ನಿರಹಂಕಾರಿಯೂ ಆಗಿರಬೇಕು. ಆಗ ದೇಶ, ರಾಜ್ಯ, ರಾಷ್ಟ್ರ ಸುಭಿಕ್ಷವಾಗುವುದರಲ್ಲಿ ಯಾವ ಸಂದೇಹವು ಇಲ್ಲ. ಈ ಅಂಶಗಳು ಯಾರಲ್ಲಿ ಇರುವುದಿಲ್ಲವೋ ಅವರು ಈ ಹುದ್ದೆಗೆ ಅನರ್ಹರು ಎಂದು ಮನುವು ಹೇಳಿ ಈ ಗುಣಗಳಿಲ್ಲದೆ ಇದ್ದವರನ್ನು ಈ ಸ್ಥಾನಕ್ಕೆ ಕೂರಿಸಿದ್ದೇ ಆದರೆ ಸರ್ವ ನಾಶವಾಗುತ್ತದೆ ಎಂದಿರುವನು. ಅರಿಷಡ್ವರ್ಗಗಳಿಗೆ ದಾಸನಾಗಿರದೆ ಇಂದ್ರಿಯಗಳನ್ನು ನಿಗ್ರಹಿಸುವಂತಹವನೂ, ದಕ್ಷನೂ ಒಳ್ಳೆಯವರ ಪಾಲಿಗೆ ದೇವರಾಗಿಯೂ ಕೆಟ್ಟವರ ಪಾಲಿಗೆ ಯಮನಾಗಿಯೂ ಆತನು ಇರಬೇಕು. ಅವನು ದೇಶ, ಕಾಲ, ಪ್ರಜೆಗಳಿಗೆ ಅನುಗುಣವಾಗಿ ಇರಬೇಕು. ಇಂತಹವನನ್ನು ರಾಜಋಷಿ ಎಂದು ಕರೆಯಬಹುದು.

ಕರ್ತವ್ಯ ಮತ್ತು ಅಧಿಕಾರ ವ್ಯಾಪ್ತಿಯನ್ನು ನೋಡಿದಾಗ ರಾಜನು ದೈವಾಂಶ ಸಂಭೂತನೆಂದಮೇಲೆ ಪ್ರಜೆಗಳು ಇವನನ್ನು ಸಾರ್ವಭೌಮನೆಂದು ತಿಳಿಯಬೇಕು. ಆದ್ದರಿಂದ ಇವನು ಯಾವುದನ್ನು ಮಾಡಬಯಸುತ್ತಾನೋ ಅದಕ್ಕೆಲ್ಲ ಪ್ರಜೆಗಳ ತಲೆಬಾಗಲೇಬೇಕು. ರಾಜ್ಯದಲ್ಲಿ ಇವನಿಲ್ಲದಿದ್ದರೆ ಮತ್ಸ್ಯನ್ಯಾಯ ಉಂಟಾಗಿ ಬಡವರ ದೀನದಲಿತರ ಶೋಷಣೆ ನಡೆಯುತ್ತದೆ. ಆದಕಾರಣ ರಾಜನ ಅಸ್ತಿತ್ವ ಮುಖ್ಯ. ಪ್ರಜಾ ರಕ್ಷಣೆ, ದೇಶದ ರಕ್ಷಣೆ, ನ್ಯಾಯ ದೊರಕಿಸಿ ಕೊಡುವುದು, ದೇಶದ ಒಳ

ಮತ್ತು ಹೊರಗಿನ ಜಗಳಗಳನ್ನು ಎದುರಿಸುವುದು, ಅನ್ಯಾಯವನ್ನು ತೊಡೆದು ಹಾಕುವುದು, ಶಿಕ್ಷಣ ದೊರಕಿಸುವುದು, ಇನ್ನೂ ಮುಂತಾದ ಪ್ರಜಾ ಸಮುದಾಯಕ್ಕೆ ಯಾವ ಕ್ಷೇತ್ರದಲ್ಲಿಯೂ ತೊಂದರೆ ಬರದ ಹಾಗೆ ಕಾಯುವುದು ಧರ್ಮವನ್ನು ರಕ್ಷಿಸುವುದು ಇವನ ಕರ್ತವ್ಯ.

ರಾಜನೊಬ್ಬನೇ ದೇಶದ ಆಡಳಿತ ಸೂತ್ರವನ್ನು ಹಿಡಿದು ಅದನ್ನು ನಿಭಾಯಿಸುವುದು ಅಸಾಧ್ಯ. ಆದ್ದರಿಂದ ಮಂತ್ರಿಗಳನ್ನು ಮತ್ತು ಆಡಳಿತಗಾರರನ್ನು ಸಹಾಯಕರನ್ನಾಗಿ ಆತ ಮಾಡಿಕೊಳ್ಳಬಹುದು. ಅವರನ್ನು ಆಯ್ಕೆಮಾಡುವಾಗ ಅರ್ಹತೆಗೆ ಅನುಗುಣವಾಗಿ, ಅಂದರೆ ಪ್ರಾಮಾಣಿಕತೆ, ದಕ್ಷತೆ, ಸ್ವಧರ್ಮ ಪರಿಪಾಲನೆ, ಸುರಾಜ್ಯ ಸ್ಥಾಪನೆ, ಸಾಂಸ್ಕೃತಿಕ ಶ್ರೀಮಂತತನ ಮತ್ತು ದಯೆ, ದಾನ, ಧರ್ಮ, ಸತ್ಯ. ವಿಧೇಯತೆಗಳನ್ನು ನೋಡಿ ಈ ಗುಣಗಳಿದ್ದರೆ ಮಾತ್ರ ಅಂತಹ ವ್ಯಕ್ತಿಗಳನ್ನು ಆರಿಸಬೇಕು. ರಾಜ ಮತ್ತು ಅವನ ಸಹಾಯಕರು ಧರ್ಮಪಾರಾಯಣರಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೆ ಕೇವಲ ಪ್ರಜಾಸೌಖ್ಯವೇ ಮುಖ್ಯವೆಂದು ತಿಳಿದು ನಡೆಯಬೇಕೆಂದು ಮನುವಿನ ಹೇಳಿಕೆ.

ಮಂತ್ರಿಯಾಗಿ ಆರಿಸಿಕೊಳ್ಳುವವನಿಗೆ ಇನ್ನೂ ಕೆಲವು ವಿಶೇಷ ಗುಣಗಳಿರಬೇಕು. ಅವನು ಬುದ್ಧಿವಂತನೂ ಯೋಧನೂ ಮತ್ತು ಜನಗಳ ಕಷ್ಟವನ್ನು ಅರ್ಥ ಮಾಡಿಕೊಳ್ಳುವವನೂ ಆಗಿರಬೇಕು. ಜನಗಳ ಮತ್ತು ರಾಜರ ಮಧ್ಯೆ ಪ್ರಾಮಾಣಿಕ ದಳ್ಳಾಳಿಯಂತೆ ಇರಬೇಕು. ಸಾಮಾನ್ಯವಾಗಿ ವಂಶಾವಳಿಯಮೇಲೆ, ರಾಜನ ಸ್ನೇಹಿತರು, ಸಂಬಂಧಿಗಳು ಉಚ್ಚ ಜಾತಿಯವರು, ಇವರಿಗೆ ಪ್ರಾಶಸ್ತ್ಯ ಕೊಡುವುದು ರೂಢಿಯಲ್ಲಿತ್ತು.

ದಂಡನೀತಿ

ಅಂದರೆ ಪ್ರಜೆಗಳಲ್ಲಿ ಆಗುವ ಆಂತರಿಕ ಮತ್ತು ಬಾಹ್ಯ ಅಶಾಂತಿಗಳನ್ನು ಸರಿ ಮಾಡುವುದೇ ದಂಡನೀತಿ. ಯಾವ ವ್ಯಕ್ತಿ ರಾಜನ ಅಥವಾ ದೇಶದ ಕಟ್ಟಳೆಗೆ ವಿರದ್ಧವಾಗಿ ನಡೆಯುತ್ತಾನೆಯೋ ಅಂಥವನನ್ನು ದಂಡದಿಂದ ಸರಿಮಾಡುವುದು. ಈ ಕಾರ್ಯ ಚತುರೋಪಾಯಗಳಿಂದ ಕೂಡಿರಬೇಕಾಗಿತ್ತು. ಈ ಉಪಾಯಗಳೆಂದರೆ ಸಾಮ, ದಾನ. ಭೇದ ಮತ್ತು ದಂಡ. ಪ್ರಥಮದ ಮೂರನ್ನು ಬಳಸಿ ಪ್ರಯೋಜನವಾಗದಿದ್ದಾಗ ದಂಡವೇ ಕೊನೆಯದು. ಇವಲ್ಲದಿದ್ದರೆ ಜನಗಳನ್ನು ಸುಧಾರಿಸಿ ಆಡಳಿತ ನಡೆಸುವುದು ತುಂಬಾ ಕಷ್ಟವಾದ್ದರಿಂದ ಇದು ಇವನ ಪ್ರಕಾರ ಬಹಳ ಮುಖ್ಯ. ದಂಡವೇ ಆಡಳಿತ ನಡೆಸುತ್ತದೆ.

'ದಂಡ ಶಾಸ್ತಿ ಪ್ರಜಾ ಸರ್ವಾ ದಂಡ ಏವಾಭಿರಕ್ಷತಿ
ದಂಡಃ ಸುಪ್ತೇಷು ಜಾಗರ್ತಿ ದಂಢಂಧರ್ಮಂ ವಿದುರ್ಬುಧಾಃ'

ದಂಡವೇ ಪ್ರಜಾರಕ್ಷಣೆಯನ್ನು, ಆಡಳಿತವನ್ನು ನಡೆಸಿ, ದಾರಿ ತಪ್ಪಿದರೆ, ನಿದ್ರೆ ಬಂದರೆ ಎಚ್ಚರಗೊಳಿಸುತ್ತದೆ. ಆದ್ದರಿಂದ ಧರ್ಮ ಉದ್ಧಾರವಾಗಬೇಕಾದರೆ ದಂಡವೇ ಧರ್ಮ ಎಂಬುದು ಪಂಡಿತರ ಅಭಿಪ್ರಾಯ.

ತೆರಿಗೆ

ತೆರಿಗೆಯನ್ನು ಹೇರುವಾಗ ಭೂಮಿಯ ಸ್ವರೂಪ, ವ್ಯಕ್ತಿಯ ಆದಾಯಗಳಿಗೆ ಅನುಗುಣವಾಗಿ ವಿಧಿಸುತ್ತಿದ್ದರು. ಆದರೆ ಹೇರುವಾಗ ಪ್ರಜಾಸುಖಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತು. ಕೆಲವು ಜಾತಿಯವರು ಮಾತ್ರ ತೆರಿಗೆ ಕೊಡಬೇಕಾಗಿತ್ತು. ಆಡಳಿತದಲ್ಲಿ ಸ್ತ್ರೀಯರಿಗೂ ಕೆಳವರ್ಗದವರಿಗೂ ಧ್ವನಿಯಿರಲಿಲ್ಲ. ಸರ್ಕಾರ ನಡೆಸುವಾಗ ಹಳ್ಳಿಗಳ ಆಡಳಿತ, ಪಟ್ಟಣದ ಆಡಳಿತವೆಂದು ವಿಭಾಗಿಸಿ ಅವುಗಳ ಯೋಗಕ್ಷೇಮವನ್ನು ನೋಡುತ್ತಿದ್ದರು. ಇವುಗಳ ಮೇಲೆ ವಿಚಾರಣೆಗೆ ಅಧಿಕಾರಿಗಳು, ಅನ್ಯಾಯ ನಡೆಯದ ಹಾಗೆ ಲಂಚ ತೆಗೆದುಕೊಳ್ಳದ ಹಾಗೆ ರಾಜವಂಶದಿಂದ ಕೂಡಿದ ಅಧಿಕಾರಿಗಳಿದ್ದರು.

ನ್ಯಾಯಾಂಗ, ಶಾಸಕಾಂಗ, ಮತ್ತು ಕಾರ್ಯಾಂಗ

ಸಾಮಾನ್ಯವಾಗಿ ಬ್ರಾಹ್ಮಣರು ಮತ್ತು ಕ್ಷತ್ರಿಯರೇ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗಗಳ ಅಧಿಕಾರಿಗಳು ಮತ್ತು ರಾಜನಿಲ್ಲದಿದ್ದಾಗ ಬ್ರಾಹ್ಮಣ ಅಧಿಕಾರಿಯೇ ಅವನ ಸ್ಥಾನದಲ್ಲಿನ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಿದ್ದನು. ನ್ಯಾಯಾಂಗವು ಪ್ರತ್ಯೇಕವಾಗಿದ್ದು ಅಲ್ಲಿಯೂ ಇವರೇ ಮುಖ್ಯರು. ಯುದ್ಧ ಮಾಡುವಾಗ ಸ್ವಯಂ ರಾಜನೇ ಯುದ್ಧಕ್ಕೆ ಹೋಗುತ್ತಿದ್ದನು. ಯುದ್ಧಕ್ಕೆ ಹೊರಡುವಾಗ ಸುಮುಹೂರ್ತಗಳನ್ನು ಅನುಸರಿಸುತ್ತಿದ್ದರು. ವಿದೇಶ ನೀತಿಯಲ್ಲಿ ಮಂಡಲ ಸಿದ್ಧಾಂತವನ್ನು ಬಳಸುತ್ತಿದ್ದರು.

ಮನುವು ರಾಜನಿಗೆ ವಿಧಿಸಿರುವ ಅನೇಕ ನಿಯಮಗಳನ್ನು ಈಗಿನ ಪ್ರಜಾಪ್ರಭುತ್ವದಲ್ಲಿ ಶಾಸಕರು, ಮಂತ್ರಿಗಳು, ಅಧಿಕಾರಿಗಳು ಅನುಸರಿಸಿದರೆ ದೇಶ ಸುಖೀ ರಾಜ್ಯವಾಗುತ್ತದೆ.

ಕೆಲವು ಕ್ಷೇತ್ರಗಳನ್ನು ಕೆಲವರಿಗೆ, ಅಂದರೆ ಕೆಲವು ಜಾತಿಯವರಿಗೆ ಮಾತ್ರ ಸೀಮಿತಗೊಳಿಸಿರುವುದು ಮನುವಿನಲ್ಲಿದ್ದ ಒಂದು ದುರ್ಗುಣವೆಂದು ತೋರುತ್ತದೆ. ಆ ನಿಯಮವನ್ನು ಪಾಲಿಸುವುದು ಇಂದು ತುಂಬಾ ಕಷ್ಟಕರವೆಂದೆನಿಸುತ್ತದೆ.

ಶಾಸನ ಧರ್ಮ

ಶಾಸನವೆಂದರೆ ಕಾನೂನು, ಕಟ್ಟಳೆ, ನಿಯಮವೆಂದು ಹೇಳಬಹುದು. ಈ ಶಾಸನವು ಶಾಶ್ವತ. ಅವನ ಅಪೇಕ್ಷೆಯೇನೆಂದರೆ ಸಾಧಾರಣ ಜನ ಕ್ರಾಂತಿ ನಡೆಸಲು

ಅವಕಾಶವಿಲ್ಲ. ಶಾಸನವನ್ನು ಮಾಡುವಾಗ ಅಲ್ಲಿಯ ಪರಿಸರಕ್ಕೆ ಹಾಗೂ ಪ್ರಜಾ ಇಚ್ಛೆಗೆ ಅನುಸಾರವಾಗಿ ರಚಿಸುತ್ತಿದ್ದರು; ಕೆಲವು ವೇಳೆ ರಾಜನಿಗೆ ಬೇಕಾದುದನ್ನು ರಚಿಸುತ್ತಿದ್ದರು; ಆದರೂ ಅವುಗಳನ್ನು ಧಿಕ್ಕರಿಸಿ ಚಳುವಳಿ ಮಾಡುವ ಅಧಿಕಾರ ಪ್ರಜೆಗಳಿಗೆ ಇರಲಿಲ್ಲ. ಆದರೆ ಕೆಲವು ಸ್ಮೃತಿಗಳ ಪ್ರಕಾರ, ಗೂಢಚಾರರ ಮೂಲಕ ಪ್ರಜೆಗಳ ಚಲನವಲನ ತಿಳಿದು ಪ್ರಜಾಭಿಪ್ರಾಯಕ್ಕೆ ಮಾನ್ಯತೆ ನೀಡಿ ಶಾಸನ ರಚಿಸುತ್ತಿದ್ದರು, ಎಂಬ ಉಲ್ಲೇಖಗಳಿದ್ದು ಇದು ಸಂಶಯಾಸ್ಪದವಾಗಿದೆ. ಅಂದರೆ ಭದ್ರವಾದ ನಾಗರಿಕತೆಯು ತಳಹದಿಯು ನೀತಿ ಪ್ರಧಾನವಾದ ಶಿಕ್ಷಣವಲ್ಲದೆ ಕಾಯಿದೆ ಯಲ್ಲ. ಕಾಯಿದೆಯು ನೀತಿಗೆ ಕೇವಲ ಪೂರಕ. ಲೋಕಮತಕ್ಕೆ ವಿರುದ್ಧವಾಗಿ ರಾಜ ನಡೆಯುತ್ತಿರಲಿಲ್ಲ, ಎನ್ನಬಹುದು. ರಾಜಗುರುಗಳು ಯಾವುದನ್ನು ಕಾಯಿದೆ ಎನ್ನುತ್ತಾರೆ ಅದೇ ಮುಖ್ಯ, ಅದೇ ಶಾಸನ ಆದ್ದರಿಂದಲೇ ನಮ್ಮಲ್ಲಿ "ಗುರುರ್ಬ್ರಹ್ಮಾ, ಗುರುರ್ವಿಷ್ಣು" ಎಂಬುದನ್ನು ಹಿಂದಿನಿಂದಲೂ ಹೇಳುತ್ತ ಬಂದು ಗುರುಗಳಿಗೆ ಪ್ರಧಾನ್ಯವನ್ನು ಕೊಟ್ಟಿರುವುದು. 'ಆಚಾರವೇ ಧರ್ಮ ಅನಾಚಾರವೇ ಅಧರ್ಮ' ಎಂದಿದ್ದಾನೆ ಮನು. ಆದರೆ ಈಗಿನ ಪ್ರಜಾಪ್ರಭುತ್ವ ದಲ್ಲಿ ಇದಕ್ಕೆ ಎಷ್ಟರಮಟ್ಟಿಗೆ ಮಾನ್ಯತೆ ಇದೆ, ಎಂಬುದು ನಿಮಗೂ ಗೊತ್ತಿದೆ. ಒಟ್ಟಾರೆ ಶಾಸನ, ಕಾಯಿದೆಬದ್ಧ ನಡವಳಿಕೆಯನ್ನು ಅವನ ಸ್ಮೃತಿ ಒತ್ತಿ ಹೇಳುತ್ತದೆ.

"ಧರ್ಮವು ಆಚಾರದ ಮೇಲೆ ಅವಲಂಬಿಸಿದೆ. ಆಚಾರವೆಂಬುದು ಶ್ರುತಿ. ಸ್ಮೃತಿಗಳಿಂದ ಆಜ್ಞಪ್ತವಾದುದೂ ಸುಜನರಿಂದ ಆಚರಿತವಾದುದೂ ಆಗಿದೆ. ಆಚಾರವೆಂದರೆ ರೂಢಿಯಲ್ಲ, ಸದ್ವರ್ತನೆ", ಎಂದು ಮನು ಹೇಳಿದ್ದಾನೆ.

ಪ್ರಜಾಧರ್ಮ

ಪ್ರಜೆಯು ಒಂದು ರಾಜ್ಯದಲ್ಲಿ ತನ್ನ ಜೀವನ ಸಾಗಿಸಬೇಕಾದರೆ ಆ ವ್ಯಕ್ತಿಯು ಅನೇಕ ಗುಣಗಳನ್ನು ಹೊಂದಿರಬೇಕು. ಅವುಗಳಲ್ಲಿ ಪ್ರಥಮವಾಗಿ ಆರೋಗ್ಯ, ಮತ್ತು ನೈರ್ಮಲ್ಯ. ಸಾಮಾಜಿಕ ಸಭ್ಯವರ್ತನೆ, ಬಾಹ್ಯ ಸದ್ವರ್ತನೆ, ಸತ್ಕಾರ, ಸದಾಚಾರ, ಒಳ್ಳೆಯ ನಡತೆ ಇವುಗಳನ್ನು ಪ್ರಜೆಗಳು ಹೊಂದಿದ್ದು ಆಚಾರಕ್ಕೆ ಉಚ್ಚ ಸ್ಥಾನ ನೀಡಬೇಕೆಂದಿದ್ದಾನೆ ಮನು. ನಂತರ ದೇವ, ದ್ವಿಜ, ಗುರು, ಹಿರಿಯ, ಶಿಷ್ಯ, ಸ್ತ್ರೀ, ಪುರುಷ, ಪಿತೃ, ಪುತ್ರ, ಸಭಾಧ್ಯಕ್ಷ ಇವರುಗಳ ಬಗ್ಗೆ ಒಳ್ಳೆ ಅಭಿಪ್ರಾಯವಿಟ್ಟು ನಡೆಯುವುದು ನಾಗರಿಕ ಧರ್ಮ. ಆಚಾರದಲ್ಲಿ ಮೂಲಶುದ್ಧಿಯಿರಬೇಕು, ಶ್ರದ್ಧೆ ಇರಬೇಕು, ಪಾವಿತ್ರ್ಯತೆ ಇರಬೇಕು; ಪಾವಿತ್ರವೇ ಸೌಂದರ್ಯ, ನೈರ್ಮಲ್ಯವೇ ಸೊಬಗು ಎಂದಿದ್ದಾನೆ ಮನು. ಆಹಾರದ ವಿಷಯದಲ್ಲಿ ಮನುವು ಮದ್ಯ–ಮಾಂಸ ವನ್ನು ದೂರೀಕರಿಸಿದ್ದಾನೆ. ಸಸ್ಯಾಹಾರದಿಂದ ವ್ಯಕ್ತಿಗೂ ದೇಶಕ್ಕೂ ಒಳಿತು ಎನ್ನುವುದು ಮನುವಿನ ಅಭಿಪ್ರಾಯ. ಗೃಹಸ್ಥನಾಗಿ ದಾನ ಧರ್ಮಗಳಿಂದ,

ಬೇಡುವವರಿಗೆ ಅನ್ನ ಹಾಕುವುದರಿಂದ ದೇಶ ಸುಭಿಕ್ಷವಾಗುತ್ತದೆ. ತ್ಯಾಗದಿಂದ, ಎಂದರೆ ಎಲ್ಲಾ ವಿಷಯದಲ್ಲಿ ಸಜ್ಜನರನ್ನು ಸಂತೋಷಪಡಿಸಿ ನೀನೂ ಸಂತೋಷಪಡು, ಸೇವೆ ಮಾಡಿ ಪುಣ್ಯ ಸಂಪಾದಿಸಿಕೊ, 'ಬದುಕು ಮತ್ತು ಬದುಕು ಕೊಡು' ಎಂದಿದ್ದಾನೆ. ಅನ್ಯರಿಗೆ ಬದುಕು ಕೊಟ್ಟು ನಂತರ ನೀನು ಬದುಕು, ಇಂತಹ ವ್ಯಕ್ತಿ ಧರ್ಮವನ್ನು ಒತ್ತಿ ಹೇಳಿದ್ದಾನೆ. ಆದ್ದರಿಂದಲೇ ಭಾರತದಲ್ಲಿ ಈ ದಿನವೂ ಕೆಲವು ವ್ಯಕ್ತಿಗಳು ತಮ್ಮ ಆಚಾರವನ್ನು ಬಿಡದೆ ತಮ್ಮದೇ ಆದ ಹಾದಿಯನ್ನು ಹಿಡಿದು ಮುನ್ನಡೆಯುತ್ತಿದ್ದಾರೆ.

ಯೋಧ ಧರ್ಮ

ಮನುವು ಧರ್ಮಯುದ್ಧವನ್ನು ಪ್ರತಿಪಾದಿಸಿದ್ದಾನೆ. ಆದ್ದರಿಂದ ಯೋಧನು ಯುದ್ಧ ಮಾಡಬೇಕಾದರೆ ಅವನಿಗೆ ಅನೇಕ ನಿಯಮಗಳನ್ನು ಹೇಳಿದ್ದಾನೆ. ಅಂದರೆ ಗುಪ್ತ ಯುದ್ಧ, ವಿಷಲಿಪ್ತ ಆಯುಧ, ಜ್ವಾಲಾಮಯ ಆಯುಧ ಉಪಯೋಗಿಸ ಕೂಡದು; ಷಂಡ, ಶರಣಾಗತ, ನಿರಾಯುಧ, ಹೆದರಿ ಓಡುವವನು, ನೋಟಕ, ನಿದ್ರಾಪರವಶ, ನಿಷ್ಕಪಟ, ಅನ್ಯಾಸಕ್ತ, ಭಗ್ನಶಸ್ತ್ರ, ಆರ್ತ, ಭಯಗ್ರಸ್ತ, ಆಪದ್ಗತ ಇವರುಗಳ ಜೊತೆಯಲ್ಲಿ ಯುದ್ಧ ಮಾಡಕೂಡದೆಂದು ಮನುವು ತಿಳಿಸಿದ್ದಾನೆ. ಇದನ್ನು ಮೀರಿದರೆ ಅದು ಅಧರ್ಮ ಯುದ್ಧವಾಗುತ್ತದೆ.

ವರ್ಣಾಶ್ರಮ ಧರ್ಮ

ಈ ವಿಷಯದಲ್ಲಿ ಮಾತ್ರ ಮನುವು ಬಹಳ ಉಗ್ರವಾಗಿ ನಡೆದುಕೊಂಡಿದ್ದಾನೆ ಅಂದರೆ ಜನಗಳಲ್ಲಿ ಮೇಲು, ಕೀಳು ಭಾವನೆ ಬೆಳೆದು ಅನೇಕ ಜಾತಿಯ ಗುಂಪು ಗಳಾದ್ದು ಇದರಿಂದಲೇ ಇರಬಹುದು. ವರ್ಣಗಳಿಗೆ ಅನುಗುಣವಾಗಿ ಜಾತಿಯನ್ನು ವಿಂಗಡಿಸಿ ಅದರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರನೆಂದು ವಿಂಗಡಿಸಿ ಆಯಾ ಕುಲಕ್ಕೆ ತಕ್ಕಂತೆ ಉದ್ಯೋಗವನ್ನು ಹಂಚಿದ್ದಾನೆ. ಇವನ ಪ್ರಕಾರ ವರ್ಣವು ನೈತಿಕ ಹಾಗೂ ಬೌದ್ಧಿಕ ಮಟ್ಟವನ್ನು ಅಳೆಯುತ್ತದೆ. ಒಂದು ಜಾತಿಯವರು ಮತ್ತೊಂದು ಜಾತಿಯವರೊಡನೆ ರಕ್ತಸಂಬಂಧ ಬೆಳೆಸುವುದನ್ನು ಆತನು ನಿಷಿದ್ಧ ಗೊಳಿಸಿದ್ದಾನೆ. ಇಂದಿಗೂ ಇವನು ಹಾಕಿರುವ ಜಾತಿಯ ಪಿಡುಗು ನಾಶವಾಗದೆ ಬೆಳೆಯುತ್ತಲೇ ಇವೆ. ಕುಲಕ್ಕೆ ಸಂಬಂಧಿಸಿದ ಉದ್ಯೋಗ ಹೋದರೂ ಅದಕ್ಕೆ ಅಂಟಿದ ಜಾತಿ ನಾಶವಾಗದೆ ದೇಶದ ಬೆಳವಣಿಗೆಗೆ ಧಕ್ಕೆ ತರುತ್ತಿವೆ. ಅದರಲ್ಲೂ ಶೂದ್ರರು ಮತ್ತು ಸ್ತ್ರೀಯರು ಎಲ್ಲರಲ್ಲೂ ಇವನ ದೃಷ್ಟಿಯಲ್ಲಿ ಕೀಳು. ಮನುವು ಇನ್ನೂ ಅನೇಕ ನಿಯಮಗಳನ್ನು ಜಾರಿಗೆ ತಂದು ಈ ದಿನವೂ ಅವು ಮುಂದುವರಿ ಯುವ ಹಾಗೆ ಮಾಡಿದ್ದಾನೆ. ಅವುಗಳಲ್ಲಿ ಶ್ರಾದ್ಧಧರ್ಮ, ಸ್ತ್ರೀಪುರುಷ ಧರ್ಮ, ಶಿಕ್ಷಣಧರ್ಮ, ಆತ್ಮಧರ್ಮ ಮುಂತಾದುವುಗಳು ಬರುತ್ತದೆ.

ಆತ್ಮಧರ್ಮ ಬಹಳ ಮುಖ್ಯವೆಂದು ಅವನಿಗೆ ಕಾಣುತ್ತದೆ. ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಲ್ಲಿ ಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಮನುವು ಕೊಟ್ಟಿರುವುದು ಕಂಡುಬರುತ್ತದೆ. ಜೀವನದಲ್ಲಿ ಸುಖ–ದುಃಖಗಳ ಸಮತೋಲನದಲ್ಲಿದ್ದು, ಪರಮಾರ್ಥದ ಮೂಲಕ ಆತ್ಮಬುದ್ಧಿ ಹೊಂದಿ, ನಂತರ ಮೋಕ್ಷ ಪಡೆಯುವುದು ಬಹಳ ಮುಖ್ಯವೆಂಬುದೇ ಇವನ ಪ್ರತಿಪಾದನೆ. ಆತ್ಮ ಧರ್ಮದ ಆಚರಣೆಯಿಂದ ಸ್ವರಾಜ್ಯ ಅಥವಾ ಸ್ವಸ್ಥಿತಿಯನ್ನು ಹೊಂದಬೇಕು, ಅಂದರೆ ಮೋಕ್ಷ ಪಡೆಯಬೇಕೆಂದು ಇವನು ಒತ್ತಿ ಹೇಳಿದ್ದಾನೆ. ಈ ರೀತಿ ಮನುವು ಭಾರತದ ನಾಗರಿಕತೆಗೆ ತನ್ನ ಅಗಾಧವಾದ ಕೊಡುಗೆಯನ್ನು ಸಲ್ಲಿಸಿ, ಇಂದಿಗೂ ಅವನನ್ನು ಮರೆಯಲಾಗದಂತಹ ತನ್ನ ಸ್ಮೃತಿಯನ್ನು ಕೊಟ್ಟಿದ್ದಾನೆ.

ಸಮಾಜದಲ್ಲಿ ಮೇಲು-ಕೀಳು ಜಾತಿಗಳನ್ನು ಮಾನ್ಯಮಾಡಿದುದು, ಸ್ತ್ರೀಯರನ್ನು ಪರತಂತ್ರರೆಂದು ಪರಿಗಣಿಸಿದ್ದು ಮನುವಿನ ಪ್ರಶ್ನಾರ್ಹವಾದ ನಿಯಮಗಳು. ಆದರೆ ಅವನು ಹೇಳಿರುವ ಅನೇಕ ಇತರ ಸಂಗತಿಗಳು ಇಂದಿಗೂ ಆಚರಣೆಯಲ್ಲಿವೆ. ಜಗತ್ತಿನ ಅಗ್ರಗಣ್ಯ ರಾಜಕೀಯ ತತ್ತ್ವವೇತ್ತನವನೆಂಬುದು ನಿರ್ವಿವಾದ ಸಂಗತಿ.

ಭವವ ಗೆದ್ದೆವು ತಂದೆ !

ಪ್ರಭುಸ್ವಾಮಿಮಠ

ತಾನೊಲಿದು ಪಾದವನಿಟ್ಟ
ನೆಲವೇ ಸುಕ್ಷೇತ್ರ ಜಲವೇ
ಪಾವನ ತೀರ್ಥವೆಂಬ ನುಡಿಕೇಳಿ
ಷಡುಸ್ಥಲದೇಣಿಯನೇರಿ
ಆ ಬಟ್ಟಬಯಲ ಕಂಬಕುಂಭದ ಮೇಲೆ
ಶೂನ್ಯಸಿಂಹಾಸನಾಧೀಶ್ವರರಾಗಿ
ಅಡ್ಡಡ್ಡ ಉದ್ದುದ್ದ ಪಲ್ಲಕ್ಕಿ ಹತ್ತಿಳಿದು
ಪೂಜೆ ಪಾದೋದಕ ಪ್ರಸಾದ
ತಾಂಬೂಲ ಮೆದ್ದು, ಲಿಂಗಾನಂದದಲಿ ಓಲಾಡುತಿದ್ದ
ದಿಂಬಿಗೊರಗಿದೀ ಮಹಂತರು ಅಪ್ಪಣೆಕೊಡಿಸು
ತ್ತಾರೆ : ಬಾಗಿದ ತಲೆಯ ಮುಗಿದಕೈಯ ಬಚ್ಚ
ಬರಿಯ ಬಸವಗಳಿಗೆ : ನಿಮ್ಮ ಹೆಂಗಸುದರದಲ್ಲಿ
ಬಾಲಸಂಗಯ್ಯನಾಗುದಿಸಬೇಕೆಂಬುದೆಮ್ಮಾತ್ಮಲಿಂಗ
ದಿಚ್ಛೆ.
ಶಿವಧೋ ! ಶಿವಧೋ !! ಶಿವಧೋ !!!
ಅಚ್ಚಪ್ರಸಾದ ! ನಿಚ್ಚಪ್ರಸಾದ !! ಮಹಾಪ್ರಸಾದ !!!
ಶರಣಸತಿ – ಲಿಂಗಪತಿ
ಇನ್ನೆಲ್ಲಿ ಸತಿಗೆ ಸತಿ ?
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ
ಕೂಡಲಸಂಗಯ್ಯನಲ್ಲದೆ ಮತ್ತಾರೆಂಬೆ ?
ತಪಸೇವೆಯನು ಮಾಡಿ ಭವವ ಗೆದ್ದೆವು ತಂದೆ !

ಅನಂತಪುರ ಜಿಲ್ಲೆಯ 'ಸಮರ್ತ' ಪದ್ಧತಿಗಳು

ಜಿ. ಎಸ್. ಮೋಹನ್

ತೆಲುಗಿನಲ್ಲಿ 'ಸಮರ್ತ' (ಮೈನೆರೆಯುವುದು) ಎಂಬ ಪದಕ್ಕೆ 'ಸ್ತ್ರೀ ಪ್ರಥಮ ಋತುವು' ಎಂದು ಅರ್ಥವಾಗುವುದು. 'ಸಮ ಋತುಃ - ಸಮರತ - ಸಮರ್ತ' ಎಂದರೆ ಮೊದಲ ಮುಟ್ಟು, ಋತುಮತಿಯಾದ ಬಾಲೆಯನ್ನು 'ರಜಸ್ವಲೆ' ಎಂದೂ 'ಪುಷ್ಪವತಿ' ಎಂದೂ ಕರೆಯುವರು.

ಅನಂತಪುರ ಮಂಡಲದಲ್ಲಿ ಸಾಮಾನ್ಯವಾಗಿ ವ್ಯವಹರಿಸುವಾಗ ಮೈನೆರೆದ ಬಾಲೆಯನ್ನು 'ದೊಡ್ಡ ಮನುಷಿಯಾಗಿದ್ದಾಳೆ' 'ಹುಡುಗಿ ನೆರೆದಿದ್ದಾಳೆ' ಎಂದು ಕರೆಯುವರು. ನಿಜವಾಗಿ 'ಸಮರ್ತ' ದ ಮೂಲರೂಪ ಸಮರ್ಥ. ಅಂದರೆ ಅಂದಿನಿಂದ ಈ ಬಾಲೆ ಎಲ್ಲ ವಿಷಯಗಳಲ್ಲಿ (ಮುಖ್ಯವಾಗಿ ವಿವಾಹ ವಿಷಯಕ್ಕೆ) ಸಮರ್ಥಳು ಎಂಬುದನ್ನು ಇದು ಸೂಚಿಸುತ್ತದೆ. 'ದೊಡ್ಡ ಮನುಷಿಯಾಗಿದ್ದಾಳೆ' 'ಹುಡುಗಿ ನೆರೆದಿದ್ದಾಳೆ' ಎಂಬ ಮಾತುಗಳು ಇದನ್ನು ಸಮರ್ಥಿಸುತ್ತವೆ. ಈ ಸಮರ್ಥನೆಯೇ ಕ್ರಮಕ್ರಮವಾಗಿ ಮುಂದುವರೆದು ಮಹಾಪ್ರಾಣವು ಲೋಪವಾಗಿ 'ಸಮರ್ತ' ಆಗಿದೆ.

ಪ್ರಪ್ರಥಮವಾಗಿ ಬಾಲೆಯ ರಜಸ್ಸು ಪ್ರವಹಿಸುವ ಸಮಯವೇ 'ಮೊದಲ ಮುಟ್ಟು'. ಬಾಲಿಕೆಯರು ಸಾಮಾನ್ಯವಾಗಿ ಈ ಋತುಸಂಬಂಧವಾದ ಜ್ಞಾನವನ್ನು ತಮ್ಮ ತಾಯಿ, ಹಿರಿಯ ಸಹೋದರಿ, ನೆರೆಹೊರೆಯ ಹೆಂಗಸರು ಅಥವಾ ಸ್ನೇಹಿತರಿಂದ ತಿಳಿಯುತ್ತಾರೆ.

ಆಂಗ್ಲ ಭಾಷೆಯಲ್ಲಿ ಇದನ್ನು 'Puberty' ಎನ್ನುವರು. ಇದು pubertan ಎಂಬ ಲ್ಯಾಟಿನ್ ಶಬ್ದದಿಂದ ಬಂದಿದೆ. Age of manhood ಎಂದು ಇದರ ಅರ್ಥ (It is a period when the reproductive organs mature and begins to function).

ಸ್ತ್ರೀಯರಿಗೆ ಬಾಲ್ಯಾವಸ್ಥೆಯಲ್ಲಿ ಶರೀರವು ವಿಕಸಿಸಿ ಮೊದಲನೇ ಯೌವನ ಅಂಕುರಿಸುವಾಗ ಶರೀರದಾದ್ಯಂತ ರಕ್ತವು ಪುಷ್ಕಲವಾಗಿದ್ದು ದೇಹವು ವೃದ್ಧಿಯಾಗಲು ಆರಂಭಿಸುವುದು. ಅಂತಹ ಬಾಲೆಯರ ದೇಹದಲ್ಲಿ ಮಾರ್ಪಾಡುಗಳು ಕಾಣಲಾರಂಬಿಸುವುವು. ಹಾಗೆಯೇ ಬುದ್ಧಿಯೂ ಸಹ ವಿಕಸಿತವಾಗುತ್ತದೆ. ಸುಮಾರು

12, 13ನೇ ವಯಸ್ಸಿನಲ್ಲಿ ಬಾಲೆ ರಜಸ್ವಲೆಯಾಗುತ್ತಾಳೆ. ಅಂದರೆ ಪ್ರಾಯಕ್ಕೆ ಬಂದಿರುವಳು ಎಂದು ಅರ್ಥ.

ಪ್ರಪ್ರಥಮವಾಗಿ ಬಾಲೆ ಋತುಮತಿಯಾಗುವುದಕ್ಕೆ ಅನೇಕ ಅಂಶಗಳು ಕಾರಣವಾಗುತ್ತವೆ. ಮುಖ್ಯವಾಗಿ ವಾತಾವರಣವು ಎಲ್ಲ ಕಾರಣಗಳಿಗಿಂತ ಪ್ರಧಾನವಾದುದು. ಭಾರತ ದೇಶದ ಬಾಲಿಕೆಯರು ಸಾಮಾನ್ಯವಾಗಿ ಹನ್ನೆರಡು ವರ್ಷಗಳಿಗೆ ರಜಸ್ವಲೆಯಾಗಬಹುದು. ಭೂಮಧ್ಯರೇಖೆಯ ಸಮೀಪದ ಪ್ರಾಂತಗಳಲ್ಲಿರುವ ಬಾಲಿಕೆಯರು ಅತಿ ತ್ವರಿತವಾಗಿ ಪ್ರಾಯಕ್ಕೆ ಬರುವರು. ಸಮುದ್ರದಿಂದ ಅತಿ ದೂರದಲ್ಲಿನ ಬಾಲಿಕೆಯರಲ್ಲಿ ಋತುಮತಿತ್ವವು ಶೀಘ್ರವಾಗಿ ಆಗುವುದಿಲ್ಲ.[1] ಅಷ್ಟೇ ಅಲ್ಲದೆ ಮೊದಲ ಮುಟ್ಟು ಬಾಲಿಕೆಯರ ತಿಳುವಳಿಕೆಯನ್ನು (Intelligence) ಆಧರಿಸಿದೆ. ಅಂದರೆ ಅತ್ಯಧಿಕವಾಗಿ ತಿಳುವಳಿಕೆಯಿರುವ ಬಾಲಿಕೆಯರು ತ್ವರಿತವಾಗಿ ಋತುಮತಿಯಾಗುತ್ತಾರೆ. ಉಳಿದವರು ಸ್ವಲ್ಪ ನಿಧಾನವಾಗಿ ಋತುಮತಿಯರಾಗುತ್ತಾರೆ.[2]

ಹಿಂದೂ ಸಂಪ್ರದಾಯದ ಪ್ರಕಾರ ರಜಸ್ವಲೆಯಾದ ಕನ್ಯೆ ಅಶುಚಿಯೆಂದು ಪರಿಗಣಿಸಲ್ಪಡುತ್ತಿದ್ದಳು. ಮೂರು ದಿನಗಳು ಪ್ರತ್ಯೇಕವಾದ ಕೊಠಡಿಯಲ್ಲಿ ಬೇಕಾಗುತ್ತಿತ್ತು. ಆಕೆ ಇತರರನ್ನು ಮುಟ್ಟಬಾರದು. ಪೂಜೆ, ನಮಸ್ಕಾರಗಳನ್ನು ನಿರ್ವಹಿಸಬಾರದು. ಇಚ್ಛೆ ಬಂದಂತೆ ಮನೆಯಲ್ಲಿ ಸಂಚರಿಸಬಾರದು. ನಾಲ್ಕನೇದಿನ ತಲೆಗೆ ಸ್ನಾನ ಮಾಡಿದ ನಂತರವೇ ಆಕೆ ಮನೆಯಲ್ಲಿ ಸ್ವೇಚ್ಛೆಯಾಗಿ ಸಂಚರಿಸಬಹುದು. ಪ್ರಾಚೀನ ಕಾಲದಲ್ಲಿ ಪುಷ್ಪವತಿಯಾದ ಕನ್ಯೆಯನ್ನು ಅಪಶಕುನದಂತೆ ಭಾವಿಸುತ್ತಿದ್ದುದೇ ಇದಕ್ಕೆ ಕಾರಣ. ರಜಸ್ವಲೆಯಾದ ಕಾಲದಲ್ಲಿ ಪ್ರಕೃತಿಯಲ್ಲಿರುವ ದುಷ್ಟ ಶಕ್ತಿಗಳು ಮಲಿನವಾದ ಬಾಲೆಯ ದೇಹವನ್ನು ಪ್ರವೇಶಿಸಿ ಆಕೆ ತಾಯಿಯಾಗಲು ಅನರ್ಹಳನ್ನಾಗಿ ಮಾಡುವುದೆಂದು ಭಾವಿಸಿ ಬಾಲಿಕೆಯನ್ನು ಏಕಾಂತ ಪ್ರದೇಶದಲ್ಲಿರಿಸಿ ಅವುಗಳಿಂದ ರಕ್ಷಿಸುವುದಕ್ಕಾಗಿ ವಿವಿಧ ಸಂಸ್ಕಾರಗಳನ್ನು ಆಚರಿಸುವರು.

ಮನುಧರ್ಮ ಶಾಸ್ತ್ರದಂತೆ ಋತುಮತಿಯಾದ ಸ್ತ್ರೀಯನ್ನು ಪತಿಯು ಮುಟ್ಟಬಾರದು. ಆಕೆಯನ್ನು ಹೊಂದಬೇಕೆಂದು ಇಚ್ಛಿಸಲೂ ಬಾರದು. ಹಾಗೆ ಮಾಡಿದರೆ ಅತನ ಪ್ರಜ್ಞೆ, ತೇಜಸ್ಸು, ಶಕ್ತಿ, ನೋಟ, ಆಯುಸ್ಸು ಕ್ಷೀಣಿಸುವುದೆಂದು ಹೇಳಿದೆ.[3] ಋತುಮತಿಯಾದ ಹೆಂಡತಿಯನ್ನು ಮುಟ್ಟಿದ ಗಂಡನು ಕೂಡ ಅಶುಚಿಯಾಗುವನು. ಆ ಅಶುಚಿತ್ವವನ್ನು ಹೋಗಲಾಡಿಸಿಕೊಳ್ಳಲು ಸ್ನಾನ ಮಾಡಬೇಕಾಗುವುದು.[4]

---

1 ಬಿ ವಕಿರ ಮುಲಯ—ಅಳಿಯ ಸಂತಾನ ಕಟ್ಟಿದ ತುಳುಜನರ 'ಶುಭಾಶುಭ ಕಟ್ಟು ಕಟ್ಟಳೆಗಳು (1926)

2 Elizabeth Hurlock—Adolescent Development, p. 23.

3 ಮನು IV, 40-42

4 ಮನು V, 66

ರಜಸ್ವಲೆಯನ್ನು ಮುಟ್ಟಬಾರದು ಎಂಬುದಕ್ಕೆ ಶ್ರೀಮದಾಂಧ್ರ ಭಾರತದಲ್ಲಿ ಒಂದು ದೃಷ್ಟಾಂತವಿದೆ '......ನಕೊಕ್ಕಮಲಿ ರಜಸ್ವಲನನ್ನು ಮುಟ್ಟಕು' ಎಂದು ತನ್ನನ್ನು ಸಮೀಪಿಸ ಬಂದ ದುಶ್ಶಾಸನನನ್ನು ದ್ರೌಪದಿ ತಡೆಯುವಳು.[5]

ಪ್ರಥಮ ರಜೋದರ್ಶನ ವಿಷಯದಲ್ಲಿ ಶುಭಾಶುಭ, ತಿಥಿ, ವಾರ, ನಕ್ಷತ್ರ ಮತ್ತು ಕಾಲವನ್ನು ನೋಡುವ ಪದ್ಧತಿ ನಮ್ಮಲ್ಲಿ ರೂಢಿಗತವಾಗಿದೆ. ಇವುಗಳನ್ನು ಗ್ರಂಥ ಹಾಗೂ ಪಂಚಾಂಗಗಳಿಂದ ತಿಳಿಯಬಹುದು.

ಕೆಟ್ಟ ತಿಥಿ, ವಾರ, ನಕ್ಷತ್ರಗಳಲ್ಲಿ ಪ್ರಥಮವಾಗಿ ರಜಸ್ವಲೆಯಾದರೆ ಶಾಸ್ತ್ರೋಕ್ತ ತಿಥಿಯನ್ನು ಪಾಲಿಸಬೇಕೆಂದು ದೊಡ್ಡವರ ಆದೇಶ. ಕೆಟ್ಟ ನಕ್ಷತ್ರವಾದರೆ ಹೋಮ ವಿಧಾನದಿಂದ ಶಾಂತಿಯನ್ನೂ, ನಕ್ಷತ್ರವು ಒಳ್ಳೆಯದಾಗಿ ಮಿಕ್ಕವು ಕೆಟ್ಟದಾಗಿದ್ದರೆ ಸಾಮಾನ್ಯ ಶಾಂತಿಯನ್ನೂ ಆಚರಿಸಬೇಕು.

ಅನಂತಪುರ ಜಿಲ್ಲೆಯಲ್ಲಿ ನಾನು ಹಾಡಿನ ರೂಪದಲ್ಲಿ ವಾರ ವಿಷಯಗಳಿಗೆ ಸಂಬಂಧಿಸಿದ 'ಸಮರ್ತ' ಹಾಡೊಂದನ್ನು ಶೇಖರಿಸಿದ್ದೇನೆ.

ಅಕ್ಕಲ್ಲೋ ನೀರೇಟಲ್ಲೋ ವೆಲದಿ ರುಕ್ಮಿಗೆ ಸಮರ್ತ ವೇಡುಕಲಾಯ
” ಆದಿವಾರಮು ನಾಡು ಅತಿರೋಗಿಯೌನು
” ಸೋಮವಾರಮು ನಾಡು ಶುಭತಿ ಪತಿವ್ರತ
” ಮಂಗಳವಾರಮು ನಾಡು ಮತಿಮಂತುರಾಲು
” ಬುಧವಾರಮು ನಾಡು ಬುದ್ಧಿಮಂತಿಯೌನು
” ಬೇಸ್ತವಾರಮು ನಾಡು ಪುತ್ರವತಿಯಗುನು
” ಶುಕ್ರವಾರಮು ನಾಡು ಶುಭತಿಸಂಪದ
ಕಲಿಗಿಯುಂಡು
” ಶನಿವಾರಮು ನಾಡು ಸತಿ ಪೇದರಾಲು[6]

ಭಾವಾನುವಾದ–

ಭಾನುವಾರ ರೋಗಿಯಾಗುವಳು
ಸೋಮವಾರ ಪತಿವ್ರತೆ
ಮಂಗಳವಾರ ಮತಿವಂತೆ
ಬುಧವಾರ ಬುದ್ಧಿವಂತೆ

---

5 ಆಂಧ್ರಮಹಾಭಾರತ-ಸಭಾಪರ್ವ, ದ್ವಿತೀಯಾಶ್ವಾಸ, ಪಚನ 215, ಪುಟ. 77, ಆಂ ಪ್ರ. ಸಾ. ಅಕಾಡೆಮಿ, ಹೈದರಾಬಾದ್

6 ಹಾಡಿದವರು : ಶ್ರೀಮತಿ ವಿ. ಜಾನಕಮ್ಮ, 60 ವರ್ಷ, ಕದಿರಿ, ಅನಂತಪುರ ಜಿಲ್ಲೆ.

ಗುರುವಾರ ಪುತ್ರವತಿ
ಶುಕ್ರವಾರ ಸಂಪತ್ತು ಲಭಿಸುತ್ತದೆ
ಶನಿವಾರ ಆಕೆ ಬಡವಳು

ಮೇಲಿನ ಹಾಡಿನಲ್ಲಿ ಋತುಮತಿಯಾದ ಬಾಲೆಯನ್ನು ರುಕ್ಮಿಣಿಗೆ ಹೋಲಿಸಿದೆ. ಇಂದಿನ ಜನತೆ ತಮ್ಮ ಆಚಾರ ವ್ಯವಹಾರಗಳನ್ನು ಪುರಾಣ ಪಾತ್ರಗಳಿಗೆ ಆರೋಪಿಸಿ ಪುರಾಣಕಾಲದಿಂದಲೂ ಇಂಥ ಆಚಾರ ವ್ಯವಹಾರಗಳಿದ್ದಂತೆ ಹಾಡುಗಳನ್ನು ಕಟ್ಟಿದ್ದಾರೆ. 'ಅಲ್ಲೋಣೇರೇಡಲ್ಲೋ' ಎಂಬುದು ಕೇವಲ 'ಸೊಲ್ಲು' (ಪಲ್ಲವಿ) ಮಾತ್ರ.

ಕೇರಳ ರಾಷ್ಟ್ರದಲ್ಲಿಯೂ, ಪಂಜಾಫಿರ್ ಪ್ರಾಂತದ ಹಿಂದೂ ಮಹಮ್ಮದೀಯರಲ್ಲೂ ಶುಭಾಶುಭ ವಾರಗಳನ್ನು ಪಾಲಿಸುವ ಪದ್ಧತಿ ಇದೆ. ಶ್ರೀ ಶಂಕಪ್ಪನ್ ನಾಯರ್[7] ಕೇರಳ ರಾಷ್ಟ್ರದಲ್ಲಿಯ ವಾರವಿಷಯಗಳನ್ನೂ, ಶ್ರೀ ಶಿವನಾರಾಯಣ್ ಕವಿರಾಜು ಅವರು[8] ಪಂಜಾಫಿರ್ ಪ್ರಾಂತದ ವಾರವಿಷಯಗಳನ್ನೂ ಹೇಸಲಿಸಿದ್ದಾರೆ. ಇವುಗಳ ಆಧಾರದಿಂದ ಹಿಂದೂಗಳಲ್ಲಿ ಸರ್ವತ್ರ ಇಂಥ ನಿಯಮಗಳು ನಂಬಿಕೆಗಳು ಅಸ್ತಿತ್ವದಲ್ಲಿವೆ ಎಂದು ನಿರ್ಧರಿಸಬಹುದು.

ಸಾಂಪ್ರದಾಯಿಕ ಸ್ತ್ರೀಯರಲ್ಲಿ ಸಮರ್ತ ಪದ್ಧತಿಗಳು—ಆಚಾರಗಳು

(ಅನಂತಪುರ ಜಿಲ್ಲೆಯ) ಬ್ರಾಹ್ಮಣರಲ್ಲಿ ಬಾಲಿಕೆಯು ರಜಸ್ವತಿಯಾದನಂತರ ಒಂದು ಪ್ರತ್ಯೇಕವಾದ ಕೊಠಡಿಯಲ್ಲಿ ಆಕೆಯನ್ನು ಮೂರು ದಿನಗಳು ಕೂಡಿಸುತ್ತಾರೆ. ಈ ಮೂರು ದಿನಗಳಲ್ಲಿ ದುಷ್ಟ ಗ್ರಹಗಳ ಪೀಡೆಗಳು ಇಲ್ಲದಂತೆ 'ಕಂಪ್ರನೀರಿ'ನಿಂದ ದೃಷ್ಟಿ ತೆಗೆಯುವರು. ಮೊದಲ ದಿನ ಅಗಸಗಿತ್ತಿಯು 'ಮಡಮ' ತರುವಳು. ಬಾಲಿಕೆಯನ್ನು ಮಧ್ಯದಲ್ಲಿ ಕೂಡಿಸುತ್ತಾರೆ. ಮೂರು ದಿನಗಳು ಮುತ್ತೈದೆಯರನ್ನು ಅರಿಶಿನ ಕುಂಕುಮಕ್ಕೆ ಕರೆಯುವರು. ಹುಗ್ಗಿ, ತುಪ್ಪ, ಚಿಗಳಿಗಳನ್ನು ಮೂರು ದಿನಗಳು ಮಾತ್ರವೇ ಕೊಡುವ ರೂಢಿಯಿದೆ. ಸ್ನಾನಾನಂತರ ಕೊಡುವುದಿಲ್ಲ. ಎಳ್ಳಿನಲ್ಲಿ ಉಷ್ಣ ಹೆಚ್ಚಿಸುವ ಶಕ್ತಿ ಇರುವುದರಿಂದ ರಕ್ತಸ್ರಾವವು ಅಧಿಕವಾಗುವುದು. ನಾಲ್ಕನೆಯ ದಿನ ಎಣ್ಣೆಯ ನೀರು ಹಾಕುವರು. ಅಂದಿನಿಂದ ಬಾಲೆಯು ಮನೆಯಲ್ಲಿ ಸ್ವೇಚ್ಛೆಯಾಗಿ ತಿರುಗಾಡಬಹುದು. ಅವರವರ ಶಕ್ತ್ಯಾನುಸಾರವಾಗಿ ಐದು, ಒಂಬತ್ತು ಇಲ್ಲವೇ ಹದಿನಾರು ದಿನಗಳು ಬಾಲೆಗೆ ಆರತಿಮಾಡಿ "ಹುಡುಗಿಯನ್ನು ಕೂಡಿಸಿರುತ್ತೇವೆ" ಅಂತಲೋ "ಹುಡುಗಿಗೆ ಆರತಿ ಮಾಡುತ್ತೇವೆ"

7. Woman in Indian Folklore, pp 250–251. ed. by Sankar sen Gupta.
8. Woman in Indian Folklore, p 261

ಐಂತರೂ ಮುತ್ತೈದೆಯರನ್ನು ಕರೆದು ತಾಂಬೂಲ ಕೊಡುವರು. ವಿಧವಿಧ ವೇಷಗಳನ್ನು ಹಾಕುವರು. ಒಬ್ಬ ಹುಡುಗಿಗೆ ಗಂಡುವೇಷವನ್ನು ಹಾಕಿ ರಜಸ್ವಲೆಯಾದ ಬಾಲಿಕೆಯ ಪಕ್ಕದಲ್ಲಿ ಕೂಡಿಸುವರು. ಇದನ್ನು ನೋಡುವವರಿಗೆ ರಾಧಾಕೃಷ್ಣರಂತೆ, ಸುಭದ್ರಾ ಅರ್ಜುನರಂತೆ ಕಂಡುಬರುವುದು. ದಾಂಪತ್ಯ ಜೀವನದ ಸವಿ ತೋರಿಸುವ ವೇಷಗಳನ್ನು ಹಾಕಿಸುವುದು ಒಂದು ಆಚಾರವಾಗಿದೆ. ಕೆಲವರ ಮನೆಗಳಲ್ಲಿ ಈ ಪದ್ಧತಿ ಇಲ್ಲ.

ಈ ಮಂಡಲದ ಕ್ಷತ್ರಿಯರಲ್ಲಿ ಈ ಪದ್ಧತಿ ಸ್ವಲ್ಪ ಮಾರ್ಪಾಟನ್ನು ಹೊಂದಿದೆ. ರಜಸ್ವಲೆಯಾದ ತಕ್ಷಣವೇ ಬಾಲೆಯನ್ನು ಪ್ರತ್ಯೇಕವಾದ ಕೊಠಡಿಯಲ್ಲಿ ಇರಿಸುವರು. ಮನೆಗೆ ಸುಣ್ಣ ಬಳಿಸುವರು. "ಪುಣ್ಯಾರ್ಜನೆ" ಮಾಡಿಸುವರು. ನಾಲ್ಕು ನಿದ್ರೆಗಳಾದ ನಂತರ ಐದನೆಯ ದಿನ ಬಿಳಿಯ ವಸ್ತ್ರದ ಮೇಲೆ ಕೂಡಿಸುವರು. ಎಳ್ಳಿನ ತಂಬಿಟ್ಟು, ಮೊಳಕೆಯೊಡೆದ ಹೆಸರುಕಾಳನ್ನು ಕೊಡುವರು. ಈ ಎರಡು ಆಕೆಗೆ ಶಕ್ತಿಯನ್ನು ಕೊಡುವುವು. ಹನ್ನೊಂದು ದಿನಗಳು ಹನ್ನೊಂದು ಕೋಳಿ ಮೊಟ್ಟೆಯನ್ನು ಎಳ್ಳೆಣ್ಣೆಯನ್ನು ಕುಡಿಸುವರು. ಮೊದಲು ಮೊಟ್ಟೆಯನ್ನು ಒಡೆದು ಕುಡಿಸಿದ ನಂತರ ಅದರ ತುಂಬಾ ಎಳ್ಳೆಣ್ಣೆಯನ್ನು ಹಾಕಿ ಕುಡಿಸುವರು. ಪದ್ಧತಿಗೋಸ್ಕರ ಸಾಯಂಕಾಲದಲ್ಲಿ ವೇಷಗಳನ್ನು ಹಾಕುವರು. ಪದ್ಧತಿಯ ಖರ್ಚೆಲ್ಲವನ್ನು ಸೋದರಮಾವನೇ ವಹಿಸಿಕೊಳ್ಳಬೇಕು.

ವೈಶ್ಯರಲ್ಲಿ ಈ ಪದ್ಧತಿ ಇನ್ನೂ ಸ್ವಲ್ಪ ಉತ್ಸಾಹಭರಿತವಾಗಿದೆ. ರಜಸ್ವಲೆಯಾದನಂತರ ಮೊದಲ ದಿನ ಸಾಯಂಕಾಲ ತೆಂಗಿನಕಾಯನ್ನು ಒಡೆಯುವರು. ನಂತರ ಒರಳನ್ನು ಪೂಜಿಸಿ ಐದು ಮಂದಿ ಮುತ್ತೈದೆಯರು ಎರಡು 'ಒನಕೆ'ಗಳಿಂದ 'ಕರಿಎಳ್ಳಿ'ಗೆ ಬೆಲ್ಲವನ್ನು ಬೆರೆಸಿ ಕುಟ್ಟುವರು. ಈ ತಂಬಿಟ್ಟನ್ನು ರಜಸ್ವಲೆಯಾದ ಬಾಲೆಗೆ ಮತ್ತು ಇನ್ನೂ ಮೈನೆರೆಯದ ಬಾಲೆಯರಿಗೆ ಕೊಡುವರು. ಇನ್ನೂ ಮೈನೆರೆಯದ ಮಕ್ಕಳಿಗೆ ಹೀಗೆ ಕೊಡುವಲ್ಲಿ ಅವರೂ ಅಲ್ಪ ಕಾಲದಲ್ಲೇ ರಜಸ್ವಲೆಯಾಗಲಿ ಎಂಬ ಭಾವವೇ ಪ್ರಧಾನವಾಗಿದೆ. ಅಗಸರು 'ದಡಮು' ತರುವರು. ಒಂದು ಬಿಳಿಯ ಸೀರೆಯನ್ನು ನಾಲ್ಕು ಮಡಿಕೆ ಮಾಡಿಸಿ ಕೆಳಗೆ ಹಾಕಿ ಐದು ಮಂದಿ ಮುತ್ತೈದೆಯರು ಅರಿಶಿನ ಸುಣ್ಣ ಕಲಿಸಿದ ಓಕಳಿಯಿಂದ 'ಕೈತಟ್ಟು' (ಚಿಟ್ಟು) ತಟ್ಟುವರು. ಅನಂತರ ದಡಮಕ್ಕೆ ಅರಿಶಿನ ಕುಂಕುಮಗಳಿಂದ ಪೂಜೆ ಮಾಡುವರು. ಈ ದಡಮಕ್ಕೆ ನಾಲ್ಕು ಮೂಲೆಗಳಲ್ಲಿ ದೀಪವನ್ನು ಬೆಳಗಿಸುವರು. ದೀಪಸ್ತಂಭಗಳಿಗೆ ಐದು ಕಡೆ ಕುಂಕುಮವಿಟ್ಟು 'ಹಸಿದಾರ' (ಹಳದಿ ದಾರ)ವನ್ನು ಸುತ್ತುವರು. ಐದು ತಾಂಬೂಲಗಳನ್ನು ವಸ್ತ್ರದಮೇಲೆ ಇಡುವರು. ಬಾಲೆಯನ್ನು ವಸ್ತ್ರದ ಮಧ್ಯೆ ಕೂಡಿಸುವರು. ಬಾಳೆಹಣ್ಣು ಇಲ್ಲವೆ ಬೇರೆ ಇತರ ಐದು ಫಲಗಳನ್ನು ಉಡಿ ತುಂಬುವರು. ಉಡಿ ತುಂಬುವಾಗ ಹುಡುಗಿಯನ್ನು ಮುಟ್ಟದೆ ಐದು ಜನ ಐದೆ

ಯಾರು ಮೇಲಿನ ಸೆರಗಿನೊಳಗೆ ಫಲಗಳನ್ನು ಹಾಕುವರು. ನಂತರ ಆರತಿ ಮಾಡುವರು. ಹೀಗೆ ನಾಲ್ಕು ದಿನಗಳು ಮಾಡಿದ ನಂತರ ಐದನೇ ದಿನ ನೀರು ಹಾಕುವರು. ಆನಂತರ ಆರತಿ ಮಾಡುವರು. ಹೀಗೆ ನಾಲ್ಕು ದಿನಗಳು ಮಾಡಿದ ನಂತರ ಐದನೇ ದಿನ ನೀರು ಹಾಕುವರು. ಅಗಸನ ಮನೆಯಿಂದ ಐದು ಸೀರೆಗಳನ್ನು ತರುವರು. ಐದು ಸಾರಿ ಐದು ಜನ ಮುತ್ತೈದೆಯರು ನೀರು ಹಾಕುವರು. ಐದು ಸಾರಿ ಆಕೆ ಮೊದಲು ಕುಳಿತ ಜಾಗವನ್ನು ಸಗಣಿಯಿಂದ ಸಾರಿಸುವರು. ಆನಂತರ ಶರೀರಕ್ಕೆ ಅರಿಶಿನ ಹಚ್ಚುವರು. ಮೊಸರನ್ನ ತಿನ್ನಿಸುವರು. ಹುಣಿಸೇಹಣ್ಣಿನಿಂದ ತಟ್ಟೆ, ಲೋಟ, ತಂಬಿಗೆ ಇವುಗಳನ್ನು ತೊಳೆಯುವರು. ಹೀಗೆ ಐದು ಸಾರಿ ಸ್ನಾನವನ್ನು ಮಾಡಿಸಿ ಮೇಲೆ ಹೇಳಿದಂತೆ ಐದು ಸಾರಿ ಮಾಡುವರು. ಮಧ್ಯಾಹ್ನ ಮಿಂದು ಊಟ ಮಾಡುವರು. ಸಾಯಂಕಾಲ ಅಲಂಕಾರ. ಸರಸ್ವತಿ ಸೀತ ಇಲ್ಲವೇ ರಾಮ, ಕೃಷ್ಣ ವೇಷಗಳನ್ನು ಹಾಕುವರು. ಆರತಿ ಮಾಡುವರು. ಹೀಗೆ ಐದು ದಿನ ತಪ್ಪದೆ ಮಾಡುವರು. ಕೆಲವರು ಹದಿನಾರು ದಿನಗಳು ಮತ್ತೆ ಕೆಲವರು ಒಂಬತ್ತು ದಿನಗಳು ಅವರವರ ಶಕ್ತ್ಯಾನುಸಾರ ಬಾಲೆಯನ್ನು ಕೂಡಿಸಿ ಆರತಿ ಮಾಡುವರು. ಕೆಲವರು ಹೂವು ಹಣ್ಣು ಹಾಗೂ ತಿನ್ನುವ ವಸ್ತುಗಳನ್ನು ಮನೆಮನೆಗೆ (ವೈಶ್ಯರ ಮನೆಗಳಿಗೆ) ಹಂಚಿಕೊಂಡು ಬರುವರು.

ಶ್ರಮಿಕ ಸ್ತ್ರೀಯರಲ್ಲಿ ಸಮಾರ್ತ ಪದ್ಧತಿ

ಬಾಲಕಿಯು ನೆರೆದ ನಂತರ ಮೊದಲದಿನ ಮುತ್ತೈದೆಯು ನೀರು ಹಾಕಿ ಅರಿಶಿನ ಕುಂಕುಮ ಇಡುವರು. ಅಗಸಗಿತ್ತಿ 'ಮಡಮು' ಹಾಸುವಳು. ನಾಲ್ಕು ಮೂಲೆಗಳಲ್ಲಿ ಎರಡು ಎಲೆ, ಎರಡು ಅಡಿಕೆ, ಬೆಲ್ಲದ ಉಂಡೆ ಇಡುವರು. ಮಧ್ಯೆ ಕೊಬ್ಬರಿ ಬಟ್ಟಲು ಒಂದನ್ನು ಇಡುವರು. ಓಕಳಿ ಮಾಡಿ ಕೈಯಿಂದ ನಾಲ್ಕು ಪಕ್ಕಗಳಲ್ಲಿ. ಮಧ್ಯ ಭಾಗದಲ್ಲಿ ಕೈಯನ್ನು ತಟ್ಟುವರು. ಓಕಳಿಯನ್ನೇ ರಾಯದುರ್ಗ ಪ್ರಾಂತದಲ್ಲಿ 'ಓಕಲಿ ನೀಳ್ಳು' ಎನ್ನುವರು. ಇದು ಕಟ್ಟುಪಾಡುಗಳನ್ನು ತಿಳಿಸುವುದು. ದುಷ್ಟ ಗ್ರಹಗಳು ಸೇರದಂತೆ ಈ ರೀತಿ ಮಾಡುವರಂತೆ. ಬಾಲಕಿಯನ್ನು ದಶಮದ ಮೇಲೆ ಕೂಡಿಸಿ ತೆಂಗಿನಕಾಯನ್ನು ಒಡೆಯುವರು. ಈ ಮೂರು ದಿನಗಳು ಐದು ಸಲ. ಒಂಬತ್ತು ದಿನಗಳಲ್ಲಿ ಬೆಳಗಿನ ಝಾವದಲ್ಲಿ ಎಣ್ಣೆಯ ನೀರು ಹಾಕುವರು. ಪ್ರತಿ ದಿನವೂ ಆರತಿ ಮಾಡುವರು. ನಾಲ್ಕು ದಿನಗಳು ಮನೆಯಲ್ಲಿ ಯಾವ ವಸ್ತುವನ್ನೂ ಮುಟ್ಟಕೂಡದು. ಐದನೇ ದಿನದಿಂದ ಯಥೇಚ್ಛವಾಗಿ ತಿರುಗಾಡಬಹುದು. ಆದರೆ ಬೆಳಕಿಗೆ ಹೋಗಬಾರದು. ಮೊದಲ ಐದು ದಿನಗಳು ಭೋಜನಕ್ಕೆ ತಂಬಿಟ್ಟು, ತುಪ್ಪದ ಮುಗ್ಗಿ ತಿನ್ನಬೇಕು. ಒಂಬತ್ತು ದಿನಗಳು ಮುತ್ತೈದೆಯರನ್ನು ಅರಿಶಿನ ಕುಂಕುಮಕ್ಕೆ ಕರೆದು ತಾಂಬೂಲ ಕೊಡುವ ರೂಢಿ ಇದೆ. ಕರ್ನಾಟಕ ಪ್ರಾಂತದ ಶ್ರಮಿಕ ಸ್ತ್ರೀಯರಲ್ಲೂ ಇಂಥ ಆಚಾರಗಳು ಇವೆ.

ರಾಮದುರ್ಗ ತಾಲ್ಲೂಕಿನಲ್ಲಿ 'ನಾಯಕರು' ಎಂಬ ಹರಿಜನ ವರ್ಗಗಳಲ್ಲಿ ವಿಶಿಷ್ಟವಾದ ಆಚಾರ ವ್ಯವಹಾರಗಳು ಇವೆ.

ಮೈನೆರೆದ ಬಾಲಿಕೆಯನ್ನು ಒಂಬತ್ತು ದಿನಗಳು ಮನೆಯೊಳಕ್ಕೆ ಪ್ರವೇಶ ಗೊಳಿಸದೆ ಮನೆಯ ಮುಂದೆ ಗುಡಿಸಲನ್ನು ಹಾಕಿ ಅದರಲ್ಲಿರಿಸುವರು. 'ಕಣಗಲೆ' ಎಲೆ ಬೇವಿನೆಲೆಯನ್ನು ಹಾಕಿ ಗುಡಿಸಲನ್ನು ಕಟ್ಟುವರು. ಬಾಲಿಕೆಯನ್ನು ಗುಡಿಸಿಲೊಳಗೆ ಕಳುಹಿಸುವ ಮೊದಲು ತೆಂಗಿನ ಕಾಯನ್ನು ಒಳಕ್ಕೆ ಹಾಕುವರು. ಕೊಬ್ಬರಿ ಬಟ್ಟಲು, ಐದು ಉತ್ತತ್ತಿ ಹಣ್ಣು (ಖರ್ಜೂರ), ಐದು ಎಲೆ, ಐದು ಅಡಿಕೆಗಳಿಂದ ಬಾಲೆಗೆ ಉಡಿ ತುಂಬುವರು. ಪ್ರತ್ಯೇಕವಾದ 'ತಟ್ಟೆ' ಅಥವಾ 'ಲೋಟ' ಕೊಡದೆ ಬಂಡೆಯ ಮೇಲೆ ಅನ್ನವನ್ನು, ಕೊಬ್ಬರಿ ಬಟ್ಟಲಲ್ಲಿ ನೀರನ್ನು ಕೊಡುವರು. ಈ ಒಂಬತ್ತು ದಿನಗಳು ಯಾವ ತಿಂಡಿಯನ್ನು ಬೇಕಾದರೂ ಕೊಡಬಹುದು. ಒಂಬತ್ತನೇ ದಿನ ಬೆಳಗಾಗುವುದೇ ಯಾರೂ ನೋಡದಂತೆ ಒಂದು ಎಲೆಯನ್ನೂ ಬಿಡದಹಾಗೆ ಗುಡಿಸಲನ್ನು ಊರ ಹೊರಗೆ ತಂಗಡಿ ಮರದ ಹತ್ತಿರ ಸುಟ್ಟು ಹಾಕುವರು. ಆ ದಿನ ಸಾಯಂಕಾಲ ಬಾಲಿಕೆಗೆ ಹೊಸ ಸೀರೆಯನ್ನು ರವಿಕೆಯನ್ನು ಉಡಿಸಿ ಕಂಬಳಿಯನ್ನು ಹೊದಿಸಿ ಮೇಳದೊಂದಿಗೆ ತಂಗಡಿ ಗಿಡದ ಹತ್ತಿರಕ್ಕೆ ಕರೆದು ಕೊಂಡು ಹೋಗುವರು. ದಾರಿಯಲ್ಲಿ ಹಾಡುಗಳನ್ನು ಹಾಡುವ ರೂಢಿಯಿದೆ. ಈ ಹಾಡುಗಳನ್ನು ಕನ್ನಡದಲ್ಲೇ ಹಾಡುವರು. ತೆಂಗಿನ ಕಾಯಿ, ಕೊಬ್ಬರಿ ಬಟ್ಟಲು, ಉತ್ತತ್ತಿ ಹಣ್ಣುಗಳನ್ನು ತಂಗಡಿ ಗಿಡದ ಮುಂದೆ ಇರಿಸಿ ಬಾಲಿಕೆಯನ್ನು ದಾಟಿಸುವರು. ನಂತರ ಮನೆಗೆ ಕರೆದುಕೊಂಡು ಬರುವರು. ಹೊಸ್ತಿಲಿನ ಹೊರಗೆ ಆಕೆಯನ್ನು ಇರಿಸುವರು. ಆಕೆಯ ಸೋದರತ್ತೆ ಬಾಲಿಕೆಯ ನಾಲಿಗೆಯ ಕೊನೆಗೆ ಬೇವಿನ ಕಡ್ಡಿಯಿಂದ ಐದು ಸಾರಿ ಸುಡುವಳು. ಗೋವಿನ ಗಂಜಳವನ್ನು ಕಲಸಿ ಅದರಲ್ಲಿ ಬೇವಿನ ಕಡ್ಡಿಯನ್ನು ಇರಿಸಿ ಅದನ್ನು ಬಾಲೆಗೆ ಮುಟ್ಟಿಸಿ ಅವಳ ಮೇಲೆ ಪ್ರೋಕ್ಷಿಸುವರು. ಉಗುರುಗಳನ್ನು ತೆಗೆಯುವರು. ಅನಂತರ ಬಾಲಿಕೆಯನ್ನು ಒಳಗೆ ಪ್ರವೇಶಗೊಳಿಸಿ ಕೂಡಿಸುವರು. ಹೂವಿನಹಾರ, ಹಾರವನ್ನು ಕೊರಳಿಗೆ ಹಾಕುವರು. ಮುತ್ತೈದೆಯರಿಗೆ ತಾಂಬೂಲವನ್ನು ಕೊಡುವರು. ಹತ್ತನೇ ದಿನ ಗಂಗೆ ಪೂಜೆ ಮಾಡುವರು. 'ಸೇದುವಬಾವಿ' ಹತ್ತಿರಕ್ಕೆ ಬಾಲೆಯನ್ನು ಕರೆದೊಯ್ದು 'ಹಾಲು' 'ತುಪ್ಪ' 'ಅಕ್ಕಿ' 'ತಂಬಿಟ್ಟು' 'ಎಳ್ಳಿನ ಉಂಡೆ'ಗಳನ್ನು ಬಾವಿಯಲ್ಲಿ ಸ್ವಲ್ಪ ಹಾಕಿಸಿ ಉಳಿದವುಗಳನ್ನು ಅಲ್ಲಿ ನೆರೆದವರಿಗೆ ಹಂಚುವರು. ಇದು ಅನಂತರ ಬಾಲೆ ಯಥಾಪ್ರಕಾರವಾಗಿರಬಹುದು. ಅವರವರ ಶಕ್ತ್ಯಾನುಸಾರವಾಗಿ ಬಾಲೆಯನ್ನು ಐದುದಿನಗಳಾಗಲಿ, ಒಂಬತ್ತು ದಿನಗಳಾಗಲಿ ಸಾಯಂಕಾಲದಲ್ಲಿ ಕೂಡಿಸಿ ಆರತಿ ಮಾಡುವರು. ಈ ಸಮಯದಲ್ಲಿ ಹಾಡುಗಳನ್ನು ಹೇಳುವರು.

ಇವು ಅನಂತಪುರ ಜಿಲ್ಲೆಗೆ ಸಂಬಂಧಿಸಿದ ಸಮರ್ತ ಪದ್ಧತಿಗಳ ಹಾಗೂ ಆಚಾರಗಳ ಸಂಕ್ಷಿಪ್ತ ವಿಷಯಗಳು. ಈ ಪದ್ಧತಿಯನ್ನು ಮಾಡುವ ಉದ್ದೇಶವನ್ನು P. Thomas ಅವರು 'This occasion is something of a public announcement that the girl has come of age and the parents are willing to consider offers for her marriage' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇವರ ಅಭಿಪ್ರಾಯವು 'ಸಮರ್ಥ' ಎಂಬ ಶಬ್ದವನ್ನು ಹೆಚ್ಚಿಗೆ ಬಲಗೊಳಿಸುತ್ತದೆ.

ತಮಿಳು ನಾಡಿನಲ್ಲಿ ಕೂಡ 'Non-Brahmins celebrate the event on a sort of matrimonial advertisement by inviting relations and friends', ಎಂದು ಶ್ರೀ ಎಸ್. ಎಂ. ಎಲ್. ಲಕ್ಷ್ಮಣಚೆಟ್ಟಿಯಾರ್[9] ಹೇಳಿದ್ದಾರೆ.

ಹೀಗೆ ಸಮರ್ತ ಪದ್ಧತಿಗಳು, ಆಚಾರಗಳು ಜಾನಪದದ ಸಂಸ್ಕೃತಿಯಲ್ಲಿ ಒಂದು ಭಾಗವಾಗಿ ಇಂದಿಗೂ ಅಚ್ಚಳಿಯದೆ ಉಳಿದಿವೆ.

---

9. Folklore of Tamil Nadu, pp 77-78.

ವೀರಸಿದ್ಧಾಂತ

ಬಂಧುವರ್ಮನ ಹರಿವಂಶಾಭ್ಯುದಯದಲ್ಲಿ ಪ್ರಸ್ತಾಪಿಸಿರುವ ವೀರಸಿದ್ಧಾಂತವನ್ನು ಮೊದಲ ಬಾರಿಗೆ ಗುರುತಿಸಿ,[1] ಅದರ ಕಡೆ ನಮ್ಮ ಗಮನಸೆಳೆದು, ಡಾ|| ಎಂ.ಎಂ. ಕಲಬುರ್ಗಿಯವರು ಉಪಕಾರ ಮಾಡಿದ್ದಾರೆ. ತುಟಿಗಾಳಗಳ ವ್ಯಕ್ತಿತ್ವ-ವೃತ್ತಿಧರ್ಮವನ್ನು ರೂಪಿಸುವಲ್ಲಿ 'ವೀರಸಿದ್ಧಾಂತ' ಮಹತ್ವದ ಪಾತ್ರವನ್ನು ವಹಿಸಿತ್ತು; ಈ ಸಿದ್ಧಾಂತದ ಮೂರ್ತಸ್ವರೂಪ ಕರ್ಣನಾಗಿದ್ದನೆಂಬುದು ಕಾವ್ಯಭ್ಯಾಸದಿಂದ ನಮಗೆ ಸ್ಪಷ್ಟವಾಗುವುದು.

ಈ 'ಸಿದ್ಧಾಂತ'ದ ಬಗ್ಗೆ ಬರೆಯುತ್ತಾ 1. ಜೈನ ಪರಂಪರೆಯ ಭಾರತಗಳಾದ ಹರಿವಂಶ ಪುರಾಣಗಳಲ್ಲಿ (ನೇಮಿನಾಥ ಪುರಾಣ) ಈ ಪದ ಕಂಡು ಬರುವುದಿಲ್ಲ; 2 ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿಯೂ ಕಂಡುಬಾರದ ಈ ಪದ ಬಂಧುವರ್ಮನ "ಹರಿವಂಶಾಭ್ಯುದಯ"ದಲ್ಲಿ ಎರಡು ಕಡೆ (11-80ಗ-106 ಗ; 12-31ಗ-42) ಕಂಡು ಬರುತ್ತದೆ, ಎಂದು ಕಲಬುರ್ಗಿಯವರು ಹೇಳಿರುವರು. ಸ್ಥೂಲಸಮೀಕ್ಷೆಯಲ್ಲಿ ಈ ಮಾತು ಸರಿಯೆನಿಸಿದರೂ, ವೀರಸಿದ್ಧಾಂತದ ಪ್ರಸ್ತಾಪ ಮಹಾಬಲಕವಿಯ ನೇಮಿನಾಥ ಪುರಾಣದಲ್ಲಿಯೂ ಬರುತ್ತದೆಯೆಂದು ತಿಳಿಸಲು ಈ ಪ್ರಯತ್ನ.

ನಮಗೆ ಕಂಡು ಬಂದಂತೆ, ಎರಡು ಸಂದರ್ಭಗಳಲ್ಲಿ ಮಾತ್ರ ಮಹಾಬಲಕವಿಯು ಈ ಪದದ ಬಳಕೆ ಮಾಡಿದ್ದಾನೆ. ಇವೆರಡೂ ಕರ್ಣನಿಗೆ ಸಂಬಂಧಿಸಿವೆ.

1. ಒಮ್ಮೆ, ಕರ್ಣನು ರಣಾಂಗಣಕ್ಕೆ ತೆರಳುವಾಗ:

> "ವೀರ ಸಿದ್ಧಾಂತವಿದರ್ ಪೇಳ್ದಂತೆ ತನ್ನೊಳ್ ಪೆರ್ಚುವಡೆದ
> ತುಟುಲಸಂದಿಕೆಯೂಜುಂ ಗುಣಂಗಳುಮನತಾಗಶ್ಚರ್ಯಮಪ್ಪ
> ವುದಾರ್ಯಾದಿಗಳುಮನಖಿಲ ಜನಂಗಳ್ ಪೊಗಟಲ್ ವಿಳಾ
> ಸಿನಿಯರ್ ವೀರಸೇನೆಗಳಸಿಕ್ಕಲರಮನೆಯುಂ ಪೊಱಮಟ್ಟು .."[2]

---

1. ಸಾಧನೆ, ಸಂ 6, 1 (ಜನವರಿ-ಮಾರ್ಚ್, 1977), ಪು. 148-55
2. ಮಹಾಬಲಕವಿ, ನೇಮಿನಾಥಪುರಾಣಂ, ಸಂ. ಸಣ್ಣಯ್ಯ, ಬಿ.ಎಸ್., (ಮೈಸೂರು, 1977), ಆ. 3, ಪ. 147 (ವಚನ)

ಇಲ್ಲಿ ಉಲ್ಲೇಖಿಸಿರುವ ತುಚ್ಛಲಸಂದಿಕೆಯ ಆರುಗುಣಗಳು ಬಂಧುವರ್ಮನಿಂದ ವರ್ಣಿತಗೊಂಡಿರುವ ಕಲಿತನ, ಅಭಿಮಾನ, ಧರ್ಮ, ತ್ಯಾಗ, ಸತ್ಯ ಮತ್ತು ಶೌಚ.[3] 'ತುಚ್ಛಲಸಂದಿಕೆಯ ಪಾಟೀ'ಯ ಬಗ್ಗೆ ಪ್ರಸ್ತಾಪಿಸುತ್ತ,

1) ಆಯುಧವಂ ಬಿಸುಟವನಂ, 2) ಜೀಯೆಂದವನಂ, 3 ಅಟಿಯು ಗೃಹಮನಪರ್ದವನಂ, 4) ಅಳಿಪ್ಪಲ್ ಬಾಯೊಳ್ಗಿರ್ಚವನಂ, ಮತ್ತು 5) ಆತ್ಮೀಯರಾಯುಕ್ತಿಕೆಯುಡಂಗೆ ಜಲಮನಾಶ್ರಯಿಸಿದನಂ, ತುಳಿಲನಂ ಕೊಲ್ಲಲಾಗದೆಂದು ಮಹಾಬಲಕವಿ ಹೇಳಿರುವನು.[4] ಕತೆಯ ಸಂದರ್ಭಕ್ಕನುಗುಣವಾಗಿ ಇವುಗಳಲ್ಲಿ ಹಲವನ್ನು ಬಂಧುವರ್ಮನೂ ಉಲ್ಲೇಖಿಸಿದ್ದಾನೆ.[5] ನಮಗೆ ತಿಳಿದಂತೆ, ಈ ಕಡ್ಡಾಯಗಳ ಸ್ಥೂಲ ಪರಿಚಯ ನಮಗೆ ಮೊದಲು ಆಗುವುದು ರನ್ನನಿಂದ.[6]

2) ಕರ್ಣಾರ್ಜುನರ ಮಧ್ಯೆ ಯುದ್ಧ ನಡೆದಾಗ, ಮತ್ತೊಮ್ಮೆ ಮಹಾಬಲ ಕವಿಯು ವೀರಸಿದ್ಧಾಂತದ ಪ್ರಸ್ತಾಪ ಮಾಡುವನು-

ಕರ್ಣನು ವಹ್ನಿ ಬಾಣವನ್ನು ಕೈಗೆತ್ತಿಕೊಂಡಾಗ, ಕುಂತಿಗೆ ತಾನು ಕೊಟ್ಟ-

''ತುಡೆ ನಾನೆಲೆ ತಾಯೆ ವಹ್ನಿಶರಮಂ ಕಲಹದೊಳಾನೆಂದುದೊಂದು ನುಡಿಯಂ''
ನೆನೆಸಿಕೊಂಡು, ಬಾಣವನ್ನು ಬಾಣವನ್ನು ಸಂಧಾನಿಸದೆ ನಿಲ್ಲುವನು.

ಅದನ್ನು ಕಂಡ ಅರ್ಜುನ–

"ಮಾರವಟ್ಟಂತೇಕೆ ನಿಂದೈ ರವಿಸುತ ದೊಣೆಯಿಂದುರ್ಚದೀ ವಹ್ನಿಬಾಣಂ ತಿರುವಾಯ್ಗೇಂ ಸಲ್ಲದೇ''
ಎಂದು ಉಪಹಾಸ ಮಾಡುವನು.

ಅದಕ್ಕೆ ಕಾರಣ ತಿಳಿಸುತ್ತ, ಕರ್ಣ–

''ಗಾಂಡೀವಿ ಕೇಳ್ ಮಾನರ್ಚಿಹ್ನು ವೀರಸಿದ್ಧಾಂತದ ಸಮಯಮನಾಂ ಮಿಾಜಿನೆಂತೆನ್ನ ಮುನ್ನಿ ಸರಲಂ ಸಂಧಾನಿಸೆಂ ನಿಮ್ಮಯ ಸಮರದೊಳೆಂಬುದಂ ಪೂಣ್ದೆನಲ್ತೇ''.
ಎಂದು ಉತ್ತರಿಸುವನು. ಮುಂದುವರೆದು,

3 ಬಂಧುವರ್ಮ, ಹರಿವಂಶಾಭ್ಯುದಯಂ, ಸಂ. ಸಣ್ಣಯ್ಯ. ಬಿ.ಎಸ್., (ಮೈಸೂರು 1974), ಆ. XI, ಪ. 81

4. ಮಹಾಬಲಕವಿ, ನೇಮಿನಾಥಪುರಾಣಂ. ಸಂ. ಸಣ್ಣಯ್ಯ. ಬಿ.ಎಸ್., (ಮೈಸೂರು, 1977], ಆ. XIII, ಪ. 8.

5. ಬಂಧುವರ್ಮ. ಹರಿವಂಶಾಭ್ಯುದಯ. ಸಂ. ಸಣ್ಣಯ್ಯ ಬಿ.ಎಸ್.; (ಮೈಸೂರು, 1974) ಆ. XII, ಪ. 45

6. ರನ್ನ, ಸಾಹಸಭೀಮವಿಜಯಂ. ಸಂ. ಕೃಷ್ಣಭಟ್ಟ. ಕೆ. ಪಿ. [ಮೈಸೂರು, 1949]. ಆ. I ಪ. 22

ಪುಸಿನುಡಿಯುಮುಪಾಂಶುವಸತಿ
ವ್ಯಸನಂ ಕಡುಲೋಭಮಿಷ್ಟವಂಚನೆ ಮಱೆವೊ
ಕ್ಕಸುಹೃದ್ವಧೆಯುಮಪು ಪಾಳಿಯ
ಪಸುಗೆಯನಾಂತಂಗೆ ಪಂಥಮಲ್ಲೆಂದೆನುತಂ[7]

ಎಂದು ತಿಳಿಸುವನು.

ತುಱಿಲಸಾದಿಕೆಯ ಗುಣಗಳನ್ನು ಪ್ರತಿಬಿಂಬಿಸುವ ವ್ಯಕ್ತಿತ್ವವನ್ನು ಪ್ರಮುಖವಾಗಿ ಕರ್ಣನಲ್ಲಿಯೇ ನಮ್ಮ ಕವಿಗಳು ಕಂಡರೂ, ಬೇರೆಯವರಲ್ಲೂ ಅದನ್ನು ಗುರುತಿಸಿರುವರು. ಉದಾಹರಣೆಗೆ, ರನ್ನನ ದುಶ್ಶಾಸನ (ತುಱಿಲಾಳ್ಗಳ್ ಕರ್ಣನುಮಂ -ಕರ್ಣ ಹಾಗೂ ದುಶ್ಶಾಸನ-ಕಟ್ಟಿ ಸುಯೋಧನಂ ಬಾಳ್ವುದಂ ನುಡಿದಿರೇ); ಕರ್ಣಪಾರ್ಯನ ಸೈಂಧವ (ವಸುಧೇಶ್ವರಕ್ಕಿಂತಿದೇ ಲೇಸೆಂದುಱಿದರಲೆ ತುಱಿಲಸಾದಿಕೆ ಯುಱಿಗುಂ), ಜನ್ನನ ಸಿಂಹಚೂಡ (ತುಱಿಲಾಳ್ಗೞ್ದೊಕ್ಕತ್ರ್ಯಭವಂ ಕಟಿದಂ ಕಲಿ ಸಿಂಹಚೂಡಂ...") ಮತ್ತು ಮಹಾಬಲ ಕವಿಯ ಅರ್ಜುನ (ತುಱಿಲಾಳ್ ಪಾರ್ಥಂ ಹಸ್ತದ ಮುಱಿಯನೇ ಕಱಿದಂ) ಮೊದಲಾದವರನ್ನು ಇಲ್ಲಿ ಉಲ್ಲೇಖಿಸಬಹುದು.*

ವೀರಸಿದ್ಧಾಂತದ ತಿರುಳು ಮತ್ತು ವ್ಯಾಪ್ತಿಯನ್ನು ಅರಿಯಲು, ಜೈನಕಾವ್ಯಗಳಲ್ಲಿ ಬರುವ ತುಱಿಲಸಂದರ್ಭನ್ನು ಅಭ್ಯಾಸಕ್ಕೊಳಪಡಿಸುವುದೀಗ ಅವಶ್ಯವಿದೆ.

—ಡಾ. ಷ. ಶೆಟ್ಟರ್

ಕಸ್ತೂರಿ ಸಿದ್ಧನ ಕಾಲವಿಚಾರ

'ಜೋರ ಕಥೆ' ಅಥವಾ 'ಚಿತ್ರಶೇಖರ ಸೋಮಶೇಖರರ ಕಥೆ'[1] (ಯಕ್ಷಗಾನ) ಹಾಗು 'ಗುರುಭಕ್ತನ ಕಥೆ'[2] (ಸಾಂಗತ್ಯ)ಗಳನ್ನು ರಚಿಸಿದ ಕಸ್ತೂರಿ ಸಿದ್ಧನ ಕಾಲದ ಬಗೆಗೆ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರು 'ಇವನ ಕಾಲವು ಸುಮಾರು 1800 ಆಗಿರಬಹುದು' ಎಂದಿದ್ದಾರೆ.[3]

---

7. ಮಹಾಬಲಕವಿ. ಅದೇ ಆ. XII ಪ. 235 ಮತ್ತು ಪ. 236

* ಇಲ್ಲಿಯ ಹಲವು ಉಲ್ಲೇಖಗಳತ್ತ ಗಮನ ಸೆಳೆದ ನನ್ನ ವಿದ್ಯಾರ್ಥಿಮಿತ್ರ ಶ್ರೀ ಎಸ್. ಜಿ. ಹಿರೇಮಠ ಅವರ ಸಹಾಯ ನೆನಸುವೆ.

1. ಪ್ರಕಾಶಕರು : ಟಿ. ರ್ಯ. ಶ್ರೀನಿವಾಸಸೆಟ್ಟಿ. ವಾಗೀಶ್ವರೀ ಮುದ್ರಾಕ್ಷರ ಶಾಲೆ, ಬೆಂಗಳೂರು. 1913.
2. (ಸಂ) ಎಸ್ ವಿದ್ಯಾಶಂಕರ್. ಎಸ್. ಶಿವಣ್ಣ. ಪ್ರಸಾರಾಂಗ. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು. 1977.
3. ಕರ್ಣಾಟಕ ಕವಿಚರಿತೆ, ತೃತೀಯ ಸಂಪುಟ. 1929. ಪು. 157.

ಕಸ್ತೂರಿ ಸಿದ್ಧನ ಉಪಲಬ್ಧ ಚೋರ ಕಥೆಯ ಓಲೆ ಪ್ರತಿಯೊಂದು 'ಶಾಲಿವಾಹನ ಶಕ ವರ್ಷಂಗಳು ೧೬೯೯ ಹೇವಿಳಂಬಿ ಸಂವತ್ಸರ ಮಾಘ ಶು. ೩ ಗುರುವಾರದಲ್ಲು' ಪ್ರತಿಯಾಗಿದೆ.[4]

ಹೀಗಾಗಿ ಚೋರ ಕಥೆಯ ಉಪಲಬ್ಧ ಪ್ರತಿಯ ಕಾಲವಾದ ಕ್ರಿ.ಶ. 1777 ಕ್ಕಿಂತ ಹಿಂದೆ ಕಸ್ತೂರಿ ಸಿದ್ಧ ಜೀವಿಸಿದ್ದನೆಂಬುದರಲ್ಲಿ ಸಂಶಯವಿಲ್ಲ. ಕ್ರಿ.ಶ. ಸು. 1750 ಅನ್ನು ಕಸ್ತೂರಿ ಸಿದ್ಧನ ಕಾಲವೆಂದು ತಾತ್ಪೂರ್ತಿಕವಾಗಿ ನಿರ್ಧರಿಸಬಹುದಾಗಿದೆ.

—ಎಸ್. ಶಿವಣ್ಣ

ಕನ್ನಡ ಕಾವ್ಯಗಳಲ್ಲಿ ಹರಕೆ ಪ್ರಸಂಗಗಳು

ದೇವರಿಗೆ ಹರಕೆ ಹೊರುವುದು ನಮ್ಮವರಲ್ಲಿ ಬಹಳ ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ, ಇಂದಿಗೂ ಇದೆ. ಹರಕೆಗೆ ಕಾರಣ ಏನು ಬೇಕಾದರೂ ಇರಬಹುದು. ಹಾಗೆಯೇ ಹರಕೆಯ ದೇವತೆಗಳು ಇಂತಹವೇ ಆಗಬೇಕೆಂದಿಲ್ಲ. ಅವು ಅವರವರ ನಂಬಿಕೆ ಸಂಪ್ರದಾಯಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ದ್ರೌಪದಿಯ ಸ್ವಯಂವರಕ್ಕೆ ಹೊರಡುವ ಮುನ್ನ ರಾಜರುಗಳು ಮಾಯಾಪುರದ, ಕಾಂಚೀಪುರದ, ಜಾಳಾಂದರದ ವಿಪಿಧಾಸ್ಥಾನ ದೇವರಿಗೆ ಹರಸಿಕೊಂಡರೆಂದು, ಕಜ್ಜಾಯದಲ್ಲಿ ಕರಿಮುಖನನ್ನು ಸತ್ಕರಿಸಿ ಹೊರಟರೆಂದು ನಾರಣಪ್ಪ ವರ್ಣಿಸುತ್ತಾನೆ. (ಗಭಾ ಸ. 13.3) ; ಹಾಗೆಯೇ ಕಪಟದ್ಯೂತದ ಸಮಯದಲ್ಲಿ ಕೌರವ, ಶಕುನಿ ಮುಂತಾದವರು ಕೃತ್ರಿಮದ ಹಾಸಂಗಿಗಳನ್ನು ರಚಿಸಿ ಗಣಪ, ಯಕ್ಷೇಶ್ವರಿ, ಕಳಾವತಿ, ದುರ್ಗಿ, ಭುವನೇಶ್ವರಿಗಳಿಗೆ ವಿವಿಧೋಪಚಾರ ಬಲಿ ವಿಧಾನದಲ್ಲಿ ಹರಸಿಕೊಂಡರೆಂದು ಕವಿ ವರ್ಣಿಸುತ್ತಾನೆ (ಗ ಭಾಸ 13–21).

ಭಕ್ತರು ತಮ್ಮ ಅಭೀಷ್ಟ ಸಿದ್ಧಿಗೆಂದು ದೇವರಿಗೆ ನಾನಾರೀತಿಯಲ್ಲಿ ಸೇವೆ ಸಲ್ಲಿಸುತ್ತೇವೆಂದು ಹರಕೆ ಹೊರುವುದು ಹರಕೆಯ ಮತ್ತೊಂದು ರೀತಿ, ಅಂತಹ ಹರಕೆಗಳಲ್ಲಿ ರಂಗವಲ್ಲಿಯ ಹರಕೆ ಒಂದು, ಇರಬಹುದೆಂದು ಪ್ರೌಢರಾಯನ ಕಾವ್ಯದಲ್ಲಿ (10–25) ಬರುವ ಒಂದು ಸಂದರ್ಭದಿಂದ ಊಹಿಸಬಹುದು : ಸೋಮಣ್ಣನೆಂದೆಂಬ ಶಿವಭಕ್ತನೊಂದು ದಿನ ವರ ವೀರಶೈವ ಸ್ಮೃತಿ ಸಂಹಿತೆಯಲ್ಲಿ

4. A Descriptive catalogue of the Kannada manuscripts in the Government Oriental Manuscripts Library, Madras, Ed. T. Chandrasekhar & Staff, Vol. VI. No. 1191. 1952, Pp. 1540.

ಅರಿಸಿಣವು ಜವೆಗೋಧಿ ತಂದುಲ ಸಿರಿಯ ಪುಡಿಯುಸಿರದೆ ಮುತ್ತುಗಳಿಂದ ರಂಗವಲ್ಲಿಯ ರಚಿಸಿ ಭಜಿಪ ಸದ್ಭಕ್ತಗಾನು … ॥

ಇನ್ನೊಬ್ಬ ಭಕ್ತ ದೇವರಿಗೆ ಧೂಪ ಸೇವೆ ಸಲ್ಲಿಸುವುದಾಗಿ ಹರಕೆ ಹೊತ್ತ ವಿಚಾರವನ್ನು ಅದೇ ಕಾವ್ಯ ಹೇಳುತ್ತದೆ:

'ಚೋಳದೇಶದೊಳು ಶೈವಬ್ರಾಹ್ಮಣೋತ್ತಮಂ…ವ್ಯಾಳಕಂಕಣಗೆ ತ್ರಯೋದಶ (13) ಸೇರು ಧೂಪವನು ಅರ್ಪಿಸುವ ನೇಮವ ಪಿಡಿದು…॥ (ಪ್ರೌಢರಾಯನ ಕಾವ್ಯ 12–6, 9).

ಶಕ್ತಿದೇವತೆಗಳಿಗೆ ಹರಕೆ ಹೊತ್ತು ಸೇವೆ ಸಲ್ಲಿಸಿ ಜನರು ತಮ್ಮ ಮನೋಗತವನ್ನು ಯಾವ ರೀತಿ ಈಡೇರಿಸಿಕೊಳ್ಳುತ್ತಿದ್ದರೆಂಬುದಕ್ಕೆ ಕನ್ನಡ ಸಾಹಿತ್ಯದಲ್ಲಿ ಅನೇಕ ನಿದರ್ಶನಗಳು ದೊರೆಯುತ್ತವೆ. ಜನತೆಯ ಮನೋದೌರ್ಬಲ್ಯದ ಫಲವಾಗಿಯೊ ಏನೋ ಕೆಳವರ್ಗದ ಜನತೆಗೆ ಉಪಕಾರಿಗಳಾಗಿ ಅವರ ಪೂಜೆಯನ್ನು ಕೈಗೊಳ್ಳುವ ದೈವಗಳೆಂದರೆ ಸಾಮಾನ್ಯವಾಗಿ ಸ್ತ್ರೀ ದೇವತೆಗಳು. ಕುಮಾರರಾಮನ ಮನಮೋಹಕ ರೂಪಿಗೆ ಮನಸೋತ ರಾಣಿ ರತ್ನಾಜಿಗೆ ಅವಳ ದೂತಿ ಸಂಗಿ ಧೈರ್ಯ ಹೇಳಿ 'ಹೆಸರುಳ್ಳ ಮಾಕಾಳಿಯುಂಟು ಚಾಮುಂಡಿಯುಂಟು ಏನಬೇಡಿದೊಡೆ ಈವ ಬೆಸನುಳ್ಳ ಕುಟಿಲ ದೇವತೆಯುಂಟು' ಎಂದು ಹೇಳಿ ಈ ಕುಟಿಲ ದೇವತೆಗಳೆಲ್ಲ 'ತನ್ನ ತುಟಿಯ ಮಂತ್ರಾಕ್ಷರದಿಂದ ನಟಿಸುತಿಹವು' ಎಂದು ಹೇಳಿ ಅವುಗಳ ಮೇಲೆ ತನಗಿರುವ ಸ್ವಾಮಿತ್ವವನ್ನು ಸಂಗಿ ಹೆಮ್ಮೆಯಿಂದ ಉಗ್ಗಡಿಸುತ್ತಾಳೆ. ಅವುಗಳನ್ನು ಬೇಡಿ ರಾಮ ನಿನಗೆ ಒಲಿಯುವಂತೆ ಮಾಡುತ್ತೇನೆ. ಆ ಶಕ್ತಿದೇವತೆಗಳನ್ನು ಒಲಿಸಿಕೊಂಡರೆ ಏನು ತಾನೆ ಸಾಧ್ಯವಿಲ್ಲ–ಎಂದು ತಾನು ಒಲಿಸಿಕೊಂಡ ನಾಡಾಡಿದೈವಗಳ ಬಗೆಗೆ ಆತ್ಮ ವಿಶ್ವಾಸದಿಂದ ಮಾತನಾಡಿ ರಾಣಿಗೆ ಧೈರ್ಯ ಹೇಳುತ್ತಾಳೆ.

ಮುಂದುವರಿದು 'ಹೊಸ ಊರ ಯಕನಾತಿಯುಂಟು. ಬಾಗಿಲ ಹಂಪೆಯಕಿಯುಳುಂಟು (ಕತ್ತಿ ಹಿಡಿದ ಶಕ್ತಿದೇವತೆ). ಅವರಿಗಾಗೊಲಿದು ಒಸೆದು ಬೇಡಿದ ಬಲಿಗಳನಿತ್ತು ಅವನ ನಿನ್ನವಶ ಮಾಡಿಕೊಡುವೆ ಅಂಜದಿರು ಎಂದು ಇನ್ನೂ ಕೆಲವು ಶಕ್ತಿ ದೇವತೆಗಳನ್ನು ಹೆಸರಿಸುತ್ತಾಳೆ. 'ಶಕ್ತಿದೇವತೆಗಳ ಪೂಜೆಯನೊಲಿದು ಅತಿಭಕ್ತಿಯಿಂ ಮಾಡಿ ರಾಮನನ್ನು ಶಕ್ತಿಗೆಡಿಸಿ ನಿನ್ನನ್ನು ಕೂಡಬೇಕೆಂಬಾಸಕ್ತಿಯ ಪುಟ್ಟಿಸಿಕೊಡುವೆ' ಎಂಬುದು ಅವಳ ನಿರ್ಧಾರದ ನುಡಿ.

ಸಂಗಿ ಈ ದೇವತೆಗಳನ್ನು ಒಲಿಸಿಕೊಳ್ಳಲು ಮಾಡಿದ ಸಾಧನೆ ಅದೆಷ್ಟು ಕಠಿಣವಾದದ್ದು! ಆ ವರ್ಣನೆಯನ್ನು ನಂಜುಂಡಕವಿ ರಾಮನಾಥಚರಿತದಲ್ಲಿ ಕೊಡುತ್ತಾನೆ. "ಮಿಂದು ದಣಿಬದ (ಮಡಿಬಟ್ಟೆ) ಸೀರೆಯನುಟ್ಟು, ಕಲ್ಲಿಕಣ್ಣಟ್ಟು ಕರಗಿಸುವ ಮಂತ್ರವನ್ನು ಹಲ್ಲಮರೆಯಲ್ಲಿ ಉಚ್ಚರಿಸುತ್ತ ಕೊಲ್ಲಾಪುರದ ದೇವಿಯನ್ನು ಆರಾಧಿಸಿದಳು; ನಿರ್ವಾಣದಲ್ಲಿ ಕಂಚಿಯ ಕಾಮಾಕ್ಷಿಯನ್ನು ಆರಾಧಿಸಿ, ಚಂಡಿ ಭೈರವಿ,

ಕರ್ಣಮೋಟಿ, ಕೌಮಾರಿ, ಚಾಮುಂಡಿ, ಕಾಳಿಂಬಿಯರೆಂಬ-ಚಂಡದೇವತೆಗಳನ್ನಾರಾಧಿಸಿ ಕಾರಿಗಳನ್ನು ತರಿದು ದಿಂಡುಗೆಡಹಿಸಿದಳು. ಅರೆಮುಗಿದ ಅಕ್ಷಿಗಳನ್ನು ನಾಸಾಗ್ರದೊಳಿಳಿಸಿ ಹೃತ್ಕಮಲ ಮಧ್ಯದಲಿ ನಿಲಿಸಿ, ನಾಡಿಗಳನ್ನು ಬಲಿದು, ಅತ್ತಿತ್ತ ವಾಯುವನ್ನು ಆಡಲೀಯದೆ. ಚಿತ್ತವನ್ನು ಓಡಲೀಯದೆ ನಾಡ ಮಾಯಾ ದೇವಿಯರನ್ನು ಧ್ಯಾನಿಸಿದಳು.

ಈ ಶಕ್ತಿದೇವತೆಗಳನ್ನು ಒಲಿಸಿಕೊಳ್ಳಲು ಇನ್ನೂ ಎಷ್ಟೆಷ್ಟು ತರಹದ ಉಗ್ರ ಪರೀಕ್ಷೆಗಳಿಗೆ ತಮ್ಮ ದೇಹವನ್ನು ಒಳಗುಮಾಡಲು ಜನರು ಸಿದ್ಧರಿರುತ್ತಿದ್ದರ ಎಂಬುದನ್ನು ಅವರು ಆ ದೇವತೆಗಳಿಗೆ ಹರಕೆಕೊಂಡು ಮಾಡುತ್ತಿದ್ದ ಉಗ್ರ ಪ್ರತಿಜ್ಞೆಗಳಲ್ಲಿ ಕಾಣಬಹುದು: "ಕುರುಳ ಕುಯ್ದೇರಿಸುವೆನು ದೇವಿ ಹಗ್ಗದ ಹುರಿಯು ಮೇಲಾನೆಯುದ್ದುವೆನು": "ಬೇವಿನುಡಿಗೆ ಬಾಯಬೀಗದಿಂ ನಿನ್ನಡಿದಾವರೆಗಳಿಗೆರಗುವೆಂ": "ಕೆಂಡದ ಕುಂಡವ ಹೊತ್ತು ನಡೆದಾ ಚಾಮುಂಡಿಯನೊಲಿಸುವೆ"; "ಒಡ್ಡಿಯು ಶೂಲವ ಹಾಯ್ದು ಮೈಲಾರದ ದೊಡ್ಡಿಯ ದೇವರನೊಲಿಸುವೆ"; "ಸನ್ನೀ ಕೊರಲನು ಬಲಗತ್ತರಿಗಿತ್ತು... ಮಾಕಾಳಿಯನು ಮೆಚ್ಚಿಸುವೆ." (ರಾಮನಾಥ ಚರಿತ ಸಂಧಿ 23, 24) – ಈ ಮಾತುಗಳಲ್ಲಿ ಸಿರ್ಧಾರದ ಧ್ವನಿಯಿದೆ; ಜೀವನ ಮೇಲಿನ ವ್ಯಾಮೋಹ ಸರಿದಿದೆ. ಏನೇ ಆದರೂ ಎಷ್ಟೇ ಕಷ್ಟಗಳನ್ನು ಅನುಭವಿಸಿಯಾದರೂ ಕಾರ್ಯ ಸಾಧನೆ ಮಾಡುತ್ತೇನೆಂಬ ಕೆಚ್ಚಿದೆ. ಹೀಗೆ ನಾಡಾಡಿ ದೈವಗಳಿಗೆ ಹರಕೆ ಹೊತ್ತು ಕಾರ್ಯ ಸಾಧನೆಗಾಗಿ ತವಕಿಸಿ ಸಂಕಲ್ಪವನ್ನು ಕೈಗೊಂಡ ಪ್ರಸಂಗಗಳು ಕನ್ನಡ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುತ್ತವೆ.

ದುರ್ಗಿ, ಕಾಳಿ ಮುಂತಾದ ದೇವತೆಗಳನ್ನು ಆರಾಧಿಸಿ ಆವಾಹನೆ ಮಾಡಿಕೊಂಡು ಮಹತ್ ಸಾಧನೆ ಮಾಡಿದ ವ್ಯಕ್ತಿಗಳು ಇತಿಹಾಸದುದ್ದಕ್ಕೂ ದೊರೆಯುತ್ತಾರೆ. ಇತ್ತೀಚಿನವರಾದ ರಾಮಕೃಷ್ಣ ಪರಮಹಂಸರೇ ಇದಕ್ಕೆ ನಿದರ್ಶನ. ಆದರೆ ಧಾರ್ಮಿಕ ಸಾಧನೆಗಳಿಂದ ಅಪೂರ್ವವಾದ ಯೌಗಿಕ ಶಕ್ತಿಯನ್ನು ಸಂಪಾದಿಸಿದ್ದರೂ, ರಾಮಕೃಷ್ಣರು ಅವುಗಳನ್ನು ಅಲ್ಲಗಳೆದು ಸಾಧಕನಾದವನು ಅಂತಹವುಗಳಿಗೆ ಮನಸೋಲ ಬಾರದೆಂದೂ, ಅವುಗಳನ್ನು ಉಪಯೋಗಿಸಿಕೊಳ್ಳಕೂಡದೆಂದೂ ಜನತೆಯನ್ನು ಎಚ್ಚರಿಸಿದ್ದಾರೆ. (The Gospel of sri Ramakrishna p. 508-9)

—ಡಾ. ಕೆ. ಶ್ರೀಕಂಠಯ್ಯ

ಈ ಸಂಚಿಕೆಯ ಲೇಖಕರು

ಎಚ್. ಎಸ್. ವೆಂಕಟೇಶ ಮೂರ್ತಿ	101, ಗಣೇಶ ಮಂದಿರ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು–560 028
ಟಿ. ವಿ. ಅಶೋಕ	ಇಂಗ್ಲಿಷ್ ಅಧ್ಯಾಪಕರು ಸಿದ್ಧಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು–2
ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560 056
ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560 056
ಡಿ. ಎಲ್. ಮಂಜುನಾಥ್	ಮೇಗರವಳ್ಳಿ, 577 424 ಶಿವಮೊಗ್ಗ ಜಿಲ್ಲೆ
ಜಿ. ಆರ್. ಕುಪ್ಪುಸ್ವಾಮಿ	ಅಧ್ಯಾಪಕರು ಇತಿಹಾಸ ವಿಭಾಗ ಮತ್ತು ಪುರಾತತ್ವ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–580 008
ಟಿ. ಎನ್. ವಿಜಯಪ್ಪ	ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560 056
ಟಿ. ಜಿ. ಪ್ರಭಾಶಂಕರ 'ಪ್ರೇಮಿ'	ಹಿಂದಿ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560 056
ಎಚ್. ಎಚ್. ಗಂಗಾಧರಾಚಾರ್	ಜೋನಲ್ ಟ್ರಾಫಿಕ್ ಆಫೀಸರ್ ವಿ. ಐ. ಎಸ್. ಎಲ್. ಭದ್ರಾವತಿ–577 301

ಮಿಣಕನಗುರಿಕಿ ದಿವಾಕರ	ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು–560 056
ಶ್ರೀಮತಿ ಮೀರಾ ಚಕ್ರವರ್ತಿ	ಸಂಸ್ಕೃತ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560 056
ಬಿ. ಸಿ. ಜವಳಿ	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಎಂ. ಪಿ. ಭುವನೇಶ್ವರ ಪ್ರಸಾದ್	ರಾಜ್ಯಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560 056
ಪ್ರಭುಸ್ವಾಮಿಮಠ	ಕನ್ನಡ ಅಧ್ಯಾಪಕರು ಎಲ್. ಬಿ. ಎಸ್. ಕಾಲೇಜ್, ಸಾಗರ
ಜಿ. ಎಸ್. ಮೋಹನ್	ತೆಲುಗು ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560 056
ಷ. ಶೆಟ್ಟರ್	ನಿರ್ದೇಶಕರು ಭಾರತೀಯ ಕಲಾ ಇತಿಹಾಸ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ–580 003
ಎಸ್. ಶಿವಣ್ಣ	ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಜ್ಞಾನಭಾರತಿ, ಬೆಂಗಳೂರು – 560056
ಕೆ. ಶ್ರೀಕಂಠಯ್ಯ	393, ಜಯನಗರ 1ನೇ ಬ್ಲಾಕ್. ಬೆಂಗಳೂರು – 560 011

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8-00 ರೂ.
(ವಿದ್ಯಾರ್ಥಿಗಳಿಗೆ) 5-00 ರೂ.
ಆಜೀವ ಚಂದಾ ಹಣ 100-00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10-00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10-00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12-00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ 6-00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056